Q234
33NAS

B. 9.

Q234 335
33NAS
Siddhalingeswar
C Kottar shatsthala

Q234
33NAS

335 3059
B.9

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

ಶಿವಾನುಭವ ಗ್ರಂಥಮಾಲಾ ನಂ॥ ೧೪

ಸಿದ್ಧಲಿಂಗೇಶ್ವರ

ಏಕೋತ್ತರ ಶತಸ್ಥಲ.

ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ
ಬಿ. ಏ. ಎಲ್. ಎಲ್. ಬಿ. ವಕೀಲ

C. M. V. Sharma
Nalagouda

ವಿಜಾಪುರ.

ಬೆಲೆ ೧-೪-೦

1-8-0

Q234
33NAS

S... ...UGU ... ...MANDIR
JNANA SIMHAS... ...
LIBRARY.
Jangamwadi Math, VARANASI.
Acc No. 3959 335

ಪ್ರಸ್ತಾವನೆ.

ನಾವು ಈಗ ಮುದ್ರಿಸಿದ ಪುಸ್ತಕವು ಹೊಸ ತರದ್ದು ಇದೆ. ಈ ಗ್ರಂಥವನ್ನು ಅಚ್ಚು ಹಾಕಲಿಕ್ಕೆ ಆದವಾನಿಯಲ್ಲಿಯ ರಾ॥ ರಾ॥ ಈಶ್ವರಪ್ಪಾ ಸೌದ್ರಿ ಈ ಮಹನೀಯರು ನಮ್ಮ ಕಡೆಗೆ ಕಳಿಸಿಕೊಟ್ಟರು. ಇದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಈ ಗ್ರಂಥವು ಎಷ್ಟು ಮಹತ್ವದ್ದಿರುತ್ತದೆಂಬದನ್ನು ನಾವು ಬೇರೆ ಹೇಳುವದು ಬೇಡ. ಇದರಲ್ಲಿ ಏಕೋತ್ತರ ಶತಸ್ಥಲದ ವಿಷಯಗಳು ಬಹಳ ಅತ್ಯುತ್ತಮ ರೀತಿಯಿಂದ ಪ್ರತಿಪಾದಿಸಲ್ಪಟ್ಟವೆ. ಇವುಗಳನ್ನು ವಿವರಿಸುವ ಪದ್ಧತಿಯಾದರೂ ಮಾದರಿಯದಿರುತ್ತದೆ. ಗ್ರಂಥಕಾರನು ಮೊದಲಿಗೆ ತಾನು ಹೇಳುವ ವಿಷಯವನ್ನು ಬಹು ಸುಲಭವಾಗಿ ಸ್ವಲ್ಪ ಶಬ್ದಗಳಲ್ಲಿ ಸ್ಫುಟವಾಗಿ ವಿವರಿಸಿದ್ದಾನೆ. ಇದಕ್ಕೆ ಅವನು ಸೂತ್ರವೆಂದು ಕರೆದಿದ್ದಾನೆ. ಆ ಮೇಲೆ ಆ ವಿಷಯವನ್ನು ನಿರೂಪಿಸತಕ್ಕ ಒಂದು ಮೂಲ ವಚನವನ್ನು ಕೊಟ್ಟಿದ್ದಾನೆ. ಆ ಮೇಲೆ ಇನ್ನೊಬ್ಬ ವಚನಕಾರನ ವಚನವನ್ನು ತೆಗೆದುಕೊಂಡು ಅದರ ಮರ್ಮವನ್ನು ಹಾಡುಗಳ ರೂಪದಿಂದ ಬಹು ಸುಂದರವಾಗಿ ನಿರೂಪಿಸಿದ್ದಾನೆ. ಈ ಹಾಡುಗಳಾದರೋ, ಅತ್ಯಂತ ಮನೋಹರವಾಗಿವೆ. ಅವುಗಳ ಭಾಷೆಯು ಬಹು ಸುಂದರವು. ಇವುಗಳ ಮೇಲಿಂದ ಈ ಗ್ರಂಥಕಾರನು ಒಬ್ಬ ಅತ್ಯುತ್ತಮ ಕವಿ ಇದ್ದಾನೆಂದು ಹೇಳಲಿಕ್ಕೆ ಏನೂ ಅಡ್ಡಿ ಇಲ್ಲ. ಆ ಮೇಲೆ ವಿಷಯದ ಭಾವವನ್ನು ಒಂದು ವೃತ್ತ ಪದ್ಯದಲ್ಲಿ ಸಂಕ್ಷೇಪವಾಗಿ ವಿವರಿಸಿದ್ದಾನೆ. ಈ ಪದ್ಯಗಳಾದರೂ ಬಹು ಲಲಿತವಾಗಿವೆ. ಈ ಪದ್ಯಗಳ ಮೇಲಿಂದ "ಸಿದ್ಧಲಿಂಗೇಶ್ವರ" ಎಂಬುದೇ ಕವಿಯ ಮುದ್ರಿಕೆ ಇರಬಹುವೆಂದು ನಮಗೆ ತೋರುತ್ತಿದೆ. ಆದ್ದರಿಂದ ಈ ಗ್ರಂಥಕ್ಕೆ ನಾವು "ಸಿದ್ಧಲಿಂಗೇಶ್ವರ ಏಕೋತ್ತರ ಶತಸ್ಥಲ" ವೆಂಬ ಹೆಸರನ್ನಿಟ್ಟದ್ದೇವೆ. ಗ್ರಂಥದಿಂದ ಕವಿಯ ವೃತ್ತಾಂತ ಮುಂತಾದವುಗಳು ಏನೂ ತಿಳಿಯುವಂತೆ ಇಲ್ಲ.

ನಮಗೆ ಗ್ರಂಥದ ಪ್ರತಿಯು ಒಂದೇ ದೊರೆತದ್ದರಿಂದ ಅಲ್ಲಲ್ಲಿ ದೋಷಗಳು ವಾಚಕ ದೃಷ್ಟಿಗೆ ಬೀಳಬಹುದು ಅದಕ್ಕೋಸ್ಕರ ಅವರು ನಮ್ಮನ್ನು ಕ್ಷಮಿಸುವರೆಂದು ಕೋರುತ್ತೇವೆ.

ಫ. ಗು. ಹಳಕಟ್ಟಿ.
ಸಂಪಾದಕ.

ಪೀಠಿಕಾ ಪ್ರಕರಣ.

ಶ್ರೀಮದನಾದಿ ಮಹಾಷಟ್ ಸ್ಥಲಾಂತರ್ಗತ ಏಕೋತ್ತರ ಶತಸ್ಥಲಮಂ ಶ್ರೀ ಗುರುಬಸವರಾಜನ ಕೃಪೆಯಿಂ ಪೇಳ್ವೆಂ.

ವಚನಃ— ಪ್ರಥಮದಲ್ಲಿ ಅನಾದಿ ಸದ್ಭಕ್ತನ ಹೃದಯದಲ್ಲಿಪ್ಪ ನಿರಂಜನ ಮಹಾಜಂಗಮ ಮಹಾಸ್ವಾಮಿಯ ಕರಸ್ಥಲದಲ್ಲೊಪ್ಪುವ ಶೂನ್ಯಲಿಂಗವು, ಆ ಮಹಾಶೂನ್ಯಲಿಂಗವೇ ಮುಂದೆ ಮಹಾ ವಸ್ತುರೂಪಾಗಿ ಏಕಮೇವಾದ್ವಿತೀಯ ಪರಬ್ರಹ್ಮಸ್ಥಲವು, ಆ ಸ್ಥಲವೇ ಒಂದನೆಯದಾಯ್ತು. ಆ ಸ್ಥಲವೇ ಅಂಗಸ್ಥಲವೆಂದು, ಲಿಂಗಸ್ಥಲವೆಂದು ಕೂಡಿದೊಂದೆರಡಾಗಲಾಗಿ ಆ ಸ್ಥಲವೇ ಎರಡನೆಯದಾಯ್ತು. ಆ ಸ್ಥಲವೇ ಅಂಗತ್ರಯಸ್ಥಲವೆಂದು ಲಿಂಗತ್ರಯಸ್ಥಲವೆಂದು ಕೂಡಲು ಆ ಸ್ಥಲವೇ ಮೂರನೆಯದಾಯ್ತು. ಆ ಸ್ಥಲವೇ ಅಂಗವಾರುಸ್ಥಲವೆಂದು, ಲಿಂಗವಾರುಸ್ಥಲವೆಂದು ಕೂಡಲು ಆ ಸ್ಥಲವೇ ನಾಲ್ಕನೆಯದಾಯ್ತು. ಆ ಸ್ಥಲವೇ ಅಂಗ ಪದಿನೆಂಟು ಲಿಂಗ ಪದಿನೆಂಟು ಸ್ಥಲಂಗಳಾಗಿ ಕೂಡಲು, ಆ ಸ್ಥಲವೇ ಐದನೆಯದಾಯ್ತು. ಆ ಸ್ಥಲವೇ ಅಂಗಸ್ಥಲಂಗಳು ನಾಲ್ವತ್ತುನಾಲ್ಕು ಲಿಂಗಸ್ಥಲಂಗಳು ಐವತ್ತೇಳು ಕೂಡಲಾರನೆಯದಾಗಿ ಏಕೋತ್ತರ ಶತಸ್ಥಲವೆಂದು ನೂರೊಂದು ಸ್ಥಲಂಗಳಾಗಲು. ಈ ಸ್ಥಲಂಗಳೇ ಆ ಮಹಾಪುರಾತನರು ತಮ್ಮ ಭಕ್ತ್ಯಾದಿಯಾಗಿ ಐಕ್ಯಾಂತವಾದಾರಂಗಸ್ಥಲಂಗಳು ಆಚಾರಾದಿ ಮಹಾಲಿಂಗಾಂತವಾದಾರು ಲಿಂಗಸ್ಥಲಂಗಳಲ್ಲಿ ಹಸುಗೆಯಂ ಮಾಡಿ, ಅರಿದಾಚರಿಸಿದ ಭೇದಮಂ, ನಡೆನುಡಿಗಳಿಂದ ಆ ಮಹಾಪ್ರಸಾದ ವಾಕ್ಯಂಗಳನೇ ವಚನ ಪದ ಪದ್ಯರೂಪದಿಂ ಹಾಡಿ ಹ'ಸಿ, ತಮ್ಮ ಅಂಶೀಭೂತರಾದ ಶರಣ ಗಣಂಗಳು, ತಮ್ಮ ಸ್ಥಲವೇ ಪಿಂಡಾದಿಯಾದ ಜ್ಞಾನ, ಆ ಜ್ಞಾನವೇ ಶೂನ್ಯಾಂತಸ್ಥಲವಾಗಿ ನೂರೊಂದರವೇಲೆ ನಿಲ್ಲಲಿ, ಎಂದು ಬರೆದಿಟ್ಟ ಬರವಣಿಗೆಯಂ ಬರೆಯಲು ಒಂದೊಂದಾಗಿ ಕ್ರಮದಿಂ ಶ್ರೀ ಮಚ್ಚರಗುರು ಶಿವಾರ್ಚಕರಾದ ಸಕಲ ಸದ್ಭಕ್ತರ ಕಂಜಕ್ರಮಕ್ಕೆರಗುವ ನಿಮ್ಮ ಅಸಂಖ್ಯಾತ ಮಹಾ ಪ್ರಮಥಗಣ ಪಾದಪಂಕಜ ರೇಣುಕಾಂಶೀಭೂತನಾದ ಈ ಮಾಕಂದ ಮೂಲಕಂದನೆಂದು ಅಂದವಳಿದ ಚಂದ

ಗೇಡಿ ಕಂದನಂ ನಿಮ್ಮ ಮೆಲ್ಲಡಿಗಳೊಂದಿಸಿಕೊಳ್ಳಿರಯ್ಯಾ ಎಲೇ ಅಪ್ಪ ಅಣ್ಣ ಅಯ್ಯಗಳೇ.

ವಚನಃ—ಓಂ ನಮಶ್ಶಿವಾಯ ಸಿದ್ಧಂ ನಮೋ ನಮಃ ಎಂದು ಧನ್ಯ ಸದ್ಭಾವ ಮನಾಂತೆನಯ್ಯ ಶ್ರೀಸಕಾಮ ಕಾಮೇಶ್ವರ ಲಿಂಗವೇ

ವಚನ:— ನಿಮ್ಮ ಮಹಾಭಕ್ತ ಮಾಹೇಶ್ವರರ ಭೂಚಕ್ರಂಗಳು ಹನ್ನೆರಡು, ಅದರ ಕೊನೆಯಲ್ಲಿ ನೆಲೆಗೊಂಡ ಪರವಸ್ತುವೆ ಆ ಮಹಾ ಸ್ಥಲವೆಂಬ ನಿರ್ವಚನಕ್ಕಾಧಾರವಾಯಿತ್ತು. ಅದುವೇ ಒಂದನೆಯ ಸ್ಥಲ ವೆಂದು ಹೇಳಲ್ಪಟ್ಟಿತ್ತು ನೋಡಾ.

ಆ ಸ್ಥಲವು ಒಂದೆರಡಾಗಿ ಅಂಗಸ್ಥಲವೆಂಬುದೊಂದು ಲಿಂಗಸ್ಥಲ ವೆಂಬುದೊಂದು ಕೂಡಿ ಶಿವಶಕ್ತಿ ಸ್ವರೂಪಾದ ಜ್ಞಾನವಂಗ ಜ್ಞೇಯುವೇ ಲಿಂಗವೆನಿಸಿಕೊಂಡಿತು. ಇಂತೆರಡನುಳ್ಳವನೇ ಅಂಗಲಿಂಗಿ ಎಂದೆನಿಸಿದ ಅದುವೇ ಎರಡನೆಯ ಸ್ಥಲವೆಂದು ಹೇಳಲ್ಪಟ್ಟಿತ್ತು ನೋಡಾ.

ಮತ್ತಂ ಆ ಸ್ಥಲವು ಒಂದೊಂದರಲ್ಲಿ ಮೂದೆರದಿಂ ಅಂಗತ್ರಯ ಲಿಂಗತ್ರಯವೆನಿಸಿತು. ಅಂಗಸ್ಥಲವೇ ತ್ಯಾಗಾಂಗ ಭೋಗಾಂಗ ಯೋಗಾಂ ಗವೆಂದು ಮೂದೆರನಾದುದು. ಲಿಂಗವೇ ಇಷ್ಟಲಿಂಗ ಪ್ರಾಣಲಿಂಗ ಭಾವ ಲಿಂಗವೆಂದು ಮೂದೆರನಾದುದು. ಇಂತಾಚರಿಸಿದ ಸ್ಥಲವೇ ಮೂರನೆ ಯುದಾಗಿ ನಿಂತಿತ್ತು ನೋಡಾ.

ಮತ್ತಂ ಆ ಸ್ಥಲವು ಮೂದೆರನಾದೊಂದರಲ್ಲೆರಡೆರಡರಿಂ ಷಡ್ವಿಧ ಮಾದಂಗ ಷಡ್ವಿಧಮಾದಲಿಂಗವಾಗಿ ಭಕ್ತ ಮಹೇಶ ಪ್ರಸಾದಿ ಪ್ರಾಣ ಲಿಂಗಿ ಶರಣೈಕ್ಯಾದಿಯಾದಾರು ಅಂಗಸ್ಥಲಂಗಳು ಆಚಾರ ಗುರು ಶಿವ ಚರ ಪ್ರಸಾದ ಮಹಲಿಂಗಾದಿಯಾರು ಲಿಂಗ ಸ್ಥಲಂಗಳು ಇಂತಾಚ ರಿಸಿದ ಸ್ಥಲವೇ ನಾಲ್ಕನೆಯುದಾಗಿ ನಿಂತಿತ್ತು ನೋಡಾ.

ಮತ್ತಂ ಆ ಸ್ಥಲವು ಅಂಗಸ್ಥಲಂಗಳಾರು ಮೂಮೂರೆನಿಸಿದ ಪದಿನೆಂಟು ಲಿಂಗಸ್ಥಲಂಗಳಾರು ಮೂಮೂರೆನಿಸಿದ ಪದಿನೆಂಟು ಈ ಎರಡ ಕೂಡಿಯಾಚರಿಸಿದ ಸ್ಥಲವೇ ಐದನೆಯುದು ನೋಡಾ.

ಮತ್ತಂ ಆ ಸ್ಥಲವು ಅಂಗಸ್ಥಲಂಗಳು ನಾಲ್ವತ್ತುನಾಲ್ಕು ಲಿಂಗಸ ಲಂಗಳೈವತ್ತೇಳು ಕೂಡಿದಾ ಸ್ಥಲವೇ ಆರನೆಯುದು ನೋಡಾ.

ಈ ಆರನೆಯ ಸ್ಥಲದಲ್ಲಿ ನಿಂದ ಮಹಾಭಕ್ತ ಮಾಹೇಶ್ವರರು ಅರಿದು ಆಚರಿಸಿದ ಏಕೋತ್ತರ ಶತಸ್ಥಲಂಗಳನು ನೂರೊಂದರ ಮೇಲಿಟ್ಟು ಅಂಗೈ ತಳದ ತನ್ನ ಮೆಲ್ಲಡಿಯಂತೆ ಕಂಬಳಿಯಲ್ಲಿ ತೋರಿಕೊಟ್ಟನೆನ್ನಯ್ಯ ಸದ್ಗುರುರಾಯನು ಎಂದು ನಡೆದು ನುಡಿದ ಸಚ್ಛಿಷ್ಯನ ತೋರಿ ಬದುಕಿಸಾ ಎಲೆ ಆಡಿಮುಡಿಯ ಲಿಂಗವೇ.

ವಚನ:— ಮಹಾ ಆದಿ ಗುರುನಾಥನ ಚಿದೈಶ್ವರ್ಯವೇ ಚಿದಾಭರಣವೆಂದು ಆಪಾದ ಮಸ್ತಕದಲ್ಲಿ ನೂರೊಂದೆನಿಸಿ ಧರಿಸಿದ ಅನಾದಿ ಶಿಷ್ಯನ ತೋರಿ ಸಲಹಾ ಸ್ವಯಂ ದ್ವಾವಶ ಮಹಾ ಪ್ರಣವಜ್ಯೋತಿ ಲಿಂಗವೇ.

ಏಕೋತ್ತರ ಶತಸ್ಥಲ

C. M. V. Sharma
Nalgonda

೧ ಪಿಂಡಸ್ಥಲ.

ಸೂಚನೆ:—ಶ್ರೀಮದನಾದಿ ಸದ್ಭಕ್ತನ ಹೃದಯದಲ್ಲಿಪ್ಪ ಶ್ರೀಮನ್ನಿರಂಜನ ಜಂಗಮ ಮಹಾಸ್ವಾಮಿಯ ಕರಸ್ಥಲದಲ್ಲೊಪ್ಪುವ ಶ್ರೀಮಚ್ಛೂನ್ಯ ಲಿಂಗವು ಶ್ರೀಮನ್ನಿರವಯಾಂಗದಲ್ಲಡಗಿರಲು ಪಿಂಡಸ್ಥಲವಾದುದು.

ಈ ಸ್ಥಲದ ವಚನ:—ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ ಇದ್ದಿತ್ತು. ಸಸಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲ ಸಂಗಮ ದೇವಯ್ಯ ಕನ್ನೆಯ ಸ್ನೇಹದಂತಿದ್ದಿತ್ತು.

ಪದ–ರಾಗ ನಾಟ.

ಬಿಂದು ಬಿನ್ನಾಣದೊಳಗಂದವಿಟ್ಟಹಕಳಾ । ನಂದ ಪಿಂಡೋದಯದ ಜ್ಞಾನ ನಿರತಾ ॥ಪಲ್ಲವಿ॥

ಕಾರ ಮೇಘದೊಳುಮಿಂಚಡಗಿ ತೋರದ ತೆರದಿ–ನೀರೊಳಡಕಂಗೈದ ಕಿಚ್ಚಿನಂತೆ । ಬೀರುತಿಹ ಫಲ ರಸದೊಳಿಪ್ಪ ನವರುಚಿಯಂತೆ--ವಾರಣದ ಮಸ್ತಕದ ಮುತ್ತಿನಂತೆ ॥೧॥

ಶಶಿಕಾಂತದೊಳಗುದಕ ಒಸರದಡಗಿ ನಿಂದಂತೆ--ಹಸುಳೆಯೊಳಗಣ ಸ್ವಪ್ನದೋರದಂತೆ । ನಸುನನೆಯೊಳಡಗಿರ್ದ ನವಸುಗಂಧದ ತೆರದಿ–ಯುಸುರೊಳಡಗಿರ್ದ ಚೈತನ್ಯ ದಂತೆ ॥೨॥

ಕ್ಷೀರದೊಳು ಘೃತವಡಗಿ ನೀರು ಮುತ್ತಿನೊಳಡಗಿ–ಆರೈದು ನೋಡೆ ಬೀಜದೊಳು ವೃಕ್ಷ । ಸೇರಿರ್ದು ಮೊಳೆದೋರದಂತಿಪ್ಪ ಮಹಘನವ -ನಾರು ಭೇದಿಸಿ ಕಾಣಲರಿದು ನೋಡಾ ॥೩॥

ಪಾಷಾಣದೊಳಗಗ್ನಿ ಸೂಸದ ಬೆಡಂಗು ಪ್ರತಿ–ಭಾಸೆದೋರದ ಜಲದ ನಿಲವಿನಂತೆ । ನೇಸರೊಳಡಗಿರ್ದ ಮರೀಚನಂದದಲಿ ವಿಲಾ--ಸಿಸುವ ಪಿಂಡವೈದೋರದಿಹುದು ॥೪॥

ರೂಪು ರೂಪಿನೊಳಡಗಿ ರೂಪಿಸದೆ ನಿಂದ ನಿಜ--ರೂಪು ನಿಶ್ಚಲವಾಗಿ ಸಂಚಲಿಸದೆ। ತಾಪರಾತ್ಪರನಾಗಿ ನಿಂದ ನಿಜಪದವು ಚಿ--ದ್ರೂಪ ಕೂಡಲ ಚನ್ನ ಸಂಗಯ್ಯನು. ॥೫॥

ವುತ್ತೆಭಃ--ಮಿಗೆ ಲೀಲಾವಶದಿಂ ಸಮಸ್ತ ಜನನಂ ಬೆತ್ತಾಗಳಲ್ಲ ಕ್ಲೀತಾಂ। ನೆಗಳ್ದಾ ಪುಣ್ಯದೆ ಪಾಪ ಸಂಚಯಮನಿತ್ತೆಲ್ಲಂ ಕ್ಷಯಂ ಬೋಗಿನೆ॥ ಟ್ಟಗೆ ಸದ್ವಾಸನೆಯಾಂತ ದೇಹಿಯೊಳೆ ನೀನಿರ್ಪಂದಮಂ ವೇದವಿ। ತ್ತುಗ ಳೆಂತೀ ತೆರದಿಂ ಪರೀಕ್ಷಿಪರಲಾ ಶ್ರೀ ಸಿದ್ಧಲಿಂಗೇಶ್ವರಾ.

ಗದ್ಯ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಒಂದನೆಯದಾದ ಈ ಪಿಂಡಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೨ ಪಿಂಡಜ್ಞಾನಸ್ಥಲ.

ಸೂತ್ರಃ--ಇಂತಪ್ಪ ಮಹತ್ಪಿಂಡಸ್ಥಲವು, ತನ್ನ ಲೀಲೆಯಿಂ ತನ್ನೊಳಡಗಿದ ಸಕಲ ನಿಷ್ಕಲಾತ್ಮ ತತ್ವಗಳನುಂಟು ಮಾಡಿ ತೋರಬೇಕೆಂದಿಚ್ಛೈಸಲು ಅಲ್ಲಿ ಜ್ಞಾನೋದಯವಾಯಿತ್ತಾಗಿ, ಮುಂದೆ ಪಿಂಡ ಜ್ಞಾನಸ್ಥಲವಾದುದು.

ವಚನಃ--ಅಯ್ಯಾ ನೀನು ನಿರಾಕಾರವಾಗಿದ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ, ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನು ಸಾಕಾರವಾಗಿರ್ದಲ್ಲಿ ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ. ಅಯ್ಯಾ ನೀನೆನ್ನ ಭವವ ಕೊಂದಿಹೆನೆಂದು ಬಂದಲ್ಲಿ ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ ಕೂಡಲ ಸಂಗಮ ದೇವಾ.

ಪದ—ರಾಗ ಜಂಝೂಟಿ.

ಸ್ವಾನುಭಾವದುದಯದಿಂದೆ ಜ್ಞಾನನೇತ್ರ ಮುಸುಕತ ಗೆದು—ತಾನು ತನ್ನ ನಿಜವ ನೋಡಿ ತಿಳಿದ ಮಹಿಮನು ॥ಪಲ್ಲವಿ॥

ಚಿತ್ತಬಿಂದು ಪ್ರಕೃತಿ ಹಿಂಗಿ ನಿತ್ಯಾನಿತ್ಯ ವಿವೇಕದಿಂದ--ಲತ್ತ ನಿಲುಕಿನೋಡಿಕಂಡ ಸಕಲದಳಿವನು । ತತ್ವದಲಿ ವಿವೇಕಿಯಾಗಿ ನಿಶ್ಚಲದ ನಿಜಾಂತರಂಗ-ತತ್ವಚಯುವನ್ನೈದಿ ಸುಖದ ಮುಖವನರಿದನು ॥೧॥

ಜ್ಞಾನ ಮುಕುರದೊಳಗೆ ನೋಡಿ ತಾನು ತನ್ನ ಕುರುಹವಿಡಿದು-ತಾನು ತನಗೆ ಅನ್ಯವಿಲ್ಲೆಂಬ ಭೇದವಾ । ತಾನೆಯರಿದು ಮಾಯೆ ಮಿಥ್ಯವಂ ನಿವೃತ್ತಿಮಾಡಿ ಶಿವ-ಧ್ಯಾನದಲ್ಲಿ ಮನವ ನಿತ್ತ ಸೌಖ್ಯ ಶರಣನು ॥೨॥

ಹಿಂದ ಹರಿದು ಹರಿದ ಹಿಂದ್ಕನೊಂದು ಮಾಡಿ ಬೆರಸದಾ-ನಂದ ದಿಂದ ಲೈದಿ ಮನೋಭಾವಿಯಾಗಿ । ಬಿಂದುನಾದ ಕಲತ್ರಯುದ ಸಂದನ ಳಿದು ಚಿತ್‍ಸ್ವರೂಪ-ಬಿಂದುವಿನೊಳು ನಿಂದು ಮೆರೆದ ಸೌಖ್ಯ ಶರಣನು ॥೩॥

ಶಕ್ತಿಯೊಳು ಶಿವಾತ್ಮವಡಗಿ ಶಕ್ತಿರಹಿತನೆಂಬ ಬೆಡಗ-ಶಕ್ತಿ ಮುಖ ದೊಳರಿದು ಶಕ್ತಿಸಂಗ ಭಂಗವಿ । ರಕ್ತಿಯಿಂದ ಗೆಲಿದು ಪರಮ ಶಕ್ತಿಸುಖವ ಕಂಡ ಸುಖಿಯ-ಚಿತ್ತದರಿವು ಜಗವನುಂಗಿಯುಗಳದಿರ್ದುದು ॥೪॥

ಆದಿ ಮಧ್ಯ ಅಂತ್ಯವೆಂಬ ಭೇದವಾಕ್ಯದೊಳಗೆ ಪುಗದ-ನಾದಿಸಿದ್ಧ ವಾಗಿ ತನ್ನ ತಾನೆ ಕಂಡುಯ । ಭೇದ್ಯಪದವನೈದಿ ಕೂಡಲ ಚನ್ನಸಂಗ ನಲ್ಲಿ-ಭೇದವಿಲ್ಲದಿಪ್ಪ ದಿವ್ಯಜ್ಞಾನಿ ನೋಡಾ ॥೫॥

ವೃತ್ತ-ಅನವಸ್ಥಾದಿಗಳುಳ್ಳ ದೇಹದೊಳೆ ನಿರ್ದೇಹ ಸ್ವರೂಪಾ ದಚಿ । ಧ್ಘನ ಸರ್ವಾತ್ಮಕನಪ್ರಮೇಯ ವಿಭು ನೀನಿರ್ದಲ್ಲಿ ಲಿಂಗಾಂಗ ತ ॥ ತ್ವನಿಜವ್ಯಕ್ತಿಯನುಂಟು ಮಾಳ್ಪೆನೆನಿಸಿಚ್ಛಾಲೋಕ್ಕಿಯಿಂ ಜ್ಞಾನಿ ಸಂ । ಜನನಂಗೆಯ್ಸುವೆಯಾತ್ಮನೋಳ್ ಸಹಜದಿಂ ಶ್ರೀ ಸಿದ್ಧಲಿಂಗೇಶ್ವರಾ ॥

ಗದ್ಯ-ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆರಡನೆಯ ದಾದ ಪಿಂಡಜ್ಞಾನಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೩ ಸಂಸಾರ ಹ್ಯೇಯಸ್ಥಲ.

ಸೂತ್ರ-ಇಂತಪ್ಪ ಶ್ರೀ ಪಿಂಡಜ್ಞಾನೋದಯವಾದ ಮಹಂತನು ನಿತ್ಯಾನಿತ್ಯ ವಸ್ತು ವಿವೇಕವನರಿದು ಅನಿತ್ಯವಾದ ಸಂಸಾರ ಹ್ಯೇಯೋಪಾ ಯವ ಕಂಡು ತಾನು ನಿರಸನವ ಮಾಡುತ್ತಿರಲು ಮುಂದೆ ಸಂಸಾರ ಹ್ಯೇಯ ಸ್ಥಲವಾದುದು.

ವಚನ-ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ, ಸಂಸಾರವೆಂಬ ರಾಹು ಸರ್ವ ಗ್ರಾಸಿಯಾಗಿ ನುಂಗಿತ್ತಯ್ಯ, ಇಂದೆನ್ನ ದೇಹಕ್ಕೆ ಗ್ರಹಣವಾ ಯಿತ್ತು ಇನ್ನೆಂದಿಂಗೆ ಮೋಕ್ಷವಹುದೋ ಕೂಡಲ ಸಂಗಮದೇವ?

ಪದ–ರಾಗ ಧನ್ಯಾಸಿ.

ಏನೆ ಸಂಸಾರ ಮಾಯಾಮಯದ ಭಯ ತನುವ । ನಾವರಿಸಿ ನುಂಗುತಿದೆ ನಾನಾಭವದ ದುಃಖ। ಧಾವತಿಗೆ ಹೇವರಿಸಿ ಮರೆಯೊಕ್ಕೆ ಮದನಾರಿ ಕಾಯೋ ಕಾರುಣ್ಯ ನಿಧಿಯೇ ।ಪಲ್ಲವಿ॥

ಶುಕ್ಲ ಶೋಣಿತ ಬದ್ಧ ಮಲದಿಂದಲಾದಂಗ। ಪ್ರಕೃತಿ ಕಾಯಕೆ ಸತ್ಯ ಮಾಯಾಮಲತ್ರಯದ। ಸಕಲ ಪ್ರಪಂಚು ಮೋಹಾನುಬಂಧನವೆ ವ್ಯಾಪ್ತಿಯಾಗಿ ನಿಮ್ಮಾ ॥ ಸತ್ಕೃತ ಚಿಂತನೆ ಮಾಡಲೀಯದಿದನೆ ತೋರಿ। ವಿಕಳ ನೆನಿಸದೆ ಕರುಣದಿಂ ಬಂದು ಭಕ್ತರ್ದೇ। ಹಿಕ ದೇವನೆಂಬುದುಂಟಿದ ನೋಡಿ ಪರಿಹರಿಸು ಮಾಯಾ ವಿಡಂಬನವನು ॥೧॥

ಆಶೆಯಾಮಿಷದ ಸಂಸಾರ ತಾಮಸದ ವಾ। ರಾಶಿಯೊಳಗಾಳುತೇಳು ತಲದಕೆ ಕಡೆಗಾಣ। ದಾಸತ್ತಳಲು ತೊಡಲ ಹೊರೆವ ಮಾಯಾಭ್ರಮೆಯು ಕ್ಲೇಶದಂಡಲೆ ತನುವನು ॥ ಗಾಸೆಮಾಡಿ ಹಿತೇಷಣತ್ರಯದ ಮೋಹಿನಿಯ। ಪಾಶಪಾಣಿಯೊಳು ಸಿಲುಕಿದ ಶಿಶುವಿಗ ಭಯಕರ। ದಾಶೆದೋರೆಳೆದುಕೋ ನಿಮ್ಮತ್ತ ದುರಿತಾರಿ ಪಾಶ ನಿರ್ಮುಕ್ತ ಶಿವನೆ ॥೨॥

ಆವಾವ ಮುಖ ಮುಖದೊಳಲ್ಲಿಗಲ್ಲಿಗೆ ತಾನೆ । ಭಾವಿ ತಾ ಭಾವ ದೊಳು ನಿಮ್ಮ ಭ್ರಮೆಯಂ ಬೀರು । ತಾವ ಲೋಕಿಸುತ ವಗ್ರಹಿಸಿಪ್ಪ ಸಂಸಾರ ಸರ್ವತೋಮುಖವೆನ್ನನು ॥ ಆವ ಕಡೆ ಗಡಿಯಿಡಲು ತೆರಹುಗೊಡದಯ್ಯ ಮಹ। ದೇವ ನಿಮ್ಮುವನೆನೆಯಲಿಯ್ಯದಿನ್ನೇವೆ ನೀ। ಧಾವತಿಯ ಪರಿಹರಿಪುದೇಸರಿದು ಮದನಾರಿಮಾಯಾರಿ ದುರಿತಾರಿ ಗುರುವೆ ॥೩॥

ಹುಟ್ಟಿ ಹೊಂದುವ ಹೊಂದಿ ಹುಟ್ಟುತಿಹ ಭವಮಾಲೆ । ಯಟ್ಟುಳಿಯ ಕ್ಲೇಶ ನಾನಾಕರ್ಮ ರೋಗಭಯ। ಕಷ್ಟವ್ಯಸನಂಗಳೆಂಬಿವ ದುಷ್ಕೃತದ ತಾಮಸದ ತವಕದ ಮಾಯಾ ಮನವಾ ॥ ಮೆಟ್ಟಿ ಕೂಗಿಡೆ ಕೊಲುತಲಿದೆಯದರ ದೆಸೆಯಿಂದ। ಕೆಟ್ಟೆ ಶಿವಧೋ ಶಿವನೇ ದಂದುಗದಾಳಿಯರೆ। ಯಟ್ಟುತಿದೆ ನಿಲಲಾರೆ ನಿಮ್ಮಡಿಯ ಕೃಪೆ ಯೊಳಿಂಬಿಟ್ಟುಕೋ ರಕ್ಷಾಮಣಿಯೇ ॥೪॥

ಭವಪಾಶ ಬಂಧದಿಂ ಬಿಗಿದು ಕಪಿಲೆಯ ಹುಲಿಯ। ಗವಿಯೊಳಗೆ ಕಟ್ಟಿದಂತದೆ ಸಂಸಾರ ಮೆಂ । ಬ ವಿಚಾರ ಸರ್ವ. ಸರ್ವ ಗ್ರಾಸ ಗೊಂಡುದಿದ ನೋಡಿ ಪರಿಹರಿಸಿ ನಿಮ್ಮಾ॥ ಅವಿರಳ ಪಾದದೊಳು ಮನಮುಗ್ನವಾಗಿ

ಮ । ತ್ರ ವಿಕಲ್ಪ ಸಮಸುಖಃನಂನನೊಳಗೆಂದಿಹೆನು । ಭವವಿರಹಿತ ಪರಮೇಶ ಪಾಲಿಸೈ ಮದ್ಗುರುವೆ ಉಳಿಯುಮೇಶ್ವರ ಲಿಂಗವೆ ॥೫॥

ಶಾರ್ದೂಲ–ಮಾಯಾ ಕಾಳಿಕೆಯಲ್ಲಿ ತೋರಿದರಿವಿಂದಂ ಸರ್ವತತ್ವ ಕ್ಕಧಿ । ಷೇಯಂ ತಾನೆನಿಸಾತ್ಮನಂ ತಿಳಿದ ನಿತತ್ವಾದಿ ದೋಷಾಶ್ರಯಂ ॥ ಕಾಯ ಪ್ರಾಣ ಹೃಷೀಕ ಮುಂತೆನಿಪ ವೇದಾವೃತ್ತಿ ಸಂಸಾರದೊಳ್ । ಹೇಯತ್ವಂ ಬರೆ ನಿನ್ನ ಸತ್ಕೃಪೆಯಲಾ ಶ್ರೀ ಸಿದ್ಧಲಿಂಗೇಶ್ವರಾ ॥೩॥

ಗದ್ಯ—ಇಂತೀ ಪ್ರಕಾರದಿಂ ನೂರೊಂದು ಸ್ಥಳದೊಳಗೆ ಮೂರನೆಯದಾದ ಈ ಸಂಸಾರ ಹೇಯಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೪ ಗುರು ಕಾರುಣ್ಯಸ್ಥಲ.

ಸೂತ್ರ—ಇಂತಪ್ಪ ಸಂಸಾರ ಹೇಯಸ್ಥಲಮಂ ನಿರಸನಮಂ ಮಾಡಿದ ಮಹಂತನು ತನ್ನ ನಿಜವ ತಾನೋಡಿಹೆನೆಂದರೆ, ಇದಿರಿಟ್ಟಲ್ಲದೆ ತನ್ನ ಕಾಣ ಬಾರದು. ಅದೆಂತೆಂದೊಡೆ ತನ್ನ ಮುಖವ ತಾ ನೋಡಿಹೆನೆಂಬುವನು ಇದಿರ ಕನ್ನಡಿ ಹಿಡಿದಲ್ಲದೆ ತನ್ನ ತಾ ಕಾಣನೆಂದು, ಇದಿರ ಕನ್ನಡಿಯನುಂಟು ಮಾಡಿಕೊಂಡು ತನ್ನ ಕಾಣುವಂತೆ, ತನ್ನಿದಿರೆ ಶ್ರೀ ಗುರುವನುಂಟು ಮಾಡಿಕೊಂಡು ಉಪಾವಸ್ಥೆಯಂ ಮಾಡುತ್ತಿರಲು ಮುಂದೆ ಶ್ರೀ ಗುರು ಕಾರುಣ್ಯ ಸ್ಥಲವಾದುದು.

ವಚನ—ಶ್ರೀಮದ್ಘನವ ನೆನೆವ ಮನಕ್ಕೆ ತಕ್ಕ ಕಿವಿಯಾದವಾಗಿ ಗುರುವಚನ ರತಿಸುಖ ಸಾರಾಯ ಸಂಬಂಧದ ಅನುಭಾವಿಯಾಗಿ ಶರಣಸತಿ ಗರ್ಭವತಿಯಾದಳು. ಇರುಳಿಲ್ಲ ಹಗಲಿಲ್ಲ ನವಮಾಸ ವರಿಯಳು ರೇಕಣ್ಣ ಪ್ರಿಯನಾಗಿನಾಥನ ಯೋನಿ ಸಂಭವನಾಗಿ ಪ್ರಸೂತಿ ಕಾಯನಲ್ಲ.

॥ಪದ॥ ರಾಗ–ಮುಲಹರಿ

ನಾನಾ ಭವ ಭಯ ಸಂಸಾರದ ಅಜ್ಞಾನ ಜಡವ ಪರಿಹರಿಸಿ ।
ಜ್ಞಾನಾನುಗ್ರಹ ಜನ್ಮಜನಿತನನು ಮಾಡಿದುದೆನ್ನಯ ಗುರುಕರುಣಾ॥ಪಲ್ಲವ॥
ಕರ್ಮಜಾತ ಜನಿತೇಂದ್ರಿಯದ ದುಷ್ಕರ್ಮಂಗಳ ಪೂರ್ವಾಶ್ರಯವ ।
ನಿರ್ಮೂಲನಂಗೈದು ಶಿವಜ್ಞಾನವ ಮರ್ಮವ ತೋರಿದ ಗುರು ಶರಣು ॥೧॥

ಕರಕಮಲವ ಶಿರದೊಳು ಕರುಣದೊಳಿಟ್ಟು ದುರಿತ ದುಷ್ಕೃತ ಲಿಪಿಯನೆ ತೊಡೆದು । ನರಜನ್ಮದ ಪೂರ್ವಾಶ್ರಯ ದೋಷವ ಪರಿಹರಿಸಿದೆನ್ನಯ ಗುರುಕರುಣಾ ॥೨॥

ಅಂಗದೊಳಗೆ ಲಿಂಗವ ನಿಲಿಸಿ ಸರ್ವಾಂಗವ ಲಿಂಗಸ್ಥಲವೆನಿಸಿ । ಮಂಗಳ ಮಯ ಪರಮಜ್ಞಾನದ ನಿಜದಂಗವ ತೋರಿದ ಗುರು ಶರಣು॥೩॥

ಒಳಹೊರಗೆನ್ನದೆ ಎನ್ನೊಳು ತನ್ನಯ ಹೊಳೆವ ಜ್ಞಾನ ಜ್ಯೋತಿಯ । ಬೆಳಗತಿಳಿವಂತೆನ್ನಯ ಕಣ್ದೆರೆವೆಯ ಪುಟ್ಟಿಸಿ ಸಲಹಿದ ಗುರು ಶರಣು ॥೪॥

ಉರಿ ಕರ್ಪುರವ ಸೋಂಕಿದಂತೆನ್ನೊಳು ಬೆರಸಿಪ್ಪ ಮಹಾ ಘನವನು ತೋರಿ । ಪರಮ ಸುಖದೊಳಿರಿಸಿದ ಸಿದ್ಧ ಸೋಮೇಶ ಕರುಣಾಮೃತ ಗುರು ಶರಣು ॥೫॥

ಮತ್ತೇಭ:—ರುಜೆಯಿನ್ನೊಂದವ ನಿಂತು ವೈದ್ಯನೆಡೆಗಂ ಪೋಗಲ್ಕವಂ ರೋಗಸಂ । ತ್ಯಜನಂಗೆಯ್ವವೊಲಾಯ ಸಂಗೊಳಿಪ ವಿದ್ಯಾಕಲ್ಪವಾ ಸಂಸ್ಕೃತಿ ॥ ವ್ರಜದಿಂ ಪೀಡಿತನಾಗಿ ಬಂದನನತೀವ ಪ್ರೀತಿಯಿಂ ನೋಡಿ ನೀಂ । ನಿಜದಿಂ ರಕ್ಷಿಪ ಸತ್ಯಸಾನ್ವಿತನಹೋ ಶ್ರೀ ಸಿದ್ಧಲಿಂಗೇಶ್ವರಾ ॥

॥ಗದ್ಯ॥ ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ಕನೆಯದಾದ ಗುರುಕಾರುಣ್ಯಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫ ಲಿಂಗಧಾರಣಸ್ಥಲ.

ಸೂತ್ರವು:—ಇಂತಪ್ಪ ಗುರು ಕಾರುಣ್ಯಮಂ ಪಡೆದ ಮಹಾ ಮಹಿಮನು ತನ್ನ ಸ್ಥೂಲತನುವಿನ ವ್ಯವಹಾರಮಂ ಕೆಡಿಸಿ ಸದಾಚಾರ ಸತ್ಕ್ರಿಯಾವರ್ತನೆಗೆ ಸಾಧನವೆನಿಸಿ ತನ್ನ ಅಂಗದ ಮೇಲೆ ನಿರಂತರ ಶ್ರೀ ಮದಿಷ್ಟಲಿಂಗ ಸ್ವಾಯತವಾದ ಭೇದವೆಂತಿರ್ದುದೆಂದೊಡೆ, ಮುಂದೆ ಶ್ರೀ ಲಿಂಗಧಾರಣ ಸ್ಥಲವಾದುದು.

ವಚನ:—ಶ್ರೀ ಹರನೇ, ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ಭಸ್ಮವನೆ ಹೂಸಿ ಕಂಕಣವ ಕಟ್ಟಿದರು ಚನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು.

॥ಪದ॥ ರಾಗ ಘೂರ್ಜರಿ

ಗುರು ಪರಮಾರ್ಥವ ರೂಪಿಸಿ ಪ್ರಾಣನ। ಕರದೊಳು ಕರುಣಿಸಲಾತನು ಲಿಂಗವ। ಶರೀರವ ಸುವ, ಎನಲನವರತಂ ಶಿವಲಿಂಗವ ಧರಿಸಿಹುದು ॥ಪ॥

ಲಿಂಗ ಸಹಿತ ನಡೆ ಲಿಂಗಸಹಿತ ನುಡಿ। ಲಿಂಗ ಸಹಿತ ಸರ್ವೇಂದ್ರಿಯ ಮುಖವು। ಲಿಂಗಃ ಲಿಂಗಿತವಾಗಿಹ ಇಂಥಾ ಲಿಂಗಾಂಗಿಯೆ ಸಹಜಾ॥ ಅಂಗದಿ ಸಹಿತ ಪ್ರಸುಗಳು ಶಿವ, ಲಿಂಗವ ಧರಿಸಿಹುದದು ಕರಣದಿಂ। ಅಂಗ ಸುಸಂಗತನಂತ ಗ ಹಣವೆಂಬ ಶ ತಿಯು ವ್ರತವು ॥೧॥

ತ್ರಿಕರಣ ಶುದ್ಧತೆಯಿಂದ ವಧಾನದಿ। ಪ್ರಕೃತಿಯ ಪಲ್ಲಟಿಸದೆ ಯಾಪೇಕ್ಷೆಯ। ವಿಕಳತೆಯಿಂ ಕಾಂಚನಕೆ ಕೈಯಾನದೆ ನಿಶ್ಚಯ ದೃಢದಿಂ॥ ಅಕಳಂಕ ಚರಿತ್ರದೊಳಣು ಮಾತ್ರವೀ। ರಕತಿಗೆಡದೆ ನಿಜನೈಷ್ಠೆಯ ಭಕುತಿ। ಯುಕುತಿಯುಳ್ಳೊಡೆ ಶಿವಲಿಂಗವ ಕರಸ್ಥಲದಲ್ಲಿಯೆ ಧರಿಸುವದು ॥೨॥

ಏನೇನುಂಟಾದಖಿಳ ಸುಖಂಗಳ। ನಾನಾಮುಖ ಭೋಗಾ ಭೋಗಂಗಳ। ತಾನೇ ಕಾಮಿಸಿ ತನಗದು ಬೇಕೆಂಬತಿ ಕಾಂಕ್ಷೆಯುವಶದ॥ ಜ್ಞಾನೇಂದ್ರಿಯಂಗಳ ಮುಖವೋಗಲೀಯದೆ। ಸ್ವಾನುಭಾವ ನಿಜಮುಳ್ಳೊಡೆ ಕ[illegible]। ಸ್ಥಾನದೊಳವ ಧರಿಸುವದು [illegible]ರ ಶಿವಲಿಂಗವನೊಲಿದು ॥೩॥

ಉರಸೆಜ್ಜೆಯೊಳಗೆ ಲಿಂಗವ ಧರಿಸುವ। ಪರಿಯೆಂತೆದೆನಲಂಗ ವಿಕಾರದ। ವಿರಹದೊಳಂಗನೆಯರ ಸಂಗವ ಮಾಡದೆ ನಿರ್ಮಲನಾಗೀ ॥ ಶರೀರವಿಡಿದು ಸೋಂಕುವ ಸೌಖ್ಯಂಗಳ। ನಿರದಾಲಿಂಗದೊಳಗೆ ಸಮವೇದಿಸಿ। ಪರಮ ಸುಖದ ಸುಗ್ಗಿಯೊಳಿರಬಲ್ಲಡೆ ತಾನದು ಸತ್ಪಥವು ॥೪॥

ಅನೃತವನಪಶಬ್ದವನು ಕುತರ್ಕವ। ಮನಸೂತಕ ನಿಂದೆಯ ನಿಷ್ಠುರವ। ನನುಮಿತ್ಯಾದಿ ವಿಕಾರದ ಭ್ರಾಂತನು ಮದಮತ್ಸರಗಳನು॥ ಅನುಕರಿಸದೆ ಜಿಹ್ವಾಲಂಪಟತನ। ವನು ತಲೆದೋರಲಿಕೀಯದೆ ಲಿಂಗವ। ನನುದಿನ ಮುಖ ಸೆಜ್ಜೆಯೊಳಗೆ ಧರಿಸಿದೊಡದು ಸದ್ಗುರು ಮಾರ್ಗ ॥೫॥

ಕರಣಾದಿ ಗುಣಗಳ ಸಂಚುವಸಂ। ಹರಿಸಿ ಶಿವಜ್ಞಾನದೊಳಂತರ್ಮುಖ। ವೆರಡರಿಯದೆ ನವನಾಳದೊಳಗೆ ಬೀಸುವ ಪ್ರಾಣನ ಗುಣವಾ॥ ಪರಿಹರಿಸಿ ಮಹಾಸುವಿಚಾರದೊಳಗೆ। ಪರಿಪಕ್ವಸದ ಸನ್ನಿಹಿತ ಸುಖದೊಳರೆಯುಮಳೋಕ್ಯದೊಳಗೆ ಲಿಂಗವ ಧರಿಸುವಡದು ಸತ್ಪಥವು ॥೬॥

ಅವಿಚಾರತೆಯಿಂ ಲೋಕದ ಜಡಮಾ। ನವರಿಗೆ ರಗದಿಹದುಳ್ಳೊಡೆ ಶಿವಲಿಂ। ಗವ ಮಸ್ತಕದಲಿ ಧರಿಸುದೀಕ್ರಮವರಿದು ಧರಿಸಿದವರು॥ ಶಿವತತ್ವದ ಮೂಲಜ್ಞಾನದಸಂ। ಭವ ಸಂಬಂಧಿಗಳೆನಿಸುವ ನಾನಿಜ। ಸುವಿ ಚಾರದಿ ಭಕ್ತರ ಪದಕೆ ಶರಣೆಂಬೆ ಗುದುಪುರದ ಮಲ್ಲಯ್ಯ ।೭॥

ಮತ್ತೇಭಃ—ಮುದದಿಂ ಲಿಂಗವ ನಿಂತು ಕಕ್ಷಕರ ಹೃಜ್ಜಿ ಹ್ವಾಮ ಳೋಕ್ಯೋತ್ತಮಾಂ। ಗದೊಳಾಯಾ ಕ್ರಮ:ದಿಂದೆ ಕಾಂಕ್ಷೆ ಧನ ಸಂಗಾ ಹ್ವಾಂಗನಾ ಲಿಂಗನಂ॥ ಪುದಿ ದನ್ಯಥ್ವಸಿ ಯನ್ನ ಭುಂಜನ ಯಥೋ ದೈವಾದಿ ನಾಮ:ತ್ವಮುಂ। ವಿದಿತಂ ಬಿಟ್ಟೊಡೆಯಾವಗಂ ಧರಿಪುದ್ಯೈ ಶ್ರೀ ಸಿದ್ಧಲಿಂಗೇಶ್ವರಾ

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐದನೆಯ ದಾದ ಲಿಂಗಧಾರಣ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೬ ವಿಭೂತಿಸ್ಥಲ.

ಸೂತ್ರಃ—ಇಂತಪ್ಪ ಶ್ರೀ ಲಿಂಗಧಾರಣದಿಂ ಸದಾಚಾರ ಸತ್ಕ್ರಿಯಾ ಸಮ್ಯಜ್ಞಾನ ಸದ್ಭಾವ ಸಂಪನ್ನನಾದ ಮಹಿಮಂಗೆ ಶ್ರೀ ಶಿವನ ಮಹದೈ ಶ್ವರ್ಯ ಸ್ವರೂಪ ಮಪ್ಪ ಶ್ರೀ ವಿಭೂತಿಯ ಧರಿಸಬೇಕಾದ ಕಾ:ಣ ಮುಂದೆ ವಿಭೂತಿ ಸ್ಥಲವಾದುದು.

ವಚನಃ—ಹಿತವಿದೆ ಸಕಲಲೋಕ ದ ಜನಕ್ಕೆ. ಮತಿಯಿದೆ ಶೃತಿ ತತಿ ಪುರಾಣಾಗಮದ. ಗತಿ ಯಿದೆ ಶ್ರೀ ಭಕ್ತ ತತಿಯ. ಶ್ರೀ ಶರಣರ ಬೆಳಗಿನ ಉನ್ನತಿ ಇದೆ. ಇಂತಪ್ಪ ಶ್ರೀ ವಿಭೂತಿಯ ಧರಿಸಿ ಭವಮಾಲೆ ಯನು ಪರಿಹರಿಸುವುದು ದು:ರಿತ ಸಂಕುಲವನು ಒರಿಸುವದು. ಹರನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದಂಗಳಲ್ಲಿರಿಸುವುದು. ನಿರುತವಿದು ನಂಬು ಮನುಜಾ. ಶ್ರೀ ವಿಭೂತಿಯನೆಲ್ಲಾಗಳು ಈ ಜನನ ಮರಣಂಗಳ ಭಯದಿಂದ ಅಗಸ್ತ್ಯ ಕಶ್ಯಪ ಜಮದಗ್ನಿ ಮುಂತಾದ ಸಕಲ ಋಷಿ ಜನಂಗಳು ಧರಿಸಿದರು ನೋಡಾ ಶ್ರೀ ಶೈಲಮಲ್ಲಿಕಾರ್ಜುನ ಲಿಂಗವ ನೊಲಿಸುವ ಶ್ರೀ ವಿಭೂತಿಯನು

॥ಪದ॥ ರಾಗ ಭೈರವಿ.

ಶ್ರೀ ವಿಭೂತಿಯ ನೊಲಿದು ಧರಿಸಿದೊ। ಪಾಪಕರ್ಮವು ಹೊದ್ದಲ

ವ್ಯೃವು । ಪಾವನವ ಮಾಡುವದು ಪರಮ ಪದವಿಯ ತೋರುವದು ॥ಪಲ್ಲವ॥

ಶಿವನ ಪರಮ ಜ್ಞಾನ ಮೂಲದಾಧಾರ ಶಕ್ತಿಯ ಸರ್ವಾಂಗ ಮಂಗಳ ಭೂಷಣದ। ಸಾರೋದ್ಧಾರದ ಸುಖದ ಮಹದೈಶ್ವರ್ಯದನಾದಿ ಸಂಸಿದ್ಧವಾದ ವಿಭೂತಿ ॥೧॥

ಪಂಚ ಬ್ರಹ್ಮಾತ್ಮಕದಿಂದುದಯವಾದ ಪಂಚಗವ್ಯ ಗೋಮಯವನು ಆಗಮ । ಮತದಿಂದ ದಹಿಸಿ ಸಮಸ್ತ ಮುನಿ ಜನಂಗಳು ಧರಿಸುವ ಭಸಿತವು ॥೨॥

ಶ್ರೀ ಗುರು ವಿಭೂತಿಯಂ ಶಿಷ್ಯನ ಹಣೆಯೊಳಿಡೆ ಆಗಳೆ ಮಾಂಸ ಪಿಂಡದ ಗುಣವಳಿದು। ಮಂತ್ರ ಪಿಂಡವ ಮಾಡಿ ದುರ್ಲಿಖಿತವ ತೊಡೆದು ಒಪ್ಪುತಿಪ್ಪುದು ॥೩॥

ಆಣವ ಮಲ ಮಾಯಾ ಮಲ ಕಾರ್ಮಿಕ ಮಲವೆಂಬ ಮಲತ್ರಯಂಗಳ ಕಲುಲವ ಜಲದೊಳ। ಗಲೆದು ದೊಳೆವಂತೆ ತೊಳೆದು ಎನ್ನಂತರಂಗದಲಿ ತೊಳಗುತಿಹ ಭಸ್ಮವು ॥೪॥

ಸಕಲ ಕ್ರಿಗಳಿಗಿದು ಕವಚ ಸಕಲವಶ್ಯಕ್ಕಿದು ಶುಭತಿಲಕ ಸಕಲ ಸಂಪದಕ್ಕೆ ತಾಣವಿದು । ಅಘಟಿತ ಘಟಿತವೆನಿಸುವ ಅನುಪಮ ಮಹಾ ತ್ರಿಪುಂಡ್ರವಿದು ॥೫॥

ಆಗಮಕ್ಕೆ ಮೊದಲಿದು ಆಚಾರದಸುಗತಿಯ ಪಥವಿದು ಕಾಲಕರ್ಮದ ಮೂಲನಾಶನ। ವಿದು ಜನನ ಮರಣದ ಭಯವೆಂಬ ದುಷ್ಕೃತವದೂರವ ಮಾಡುವದು ವಿಭೂತಿ ॥೬॥

ಅಣುಮಾತ್ರ ವಿಭೂತಿಯ ಹಣೆಯೊಳಿಡೆ ಎಣಿಕೆಯಿಲ್ಲದ ಭವಪಾಶ ಹರಿವುದು । ತ್ರಿಣಯನೊಲಿದು ಧರಿಸಿವನೆಂದೆನೆ ಆನು ಬದುಕಿದೆನು ಕೂಡಲಸಂಗಯ್ಯ ॥೭॥

ಶಾರ್ದೂಲ॥ — ಐಶ್ವರ್ಯಕ್ಕಿದು ಕಾರಣಂ ಸಕಲ ಮಾಂಗಲ್ಯಕ್ಕೆ ತಾಂಸಾಧನಂ । ಶಶ್ವದ್ಭೂತ ಪಿಶಾಚ ರಾಕ್ಷಸ ಭಯಕ್ಕುಚ್ಚಾಟನಂ ಗೋಹಿರ॥ ಣ್ಯಶ್ವಾಕ್ಷ್ಯಾದಿ ಸಮಸ್ತ ದಾನ ಫಲದಂಚಿಜ್ಜ್ಯೋತಿ ರಾಕಾರಮಾ। ವಿಶ್ವಾತೀತಮಿದೇ ಪ್ರಸಿದ್ಧ ಭಸಿತಂ ಶ್ರೀ ಸಿದ್ಧಲಿಂಗೇಶ್ವರಾ ॥೮॥

॥ಗದ್ಯ॥ ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಆರನೆಯದಾದ ವಿಭೂತಿಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೭ ರುದ್ರಾಕ್ಷಿ ಸ್ಥಲ.

ಸೂತ್ರಃ—ಇಂತಪ್ಪ ಮಹಾಜ್ಞಾನ ಭಸ್ಮವಂ ಸಕ್ರಿಯಾ ಮುಖದಿಂದ ಧರಿಸಿದ ಶ್ರೀ ಲಿಂಗ ಕ್ರಿಯಾ ಸಂಪನ್ನಂಗೆ ಶಿವನ ಮಹಾಜ್ಞಾನ ಚಕ್ಷು ವಿನಿಂದುದಯಿಸಿದ ರುದ್ರಾಕ್ಷಿಯ ಧರಿಸಬೇಕಾದ ಕಾರಣ ಮುಂದೆ ರುದ್ರಾಕ್ಷಿಯ ಸ್ಥಲವಾದುದು.

ವಚನಃ—ಶ್ರೀ ವಿಭೂತಿಯ ಧರಿಸದವನ ಶ್ರೀ ರುದ್ರಾಕ್ಷಿಯ ತಾಳದವನ ಶ್ರೀ ಲಿಂಗಾರ್ಚನೆಯ ನಿತ್ಯ ಮಾಡದವನ ಶ್ರೀ ಜಂಗಮವೇ ಲಿಂಗವೆಂದರಿಯದವನ ಶ್ರೀ ಸದ್ಭಕ್ತರ ಸಂಗದಲ್ಲಿರದವನ ಎನಗೊಮ್ಮೆ ತೋರದಿರಾ ಕೂಡಲಸಂಗಮದೇವ ಸೆರಗೊಡ್ಡಿ ಬೇಡುವೆ

॥ಪದ॥ ರಾಗ ಮಂಗಳಕಾರಿ

ಮಂತ್ರ ಮೂಲ ಗೂಢ ಪದದ ಚಿಂತಾಮಣಿ ರುದ್ರಾಕ್ಷಿಗಳನವರತುವರಿದುಧರಿಸ ಬಲ್ಲಡಾತ ರುದ್ರನು ॥ಪಲ್ಲವ॥

ಮಾರ ಮಥನ ತ್ರಿಪುರ ದಹನ ಕಾರಣದೊಳು ನೋಡೆನಯನ ವಾರಿ ಬಿಂದು ಬೀಳಲುದಯವಾಗಿ ಮರ್ತ್ಯರಾ ॥ ಘೋರಪಾತಕಂಗಳನ್ನು ಉರುಹಿ ಭಕ್ತ ಜನದೊಳೊಪ್ಪಿ । ತೋರುತಿರ್ಪ ರುದ್ರಾಕ್ಷಿಯು ಪುಣ್ಯ ಪುಂಜವು ॥೧॥

ಸ್ಮರಿಸಿ ದುರಿತ ಹರವು ಈಕ್ಷಿಸಲ್ಕೆ ಕರ್ಮವಳಿವು ಒಲಿದು । ಸ್ಪರಿಶನವನು ಮಾಡೆ ಜನ್ಮ ಪಾಪ ನಾಶನಾ ॥ ಧರಿಸೆ ರುದ್ರ ಪದವಿಯರಿದು ಧರಿಸಿ ಜಪಿಸೆ ಸದ್ಯೋನ್ಮುಕ್ತಿ । ಪರಮ ವೀರಶೈವ ಸಮಯ ಮೂಲ ಭೂಷಣಾ॥೨॥

ಹಸ್ತದಲ್ಲಿ ಬಾಹು ಕಂಠದಲ್ಲಿ ಕರ್ಣಯುಗಳದಲ್ಲಿ । ಉತ್ತಮಾಂಗದಲ್ಲಿ ಶಿಖಿಯ ಮೂಲದಲ್ಲಿ ॥ ವಿಸ್ತರಿಸಿ ಮನೋನುರಾಗದಿಂದ ತಿಳಿದು ನೋಡೆಯಾಗ । ಮೋಕ್ಷಿಯಿಂದ ಧರಿಸಿದಾತ ಸತ್ಯ ನಿತ್ಯನು ॥೩॥

ಎಸೆವ ಹಲವು ಮುಖದ ಭೇದವರಿದು ಧರಿಸೆ ಬ್ರಹ್ಮಹತ್ಯ । ಶಿಶುವಿಘಾತ ಭ್ರೂಣಹತ್ಯ ಪಾಪ ವಿನಾಶನಾ ॥ ಒಸೆದು ಚಿತ್ತ ಶುದ್ಧದಿಂದ ಧರಿಸಿದಾತ ರುದ್ರನೆಂದು । ವಸುಧೆಯೊಳಗೆ ಸಾರುತಿಹವು ವೇದ ವಾಕ್ಯವು॥೪॥

ಪರಮ ಶಿವನ ಪರಬ್ರಹ್ಮ ದೇಹದಲ್ಲಿ ತೊಡಿಗೆಯಾಗಿ । ಪರಮ ಪುಣ್ಯ ಪುಂಜ ಮಾಲೆಯೆನಿಸಿ ಯೊಪ್ಪುವಾ ॥ ಶರಣ ಜನ ಮನೋರಥವೆನಿಪ್ಪ ರುದ್ರಾಕ್ಷಿಗಳನು । ಧರಿಸಿ ಯಾನು ಬದುಕಿದೆನು ಸಂಗ ನಿಮ್ಮೊಳು ॥೫॥

ಮತ್ತೇಭ :— ಪುರಮೂರುಂ ವಧಿಪಾಗಳೀಶ್ವರ ತೃತೀಯಾಕ್ಷಂಗಳಿಂದಂ ಜಲೋ। ತ್ಕರ ಬಿಂದು ಪ್ರಕರಂಗಳಿಂತುದಿರ್ದು ಮತ್ತಲ್ಲಿ ಪುಟ್ಟಿರ್ಕು ಮಾ॥ ತರುಬಿಂದುದ್ಭವ ಮಾದ ತದ್ವಿವಿಧ ರುದ್ರಾಕ್ಷಂಗಳಂ ದೇಹದೊಳ್। ತರದಿಂದಂ ಧರಿಸಿರ್ಪ ನಾತನೆ ಶಿವಂ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಏಳನೆಯದಾದ ಈ ರುದ್ರಾಕ್ಷಿಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೮ ಮಂತ್ರಸ್ಥಲ

ಸೂತ್ರ— ಇಂತು ಅಂಗದ ಮೇಲೆ ಲಿಂಗವ ಸಂಬಂಧಿಸಿ ವಿಭೂತಿ ರುದ್ರಾಕ್ಷಂಗಳಂ ಧರಿಸಿ ನಿತ್ಯ ಲಿಂಗಾರ್ಚನೆಯಂ ಮಾಡುವ ಲಿಂಗಕ್ರಿಯಾ ಸಂಪನ್ನಂಗೆ ಶ್ರೀಮತ್ಪ್ರಣವ ಮೂಲಪಂಚಾಕ್ಷರಿಯು ಜಪಿಸಬೇಕಾದ ಕಾರಣ ಮುಂದೆ ಪಂಚಾಕ್ಷರ ಮಂತ್ರಸ್ಥಲವಾದುದು.

ವಚನ— ವಿಪುಲ ವೇದ ವೇದಾಂತಸಾರ ಸಕಲ ಲೋಕದ ಜನ ಹಿತಾಧಾರ ಸಪ್ತಕೋಟಿ ಮಹಾಮಂತ್ರಂಗಳ ತವರುಮನೆ ಸದ್ಭಕ್ತಜನ ಜೀವಾನಂದ ಅಖಿಳಾಗಮದ ಸಂತಾನದ ಹರಣ ಮುಕ್ತಿ ಮೇಲುಪ್ಪರಿಗೆಯ ಸೋಪಾನ ಪ್ರಣವಾಂಕುರ ಪಲ್ಲವ ಫಲರೂಪ ತ್ರಿಣಯನನೊಲಿಸುವ ಕರ್ಣಾಭರಣ ಶ್ರೀಹರನಾಮದಸಾಕಾರ ನಿಲವು, ಶ್ರೀಮತ್ಪರವು ಪಂಚಪಂಚ ಬ್ರಹ್ಮಾನಂದ ಶ್ರೀಮತ್ಪರತತ್ವದನಿತ್ಯನೆಲೆಯು ಶ್ರೀ ಹಂಪೆಯ ವಿರುಪನ ತೋರುವ ಶ್ರೀಗುರು ಪಂಚಾಕ್ಷರಿ

॥ಪದ॥ ರಾಗ ಮಧುಮಾಧವಿ

ಸುರಿದು ಕರುಣಾಮೃತವ ಹೊರೆವುದೈ ಭಕ್ತರನು। ಗುರುಪುರದ ಮಲ್ಲನ ನಾಮ ಪಂಚಾಕ್ಷರೀ ॥ಪ॥

ತಾಯಿ ಶೃತಿಗಳನೊತ್ತಪಾಯುಭಕ್ತಾಂಗನೆಯು। ಶ್ರೀಯಖಿಳಭುವನ ಭವನವ ಸಲಹುವಾ ॥ಈಯಲಿಕೆ ಬೇಡಿದಂದ ಕಾಯಲಿಕೆ ತನುವನು। ತಾಯಿಂದಲನುಕಂಡ್ಯ ಪಂಚಾಕ್ಷರಿ ॥೧॥

ಕರಗಿ ಮನ ಕಂಗಳೊಳು ಸುರಿಯೆ ಸುಖಾಶ್ರುವಂ। ಕುರಿಸೆವುಳುಕಂಗಳಿಗೆ ವೇದಂದದಿ॥ ಹರುಷದಿಂ ನೆನೆದು ನೆನೆವರಿಗೆ ಗಿರಿಜಾವರನ। ಕರೆದು ತೋರುವದು ಶ್ರೀಪಂಚಾಕ್ಷರೀ ॥೨॥

ಓದುವಾದಿನಲಿ ಸುರಸಾದರಿಪ ಧರ್ಮದಲಿ । ಸಾಧಿಸುವ ತಪಸಿದ್ಧಿ ವಿದ್ಯಗಳಲಿ ॥ ವೇದದಲಿ ಹಿರಿದು ಹೆಸರಾದ ಹೆಂಪುಳ್ಳ ಶಿವ । ನಾದಿನಾಮವ ನೋಡು ಪಂಚಾಕ್ಷರಿ ॥೩॥

ದಣಿವರಿಯೆ ದುಕ್ಕಿಸಂದಣಿಸಿ ಕರಣಂಗಳುರ । ವಣಿಸಿ ನೆನೆವರಿಗೆ ಸುರಧೇನುವಾಗಿ ಮಣಿಮುಕುಟರಾಶಿಗಳ ಅಣಿಮಾದಿ ಗುಣಗಳನು । ತ್ರಿಣಯನನು ಕರೆವುದೀಪಂಚಾಕ್ಷರಿ ॥೪॥

ಅರಿಮಿತ್ರತಾನೆ ಪುನಶ್ಚರಣೆ ಸಿಧ್ಯಾಸಿದ್ಧಿ । ಕರದ ಹಂಗೇತಕವರಿವರಿಶ್ವನೆ ॥ ಸ್ಮರಣೆಮಾತ್ರವಲಿ ಉಚ್ಚರಣೆ ಮಾತ್ರವಲಿ ಶಂ । ಕರನ ತೋರುವದು ಶ್ರೀಪಂಚಾಕ್ಷರಿ ॥೫॥

ಪ್ರಣವ ರಾಜನ ಹೊಳೆವ ಮಣಿಮುಕುಟದಲ್ಲಿ ಕೀ । ರಣದರತುನದ ತೊಡಿಗೆಯಾಭರಣದಾ॥ ತ್ರಿಣಯನೊಸೆದಿಪ್ಪ ಗುಣಮಣಿಯ ಚಿಂತಾ । ಮಣಿಯಕಣಿಯ ಕರಡಿಗೆ ನೋಡು ಪಂಚಾಕ್ಷರಿ ॥೬॥

ದಯದ ನಿಧಿಪುಣ್ಯಸಂಚಯದ ಶ್ರೀಶೃತಿಯುನಿ। ಶ್ಚಯದನಿಜಧರ್ಮಂಗಳಾಪ್ತಜನದಾ॥ ಪ್ರಿಯನಾಮವು ಭಕ್ತರಿಚ್ಛೆಯ ನಾಮವಿದುನೀತಿ । ನಯದ ನಾಮವ ನೋಡು ಪಂಚಾಕ್ಷರಿ ॥೭॥

ಶರಣರಿಟ್ಟೆಡೆಗಳನು ಶರಣಾಪತ್ತುವನು । ಶರಣರಿಗೆ ಮುನಿವ ಕಡುಪಾತಕರನು । ಒರಸೂದು ಕಡಿದು ಕತ್ತರಿಸೂದು ಉಃಪೆಂದು। ಉರುಹುವದು ನೋಡು ಪಂಚಾಕ್ಷರಿ ॥೮॥

ಏಳುಕೋಟಿಯು ಮಹಾ ಮಂತ್ರಾದಿಗಳ ಹಡೆದ ತಾಯಿ ತ್ರೈಲೋಕ್ಯಪತಿಮಂತ್ರ ರಾಜಾ॥ ಶೂಲಿಯುಗ್ಗದ ಸಿರಿಕಪಾಲಿಯುರುತರ ತೇಜ ಬಾಲೇಂದು ಧರನ ನಿಜಪಂಚಾಕ್ಷರೀ ॥೯॥

ಹರಿಹರಿದು ಮೆಲ್ಲಡಿಯ ಸರಸಿಜಭವನು ಮುರಿಯ । ಭರದಿಂದಲರಸಿಯಾರುಂ ಕಾಣದಾ॥ ಹರನ ತಾನಿರ್ದೆಡೆಗೆ ಬರಿಸಿ ತೋರುವ ಜಗದಾ। ಗುರುವೆನ್ನ ಹೊರೆವ ಶ್ರೀಪಂಚಾಕ್ಷರಿ ॥೧೦॥

ಗುರುದೈವ ತಂದೆತಾಯಿ ಹೊರೆವ ಸಖತೇಜ ಬಲಹರನ ಶ್ರೀಸೌಭಾಗ್ಯದಾನೆಂದದಾ। ಪರಿಪರಿಯೊಳಾಗಿ ನೆನೆವರ ಸಲುಹುವದು ಗುರುಪುರದಮಲ್ಲನನಾಮ ಪಂಚಾಕ್ಷರಿ ॥೧೧॥

ಶಾರ್ದೂಲ:— ಸತ್ವಂನಾಹಿತ ವಸ್ತುಮನುತ್ಸವೆಮವಾಪ್ತಂ ಮತ್ತ ವೊಂದರ್ಕಭಾ । ವತ್ಸಂ ಸಂದಿಸೆ ತನ್ನಮಃ ಪದಮದೇ ಜೀವಂ ತದೋಂ ಕಾರನು ॥ ರ್ತತ್ವಂವಾಚಕಮರ್ತ ವಾಚ್ಯವೆ ಶಿವಂ ವೃದ್ದೋಕ್ತಿಮಾನೆಂ ಬುದೇ । ತತ್ವವಾಚಕ ವಾಚ್ಯನೇ ವೃಷೆಯಲಾ ಶ್ರೀ ಸಿದ್ಧಲಿಂಗೇಶ್ವರಾ॥೮।

ಗದ್ಯ— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಟನೆಯ ದಾದ ಈ ಪಂಚಾಕ್ಷರ ಮಂತ್ರದ ಸ್ಥಲದ ವಿಚಾರವು ಮುಗಿಯಲಾಯಿತು॥

೯ ಭಕ್ತಸ್ಥಲ.

ಸೂತ್ರ:—ಇಂತು ಶ್ರೀ ವಿಭೂತಿ ರುದ್ರಾಕ್ಷಿಯಂ ಧರಿಸಿ ಶ್ರೀ ಪಂಚಾ ಕ್ಷರಿಯಂ ಜಪಿಸಿ ನಿತ್ಯ ಲಿಂಗಾರ್ಚನೆಯಂ ಗೈವ ಸತ್ಕ್ರಿಯಾ ಸಂಪನ್ನನ ಸಾಂಗಕ್ರಿಯಾ ವರ್ತನೆ ಎಂತಿರ್ದುದೆಂದೊಡೆ ಮುಂದೆ ಭಕ್ತಸ್ಥಲವಾ ದುದು.

ವಚನ:—ಅಂದಂದಿಗೆ ನೂರು ತುಂಬಿತ್ತೆಂದು ದಿಟವಿರಬೇಕು. ಸಂ ಡ ಶ್ರೀಪುರಾತರ ನೆನೆವುತ್ತಿರಬೇಕು. ಶ್ರೀಜಂಗಮದೇವ ಮನೆಗೆ ಬಂದರೆ ವಂಚನೆ ಇಲ್ಲದಿರಬೇಕು. ಎನಗೀವರವನೀವುದು ಬಸವಪ್ರಿಯ ಕೂಡಲ ಸಂಗಮದೇವಾ.

॥ಪದ॥ ರಾಗ ಹಿಂದೂಳ ವಸಂತ

ಮುಂದನೆಣಿಸದೆ ದಿನದಿನಕೆ ಪರವಾಯು । ಸಂದುದೆಂಬಾ ಧೃಢತೆ ನೆಲೆಗೊಂಡು ಚರಲಿಂಗ । ಕಂದಂದಿಗೇನುವಂ ವಂಚಿಸದೆ ಮಾಡುತಿಹ ದಾಸೋಹಿ ಸದ್ಭಕ್ತನು ॥ಪಲ್ಲವ॥

ಭಯಭಕ್ತಿ ಕರುಣ ಕಿಂಕುರ್ವಾಣದಾಸೋಹ । ನಯ ಭೃತ್ಯ ಭಾವ ಸಜ್ಜನ ಸತ್ಯ ಸಮತೆ ಸದ್ವಿ । ನಯಗುಣ ನಿಷ್ಠೆ ಸಾಹಿತ್ಯ ಸವಾಧಾನ ಕ್ಷನೆ ಷಟ್ಸ್ಥಲ ತಾಚಾರವೂ ॥ನಿಯತ ನಿರ್ವಂಚನತೆ ನಿರ್ವಿಕಲ್ಪತೆ ನಿರತಿ । ಶಯ ಜಾತಿ ಭೇದ ನಿರಹಂಕಾರ ಸಾತ್ವಿಕ । ದಯದಳುಕಿನಿಂ ಲಿಂಗಜಂಗಮ ಕೆ ಸ್ವಯವಾಗಿ ಮಾಡುವಾತನೆ ಭಕ್ತನು ॥೧॥

ಅನವರತ ದಾಸೋಹದಲ್ಲಿ ಮನಬೆರಸಿ ನಿಜ । ತನು ಕರಗುತಿಹಂ ಲಿಂಗಜಂಗಮವ ಕಾಣುತ್ತ । ವಿನಯದಿಂದಶ್ರುಜಲವಾನಂದದಿಂದ ವರಪದ ಸೋಂಕಿನಿಂ ಸುರಿಯುವಾ ॥ ತನು ಪುಳಕ ತಳಿತು ತನತನಗೆ ಹೊರೆ ಯೇರಿನಲಿ । ದಣುಕೇಳುಹಂ ಮಹೋತ್ಸಾಹ ಭಾವ ಗುಡಿಗಟ್ಟಿ । ಕುಣಿ

ಕುಣಿದು ಕೂರ್ಪಯಿಂ ಮಾಡಿ। ದಣುವಿಲ್ಲದಿರುತಿಹಂ ಭಕ್ತನಂಗ ಚಿನ್ನ॥೨॥

ತನ್ನ ಮಾಟಕೆ ತಾನೇ ಮುಖ್ಯಾನ ದಾಸೋಹಿ। ಸನ್ನಿಹಿತನೆಂಬ ಹೊಗಳತೆಯ ಹೊರ ಸರ ಹಳಿ। ವನ್ಯಾಯಕೆಳಸದಹಂಕಾರ ವಳಿದೇನುವಂ ಶಾನೆನ್ನ ತನಗೆ ನನ್ನನೂ॥ ಹೊನ್ನುಹೆಣ್ಣು ಮಣ್ಣಿನೊಳು ಸಿಲುಕದಾತ್ರಯುವ। ತನ್ನದೆನ್ನದೆ ಲಿಂಗಜಂಗಮಕೆ ಸವಿಸುತ್ತ। ತನ್ಮೂರ್ತಿಯಾಗಿ ನಿಭ್ರಾಂತನಾಗಿರಬಲ್ಲಾತನೇ ಸದ್ಭಕ್ತನೂ॥೩॥

ಮತ್ತೆ ಮತ್ತೆಯು ಮಗುಳಿ ಲಿಂಗಕ್ಕೆ ಜಂಗಮಕೆ. ತೊತ್ತಾಗಿ ಕೀಳು ಕಿಂಕರನಾಗಿ ಭಯದಿಂದ। ಭೃತ್ಯರಾಳಾಳಾಗಿ ಯುಟ್ಟ ವೈಲಿಗೆ ಯುಗುಳ ತಂಬುಲಕೊಕ್ಕ ಮಿಕ್ಕಾ॥ ಸತ್ಯಪ್ರಸಾದಕ್ಕೆಯೋಗ್ಯತೆ ವಡದೆನೆಂಬ ಭಾ। ವೋತ್ತಮತೆಯಿಂದ ಚರಿಸುವ ಭಕ್ತನೆ ಭಕ್ತಿ। ಗೆತ್ತಿಸ ಶಿವನ ಸಿಂಧು ಭಕ್ತಿಯ ಕುಳಸ್ಥಲವ ನಿಂಬುಗೊಂಡಾಚಾರ್ಯನು॥೪॥

ದೇಹಾಭಿಮಾನ ಕುಲಛಲವಳಿದು ಭಕ್ತಿದಾ। ಸೋಹವಳವಟ್ಟು ಜಂಗಮ ಪ್ರಸಾದ ಸ್ವಪ್ರಾಣ। ಗ್ರಾಹಕತೆ ನೆಲೆಗೊಂಡು ಸರ್ವಾಂಗದೊಳಗೆ ಸರ್ವಾಚಾರಲೀಯ್ಯವಾಗಿ॥ ಸೋಹದಾಸೋಹವೆಂಬೆರಡರತು। ಸಹಜ ನಿರ್ದೇಹಿಯಾಗಿರ್ಪ ಭಕ್ತರ ಭೃತ್ಯನಾ। ಗಿಹ ಶಿವಭಾವ ಭರಿತಾನಂದ ಸುಖವನೀಯೆನಗೆ ಕರುಣಾಬ್ಧಿ ಸೊಡ್ಡಳ ಲಿಂಗವೆ॥೫॥

॥ಮತ್ತೇಭ॥ ನೊಸಲೋಳ್ ಶ್ರೀಭಸಿತಂ ವಿರಾಜಿಸೆ ಲಸದ್ರುದ್ರಾಕ್ಷಗಳ್ ಕಂಠದೋಳ್ನಿಸದಂ ರಂಜಿಸೆ ಮಂತ್ರಮಾನನದೊಳಿಂತುದ್ಭಾಸಿಸಲ್ ಸಾಕ್ಷಿಕಂ॥ ಪ್ರಸರಂ ಕಾಣುಗೆ ಭೃತ್ಯಭಾವವದುತಾಂ ಕ್ಷೇಮಕ್ಕಲೋಭತ್ವದಿಂ। ದೆಸೆದಿರ್ಪಾತನೆ ನಿನ್ನ ಭಕ್ತ ನೆನಿಪಂ ಶ್ರೀ ಸಿದ್ಧಲಿಂಗೇಶ್ವರಾ॥

ಗದ್ಯಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಒಂಬತ್ತನೆಯದಾದ ಶ್ರೀ ಭಕ್ತಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೧೦ ಉಭಯಸ್ಥಲ.

ಇಂತು ಶ್ರೀ ಭಕ್ತಸ್ಥಲದಲ್ಲಿನಿಂದ ಸದ್ಭಕ್ತನ ದೇಹಪ್ರಾಣ ಸ್ವರೂಪ ಮಪ್ಪ ಕರ್ತೃ ಭೃತ್ಯಾಂತರ ಸಂಬಂಧವೆಂತಿರ್ದುದೆಂದೊಡೆ. ಮುಂದ ಉಭಯಸ್ಥಲವಾದುದು.

ವಚನಃ—ಗತಿ ಪಥದ ಮುಕ್ತಿಯ ಬಯಿಸಿ ಮಾಡುವಾತ ಭಕ್ತನಲ್ಲ. ಜೀವನೋಪಾಯಕ್ಕೆ ಬೇಡುವಾತ ಜಂಗಮನಲ್ಲ. ಗತಿ ಪಥ ಮುಕ್ತಿ ಸೂತಕ

ವಿರಹಿತ ಭಕ್ತ. ಹಮ್ಮು ಬಿಮ್ಮುಗಮುನ ನಾಸ್ತಿ ಯಾದಾತನೇ ಜಂಗಮು. ಮಾಡುವಡೆ ಭಕ್ತ ಮಾಟದೊಳಗಿಲ್ಲದಿರಬೇಕು. ಬೇಡುವಡೆ ಜಂಗಮು ಕೊಂಬುದರೊಳಗಿಲ್ಲದಿರಬೇಕು. ಪ್ರಾಣವಿಲ್ಲದಾತ ಭಕ್ತ ರೂಹಿಲ್ಲದಾತ. ಜಂಗಮು. ಈ ಉಭಯ ಕುಳಸ್ಥಳದ ಸಂದೊಂದಾಗಿ ನಿಂದ ನಿಲವು ಕೂಡ ಲಚನ್ನ ಸಂಗಮುದೇವರಲ್ಲಿ ಭಕ್ತಜಂಗಮುವೆಂಬೆ.

॥ಪದ॥ ರಾಗ ಮಾಳವಗೌಳ

ಸ್ಥಾವರ ಜಂಗಮು ಸಂಬಂಧದನಿ। ಭಾವದುಭಯ ಕೂಟವನೇ ನೆಂಬೆ ॥ಪಲ್ಲವಾ॥

ಆಚಾರವೇ ಜಂಗಮುವು ವಿಚಾರದ ಗೋಚರ ಭಕ್ತಿ ಸ್ವಾನುಭಾವ। ಆಚಾರವಿಚಾರವೆಂಬು ಭಯದ ವಾಚಕ ಒಂದೇ ಭಾಸವು ॥೧॥

ಸೂತಕ ವಿರಹಿತ ಲಿಂಗ ಮುನಪಾತಕ ವಿರಹಿತ ಜಂಗಮುವು। ಸೂತಕ ಪಾತಕವೆಂಬು ಭಯುವನಳಿದಾತನೆ ಸಹಜ ಸುಸಂಬಂಧಿ ॥೨॥

ಅಂಗದೊಳನುಭವ ಸತ್ಯಾಚಾರ ಚಿದಂಗದೊಳಗೆ ಪರಮುಜ್ಞಾನೋದಯ। ಅಂಗಪ್ರಾಣಸ್ಥಲವೆನ್ನದೊಡದು ಜಂಗಮು ಲಿಂಗದ ಸಂಬಂಧ॥೩॥

ನಾದವೆ ಜಂಗಮು ಬಿಂದುವೆ ಲಿಂಗವು ಬಿಂದುವಿನಾದಿಯೆ ಭಕ್ತಿಯ ಸಪ್ಪಿಂಡವು। ನಾದ ಬಿಂದುಗಳು ಎರಡೆನಿಸ ಆದಿಯೊಳು ಉಭಯದ ಸಂಬಂಧ ॥೪॥

ಅನುಭವದಂಗದೊಳರಿವು ಅರಿವಿನೊಳನು ಭವವೆಂತಾಪರಿ ಜಂಗಮು। ಭಕ್ತನ ಸಂಬಂಧವಿದನು ಕೂಡಲಸಂಗನ ಶರಣ ತಾನೇಬಲ್ಲ ॥೫॥

ಮತ್ತೇಭಃ—ಗುರು ಲಿಂಗಂ ಸಮವಾದ ತತ್ವಮುದು ತಾನಿಲ್ಲಿಲ್ಲ ಮತ್ತೆಲ್ಲಿಯುಂ। ಪರಮೇಶಂಗುರೆ ಸಾಮ್ಯ ಮಾದಿತರ ದೈವಂ ನೋಡೆ ತಾನಿಲ್ಲವೆಂ॥ ದುರ ಸದ್ಭಕ್ತಿಯ ನಿಂತು ಸದ್ಗುರುವನಾ ಶ್ರೀಲಿಂಗಮುಂ ಪೂಜಿಪಾ। ತುರಮುಳ್ಳಾತನೆ ಸತ್ಯತಾರ್ಥನೆ ನಿಪಂ ಶ್ರೀಸಿದ್ಧಲಿಂಗೇಶ್ವರಾ ॥೧೦॥

॥ಗದ್ಯ॥ಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಹತ್ತನೆಯದಾದ ಉಭಯಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೧೧ ತ್ರಿವಿಧ ಸಂಪತ್ಸ್ಥಲಂ

ಇಂತು ಉಭಯಸ್ಥಲದಲ್ಲಿ ಶ್ರೀಲಿಂಗಜಂಗಮವೆರಡರ ಸಂಬಂಧವನ ರಿದ ಸದ್ಭಕ್ತನ ತನುವಿನಲ್ಲಿ ಗುರುಸಂಬಂಧ, ಮನದಲ್ಲಿ ಲಿಂಗಸಂಬಂಧ ಅರಿವಿನಲ್ಲಿ ಜಂಗಮ ಸಂಬಂಧವಾದ ಭೇದವೆಂತಿರ್ದುದೆಂದೊಡೆ ಮುಂದೆ ತ್ರಿವಿಧ ಸಂಪತ್ತಿನ ಸ್ಥಲವಾದುದು.

ವಚನ:—ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ? ಕುಲವುಂಟೇ ಜಂಗಮವಿದ್ದೆಡೆಯಲ್ಲಿ? ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ? ಅಪವಿತ್ರದ ನುಡಿಯನುಡಿವ ಸೂತಕವೇ ಪಾತಕ. ನಿಷ್ಕಳಂಕ ನಿಜೈಕ್ಯ ತ್ರಿವಿಧ ನಿರ್ಣಯವು ಕೂಡಲಚೆನ್ನ ಸಂಗಯ್ಯ ನಿಮ್ಮ ಶರಣಂಗಲ್ಲದಿಲ್ಲ.

॥ಪದ॥ ರಾಗ ಗುಂಡಕ್ರಿಯ

ಮಾರಗ ಕ್ರಿಯಾಚಾರ ಸಮಯವ ಮೀರಿವ ಕ್ರಿಯಿಂದತ್ತಲಿ। ಮೂರೊಂದೆನಿಸಿದ ಬೇರೆ ತೋರದೆ ಲಿಂಗಾ ಲಿಂಗೈಕ್ಯನಾದ ಶರಣಾ ॥ಪಲ್ಲವ॥

ಗುರುಕರುಣದಿ ಶುದ್ಧ ಶರೀರಿಯಾಗಿ ಸ್ವೀಕರಿಸಿದ ಶಿವಲಿಂಗಾರ್ಚನೆಯ। ಹೊರಗೆ ಮಾಡುವ ಮಾರಗಕ್ರಿಯಾ ಪರಮ ಸಂಪತ್ತಿನೊಳಾದ ಶರಣಾ ॥೧॥

ತನುಲಿಂಗಾಚಾರ ಮನಲಿಂಗರಿವು ಮತ್ತನಿ ತಾದಭಾವ ಭಜನೆಯ। ನೆನಹಂ ಮಾಡುವ ಅನಿಮಿಷ ಲಿಂಗದ ಅನುಭವ ಸಂಪತ್ತಿನೊಳಾದ ಶರಣಾ ॥೨॥

ಒಳಹೊರಗೆಂಬ ಕುಳವನ್ನರಿದು ಮತ್ತಳವಟ್ಟ ಕ್ರಿಯಾಭಾವದ ಭಜನೆಯ। ಸ್ಥಳವ ತಂದು ತನ್ನೊಳಗೆ ವೇಧಿಸಿ ತಿಳುವಿನ ಸಂಪತ್ತಿನೊಳಾದ ಶರಣಾ ॥೩॥

ಆ ಲಿಂಗಾವಸರದಲ್ಲಿ ಲೋಲುಪನಾಗಿ ಮತ್ತಾ ಲಿಂಗದೊಳು ನಿಜವನ್ನರಿದು। ಆಲಾಪನೆ ಮನದೊಳಗಾಳಲು ಮೀರಿದ ಕ್ರಿಯಾ ಲೀಲಾ ಸಂಪತ್ತಿನೊಳಾದ ಶರಣಾ ॥೪॥

ನೋಟಸ್ಥಾವರ ಮಾಟ ಜಂಗಮ ಕೂಟ ಕೂಡಲಚನ್ನಸಂಗನಲ್ಲಿ। ನಾಟಿಸಿದಾಚಾರ ಸುವಿವೇಕದ ಸಘಾಟದ ಸಂಪತ್ತಿನೊಳಾದ ಶರಣಾ ॥೫॥

॥ಮತ್ತೇಭ॥ಃ— ತನುವ್ರೋಳ್ ಶ್ರೀಗುರುವಿಂಬುಗೊಂಡು ಮನದೊ ಳ್ತಲ್ಲಿಂಗ ಮಿಂಕೊಂದಿನೆ । ಟ್ಟನೆ ಸದ್ಭಾವದೊಳಿಯ್ದಿ ಜಂಗಮ ಮಜಸ್ರಂ ಕೂಡಿಯಾ ಮೂರುಭ॥ಕ್ತಿ ನಿಜಂ ಕಾಣಿಸಿ ಪಾವನಾತ್ಮಕನೆ ನಿಪ್ಪಾಪತಂ ತವಾಂಘ್ರಿದ್ವಯು । ಕ್ತ್ಯನು ಕೂಲಂ ನೆರೆಯೋಗ್ಯನುದ್ಧತನವಂ ಶ್ರೀಸಿದ್ಧ ಲಿಂಗೇಶ್ವರಾ ॥೧೧॥

॥ಗದ್ಯ॥ಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಹನ್ನೊಂದ ನೆಯದಾದ ತ್ರಿವಿಧ ಸಂಪತ್ಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

೧೨ ಚತುರ್ವಿಧ ಸಾರಾಯಸ್ಥಲ.

ಸೂತ್ರಃ—ಇಂತು ತ್ರಿವಿಧ ಸಂಪತ್ಶಾಲಿಯಾದ ಭಕ್ತನ ಅಂಗದಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಅರಿವಿನಲ್ಲಿ ಜಂಗಮಭಕ್ತಿ ಪರಿಣಾಮ ದಲ್ಲಿ ಪ್ರಸಾದಭಕ್ತಿ ಸನ್ನಿಹಿತವಾದ ಭೇದವು ಎಂತಿರ್ದುದೆಂಡೊಡೆ ಮುಂದೆ ಚತುರ್ವಿಧ ಸಾರಾಯಸ್ಥಲವಾದುದು.

ವಚನಃ—ದಾಸೋಹಂ ಎಂಬ ಸಂಜ್ಞೆಗೊಂಡು ಹೋಗಿ ಗುರುವ ಕಂಡೆ, ಲಿಂಗವ ಕಂಡೆ, ಜಂಗಮುವ ಕಂಡೆ, ಪ್ರಸಾದವ ಕಂಡೆ ಇತೀ ಚತು ರ್ವಿಧ ಸಾರಾಯದಲ್ಲಿ ಸಂಪನ್ನನಾದೆನು ಕಾಣಾ ಕೂಡಲಸಂಗಮದೇವಾ.

॥ಪದ॥ ರಾಗದೇಶಿ

ಸಾರಾಯ ಚತುರ್ವಿಧವ ನಾರೈದು ನೋಡಿ ಗುರು । ಕಾರುಣ್ಯದಿಂದೆ ಮಾಡುವದು ಚತವೂ । ಗುರುಚರಣ ಕಮಲಕ್ಕೆ । ಹರುಷದಯ ಚಿತ್ತದಿಂ, ಶರಿರ ಮರ್ಥಂಚ ಪ್ರಾಣಂಗಳಾ ॥ ಕರಣಸಂಗತಿಗಳನು । ಹರಕರಿಸಲೀ ಯದೆ । ಪರಿಣಮಿಸಿ ಮಾಡೆ--ಗುರುಭಕ್ತಿ ನೋಡಾ ॥೧॥

ಶಿವಲಿಂಗದಲ್ಲಿ ತ । ನ್ನವಯುಮಂ ಬೆರಸಿಮಾ । ಡುವ ನಿತ್ಯನಿಯಮ ವ್ರತ ನೇಮಂಗಳಾ ॥ ಸವೆಯಲೀಯದೆ ಪೂ । ರವಿಸಿ ಮಾಡಲಿಕೆ ಸಂ । ಭವಿಸುವದು ಶಿವ-ಲಿಂಗನ್ನೆಷ್ಠೆ. ನೋಡಾ ॥೨॥

ಹರನವೇಷವನೊಲಿದು। ಧರಿಸಿರ್ಪ ಜಂಗಮಕ್ಕಾ। ದರದಿಂದ ವಸ್ತ್ರಾನ್ನ ಪಾನಂಗಳಾ ॥ ಭರದಿಂದಲಿತ್ತವರ। ವರ ತೃಪ್ತಿ ಬಡಿಸೆ ಸಂ। ವರಿಸುವದು— ಜಂಗಮ ಪ್ರೇಮ ನೋಡಾ ॥೩॥

ಅಸಮಾಕ್ಷ ಲಿಂಗಕ್ಕೆ ಸ್ವಶರೀರವಿಡಿದು ಭಾ। ವಿಸಿ ಬಂದ ಸಕಲ ಸುಪದಾರ್ಥಂಗಳಾ ॥ ಸಸಿನಗ್ಗೈದಲ್ಲಿಯೋ। ಜಿಸಿಯರ್ಪಿಸುತ್ತ ಭೊ। ಗಿಸು ವಲ್ಲಿ—ಪ್ರಸಾದದೇಹಿ ನೋಡಾ ॥೪॥

ಗುರು ಸದಾಚಾರದಲಿ। ಹರಮನೋ ಚಿತ್ತದಲಿ। ವರಪ್ರಸಾದವು ಶುದ್ಧದೇಹದಲ್ಲಿ ॥ ಪರಿಣಾಮ ಜಂಗಮ। ಸ್ಥಿರಹೇಮದಲ್ಲಿ ನೆಲ। ಸಿರಲು ಚಾತುಷ್ಟಯದ—ಒಲುಮೆ ನೋಡಾ ॥೫॥

ತಮವ ಕಳಿಯಲಿಕೆ ಗುರು। ಭ್ರಮೆಯ ಕಳಿಯಲಿಕೆ ಶಿವ। ಅಮ ಲದೇಹವಮಾಳ್ಪಪ್ರಸಾದವು ॥ ಸುಮನ ಸುಜ್ಞಾನದಿಂ। ಸಮುಖದ ಜಂಗ ಮಕಿನಿತು। ಕ್ರಮುವರಿದು ಮಾಡೆ—ಸದ್ಭಕ್ತಿ ನೋಡಾ. ॥೬॥

ಸುಲಭರೀ ಚತುರ್ವಿಧದ। ಹೊಲಬ ನೋಡಿಯೆ ತಿಳಿದು। ಕೆಲಬ ಲಕೆ ಹರಿಯಲೀಯದೆ ಅರ್ಪಿಸಿ ॥ ಕುಲದೀಶ ನಮ್ಮಕೂ। ಡಲಚನ್ನಸಂಗ ನೋರಂತೆ। ನೆಲಸಿರ್ಪನಂತ—ರಂಗದಲಿ ನೋಡಾ ॥೭॥

॥ಮತ್ತೇಭ॥:—ಗುರುವಂ ಲಿಂಗವನಿಂತು ಜಂಗಮುವನತ್ಯಾಸಕ್ತಿಯಿಂ ಭಕ್ತನಿ। ರ್ಭರದಿಂದರ್ಚಿಸಿ ಮತ್ತಮಾತ್ರಿವಿಧದಿಂದಾದೀ ಮಹಾಶೇಷ ದೋಳ್ ॥ ಪಿರಿದುಂಭಕ್ತಿಯನೆಯ್ದಿ ಯಂತವನೆ ತನ್ನೊ। ಳ್ಕಂಡು ನಿತ್ಯಂ ಸುಖೋ। ತ್ಕರದಿಂ ರಾಜಿಸುವಾತನೇ ಸುಕೃತಿಯೈ ಶ್ರೀಸಿದ್ಧಲಿಂಗೇ ಶ್ವರಾ. ॥೧೧॥

॥ಗದ್ಯ॥:—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಹನ್ನೆರ ಡನೆಯದಾದ ಚತುರ್ವಿಧ ಸಾರಾಯಸ್ಥಲ ವಿಚಾರವು ಅನುವಿನಿಂ ಮುಗಿ ಯಲಾಯಿತು.

೧೩ ಉಪಾಧಿ ಮಾಟಸ್ಥಲ.

ಸೂತ್ರ:—ಇಂತು ಚತುರ್ವಿಧ ಸಾರಾಯದಲ್ಲಿ ಸಂಪನ್ನನಾದ ಶ್ರೀಮಹಂತನು ಸಕಲಹಿತೋಪ ದೇಶ ಕಾರಣಾರ್ಥವಾಗಿ ಮಾಟಕೂ ಟದ ಪ್ರಾರಂಭಮಂ ನಿರೂಪಿಸುತ್ತಿರಲು ಮುಂದೆ ಉಪಾಧಿ ಮಾಟಸ್ಥಲ ವಾದುದು.

ವಚನ:—ಗಾಳಿಯ ಹಡದಲ್ಲಿ ತೂರಿಕೊಳ್ಳಯ್ಯ. ಗಾಳಿ ನಿನ್ನಾಧೀ ನವಲ್ಲ. ನಾಳೆ ತೂರಿಹೆನೆಂದೊಡೆ ಇಲ್ಲವಯ್ಯ. ಶ್ರೀಶಿವಶರಣೆಂಬುದು ಒಂದೇ ಗಾಳಿ ಹಡದಲ್ಲಿ, ಬೇಗ ತೂರಿಕೊಳ್ಳಿರೆಂದ ನಮ್ಮ ಅಂಬಿಗರ ಚೌಡಯ್ಯ ॥೧॥

॥ಪದ॥ ರಾಗ ಮಂಗಳ ಕಾಶಿ.

ನಂಬುಗೆಯಿಂದ ಶರಣೆನ್ನಿ ಶ್ರೀಶರಣರಿಗೆ॥ಪಲ್ಲವ॥

ಶತ ದಶದಂತಿ ಸಹಸ್ರ ಲಕ್ಷಗೋದಾನ । ಶತವಾಜಿ ಅಜಪೆಯ ಕೋಟಿ ಕನ್ಯಾದಾನದ ಫಲ ॥೧॥

ಅತಿಪಾತಕಂಗಳು ಕೋಟ್ಯಾನು ಕೋಟಿ ಭ್ರೂಣಹತ್ಯ । ಶತಲಕ್ಷ ಪಾಪನಾಶನ ಶರಣರ ದರುಶನ ॥೨॥

ಸಪ್ತಸಾಗರ ಪರ್ಯಂತರ ತೀರ್ಥ ಸ್ನಾನದ ಫಲ । ಸ್ವಾರ್ಥವು ಶರಣಾಂಘ್ರಿ ಕಂಕಣ ಕೆಣೆಯಿಲ್ಲ. ॥೩॥

ನಿಮಿಷಂ ನಿಮಿಷಾರ್ಧಂ । ವಾಯತ್ರ ತಿಷ್ಠಂತಿ ಯೋಗಿನಃ । ಉಮಾನಾಥ ಸಕಲ ತೀರ್ಥ ಸಹಿತನಾಗಿಪ್ಪನಲ್ಲಿ ॥೪॥

ಏಕರುದ್ರ ಲೋಕಾದವತೀರ್ಯ ರುದ್ರಯೆನಲಾ । ಶ್ರೀರುದ್ರ ಲೋಕ ಪಾವನನಾಗಿ ಚರಿಸುವ ॥೫॥

ನಿತ್ಯಂ ವೇದ ಕೋವಿದರೊಂದು ಕೋಟಿ ಯುಂಡಫಲ । ಸತ್ಯಂ ಶಿವ ಯೋಗಿಗೆ ನೀಡಿಮೊರ್ಕೆಯನ್ನ ಕೆಣೆಯಿಲ್ಲ ॥೬॥

ಯತ್ರ ಭುಂಕ್ತೆ ಭಸ್ಮಾಂಗೀ ಯಾವನಾದಡೇನು । ತತ್ರ ಭುಂಕ್ತೆ ಶಿವನಾರೋಗಿಪನಲ್ಲಿ ॥೭॥

ಲಿಂಗಾರ್ಚನಂ ಗೈಯ್ಯುವ ಶ್ವಪಚ ವಿಪ್ರಗಿಂವಧಿಕ । ಲಿಂಗಾರ್ಚನ ವಿಹೀನ ವಿಪ್ರ । ಶ್ವಪಚಗಿಂದತಿ ಕಷ್ಟ ॥೮॥

ಚತುರ್ವೇದಿಯಾದ ವಿಪ್ರ ಶಿವದೀಕ್ಷೆ ವಿಹೀನನಾಗೆ । ನಿಚಿತವ ಗುಣಲಿಕ್ಕದ ಭಕ್ತಂಗಘೋರನರಕ ॥೯॥

ಭೂತಿ ರುದ್ರಾಕ್ಷಿ ಲಾಂಛನಧಾರಿಯು ಶಿವನೆಂ । ದಾತನ ಕಾಣುತ್ತೆದ್ದೆರಗದಿರ್ದೊಡೆ ಮುಂದೆನರಕ ॥೧೦॥

ಕ್ಷ್ಮೀಯಂತೆ ಸರ್ವಕರ್ಮಾಣಿ ತಪೋಯಜ್ಞನ । ಕ್ಷೀಯಂತೆ ವೀರವಕ್ತ್ರಹುತ ಹವಿಯುಂದುದಾಗಿ ॥೧೧॥

ದೇಶನಾಮ ಜಾತಿ ರೂಪು ಸೀಮಾಚಾರ ವಿದ್ಯ । ಶೇಷವ ಕಂಡು ಬೆಸಗೊಳ್ಳದೆ ಶರಣನು ತವೆಮಾಡಿ ॥೧೨॥

ರೂಪಂ ರೂಪಾನ್ವಿತಂ ಮಲಿನಂ ಮಲಿನಾಂಬರೋವಾ । ಯಾವ ಪಂಯಾಗಿರ್ದಡೇನು ಶಿವಯೋಗಿಯ ಶಿವನೆಂದಿಪ್ಪುದು ॥೧೩॥

ವಿಧ್ಯಾಪನಾವವನನ್ನು ಭಕ್ತರ ಮೇಲಿಕ್ಕಿ ನುಡಿದು । ತಥ್ಯವಪ್ಪ ಕೋಷ್ಠ

ದಲ್ಲಿ ಬಿದ್ದು ನರಕಕ್ಕಿಳಿವಾ ॥೧೪॥

ಅನ್ಯಭುಕ್ತಾಪವಾದವನ್ನು ಕಾಣದೆ ಲಾಂಛನದ ಮೇಲೆ। ಅನ್ಯಾಯವ ನುಡಿದು ಕ್ಷಯರೋಗದಿಂ ನರಕಕ್ಕಿಳಿವಾ ॥೧೫॥

ಪಂತಿ ಭೇದವಾದ ಭೇದವಂ ಭಕ್ತರಿಗೆ ಮಾಳ್ಪವನು । ಇಂತು ಗರ್ಭರೋಗದಿಂದ ಭೋಗತಿಗಿಳಿವಾ ॥೧೬॥

ಇದೆ ಜಂಗಮದೊಳಗಿದ್ದು ಭೋಗವ ಮಾಡುವದೆಂದು । ಸದ್ಗುರು ಶಂಭುಸೋಮೇಶನ ವಚನವ ಕೇಳಿ ॥೧೭॥

॥ಮತ್ತೇಭ॥:— ವಿತತಂ ಭಕ್ತಾಯನಿಂತು ಜಂಗಮದ ಪಾದದ್ವಂದ್ವ ದೋಳ್ಬಿದ್ದು ಸ। ನ್ನುತ ವಸ್ತ್ರಾಭರಣಾನು ಲೇಪನ ಸುಧಾನ್ನಂ ಗೊಟ್ಟೊ ಡಾತಂಗೆ ವಿ ॥ ಶೃತ ಸೌಖ್ಯಂ ದೊರೆಕೊಳ್ಳುದೆಂದು ಸುಜನವ್ರಾತಕ್ಕೆ ಸದ್ಬೋಧೆಯಂ। ಹಿತದಿಂ ಪೇಳ್ದರೆ ರಕ್ಷಿಸಾತನೆ ಶಿವಂ ಶ್ರೀಸಿದ್ಧಲಿಂಗೇಶ್ವರಾ ॥೧೩॥

ಗದ್ಯ:— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಹದಿಮೂರ ನೆಯದಾದ ಉಪಾಧಿ ಮಾಟಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

೧೪ ನಿರುಪಾಧಿ ಮಾಟಸ್ಥಲ.

ಸೂತ್ರ:— ಇಂತು ಸಕಲ ಭಕ್ತಜನಂಗಳಿಗೆ ಭಕ್ತಿ ಪ್ರಾರಂಭದುದ್ಯೋಗಮಂ ಉಪದೇಶಾರ್ಥವಾಗಿ ನಿರೂಪಿಸಿದ ಮಹಂತನು, ತಾನು ಉಪಾಧಿಯ ಹೊದ್ದದೆ ನಿರುಪಾಧಿಕನಾಗಿ ದಾಸೋಹವಂ ಮಾಡುವ ಪರಿಯಂತಿರ್ದುದೆಂದೊಡೆ ಮುಂದೆ ನಿರುಪಾಧಿ ಮಾಟಸ್ಥಲವಾದುದು.

ವಚನ:— ಎನಗೆ ಕುಲದೈವ ಬಲದೈವ ಛಲದೈವ ಮನದೈವ ಮನೆದೈವ ಜಂಗಮ ಮೂರ್ತಿಯಯ್ಯಾ. ತನು ಮೀಸಲು ಮನ ಮೀಸಲು ಧನ ಮೀಸಲು ಪ್ರಾಣ ಮೀಸಲು ಜ್ಞಾನಮೀಸಲು ಕೂಡಲಸಂಗಮದೇವ ನಿಮ್ಮ ಶರಣರಿಗೆ.

॥ಪದ॥ ರಾಗ. ಮಾಳವಗೌಳ

ಹಮ್ಮಿಲ್ಲದೆ ಬಿಮ್ಮಿಲ್ಲದೆಮಾಟದ। ಹೆಮ್ಮೆಯ ಬೀರದೆ ತನು:ಮನಧನ ಶಿವ। ಸೊಮ್ಮೆಂದರ್ಪಿಸ ಬಲ್ಲಾತನೆ ನಿರುಪಾಧಿಕ ದಾಸೋಹಿ ॥ಪಲ್ಲವ॥

ಒಡಲೊಡಲಭಿಮಾನಂಗಳ ಹಂಗಿನೊ। ಳೊಡಗಲಸದೆ ದಾಸೋಹದೊಳಗೆ ಧೃತಿ। ಗೆಡದೆ ನಿರಾಯಾಸದಿಂ ಸರ್ವಾಚಾರದೊಳಗೆ ಎಚ್ಚತ್ತು॥

ಒಡೆಯರಿಗೊಡವೆಯನೊಪ್ಪಿಸುವಾಳಿನ। ನಡವಳಿಯಂತಿರಲರ್ಥ ಪ್ರಾಣವ। ಹಿಡಿದು ಬಳಸದನವರತಂ ಲಿಂಗಮುಖಕ್ಕೆ ಸವಿಸುತ್ತಿಹುದು. ॥೧॥

ಏನುಂಟಾದ ಪದಾರ್ಥವ ದೇಹಾಭಿಮಾನಕ್ಕೀಯದೆ ಮನದೊಡೆಯಗೆ ಸು। ಜ್ಞಾನದ ಕೈಯ್ಯಿಂ ನೀಡುವ ನಿರುತದ ಮಾಟದ ಕೂಟಸುಖಿ॥ ಏನೊಂದಣು ಮಾತ್ರವು ಭಾವನೆಯೊಳು। ಮಾನಸ ವಾಚಕದೊಳಗಿಲ್ಲದೆ ಪರ। ಮಾನಂದದ ಸುಖದೊಳು ಮಾಡುವ ಮಂಗಳಮಯ ದಾಸೋಹಿ॥೨॥

ತನುವೆನ್ನದು ಮನವೆನ್ನದು ಮತ್ತಾ। ಧನವೆನ್ನದು ಎಂದೆಂಬ ಬಳಕೆಯ। ನನುಕರಿಸದೆ ನಾನೇದಾಸನು ಶಿವನೇ ಪತಿಯೆಂದರಿದು॥ ಮನಕ್ಕೆ ಮನೋಹರವಾಗಿಹ ಸತ್ಕ್ರೀ। ಯನು ಭಾವದೊಳು ಸುಖವಡೆದು ನಿರಂತರ ಘನ ಪರಿಣಾಮದ ಬಜುಕೆಯೊಳಿಪ್ಪಾತನೆ ಸಾತ್ವಿಕ ಭಕ್ತಾ ॥೩॥

ಖ್ಯಾತಿಯಲಾಭದ ಪೂಜೆಯ ಫಲಗಳ। ನೀತಿಗಳೆದು ಸದ್ಭಕ್ತಿರತಿಯೊಳತಿ। ಭೀತಿವಡೆದು ಕಿಂಕರಭೃತ್ಯಾಚಾರಸ್ಥಲ ನಿಜವಾಗಿ॥ ಸ್ತೋತು ಶರಣರೊಳು ಗೆಲಲರಿಯದೆ ಸಂ। ಪ್ರೀತಿವಡೆದು ಸಜ್ಜನ ಶುದ್ಧನೆನಿಸಿರ್ಪಾ। ತನೆ ಜಂಗಮ ಲಿಂಗಕ್ಕಾಶ್ರಯವೆನಿಸುವ ದಾಸೋಹಿ ॥೪॥

ಒಡೆಯರಿಗೊಡವೆಯನೊಪ್ಪಿಸಿ ಶುದ್ಧನು। ಎಡೆಯೊಳಗಾ ಊಡಿದುದಿಲ್ಲೆಂ। ದೊಡಲವ ಗುಣವನಡಗಿಸಿ ನಿರಹಂ ಭಾವದೊಳಗೆ ಸಲೆಸಂದು ॥ ಮೃಡನ ಶರಣರನು ಕಂಡವರಡಿಗಳ। ಪಿಡಿದು ಸದಾ ಸುಖಿಯಾಗಿರ್ಪರವೆ॥ ಲ್ಲಡಿಗಳೊಳಗೆ ಹಾವುಗೆಯಾಗಿರಿಸೆನ್ನನು ಸಂಗಪ್ರಭುವೆ ॥೫॥

॥ಶಾರ್ದೂಲ॥ ವಿತ್ತಂ ಪುತ್ರಕಳತ್ರಮಾದಿ ತರದೋಳ್ತನ್ನಂಗದೋಳ್ಪಾಡ್ಯದಿಂ। ಚಿತ್ತಂ ನಾಂಟದೆ ದಾಸಭಾವದಿನವಂ ತಜ್ಜಂಗಮಕ್ಕಿತ್ತುಮು॥ ತ್ತೆತ್ತಾನುಂ ಫಲದಾಸೆದೋರದೆ ನಿಗರ್ವಾಯತ್ತದಿಂದಂಲ ಸ। ದ್ವೃತ್ತತ್ವಂ ನೆಲೆಗೊಂಡೊಡುತ್ತ ಮನಲಾ ಶ್ರೀ ಸಿದ್ಧಲಿಂಗೇಶ್ವರಾ ॥೧೪॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಹದಿನಾಲ್ಕನೆಯದಾದ ಶ್ರೀನಿರುಪಾಧಿ ಮಾಟಸ್ಥಲದ ವಿಚಾರವು ಮುಗಿಯಲಾಯಿತು.

೧೫ ಸಹಜ ಮಾಟಸ್ಥಲ.

ಸೂತ್ರಃ— ಇಂತು ಶ್ರೀಲಿಂಗಜಂಗಮದಲ್ಲಿ ನಿರುಪಾಧಿಕನಾಗಿ, ಕರ್ತೃಭೃತ್ಯ ಭಾವದಿಂದ ದಾಸೋಹವ ಮಾಡಿದ ಮಹಂತನು ತಾ ಮಾಡುವ ಮಾಟದೊಳಗೆಯು ಮಾಡಿಸಿಕೊಂಬ ವಸ್ತುವಿನೊಳಗೆಯು ಅವಿನಾಭಾವ

ವೆಂಬ ಕೃತನಿಶ್ಚಯವಳವಡಲು, ಮುಂದೆ ಸಹಜ ಮಾಟಸ್ಥಲವಾದುದು.

ವಚನಃ- ಮಾಟವಿಲ್ಲದ ಕೂಟವಿದೇಕೋ, ಮಾಟಕೂಟವೆಂಬೆರಡರ ಅನುವನರಿಯಲೇ ಬೇಕು. ಮಾಟಕೂಟವೆಂಬೆರಡರ ಅನು ಮಾಟದಿಂದಲೇ ಭಕ್ತಿ, ಇದೇ ಕೂಟವು ಕೂಡಲ ಚನ್ನಸಂಗಾ ನಿಮ್ಮಲ್ಲಿ.

॥ಪದ॥ ರಾಗ. ವಸಂತ

ಅರಿಯೆ ನಾನಿಮ್ಮನುಪಚಾರಂಗಳ। ಅರಿಯೆನೆಂದು ಮಾಡಲು ನಾನರಿಯೆ ॥ಪಲ್ಲವ॥

ಮಾಟದ ಕೂಟದ ಭೇದವನರಿಯೆನು। ಕೂಟದ ಮಾಟದ ಸಂಚುವನರಿಯೆನು। ನಾಟಸಿದಾಚಾರದ ಸುವಿವೇಕವ ಮುನ್ನವೆ ನಾನರಿಯೆ ॥೧॥

ತನುವೆನಗಿಲ್ಲಯ್ಯಾ ತನುವೀವಡೆ। ಮನವೆನಗಿಲ್ಲಯ್ಯಾ ಮನವೀವಡೆ। ಧನವೆನಗಿಲ್ಲಯ್ಯಾ ಧನವೀವಡೆ ಸರ್ವವು ನಿಮ್ಮದಾಗಿ ॥೨॥

ಮಾಡುವ ನೀನೆ ಮಾಡಿಸಿಕೊಂಬ। ರೂಢಿಗೀಶ ನೀನಾದ ಬಳಿಕ ನಾ। ಮಾಡಿದೆನೆಂಬರುವಿಂಗೆಡೆಯನು ಕಾಣೆಸು ನಿಜವೆಡೆಗೊಡದಾಗಿ ॥೩॥

ಮುಂದನರಿಯೆ ಹಿಂದನುನಾನರಿಯೆ। ಒಂದೆ ಎಂಬ ಭಾವವನರಿಯೆನು। ಸಂದಿಲ್ಲದೆ ನಿಮಗಾವಮಾಡಿದೆನೆಂಬುದ ಮುನ್ನವೆ ಮುನ್ನವೆ ನಾನರಿಯೆ ॥೪॥

ಅಂಗದಲರತಾಚಾರ ವಿಚಾರವ। ಹಂಗುಹರಿದು ಮಾಟವ ಕೂಟದ ಮನ। ದಂಗ ಶಂಕ ನಿಶ್ಶಂಕವಾಗಿ ಪರವಶನಾಗಿರುತಿದ್ದೆನು ॥೫॥

ನಾನೀನೆಂಬಭಿಮಾನವರತ ಬಳಿ। ಕಾನೇನೀನಾಗಿರುತಿಹೆನು। ನೀನೇ ಮಾಟವು ನೀನೇ ಕೂಟವು ನಾನೀನೆಂಬೆಡೆಯೇನಿಲ್ಲ ॥೬॥

ನಿರಹಂಭಾವದೊಳಗೆ ದಾಸೋಹದ। ನಿರಹಂಕೃತಿನಿಷ್ಪತಿಯಾಗಿ। ಎರಡರಿಯದೆ ನಿಜಪರಮಾನಂದದೊಳಿಪ್ಪೆನು ಕೂಡಳಸಂಗಯ್ಯ ॥೭॥

॥ಶಾರ್ದೂಲ॥ ಭೋಗ್ಯಂ ದ್ರವ್ಯಮದುಂ ನಿಯಾಮಿಪ ಮಹಾಸದ್ಭಕ್ತನುಂ ಮತ್ತಮಾ। ಭೋಗ್ಯದ್ರವ್ಯವನೊಲ್ದು ಭೋಗಿಸುವವಂತದ್ಬ್ರಹ್ಮವೋದಫಲಾ॥ ಯೋಗ್ಯಂ ತಾನೆನಿಸಿತ್ತಹಂ ಕೃತಿಯದೆಂದುಂ ತೋರದಿರ್ಪಾತನೇ। ಭಾಗ್ಯಂ ಶಂಕರನೆಂಬುದೇ ಶೃತಿಮತಂ ಶ್ರೀಸಿದ್ಧಲಿಂಗೇಶ್ವರಾ ॥೧೫॥

ಗದ್ಯಃ- ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಹದಿನೈದನೆಯದಾದ ಶ್ರೀ ಸಹಜ ಮಾಟಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀಮದೇಕೋತ್ತರ ಶತಸ್ಥಲಂಗಳಲ್ಲಿ ಪಿಂಡಾದಿ ಸಹಜ ಮಾಟಾಂತ್ಯವಾದ ಪದಿನೈದು ಶ್ರೀಸದ್ಭಕ್ತನ ಸ್ಥಲಂಗಳಾಗಿ ಒಂದನೆಯಂಗ ಸ್ಥಲವು ಮುಗಿದುದು.

ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

೨ ಮಹೇಶ್ವರ ಸ್ಥಲ.

ಸೂತ್ರಃ—ಇಂತು ಪಿಂಡಾದಿ ಸಹಜ ಮಾಟಾಂತ್ಯದ ಭಕ್ತಸ್ಥಲದಲ್ಲಿ ಆಚರಿಸುತ್ತ ಮಾಡಿ ಮಾಟವ ಮರೆದು, ಕೂಡಿ ಕೂಟವ ಮರೆದು, ಸಹಜದಲ್ಲೈಕ್ಯವಾದ ಮಹಂತನು, ಮುಂದೆ ನೈಷ್ಠಿಕಾ ಮುಖದಿಂದ ಲಾಚರಿಸಿ ಬೆರಿಸುವ ಭೇದವೆಂತಿರ್ದುದೆಂದೂಡೆ, ಮುಂದೆ ಮಹೇಶ್ವರ ಸ್ಥಲವಾದುದು.

ವಚನಃ—ನಾಳೆ ಬಾಹುದು ನಮಗಿಂದೇ ಬರಲಿ, ಇಂದುಬಾಹುದು ನಮಗೀಗಲೇ ಬರಲಿ. ಇದಕಾರು ಅಂಜುವರು? ಇದಕಾರು ಅಳುಕುವರು? ಜಾತಸ್ಯ ಮರಣಂಧ್ರುವಂ ಎಂದುದಾಗಿ ನಮ್ಮ ಕೂಡಲಸಂಗಮದೇವರು ಬರೆದಬರಹ ತಪ್ಪದು. ಹರಿಹರ ಬ್ರಹ್ಮಾದಿಗಳಿಗೆ ತಪ್ಪಿಸಲು ವಶವಲ್ಲ.

ಪದ ರಾಗ ಭೂಪಾಳಿ.

ಲೋಕದಂತಪ್ಪನಲ್ಲ ಲೋಕದ ನಡೆಯನುಡಿಯ । ಲೋಕದ ಬಯಕೆಯ ಬಳಸುವನಲ್ಲ ಕಾಕು ಸಟೆ ಯಕುಳಾಕುಳಿಯ ಕಳೆದು ಶಿವನಾಲೋಕಿಸಿ ಆಜಾತನಾಗಿಪ್ಪ ಸುಯ್ಧಾನಿ ಮುಗುದಾ ॥ಪಲ್ಲವ॥

ಹಿಡಿದುದ ಬಿಡನು ಬಿಟ್ಟು ರಚ್ಚೆಯ ಬಳಸಿ ಮುಂದ । ನೆಡೆಗೆ ಬೀಸರವೋಗಿ ಬಳಲುವನಲ್ಲ ನುಡಿದಂತೆ । ನಡೆವನಡೆಯೊಳು ನುಡಿಯ ಪೂರೈಸಿ ನುಡಿಗೆಡೆಗೊಡದ ಬೆಂಗಾಣ ಬಾರದ ಕಲಿ ॥೧॥

ದುರಿತ ಪಂಚೇಂದ್ರಿಯಂಗಳ ಬಳಿವಿಡಿದು ಭೂತ । ಶರೀರದೊಳು ಬಿಳ್ದು ಬೆಂಬೀಳುವವನಲ್ಲದುರು । ಬರದ ಕಾಮದ ಕತ್ತಲೆಯ ಕಳೆದುಳಿದ ಕಲಿಪಿರಿದಪ್ಪ ಮಾಯೆಯುಗೆಲಿದ ನಿರೋಧವಿಲ್ಲದೆ ॥೨॥

ಜಳತಾಗಿ ಕಳೆಕಾದು ನಿಲವೆಲ್ಲ ಬೆಂದು ಆಸ್ತಿ । ಗಳು ಕಾಹೇರಿ

ತೊಳಲಿ ಬಳಲುವನಲ್ಲ। ನಲಿದು ಗುರು ಶರಣೆಂಬ ನಾವಾಮೃತವನು ಸಲೆದಣಿಯಲುಂಡು ಸುಖಿಯಾಗಿಹನು ॥೩॥

ಕೊಲಬಾರದ ಹಗೆಯು ಗೆಲುವ ಕಲಿಯಂತರಂಗ। ದೊಳಗೆ ಹೊಳೆದು ಬಗೆದು ಬಗೆಯೊಳೊತ್ತುತ್ತ। ಕಳಚಿ ಕಣ್ದೆರೆದು ಶಿವಜ್ಞಾನ ರೂಢನು ವಾಗಿ ನಿಲಿಸಿ ಮನವ ಲಿಂಗದಲಿ ಅತ್ತಿತ್ತ ಸೂಸದೆ ॥೪॥

ನಡೆವುದು ಲಿಂಗಾಧಾರ ನುಡಿವುದುಲಿಂಗದವಸರ। ಅಡರಿ ಗುರು ಶರಣೆಂಬ ಹಡಗ ಸಂಸೃತಿಯ। ಕಡಲದಾಂಟಿಯೆ ಕೂಡಲಸಂಗನಲ್ಲಿ ಎಡೆ ವಿಡದಾನಂದ ಲೀಲೆಯೊಳಾಡುತ್ತಿಹನು ॥೫॥

ಶಾರ್ದೂಲ:—ಮಾಯಾ ಮೋಹಿತರಾವ ಜಾಡ್ಯಯುತರಾ ಸಂಪತ್ತು ಮಂದರ್ಪಣ। ಪ್ರಾಯಂಗೆತ್ತ ಖಿಳೇಶ್ವರಂ ಶಿವನೆನುತ್ತಂ ಸ್ಥಾಪನಂಗೈಯುತುಂ ‖ ಕಾಯಕ್ಲೇಶತೆ ಯಾಯುಸಂಗಳನನಿತ್ತಂಗೆಲ್ಲ ಸದ್ವೃತ್ತನಿ। ರ್ಮಾಯಂ ಸತ್ಯನುದಾತ್ತ ಸತ್ಕಲನಂ ಶ್ರೀಸಿದ್ಧಲಿಂಗೇಶ್ವರಾ ॥೬॥

ಗದ್ಯ॥ ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಹದಿನಾರನೆಯದಾದ ಮಹೇಶ್ವರ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೨. ಲಿಂಗನಿಷ್ಠಾ ಸ್ಥಲ.

ಸೂತ್ರ:- ಇಂತು ಮಹೇಶ್ವರ ಸ್ಥಲದಲ್ಲಿ ಛಲನಿಯಮ ವ್ರತದಿಂದ ಕೃತನಿಶ್ಚಯನಾದ ವೀರಮಾಹೇಶ್ವರನು ತನ್ನಂಗದ ಮೇಲಣ ಲಿಂಗದ ನೈಷ್ಠೆಯಂತಿರ್ದುದೆಂಡಡೆ ಮುಂದೆ ಲಿಂಗ ನಿಷ್ಠಾಸ್ಥಲವಾದುದು.

ವಚನ:- ಅಮೃತಸಾಗರದೊಳಗಿರ್ದು ಆಕಳ ಚಿಂತೆಯೇಕೆ? ಮೇರು ಮಂದಿರದೊಳಗಿರ್ದು ಜಲಗರದ ಚಿಂತೆಯೇಕೆ? ಶ್ರೀ ಗುರುವಿನೊಳಗಿರ್ದು ತತ್ವ ಪದ್ಯದ ಚಿಂತೆಯೇಕೆ? ಶ್ರೀಮತ್ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆಯೇಕೆ ಹೇಳಾ ಗುಹೇಶ್ವರಾ?

॥ಪದ॥ ರಾಗ. ಮಧು ಮಾಧವಿ

ಮನಭಾವ ಕರಣದೊಳ ಹೊರಗೆ ತೆರಹಿಲ್ಲದಿಹ। ಘನಲಿಂಗ ಸಂಗದಿಂ ಸುಖಿಯಾದೆನು ॥ಪಲ್ಲವ॥

ಪರತತ್ವ ಲಿಂಗಕೈಸಾರಲಾ ಲಿಂಗದೊಳು ತೆರಹಿಲ್ಲದಿಹ ಭಾವದೃಷ್ಟಿ

ನಟ್ಟು। ಹರುಷ ಹರವರಿದು ಮನಬೆರಸಿ ಪುಳುಕಗಳೊಗೆದು ಕರಗಿ ಸುರಿ ವಾಶ್ರುಜಲ ಮೇರೆದಪ್ಪಿ ॥೧॥

ನೆರೆನೆಗೆವು ಕಂಠದೊಳು ಗದುಗದುಕೆ ಮೂಡೆತನು ಹೊರೆ ಏರಿ ಸರ್ವಾಂಗ ಕರಗಿ ಕೊರಗಿ। ನೆರವಭರದುರವಣೆಯುತವಕದಿಂ ಲಿಂಗದೊಳು ಪರವಶಭಾವ ತಲ್ಲೀಯ್ಯವಾದುದು ॥೨॥

ನೀವಲ್ಲದೆನಗೆ ಮತ್ತೇನು ತೋರದು ನಿಮ್ಮ ಧ್ಯಾನದಿಂದಿರುಳು ಹಗ ಲೆಂದರಿಯೆನುವೂನ। ಸ ವಚನ ಕಾಯದೊಳು ಸಂದಳಿದುಳಿದು ನಿಮಗಾ ನೊಲಿದು ಎನ್ನನೊಚ್ಚತ ಗೊಟ್ಟೆನು ॥೩॥

ನಚ್ಚಿ ಮನಮುಚ್ಚಿ ಒಚ್ಚತವೋಗಿಲಿಂಗದೊಳು ಬೆಚ್ಚಂತೆ ಪ್ರಾಣ ಪದ ಸಂಗವಾಗಿ। ಬೆಚ್ಚಿ ಬೇರಿಲ್ಲದಿಹ ಬೆಳಗೆನ್ನ ನೊಳಕೊಂಡು ಸಚ್ಚಿದಾ ನಂದದಿಂ ಮೈಮರೆದೆನು ॥೪॥

ಲಿಂಗ ಭಾವವೆ ಭಾವಲಿಂಗ ಪ್ರಾಣವೆ ಪ್ರಾಣ। ಲಿಂಗವಂಗದೊಳಂಗ ಬೇರಿಲ್ಲದೆ ॥ ಲಿಂಗಸಂಗವೆ ಸಂಗ ಸ್ವಯವಾಗಿ ಕೂಡಲ। ಸಂಗ ನಿಮ್ಮೊಳು ಕೂಡಿ ಸುಖಿಯಾದೆ ॥೫॥

॥ಮತ್ತೇಭ॥:— ಶಿವನೇ ಸಂಸೃತಿಮೋಚಕಂ ಶುಭಕರಂ ತಾನೆಂದು ತಲ್ಲಿಂಗದೋ । ಳ್ತವೆನಿಷ್ಠಾನ್ವಿತನಾಗೆ ಲೋಚನದೊಳಾನಂದಶ್ರುಗಳ್ಪೊ ಣ್ಮೆಯು ॥ ತ್ಸವವಾವರ್ತಿಸಿ ಚಿತ್ತದೋಳ್ಪುಳಕ ಸಂದೋಹಂಗಳಿಂಯುಣ್ಮೆ ಕೂ। ಡುವಕೂಟಂ ಘನಸೌಖ್ಯ ವಿಂತಿದೆ ನಿಜಂ ಶ್ರೀಸಿದ್ಧಲಿಂಗೇಶ್ವರಾ ॥೧೭॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಹದಿನೇಳ ನೆಯದಾದ ಶ್ರೀ ಲಿಂಗಾನಿಷ್ಠಾಸ್ಥಲದ ವಿಚಾರವು ಅನುಭವಿನಿಂ ಮುಗಿಯ ಲಾಯಿತು.

೩ ಪೂರ್ವಾಶ್ರಯ ನಿರಸನ ಸ್ಥಲ.

ಸೂತ್ರ:—ಇಂತು ಲಿಂಗದಲ್ಲಿ ನೈಷ್ಠೆಕಂಗೊಂಡು ನಿಬ್ಬೆರಗಾದ ಶ್ರೀ ವೀರ ಮಾಹೇಶ್ವರನು ಆಲಿಂಗದಲ್ಲಿ ಲೋಲುಪ್ತನಾಗಿ ತನ್ನ ಪೂರ್ವ ಜಾತ ಜೀವಭಾವ ಲೌಕಿಕ ವೆಂಬ ನಾನಾ ಪ್ರಪಂಚಿನ ಪೂರ್ವಾಶ್ರಯವಂ ಮಿಥ್ಯೆಯುಂದರಿದು ನಿರಸನವಂ ಮಾಡುತ್ತಿರಲು, ಮುಂದೆ ಪೂರ್ವಾ ಶ್ರಯ ನಿರಸನಸ್ಥಲವಾದುದು.

ವಚನ:—ಶ್ರೀಗುರು ಪಟ್ಟವಕಟ್ಟಿದ ಒಳಿಕ ಲಕ್ಷಣವನರಸುವೆ.

ಲಿಂಗದೇವನ ಪೂಜಿಸಿ ಕುಲವನರಸುವರೆ, ಕೂಡಲ ಸಂಗಮದೇವ ಭಕ್ತ ಕಾಯ ಮಮಕಾಯನೆಂಬನಾಗಿ ||೩||

||ಪದ|| ರಾಗ. ಭರಾಳಿ.

ಆವಾಶ್ರಯದಲ್ಲಿ ಜನಿತನಾದಡೇನು। ಪೂರ್ವವಳಿದು ಪುನರ್ಜಾತ ನಾದ ಶರಣನು ||ಪ||

ಭೂತಾದಿಗಳೈದು ಗೂಡಿದಾ ತನುಗುಣದ ಭ್ರಾಂತ ನಳಿದು ಗುರು ಕರುಣಿಸಿ ಪೂರ್ವ ಕರ್ಮದಾ। ಪಾತಕ ಲಿಪಿಯ ತೊಡೆದು ಪುನರ್ಜಾತ ನೆನಿಸಲು, ಆತನೆ ಸರ್ವಾಂಗ ಶುದ್ಧಲಿಂಗದೇಹಿ ||೧||

ಕುಲಸೂತಕ ಛಲಸೂತಕ ಮನಸೂತಕ ಹಲವು ಕರ್ಮಜಾಡ್ಯ ಜನ್ಮಭಾವ ಸೂತಕಾ। ಹೊಲೆ ಹೊದ್ದಲಿಕಾಗದೆಂಬ ನೆಲೆಯರಿದು, ತಿಳಿದ ಪೂರ್ವ ಭಾವವಳಿದುಳಿದ ನಿತ್ಯನು. ||೨||

ಕ್ಷೀರದಿಂದಲಾದ ತುಪ್ಪ ಕ್ಷೀರವಪ್ಪುದೆ ನೀರೊಳಾದ ಮುತ್ತು ಮರಳಿ ಉದಕವಪ್ಪುದೆ। ಮೀರಿ ಪೂರ್ವಕರ್ಮವನ್ನು ಹರಿದ ಭಕ್ತಗೆ ಬೇರೆ ಮತ್ತೆ ಜನ್ಮವುಂಟೆ ಲಿಂಗವಲ್ಲದೆ ||೩||

ಲಿಂಗದಿಂದಂಗ ಭಾವ ಚಿನ್ನವಳಿದು, ಜಂಗಮಪ್ರಸಾದದಿಂದ ಲಂತ ರಂಗದಾ। ಭಂಗದಿಂದವಳಗಃ ಹೊರಗು ಶುದ್ಧವಾದ ಲಿಂಗದೇಹಿಯಾದ ಮಹಿಮಗಿಲ್ಲ ಸೂತಕ ||೪||

ಬಂದ ಬಟ್ಟೆಯುಳಿದು, ಲಿಂಗ ಸುಖದ ಪಥದಲಿ। ಮುಂದನರಿದು ಭಾವಶುದ್ಧವಾಗಿ ಚರಿಸುತಾ || ಸಂದು ಶಂಕೆಯುಳಿದು ನಿಜದೊಳೊಂದಿ ಬೆರಸಿದಾ। ನಂದಮಯನುಸಂಗ ನಿಮ್ಮ ಶರಣನನುಪಮಾ ||೫||

||ಶಾರ್ದೂಲ||೩— ಅಜ್ಞಾನಂ ಸಲೆ ಪೂರ್ವವಂತದು ಭವಕ್ಕಂ ನೋಡೆ ತಾನಾಶ್ರಯಂ। ಪ್ರಜ್ಞಂತಾಂತದಧೀನ ಮಾದ ಬಹು ಕೃತ್ಯಾಕೃತ್ಯ ಮಾಗಿರ್ಪ ತ || ದ್ವಿಜ್ಞಂ ಪೈತೃ ಸೂತಕ ಪ್ರಕರ ಸದ್ಯ ಧ್ಯಾನಮುಂ ವೀರಶೈವಜ್ಞಂಗಂ ನೆರೆಸಲ್ಲದೆಂದು ಜರಿವಂ ಶ್ರೀಸಿದ್ಧಲಿಂಗೇಶ್ವರಾ ||೧||

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಹದಿನೆಂಟ ನೆಯದಾದ ಪೂರ್ವಾಶ್ರಯ ನಿರಸನಸ್ಥಲದ ವಿಚಾರವು ಅನುವಿನಿಂ ಮುಗಿ ಯಲಾಯಿತು.

೪. ವಾಗದ್ವೈತ ನಿರಸನ ಸ್ಥಲ.

ಸೂತ್ರ:- ಇಂತು ಪೂರ್ವಾಶ್ರಯ ನಿರಸನವಂ ಮಾಡಿದ ವೀರ ಮಾಹೇಶ್ವರನು ಲಿಂಗವನರಿದು, ಅರಿದೆನೆಂಬ ಸುಖವನಿದಿರಿಟ್ಟು, ನುಡಿದು ತೋರಿದೊಡೆ ಭಿನ್ನವಾದುದೆಂದು ವಾಗ್ವೃತ್ತಿಯ ನಿರಸನವಂ ಮಾಡುತ್ತಿರಲು, ಮುಂದೆ ವಾಗದ್ವೈತ ನಿರಸನ ಸ್ಥಲವಾದುದು.

ವಚನ:- ಕೊಟ್ಟ ಕುದುರೆಯನೇರಲರಿಯದೆ, ಮತ್ತೊಂದು ಕುದುರೆಯ ಬಯಸುವರೆ, ಅಂತವರು ವೀರರು ಅಲ್ಲ, ಧೀರರು ಅಲ್ಲ. ಇದು ಕಾರಣ ನೆರೆ ಮೂಲೋಕದವರೆಲ್ಲ ಹಲ್ಲಣವ ಹೊತ್ತುಕೊಂಡು, ತೊಳಲುತೈದಾರೆ. ಗುಹೇಶ್ವರ ಲಿಂಗವನವರೆತ್ತ ಬಲ್ಲರು?

॥ಪದ॥ ರಾಗ. ರಾತುಕ್ರಿ

ನುಡಿಯಲಾಗದಿನ್ನು - ನುಡಿಯಲಾಗದಿನ್ನು - ನುಡಿಯಲಾಗದಿನ್ನು ಜಡಮರ್ತ್ಯರೊಡನೆ ॥ಪಲ್ಲವ॥

ಗಗನಾಕಾರ ಮಂಟಪದೊಳಗೆ ಹೊಗಲುಪಾಯವಿಲ್ಲೆಂದುದು ಘನ। ಕಂಗಳಲಿಂಗ ಕರಸ್ಥಲ ಜಂಗಮ ಬಂದ। ಸಂಬಂಧವನರಿಯರಾಗಿ ॥೧॥

ಆದಿಲಿಂಗವೆಂಬುದು ಬೇರಿಲ್ಲ ಕಾಣಿರೊವಂಗಡದೆಗದು ನೀವು ನುಡಿವಿರಿಭೋ। ವಂಗಡದೆಗದು ನುಡಿವರಿಗೊಂದೆ ಲೋಕವಿತ್ತು ಮುಂದಿರ್ದ ಘನವನೀವರಿಯರಿಭೋ ॥೨॥

ತಲೆಯೊಳಗೆ ನಾಲಗೆಯ ಹಡದೆವೆಂದು ಹಲವು ಪರಿಯಲಿ ನೀವುಗಳ ಹಿದಿರಿಭೋ। ಅನ್ನಪಾನದಹಂಗು ಬೆನ್ನಿಂದ ಬಿಡದು ಇನ್ನು ಸಂಸಾರಿನಿನಗನು ಭಾವವೈ ॥೩॥

ವಿದ್ಯ ಬುದ್ಧಿ ಪರಸಂಬಂಧದ ಮೇಲೆ ಹೊದ್ದುವದಹಂಕಾರ ಘನವಾಗಿ। ವಿದ್ಯದಿ ತಾವು ಬಲ್ಲಿದರೆಂಬರು ಸತ್ತರು ಹಿರಿಯರು ಹಿರಿಯರು ಹಲಬರು ॥೪॥

ಕಂಗಳಲಿಂಗಕರಸ್ಥಲ ಜಂಗಮ। ಇಂತೆಂದುದು ಲಿಂಗ ಸಂಬಂಧವು॥ ಇದನೊಲ್ಲೆನೆಂಬವರಾವ ಲೋಕಕ್ಕೆ ಹೋದ। ರೇನು ವಾಯ ವಾಯು ಗುಹೇಶ್ವರಾ ॥೫॥

॥ಶಾರ್ದೂಲ॥ ಮೂಢರ್ ಸಂಸೃತಿಯಂ ಬಿಡರ್ ಬಳಿಕೆ ಸರ್ವಾಕ್ಷೇಗಳೋಳ್ಸಂತತಾ। ಲೀಢರ್ ತಚ್ಛಿವನದ್ವಯೈಕ ಪರಮಂ ತಾನೆಂಬುದಂ

ನೋಡರು॥ ವ್ಯಾಘಾನಂದ ವಿಷ್ಟರಂ ಪಳಿದು ವಾಚಾರಂಭದ ದ್ವೈತದಾ। ಮೂಢರ್ ದುರ್ಗತಿಗೇಕೆ ಬೀಳ್ವರಕಟಾ ಶ್ರೀಸಿದ್ಧಲಿಂಗೇಶ್ವರಾ ॥೧೯॥

ಗದ್ಯಃ– ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ· ಹತ್ತೊಂಭತ್ತನೆಯದಾದ ವಾಗದ್ವೈತನಿರಸನ ಸ್ಥಲದ ವಿಚಾರವು ಆನುವಿನಿಂ· ಮುಗಿಯಲಾಯಿತು.

೫. ಆಹ್ವಾನ ನಿರಸನ ಸ್ಥಲಂ.

ಸೂತ್ರಃ– ಇಂತು ವಾಗದ್ವೈತವ ನಿವೃತ್ತಿಯಂ ಮಾಡಿ ಮನದ ಸಂಚಲವ ನಳಿದು, ಸರ್ವಾಂಗದಲ್ಲಿ ಲಿಂಗವು ಭರಿತವೆಂಬುದನರಿದು ವೀರಮಾಹೇಶ್ವರನು ಒಮ್ಮೆ ಆಹ್ವಾನಿಸಿ ಹಿಡಿದು ಒಮ್ಮೆ ವಿಸರ್ಜಿಸಿ ಬಿಡುವುದಕ್ಕೆ ತೆರಹು ಕಾಣದೆ, ಆಹ್ವಾನ ವಿಸರ್ಜನವೆಂಬೆರಡನು ನಿರಸನವಂ ಮಾಡುತ್ತಿರಲು, ಮುಂದೆ ಆಹ್ವಾನ ನಿರಸನ ಸ್ಥಲವಾದುದು.

ವಚನಃ– ಆಹ್ವಾನ ವಿಲ್ಲ ಪ್ರಾಣಲಿಂಗವಾಗಿ. ವಿಸರ್ಜನ ವಿಲ್ಲ ಅ ಲಿಂಗ ನೆಲೆಗೊಂಡಿಪ್ಪುದಾಗಿ. ಇದುಕಾರಣ ಆಹ್ವಾನ ವಿಸರ್ಜನವಿಲ್ಲದ ಪರಿ ಬೇರೆ. ಅಂಗ ಸಂಗವೇ ಲಿಂಗ ಲಿಂಗ ಸಂಗವೇ ಮನ ಕೂಡಲ ಚನ್ನಸಂಗನ ಶರಣ ಸುಯಿಧಾನಿ.

॥ಪದ॥ ರಾಗ. ದೇಶಿ

ಅರಿಯದಮುನ್ನವೆ ಅರಿತ ಅರಿವನು। ಮರೆಯದೆ ನಿನ್ನ ನೀನೆ ತಿಳಿ ನೋಡು ಕಂಡ್ಯಾ ॥ಪಲ್ಲವ॥

ಆಕಾಶವನೆ ಸೆವೆನೆಂದಂಬ ತೊಡಚಲು । ಏಕೋ ಗುರಿಯಾಗಿ ವೆ ನೆಗೆ ಮುಳುಗಿ ನಿಂದುದು ॥ ಆಕಾರ ನಿರಾಕಾರವೆಂಬು ಭಯ ನಾಮದ। ಕಾರ್ಥವೊಂದೇ ಎಂದು ತಿಳಿದು ನೋಡು ಕಂಡ್ಯಾ ॥೧॥

ಅಳೆಯಲು ಬೇಕೆಂದು ಬಯಲ ರಾಶಿಯ ಮಾಡಿ। ಕೊಳಗದೊ ಗಿರ್ದ ಬಯಲ ಸುರಿವ ಪರಿಯಂತೋ॥ ಅಳೆಯಲು ಮೊಗೆಯಲು ಸುರಿ ಲಿಲ್ಲದ ಬಯಲು। ತಿಳಿದು ನೋಡು ನಿನ್ನ ನೀನೆ ತಿಳಿವಡೆ ನೀನೆ ॥೨॥

ಬಂಗಾರದ ತೊಡಿಗೆಯಾಭರಣ ವೆನಿಸಿತ್ತು। ಶೃಂಗಾರವ ಮಾ ಹಲವು ನಾಮ ವಿಡಿದುದು ॥ ಉಂಗುರ ಕಂಕಣ ಚಲುವಂದಿಗೆ ಮಕುಟ ಹಿಂಗದೆ ಅವನಳಿಯೆ ಮುನ್ನಿನ ಬಂಗಾರವೆ ಮೊದಲು ॥೩॥

ಮುನ್ನ ಮುನ್ನವೆ ನೀರು ಬಳಿಕಾ ನೀರು ತಾ । ಅನಿಲನಿಂದಲಿ ಬಲಿದು ವಾರಿ ಕಲ್ಲೆಂದೆನಿಸಿತ್ತು ॥ ನಿನ್ನ ದೇಹವಿಂದ್ರಚಾಪ ಮನಃಪ್ರಾಣ । ಮುನ್ನಿನಂತೆ ಸಚ್ಚಿದಾನಂದ ನೀನೆ ಕಂಡ್ಯಾ ॥೪॥

ಅಡಿಯಿಲ್ಲದ ನಡುವಿಲ್ಲದ ಮುಡಿಯಿಲ್ಲದ ಬಯಲು । ಎಡೆಯಿಲ್ಲದಿಪ್ಪುದು ತಾ ಜಗವನೊಡಗೂಡಿ ॥ ಹಿಡಿಯಲು ಬಿಡಲಿಲ್ಲದ ಬೆಡಗು ನಿಜಗುಣನ । ನುಡಿಯನೊಳಕೊಂಡು ನಿಂದಸಹಜ ನೀನೆ ಕಂಡ್ಯಾ ॥೫॥

ಮತ್ತೇಭಃ—ಸುತರಾಂ ಶ್ರೀಗುರು ಚಿತ್ಕಳಾನ್ವಿತ ಮಹಾತಲ್ಲಿಂಗ ಮಂತನ್ನತ । ತ್ಸಿತರಾನುದ್ಧಂಸಲ್ತನುತ್ರಯದೊಳಂ ಸಂಸ್ಥಾಪನಂಗೈಯ್ಯಲೀ ॥ ಶೃತ ಪೂರ್ಣಾತ್ಮಕ ಲಿಂಗಮಂ ಕರೆದು ಮತ್ತಂ ಪೋಪುದೆಂಬಜ್ಞರಾ । ಮತಮಂ ಲೆಕ್ಕಿಪದಲ್ತುಖಂಡಿತರವರ್ ಶ್ರೀಸಿದ್ಧಲಿಂಗೇಶ್ವರಾ ॥೨೦॥

ಗದ್ಯಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತನೆಯದಾದ ಆಹ್ವಾನನಿರಸನ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೬ ಅಷ್ಟಮೂರ್ತಿ ನಿರಸನಸ್ಥಲ.

ಸೂತ್ರಃ—ಇಂತು ಆಹ್ವಾನ ವಿಸರ್ಜನವೆಂಬುಭಯಕುಳವನು ನಿವೃತ್ತಿಯಂ ಮಾಡಿದ ವೀರ ಮಾಹೇಶ್ವರನು ಅಷ್ಟತನುವಿಂದಾದ ಸಕಲ ಪ್ರಪಂಚವನ್ನು ಮಿಥ್ಯಯೆಂದರಿದು ಅಷ್ಟ ತನುಗಳ ಮೂಲವ ನಿರಸನವಂ ಮಾಡುತ್ತಿರಲು ಮುಂದೆ ಅಷ್ಟ ತನುಮೂರ್ತಿ ನಿರಸನ ಸ್ಥಲವಾದುದು.

ವಚನಃ—ಹೊರಗೆಂಟು ತನು ಒಳಗೆ ನಿರಂಜನ ಜ್ಯೋತಿ ತೆರಹಿಲ್ಲದಿಪ್ಪುದನೆಲ್ಲರು ಬಲ್ಲವರಿಲ್ಲ. ಕೇಳಿರೋ. ಶಿವನಲ್ಲದೆ ಬೇರೆ ದೈವವಿಲ್ಲ. ಹುಲಿಗೆರೆಯ ವರದ ಸೋಮನಾಥನು ಏಕೋರುದ್ರನೆಂದುದು ಶೃತಿ ॥೬॥

ಪದ ರಾಗ ಕಾಂಬೋದಿ

ಉಪಮಿಸಬಾರದ ಮಹಾಘನ ಲಿಂಗವ- ಉಪಮೆಗೆ ತಂದು ಸಕಲ ನಿಷ್ಕಲರೂಪನೆಂಬುದು ಹುಸಿ ನೋಡಾ ॥ಪಲ್ಲವ॥

ಮಹಾಘನನಿಜದಿಂದುದಯಿಸಿದಾದಿಯನಾದಿತತ್ವದಿಂದ ಮನಭಾವಜ್ಞಾನ । ಜನಿತವಾಗಿ ಅಕಾರ ಉಕಾರ ಮಕಾರ ಜನಿತವಾದುದು ॥೧॥

ಅಕ್ಷರ ಮೂರರೊಳೋಂಕಾರ ಉದಯವಾಗಿ ಆಕಾಶ ಭೂತನಾಮ

ಶಂಕೆವಿಡಿದು । ವರ್ಣಾಶ್ರಮವ ನೈದಿದ ಬಿಂದು ಕಲಾರೂಪವಾದುದು ।೨॥

ಆಕಾಶದ ಶಬ್ದದ ಮಥನದ ಮುಖ ಸೋಂಕಿಂದ ಸ್ಫುರಿಸಿ ವಾಯು ಉದಯವಾಗಿ ಗಮನ । ಗಮನಾಗಮನನಿರ್ಗಮನರೂಪವಾದುದು ॥೩॥

ವಾಯು ವಿಕಾರದ ಬದ್ಧಾಕೃತಿಯಿಂ ರೂಪುಸಂಜ್ಞೆಯಾಗಿ ತೇಜೋ। ಮಯವಾಗಿ ಅಗ್ನಿ ಜನಿಸಲು ದೃಷ್ಟನಷ್ಟವೆಂಬಿವಾದವು ॥೪॥

ತೇಜವಿಕಾರದ ಪ್ರಕೃತಿ ವಿಕೃತಿಯಿಂದುದಯಿಸಿದಪ್ಪು, ತತ್ವದಿರಸ। ಮಾತ್ರ ವಿಷಯರೂಪವಾಗಿ ಜಲಬಿಂದು ಭಿನ್ನರುಚಿ ಮುಖವಾದುದು ॥೫॥

ಜಲದಿಂ ಬದ್ಧಾಕೃತಿಯ ಧರಿಸಿ ಉದಯಿಸಿದ ಪೃಥ್ವಿ ತತ್ವದಿ ಅನಂತ। ಸಚರಾಚರ ಉದಯವಾಗಿ ಉತ್ಪತ್ತಿಸ್ಥಿತಿಲಯ ಕಾರಣವಾದ.ದು ॥೬॥

ಮನದಿ ಸಸಿ ನಯನದೊಳಗೆರವಿ । ದೇಹದ ಸಂಕಲ್ಪದೊಳಾತುಮ ಜನಿಸಿ । ಅಷ್ಟ ತನುಗಳು ಶಿವನೆಂಬುದು ಮಿಥ್ಯ ನಿರಾಳ ನಿರಂಜನ ಕೂಡಲಸಂಗ ॥೭॥

॥ಮತ್ತೇಭ॥ ಅರೆಬರ್ ಭೂಮಿ ಜಲಾನಲಾನಿಲ ಪಯತ್ಪದ್ಯೋ। ತಶೀತಾಂಶುಜೀ । ವರೆನಿಪ್ಪಷ್ಟಮ ಮೂರ್ತಿಯಂ ಶಿವನೆನುತ್ತಿರ್ಪರ್ ಶರೀ ರಾದಿಗಂ ॥ ಪಿರಿದುಂ ತಾಂ ವ್ಯತಿರಿಕ್ತನಾದ ಯಜಮಾನಾಂಭೋಪೃಥಿವ್ಯಾ ದಿಗಂ । ತರದಿಂದಂ ಪೆರನುಗ್ರನೆಂದರಿಯರ್ಕೈ ಶ್ರೀಸಿದ್ಧಲಿಂಗೇಶ್ವರಾ ॥೮॥

ಗದ್ಯಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತೊಂದ ನೆಯದಾದ ಅಷ್ಟಮೂರ್ತಿ ನಿರಸನಸ್ಥಲದ ವಿಚಾರವು ಅನುವಿನಿಂ ಮುಗಿ ಯಲಾಯಿತು.

---

೭ ಸರ್ವಗತ ನಿರಸನಸ್ಥಲ.

ಸೂತ್ರಃ—ಇಂತು ಅಷ್ಟತನು ಮೂರ್ತಿಗಳ ನಿರಸನವಂ ಮಾಡಿದ ವೀರ ಮಾಹೇಶ್ವರನು ಶರಣ ಭರಿತಶಿವನೆಂದರಿದು ಪ್ರತಿಷ್ಠಿಸಿ ಜಗಭರಿತ ಶಿವನೆಂಬ ಸರ್ವಗತ ಶಬ್ದನಿರಸನವಂ ಮಾಡುತ್ತಿರಲು, ಮುಂದೆ ಸರ್ವಗತ ನಿರಸನ ಸ್ಥಲವಾದುದು.

ವಚನಃ—ಅಣೋರಣಿಯಾನ್ ಮಹತೋ ಮಹೀಯಾನ್ ಎಂಬ ಶೃತಿ ಹುಸಿ ಕಾಣಿರೋ. ಲಿಂಗವಿದ್ದ ಠಾವಿಂಗೆ ಪ್ರಳಯವುಂಟೆ? ಸದ್ಭ ಕ್ತರ ಭಾವದಲ್ಲಿಪ್ಪನಲ್ಲದೆ, ಮತ್ತೆಲ್ಲಿಯೂ ಇಲ್ಲ ಗುಹೇಶ್ವರ ಲಿಂಗವು.

॥ಪದ॥ ರಾಗ. ಆಹರಿ.

ರೂಪಾದಿ ಸರ್ವಗತ ರೂಪು ಶಿವನಲ್ಲನಿಜ । ರೂಪು ಜಂಗಮಲಿಂಗ ದೊಳಗಿರ್ಪನು ॥ಪ॥

ಭೂಮಿಯುಜನಂದೇವ ತಾಮಸಾದಿಗಳಖಿಳ । ತಾಮಸಾದಿಯೊಳು ಶಿವನಿರುತಿರ್ಪಡೆ ॥ ಸೀಮೆನಾಮಗಳು ಕೆಲಸಾಮಾನ್ಯ ಜಾತಿಹಿರಿ । ದಾ ಮಹಾಪ್ರಳಯಂಗಳೇಕಾದವು ॥೧॥

ಸರ್ವಗತ ಶಿವನಹಡೆ ಸರ್ವಕೆಜನನ ಮರಣ । ನಿರ್ವಿಕಲ್ಪಂಕಲ್ಪ ಪುಣ್ಯಪಾಪಾ ॥ ಸರ್ವವೇತಕೆ ಸುಖದ ಗರ್ವವೇತಕೆ ದುಃಖ । ದುರ್ವ್ಯಸನ ದುರಿತಂಗಳೇಕಾದವು. ॥೨॥

ಭೇದವಿಲ್ಲದೆ ಜೀವನಾದಿಯಲಿ ಶಿವನಿರ್ಪಡಾ । ಜೀವನೊಂದೊಂದ ಕೊಲಲೇತಕೆ ॥ ಆದಡೆಂತೆನೆ ಪರುಷವೇದಿಸಲು ಲೋಹ ಹೊನ್ನಾದತೆರ ಲಿಂಗಸಂಗಿಗಳಲಿಹನು ॥೩॥

ಬೆಳೆವ ಬೆಳಸುಗಳೊಳಗೆ ಬೆಳೆಯುಬಿತ್ತಿದನಿಹನೆ । ಹಲವು ಚಿತ್ರವ ಬರವನವರೊಳಿಹನೆ ॥ ಆಳವಟ್ಟ ಕೆಲಸಂಗಳೊಳಗಿಹನೆ ಬಿನ್ನಾಣಿ । ತಿಳಿದು ನೋಡಲು ನಿತ್ಯನಿಜದೊಳಿಹನು ॥೪॥

ಎಲ್ಲ ಜೀವಂಗಳೊಳಗಿಲ್ಲ ಶಿವಸಭ್ಭಕ್ತ । ರಲ್ಲಿ ಮಹೇಶ್ವರ ಪ್ರಸಾದಿಗ ಳಲಿ ॥ ತಲ್ಲಿಂಗ ಪ್ರಾಣಾಂಗದಲ್ಲಿ ಶರಣೈಕ್ಯ ನಿಜ । ದಲ್ಲಿ ಕೂಡಲಚನ್ನ ಸಂಗಭರಿತ. ॥೫॥

ಪದ್ಯ:— ॥ಶಾ॥ ವೃ॥ ನಾಶಂ ಪೊರ್ದದ ಸತ್ಯಚಿಷ್ಪನ ಸುಖಂ ತಾನಾಗಿ ವಿಬ್ರಾಜಿಸಾ। ಈಶಂ ನಾಶ ವಿಮುಕ್ತಮಾದ ಜಡರೂಪಾದೆಲ್ಲರೋ ಳ್ನೋಡೆಯೂ ॥ ವೇಶಂ ಗೊಂಡುರೆ ತೋರ್ಪನೆ ವಿಲಸದುದ್ಯತ್ ಷಟ್‌ಸ್ಥಲ ಬ್ರಹ್ಮಸಂ। ಕಾಶರ್ತಾವೆನಿಸಿರ್ಪರೋಳ್ಪಳಿದುವುಂ ಶ್ರೀಸಿದ್ಧಲಿಂಗೇಶ್ವರಾ॥೨॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತೆರ ಡನೆಯದಾದ ಸರ್ವಗತ ನಿರಸನ ಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

---

೮. ಶಿವಜಗನ್ಮಯ ಸ್ಥಲ.

ಸೂತ್ರ:— ಇಂತು ಸರ್ವಗತ ನಿರಸನವಂ ಮಾಡಿದ ವೀರಮಾಹೇ ಶ್ವರನು, ಸರ್ವ ಜಗದಲ್ಲಿ ಶಿವನಿಲ್ಲವೆಂದಡೆ, ಆ ಜಗವು ಶಿವನಿಂದ ಬೇರೆ

ತೋರಲರಿಯದೆಂದರಿದು, ಆ ಜಗದಲ್ಲಿ ಶಿವನು ಹೊದ್ದಿಯೂ ಹೊದ್ದದೆ ಬೆರಿಸಿ ಬೆರಿಸದೆ ಇಹನೆಂಬ ಕೃತನಿಶ್ಚಯವನುಂಟು ಮಾಡಿ ತೋರುತ್ತಿರಲು ಮುಂದೆ ಶಿವಜಗನ್ಮಯ ಸ್ಥಲವಾದುದು.

ವಚನ:— ಶಿವಜಗವಾಗ ಬಲ್ಲ. ಶಿವಜಗವಾಗದಿರಬಲ್ಲ. ಶಿವಕೆಡಿಸ ಬಲ್ಲ. ಶಿವಕೆಡಿಸದಿರಬಲ್ಲ. ಶಿವ ಜಂಗಮವಾಗಿ ಪೂಜಿಸ ಬಲ್ಲ. ಶಿವಲಿಂಗ ವಾಗಿ ಪೂಜೆಗೊಳ ಬಲ್ಲ. ಶಿವಂಗೆ ಹೊರಗಾಗಿ ಮತ್ತೇನು ಅನ್ಯವಿಲ್ಲವೆಂಬು ದಕ್ಕೆ ಅಥರ್ವಣ ವೇದ ಪ್ರಮಾಣ ಉಂಟು. ಎಂತೆಂದೊಡೆ, ಶಿವೋವಾ ಉಮೇನ ಪಿತರಾ ಭರ್ತ್ಯದೇವ ಭವತೀ ಪಿತರಾತಸ್ಯ ಮಾಹೆ ಎಂದುದಾಗಿ ಅವನು ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರನು ನಮಗೆಲ್ಲ ಮಾತಾ ಪಿತನು.

॥ಪದ॥ ರಾಗ ಭೌಳಿ

ಜಗದೊಳಗೆ ಶಿವ ಪರಿಪೂರ್ಣ। ಬಗೆದು ನೋಡಲು ಹೊದ್ದಿ ಹೊದ್ದ ನಯ್ಯ ॥ಪಲ್ಲವ॥

ಶಿವನಿಂದವೆ ಜಗದುತ್ಪತ್ತ್ಯವು। ಶಿವನಲ್ಲದೆ ಜಗಕಾಧಾರವಿಲ್ಲ॥ ಶಿವನಾ ಜಗದಂತರ್ಯಾಮಿಯಾಗಿಹ। ನವಿತತವಿಲ್ಲವಿದು ಸಿದ್ಧಾಂತವು ॥೧॥

ವಿಶ್ವತೋ ಚಕ್ಷು ವಿಶ್ವತೋ ಮುಖವೆನಲು। ವಿಶ್ವಕೆಲ್ಲ ವಿಶ್ವೇಶ್ವರನಲ್ಲದಿಲ್ಲ॥ ವಿಶ್ವಾಸಿಸಿ ಭಾವಿಸಿ ನೋಡುವಡೆ। ಶಾಶ್ವತಂ ಸನ್ನಿಹಿತನು ಪರಶಿವನು ॥೨॥

ಜಲದೊಳಗಣ ಸೂರ್ಯ ಬಿಂಬದಂತೆ ಜಗ। ದೊಳಃ ಬೆರಿಸಿಯು ಬೆರಿಸ ನೋಡಾ॥ ಹೊಳೆದು ತೋರದು ಜಗವ ಶಿವನಿಂದವೆ। ಹೊರ ಗಾಗಿ ತೋರುವ ಠಾವಿಲ್ಲವು. ॥೩॥

ಬ್ರಹ್ಮಾಂಡಕೋಟಿಯನೊಮ್ಮೆ ಹುಟ್ಟಿಸಬಲ್ಲ। ನೊಮ್ಮೆ ಕೆಡಿಸಲು ಬಲ್ಲನವನು॥ ಬ್ರಹ್ಮಾಂಡ ಕೋಟಿಗಳಾ ಶಿವನನಿಜವ। ನೊಮ್ಮೆ ನಿಲುಕಿ ಕಾಣಲರಿಯವು ॥೪॥

ದಶದಿಕ್ಕು ಸಚರಾಚರದೊಳಗೆಲ್ಲ। ವಿವರಿಸಿ ನೋಡಲು ತನ್ಮಯವು॥ ಆ ಪರಾಪರ ಹಂಪೆಯ ವಿರುಪಯ್ಯ। ನಲ್ಲದಿಲ್ಲವೆಂದು ಶೃತಿ ಸಾರುತಿವೆ ॥೫॥

॥ಶಾರ್ದೂಲ॥ ಸರ್ವೋಪಾಧಿ ವಿಮುಕ್ತನದ್ವಯ ಚಿದಾತ್ಮಂ ಸರ್ವಗಂ ನಿರ್ಗುಣಂ। ನಿರ್ವೈರಂ ವಿಜಿತಾಕ್ಷನಕ್ಷಯ ಶಿವಂ ತಾನೇ ಜಗದ್ರೂಪದಿಂ॥ ಸರ್ವ ಪ್ರೇರಕನಾಗಿ ಯುಜ್ವಲಿಸಿ ತೋರ್ಪಂ ವಿಶ್ವಮಂತೆಲ್ಲಜುಂ। ಸರ್ವೇಶಂ ಪ್ರೇರತಾಗಿ ತೋರದು ನಿಜಂ ಶ್ರೀಸಿದ್ಧಲಿಂಗೇಶ್ವರಾ ॥೩॥

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತು ಮೂರನೆಯದಾದ ಶ್ರೀ ಶಿವಜಗನ್ಮಯ ಸ್ಥಲದ ವಿಚಾರವು ಆನುವಿನಿಂ ಮುಗಿಯಲಾಯಿತು.

---

೯. ಭಕ್ತದೇಹಿಕ ಲಿಂಗಸ್ಥಲ.

ಸೂತ್ರಃ—ಇಂತು ಶಿವನು ಜಗವಾಗಬಲ್ಲ ಜಗವಾಗದಿರಬಲ್ಲನೆಂದ ರಿತು ಆ ಶಿವನ ತನ್ನೊಳಗಾಲಿಂಗಿಸಿ ಧರಿಸಿಕೊಂಡಿಪ್ಪ ವೀರ ಮಾಹೇಶ್ವ ರನಲ್ಲಿ ಆ ಶಿವನು ಭಕ್ತದೇಹಿಕದೇವನಾಗಿರ್ದ ಭೇದವೆಂತಿರ್ದುದೆಂದಡೆ, ಮುಂದೆ ಭಕ್ತದೇಹಿಕ ಲಿಂಗಸ್ಥಲವಾದುದು.

ವಚನಃ—ಲಿಂಗವೇ ಪ್ರಾಣವಾಯಿತ್ತಾಗಿ, ಆಚಾರವಿಚಾರ ವಿಲ್ಲ ವಯ್ಯ; ಪ್ರಸಾದ ಕಾಯವಾಯಿತ್ತಾಗಿ ಸತ್ವರಜತಮ ಕ್ರೋಧವಿಲ್ಲವಯ್ಯ; ಜಂಗಮ ಮುಖಲಿಂಗವಾದ ಕಾರಣ ಲಿಂಗದಲ್ಲಿ ಅನುಭವಿಸಿ ನೋಡುತ್ತಿರ್ದ ನಯ್ಯ! ಭಕ್ತಕಾಯ ಮಮಕಾಯವಾಗಿ ಕೂಡಲಚನ್ನ ಸಂಗನಬಸವನಲ್ಲಿ ಸುಖಿಯಾಗಿರ್ದನಯ್ಯಾ

॥ಪದ॥ ರಾಗ ಕುರಂಜಿ.

ಲಿಂಗ ನೀನೆ ಸಂಗ ನಾ ನೀನೆನಲಿಕ್ಕಿಲ್ಲ ನೋಡು ಲಿಂಗವೆ ॥ಪ॥

ತೋರಿ । ತಪ್ಪಿಸಿ ಪುಂಜುಮಾಡಿ ಎನ್ನಬೇರು ಮಾಡಿಹೆನೆಂದೆಂಬೆ। ಬೇರು ಮಾಡಲು ತೆರಹಿಲ್ಲನೀಕೂಡೆ ಭರಿತನೆಂಬುದ ನಾ ಬಲ್ಲೆ ॥೧॥

ಅಡಗಿ ಮಾತಾಡುವ ಬೆಡಗು । ನಿನ್ನ ಬೆಡಗಿಗೆ ನಾ ಬೆರಗಾದೆ । ಬೆಡ ಗಿನ ಬೆಂಬಳಿಯುವನು ಎನ್ನ ಬಿಡಬೀಸದಿರು ಕಂಡ್ಯಲಿಂಗವೇ ।೨॥

ಕಡಲೊಳಗಣ ನೊರೆ ತೆರೆಯು ಆ ಕಡಲೊಳಗೆ ಅಳಿವಂತೆ । ಕೊಡ ನೊಡದರೆ ಬಟ್ಟಬಯಲು ಆವೆಡೆಯೊಳು ಸಿಲುಕಿತು ಹೇಳಾ ॥೩।

ದಿಟ ಸರವಾತುಮನೆನಿಸಿ ಎನ್ನ ಸಟೆ ದಿಟಮಾಡಿ ತೋರದಿರಾ। ಸಟೆ ದಿಟಕೊಡೆಯನು ನೀನೆ ಬೇರೆ ಪ್ರತಿ ನಿನಗುಳುಳ್ಳೊಡೆ ಹೇಳಾ ॥೪॥

ಸಾಕಾರ ನಿರಾಕಾರ ನೀನೆ ಸಕಳೇಕೋದೇವ ಜಗದ್ಭರಿತಾ ಸು । ಧಾಕರ ನಿಜಲಿಂಗ ಸಂಗನಲ್ಲದೆ ಬೇರೆರೂಹಿಸಲು ತೆರಹಿಲ್ಲ ॥೫॥

ಮತ್ತೇಭಃ—ಚರಣಂಗಳ್ಬಲಮಿಲ್ಲ ಬೇಗ ನಡೆವಂ ಹಸ್ತಂಗಳಲ್ಲೇ ನನಾ । ದರದಿಂದಂ ಪಿಡಿವಂ ಶೃತಿ ದ್ವಯಮುವುಂ ತಾವಿಲ್ಲ ತಳ್ಪಬ್ಬಮಂ ॥

ಪಿರಿದುಂ ಕೇಳ್ವನನೇಕರುಂ ನಿಜದೆನೋಳ್ಪಂ ಕಣ್ಗಳಿಲ್ಲೆಂತೆನಲ್ । ಶರಣಾಂಗಂ ನೆರೆ ತನ್ನದಾಗೆ ಪೆರತೇಂ ಶ್ರೀ ಸಿದ್ಧಲಿಂಗೇಶ್ವರಾ ॥೨೪॥

ಗದ್ಯ:—ಇಂತು ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತು ನಾಲ್ಕನೆಯದಾದ ಭಕ್ತದೇಹಿಕ ಲಿಂಗಸ್ಥಲದ ವಚನವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀ ಮದೇಕೋತ್ತರ ಶತಸ್ಥಲಂಗಳಲ್ಲಿ ಪಿಂಡಾದಿ ಸಹಜಾಂತ್ಯವಾದ ಹದಿನೈದು ಭಕ್ತಸ್ಥಲಕ್ಕೆ ಸಂದಿರಲು ಮಹೇಶಾದಿ ಭಕ್ತದೇಹಿಕ ಲಿಂಗಸ್ಥಲಾಂತ್ಯ ವಾದೊಂಬತ್ತು ವೀರ ಮಾಹೇಶ್ವರ ಸ್ಥಲಂಗಳ್ಕೂಡಿ ಎರಡನೆಯ ಸ್ಥಲವು ಮುಗಿದುದು ಶ್ರೀ ಮಂಗಳಮಹಾ

---

೧೦ ಗುರುಪ್ರಸಾದಿ ಸ್ಥಲ.

ಸೂತ್ರ:—ಇಂತು ಮಹೇಶಾದಿ ಭಕ್ತ ದೇಹಿಕ ಲಿಂಗಾಂತ್ಯ ವಾದ ವೀರ ಮಾಹೇಶ್ವರ ಸ್ಥಲದಲ್ಲಿ ಆಚರಿಸಿ ಭಕ್ತ ಕಾಯವೇ ಲಿಂಗ ಕಾಯವಾಗಿ ಲಿಂಗ ಕಾಯವೇ ಭಕ್ತ ಕಾಯವಾಗಿ ವಿರಳವಿಲ್ಲದೆ ಬೆರಸಿ ಮಹಂತನು ಮುಂದೆ ಸಾವಧಾನ ಮುಖದಿಂದಲಾಚರಿಸಿ ಬೆರಸುವ ಭೇದವೆಂತಿರ್ದುದು ಎಂದಡೆ ಮುಂದೆ ಪ್ರಸಾದಿ ಸ್ಥಲವಾದದು.

ವಚನ:—ಹಸಿಯು ಬಿಸಲನೇ ಕೊಯ್ದು ಪದಾರ್ಥವನೆ ಮಾಡಿ ಉಸಿರ ಹೆಸರಲ್ಲಿ ಬಾಗುತಿಪ್ಪರಯ್ಯ! ಇಕ್ಕಲಿಲ್ಲಾರಿಗೆಯು, ಎರೆಯಲಿಲ್ಲಾರಿಗೆಯು, ಭಿಕ್ಷಾವೃತ್ತಿಗಳು ಬಂದು ಬೇಡುತ್ತಿಪ್ಪರಯ್ಯ! ನಿಮ್ಮ ಒಕ್ಕುದ ಮಿಕ್ಕುದ ಉಡಿಯಲ್ಲಿ ಕಟ್ಟಿಕೊಂಡಿಪ್ಪರಯ್ಯ ಗುಹೇಶ್ವರ ನಿಮ್ಮ ಶರಣರು.

ಪದ ರಾಗ ಪರಾಳಿ.

ನಿನ್ನ ಶರಣರ ಒಕ್ಕುದ ಮಿಕ್ಕುದಕೊಂ । ಡೆನ್ನ ತನುಮನ ಶುದ್ಧವಾದುದಯ್ಯ ॥ಪ॥

ಒಡೆಯರು ಮನೆಗೆ ಬಂದರೆ ಎನ್ನೊಡಲಾಸೆಯ ನಾನರಿಯದೆ ಸಕಲ । ಪದಾರ್ಥವ ನೀಡಿ ಅವರೊಕ್ಕುದ ಹಾರಿಕೊಂಡಿಪ್ಪೆನಯ್ಯ. ॥೧॥

ಆಚಾರ ವಿಚಾರವ ನಾನರಿಯೆನು ಜ್ಞಾನಾನು ಭಾವದ ಹೊಲಬನರಿಯೆನು । ಶಿವ ನಿಮ್ಮ ಪ್ರಸಾದಿಗಳ ಪ್ರಸಾದವೆನಗೆ ಪ್ರಾಣವಯ್ಯ ॥೨॥

ಆವ ಪದವಿಯುಂತುಟಲ್ಲವೆನಗೆ ನಿಮ್ಮ ಶರಣರ ಶೇಷ ಪ್ರಸಾದ ಜೀವನ। ವೆನಗದು ಬಾಳುವೆಯಾಗಿ ಮತ್ತನ್ಯವನರಿಯೆನಯ್ಯ ॥೩॥

ಹರಗಣ ಪಂತಿಯ ಮುಂದೆ ನಾನು ಕರವ ಮುಗಿದು ಪರವಶ ನಾಗಿ ಎರ। ಡರಿಯದೆ ಒಡೆಯರ ಪರಿಯಾಣವ ಹಾರಿಕೊಂಡಿಪ್ಪೆ ನಯ್ಯ ॥೪॥

ಗುರುಲಿಂಗ ಜಂಗಮವಾರೋಗಣೆಯ ಮಾಡುವೆಡೆಯೊಳೆನ್ನಯ ಪ್ರಾಣವನಿಕ್ಕಿ। ಉಡುಗಿ ಪ್ರಸಾದವ ಕೊಂಡು ಪರಮ ಸುಖಿಯಾದೆನು ಕೂಡಲಸಂಗಯ್ಯ ॥೫॥

॥ಶಾರ್ದೂಲ॥ ಚಿತ್ತಂ ಶುದ್ಧ ಮದಪ್ಪುದು ನದವಾ ಶುದ್ಧತ್ವಂ ನಿಜಕಪ್ಪುದೊಡಾ। ಚಿತ್ತಂ ಶುದ್ಧಮುದಾಗಿ ಯಾಸ್ಮೃತಿ ಧೃವಂ ತಾನಕ್ಕು ಮಾಸ್ಥೈರ್ಯದಿಂ॥ ಮತ್ತೀಂ ಸಂಸೃತಿ ಬಂಧ ಮೋಚನ ಮಕ್ಕುಂತನ್ನಿಮಿ ತ್ತಂಶಿವೇ। ನಾತ್ತ ದ್ರವ್ಯವ ನಿಂತು ಭುಂಜಿಸುವದೈ ಶ್ರೀಸಿದ್ಧಲಿಂಗೇ ಶ್ವರಾ. ॥೨೫।

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪ ತ್ತೈದನೆಯದಾದ ಪ್ರಸಾದಿ ಸ್ಥಲದ ವಿಚಾರವು ಆನುವಿನಿಂ ಮುಗಿಯ ಲಾಯಿತು.

---

೧೧ ಗುರು ಮಹಾತ್ಮ್ಯಸ್ಥಲ.

ಸೂತ್ರಃ—ಇಂತು ಗುರುಲಿಂಗ ಜಂಗಮದ ಪ್ರಸನ್ನ ಪ್ರಸಾದವ ಸ್ವೀಕರಿಸಿದ ನಿಯತ ಪ್ರಸಾದಿಯ ಅಂಗವನಾ ಲಿಂಗಿಸಿದ ಗುರು ಮಹಾತ್ಮ್ಯ ಎಂತಿರ್ದುದೆಂದಡೆ ಮುಂದೆ ಗುರು ಮಹಾತ್ಮ್ಯ ಸ್ಥಲವಾದುದು.

ವಚನಃ—ಕಣ್ಣೆ ಸತ್ವ ರಜತಮವೆಂಬ ತಿಮಿರವ ಕವಿದವರು ಗುರುವನೇ ಉಪಧಾವಿಸಿ ಕಣ್ಗೆ ಔಷಧಿಯ ಬೇಡುವರಯ್ಯ. ॥ಶ್ಲೋಕ॥ ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ। ಚಕ್ಷುರುನ್ಮೀಲಿತಂ ಏನತಸ್ಮೈ ಶ್ರೀಗುರುವೇನಮಃ ।೧॥ ಎಂದುದಾಗಿ ಶಿವಜ್ಞಾನವೆಂಬ ಅಂಜ ನವ ನಚ್ಚಿ ತೋರುವೆ ಕಪಿಲ ಸಿದ್ಧಮಲ್ಲಿಕಾರ್ಜುನಲಿಂಗವ.

ಪದ ರಾಗ ಗುರ್ಜರಿ

ಗುರು ಚರಣವೆ ಗತಿ ಗುರುಚರಣವೆ ಮತಿ ಗುರುಶಬ್ದ ಸ್ಪರ್ಶ ಪಾವನ ವೆನಗೆ। ನ ಗುರೋರಧಿಕಂ, ನ ಗುರೋರಧಿಕಂ ಎನುತ್ತೈದಾವೆ ಶೃತಿಗಳು ॥ಪ॥

ಜಾತನಲ್ಲ ಅಜಾತನಲ್ಲ ಜನಿತ ಖೇಚರನಲ್ಲ ಭೂಚರನಲ್ಲ ಆಚರಿಸ ವನಲ್ಲ। ಅನ್ಯ ಸುಖಂಗಳ ಭ್ರಾಂತುವಿಲ್ಲದ ನಿಭ್ರಾಂತು ಲಿಂಗೈಕ್ಯನು. ॥೧॥

ಯತ್ರ ತತ್ರ ಶಿವಸಾಧಕನಲ್ಲ ಅಷ್ಟತನು ಮೂರುತಿಯಲ್ಲ ಅಷ್ಟ ಮದಂಗಳ । ಮೆಟ್ಟಿ ನಿಲಿಸಿದ ಅಷ್ಟದಳ ಕಮಲ ಪೂಜಿತನು ನೀನೆ ॥೨॥

ಆಕಾರ ನಿರಾಕಾರ ಸಾಕಾರ ಸನುಮತನು ಮಾಕರಿಸುವನಲ್ಲ ಮನದಿಚ್ಛೆಗೆ। ಆಕಾರ ನಿರಾಕಾರ ಸನುಮತದ ಏಕಾಂತದೊಳಗಿಪ್ಪ ನಿಜಸ್ವರೂಪಿಂಗೆ ॥೩॥

ಜೀವಂಜೀವ ಜೀವಾದಿಗಳೊಳಗಣ ಅನ್ಯ ಭಿನ್ನ ಭಾವಕನಲ್ಲ ಸಮಸ್ತನಾದ। ಸಮಸುಖ ಭೋಗಿ ಅಣುರೇಣು ಸ್ಥೂಲ ಸೂಕ್ಷ್ಮ ಭಿಂತನು ನೀನೆ ॥೪॥

ಭೃಂಗ ಕುಸುಮ ಪರಿಮಳಕ್ಕೆರಗುವಂತೆ ಲಿಂಗ ಸಂಗ ಸುಖ ನಿರ್ಲೇಪ ಅಂಗ ಲಿಂಗ। ಸಂಗವಾಗಿಪ್ಪ ಶಿವಯೋಗಿ ಕೂಡಲಸಂಗನಲ್ಲಿ ಪ್ರಭುದೇವ ॥೫॥

॥ಮತ್ತೇಭ॥ ಪರಮಾಪ್ತಂ ನೆರೆ ನೀನೆಯಾಗಿ ಫಣೆಗಣ್ಣಿಂ ಚಂದ್ರ ತಳ್ಪಂಡಮಂ ॥ ವರದೋರ್ದ್ವಂದ್ವ ಮನೆಯ್ದಿ ಕಾಣಿಸದೆ ಮಾನುಷ್ಯಾಕೃತಿ ವ್ಯಕ್ತಿಯಿಂ॥ ಗುರುರೂಪಂಧರಿಸಿ ಪ್ರಕಾರದೆ ಲಸಚ್ಛಿಷ್ಯರ್ಕ್ಗಳಂ ಜನ್ಮಭೀ। ಕರದಿಂ ಪಿಂಗಿಪೆ ಮುಕ್ತಿದಾಯಕನಲಾ ಶ್ರೀಸಿದ್ಧಲಿಂಗೇಶ್ವರಾ ॥೩೬॥

ಗದ್ಯ॥ ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತಾರನೆಯದಾದ ಶ್ರೀಗುರು ಮಹಾತ್ಮ್ಯಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೧೨ ಗುರುಲಿಂಗ ಮಹಾತ್ಮ್ಯಸ್ಥಲ.

ಸೂತ್ರ:—ಇಂತು ಗುರು ಮಹಾತ್ಮ್ಯನುಂ ಸರ್ವಾಂಗ ದಲ್ಲೆಡೆಗೊಂಡ ಪ್ರಸಾದಿಯ ಮನದೊಳಗೆಡೆಗೊಂಡಿಪ್ಪ ಲಿಂಗ ಮಹಾತ್ಮ್ಯವೆಂತಿ

ರ್ಪುಡೆಂಬಡೆ ಮುಂದೆ ಲಿಂಗ ಮಹಾತ್ಮ್ಯ ಸ್ಥಲವಾದುದು.

ವಚನಃ—ಶ್ರುತಿತತಿಯ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯ. ಘನಕ್ಕೆ ಘನ ಮನಕ್ಕಗೋಚರನು. ॥ಶ್ರುತಿಃ— "ಅಣೋರಣೀಯಾನ್ ಮಹತೋ ಮಹೀಯಾನ್ ಮಹಾದಾನಿ ಕೂಡ ಲಸಂಗಮದೇವಾ.

ಪದ ರಾಗ ಭೂಪಾಳಿ

ಪರಕೆ ಪರವಾ ಘನಕೆ ಘನತರ ಮಹಾ ಘನವು। ವರಕೆ। ವರ ನಿಜ ವಾಙ್ಮನಾ ತೀತಗತಿಶಯವು। ಸರಿ ಇಲ್ಲದ ಪ್ರತಿಮ ಲಿಂಗನ ಮಹಾತ್ಮ್ಯ ಯಿಂದಿಲ್ಲ ಮೇಲಾದ ಘನವು ॥ಪ॥

ವೇದಾದಿ ವೇದಗಳಿಗುಪಮೆಗುಪಮಾತೀತ । ನಾದಿ ಮಧ್ಯಾಂತ ದಿಂದತ್ತಣತ್ತಣ ಘನವು। ಸಾಧಕರ ಸತ್ವರಜತಮ ದೇವತೆಗಳ। ಗೋಚರಕ ಗೋಚರ ತತ್ವವೂ॥ ಭೇದಾದಿ ಭೇದ ಬ್ರಹ್ಮಾಂಡ ಕೋಟಿಗಳುರೋ। ಮಾದಿಗಳೊಳಡಕ ಮಾಗಿಹವು ಸಚರಾಚರವ। ನಾದಿಲೋಕಾ ಲೋಕ ವೆಲ್ಲ ಲೀಲಾಸೂತ್ರ ಮಾತ್ರ ದೊಳಗಿಹವುಶಿವನಾ. ॥೧॥

ದಿಶೆ ಶ್ರೋತ್ರದಲಿ ನೇತ್ರದಲಿ ರವಿ ಮನಸ್ಸಿನೊಳು। ಶಶಿ ಪ್ರಾಣದಲಿ ವಾಯುವನಲ ಮುಖದಲಿ ಶಿರದ। ವಿಸರದಲಿ ತೆತ್ತೀಸ ಕೋಟಿ ದೇವ ತೆಗಳ ಭ್ಯಂತರವು ನಾಭಿಯಲ್ಲಿ॥ ವಸುಧೆ ಪದ ತಳದಲ್ಲಿ ಪ್ರಪದದಲಿ ಶಕ್ರನಜ। ನೆಸೆವ ಜಂಘೆಯಲಿ ಭುಜದಲಿ ವಿಷ್ಣು ರುದ್ರ ಮುಖ। ಬಿಸರು ಹದೊಳಖಿಳ ಜಗ ಜಠರದಲಿ ಜನಿತ ನಿಜ ಲಿಂಗಾಂಗ ಮಹಿಮೆ ಯಲ್ಲಿ ॥೨॥

ಉಪಮೆಗುಪ ಮಾನ ಮನುದೇವತಾದಿಗಳೆಲ್ಲ। ಜಪತಪ ಮಹಾ ದಿವ್ಯ ಮಂತ್ರ ಧ್ಯಾನಗಳಿಂದ। ಅಪರಮಿತ ಸೇವನಾರತರಾಗಿ ನಿಮ್ಮ ಪದನುತಿಯಿಂ ಕೃತಾರ್ಥರಾಗಿ ॥ ತ್ರಿಪತಿ ಪಟ್ಟಿರ್ಪರಲ್ಲದೆ ನಿಶ್ಚಯದ ಮಹಿಮೆ। ಯಪರಾಪರಂ ಪರಗಮ್ಯ ಭಾವಾತೀತ। ವಿಪುಳ ಜ್ಯೋತಿ ರ್ಲಿಂಗ ವಿಶ್ವತೋ ಮುಖನ ಮುಖ ಘನಗಾಬ ಘನವಾವುದು ॥೩॥

ಮನುಮುನೀಶ್ವರ ವೇದಶಾಸ್ತ್ರ ಶೃತಿ ಸ್ಮೃತಿಯಲ್ಲ। ತನ ತನಗೆ ಹೊಗಳುತಿರುತಿಹವು ಶಿವ ಘನತೆಯಂ। ಘನ ತರಂ ತರಗಾಣದ ತ್ಯತಿಷ್ಠದ್ದಶಾಂಗುಲನೆಂದು ಒರಲುತಿಹವೂ ॥ ಎನಲಾ ಘನನ ದಾವ

ದರುಶನಾಗಮ ತರ್ಕ। ದನು ಮತ ಕಸಾಧ್ಯ ಲಿಂಗದ ಮಹಾತ್ಮೆಗೆ ಕಡೆಯ। ನೆಣಿಸಲಿಲ್ಲಾಗಿ ಪ್ರಣವಾದಿ ಪಂಚಾಕ್ಷರಿಯೊಳಡಕವಾಗಿಹುದೆ ಸತ್ಯಾ ॥೪॥

ನಿತ್ಯನನಿತ್ಯ ದೇವತೆಗಳರಿಯುಲಿ ಕಳವೆ। ಸತ್ತುಚಿತ್ತಾನಂದ ಶಿವ ನನು ಭವಾದಿಭಾ। ವೋತ್ತಮರ ಭಾವ ಕಾರಣಕರದೊಳಮೃತಕರ। ಕಿರಣಸಮ್ಯಗೆಜ್ಯೋತಿಯಾ॥ ಬಿತ್ತರಿಸಿ ತೊಳತೊಳಗುವತ್ಯಂತ ನಿರವಯದ। ಮತ್ತೆ ಸಚ್ಚಿತ್ಸುಖ ನಿರಂಜನವ ನಿರ್ಮಲದ। ನಿತ್ಯ ಕೂಡಲ ಚನ್ನಸಂಗ ನಂಗವನು ಪ್ರಭುಲಿಂಗದಲ್ಲಿಯೆ ಕಂಡೆನಾ ॥೫॥

॥ಮತ್ತೇಭ॥ ಮನಗಳ್ ದೇವತೆಗಳ್ ಮುನೀಶ್ವರ ಜಯುಂಪೂಜಾದಿ ಸತ್ಕರ್ಮದಿಂ। ದನಿಶಂಕೋಟಲೆ ಗೊಂಬರುನ್ನತಿಕೆಯುಂ ಕಣ್ಗೊಳಿ ಬರ್ಕುಂಬಹೂ॥ ಪಸಿಪದಸ್ವಾತ್ರೆಗಳಾದಿಯುಂ ಕಡೆಯು ನೆಂತುಂ ಕಾಣೆ ವೆಂದಂಜುತಾ। ಜಿನುಗುತಿರ್ಪವವೆಂತು ನಿನ್ನಯುಘನಂ ಶ್ರೀಸಿದ್ಧಲಿಂಗೇಶ್ವರಾ.

॥ಗದ್ಯ॥ ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತೇಳನೆಯದಾದ ಲಿಂಗ ಮಹಾತ್ಮೆಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೧೩ ಗುರು ಜಂಗಮ ಮಹಾತ್ಮೆಸ್ಥಲ.

ಸೂತ್ರ:—ಇಂತು ಲಿಂಗ ಮಹಾತ್ಮೆಯುಂ ತನ್ನ ಮನದಲ್ಲಿ ಕಂಡ ಪ್ರಸಾದಿಯು ತನ್ನ ಅರಿವಿನಲ್ಲೆಡೆಗೊಂಡ ಜಂಗಮ ಮಹಾತ್ಮೆ ಎಂತಿರ್ದದೆಂದೊಡೆ ಮುಂದೆ ಜಂಗಮ ಮಹಾತ್ಮೆಯ ಸ್ಥಲವಾದುದು.

ವಚನ:—ಅಯ್ಯಾ ನಿಮ್ಮ ದೇವರೆಂದು ಪೂಜಿಸಲಾಗದಯ್ಯ, ನವ ಕೋಟಿ ಬ್ರಹ್ಮರಿಗೆ ಪ್ರಳಯವ ಮಾಡಿದುದು ನಾಬಲ್ಲೆನಾಗಿ. ಅಯ್ಯಾ ನಿಮ್ಮ ದೇವರೆಂದು ಪೂಜಿಸಲಾಗದಯ್ಯಾ, ದಶಕೋಟಿ ನಾರಾಯಣರಿಗೆ ಮರಣವ ಮಾಡಿದುದು ನಾಬಲ್ಲೆನಾಗಿ. ಅಯ್ಯಾ ನಿಮ್ಮ ದೇವರೆಂದು ಪೂಜಿಸಲಾಗದಯ್ಯಾ, ಅನಂತಕೋಟಿ ರುದ್ರರಿಗೆ ಲಯವ ಮಾಡಿದುದು ನಾಬಲ್ಲೆನಾಗಿ. ಅಯ್ಯಾ ನಿಮ್ಮ ದೇವರೆಂದು ಪೂಜಿಸಲಾಗದಯ್ಯಾ, ಮೀನಜ, ರೋಮಜ ಮಹಾ ಮುನಿಗಳ ಸಂಹಾರ ಮಾಡಿದುದು ನಾಬ

ಲ್ಲೆನಾಗಿ. ಅಯ್ಯಾ ನಿಮ್ಮ ದೇವರೆಂದು ಪೂಜಿಸಲಾಗದಯ್ಯಾ. ಎನ್ನನು ಏಳೇಳು ಜನ್ಮ ತಂದಲ್ಲಿ ನಾನು ಉಭಯ ಲಿಂಗ ಜಂಗಮದ ಮರೆ ಹೊಕ್ಕು ಭವಂ ನಾಸ್ತಿಯಾಗಿ ಬದುಕಿದೆನು ಕಾಣಾ, ಕೂಡಲಸಂಗಮ ದೇವಾ.

॥ಪದ॥ ರಾಗ ಭೂಪಾಳಿ.

ಶಿವನೇ ಜಂಗಮ ರೂಪಧರಿಸಿ ಲೋಕವನುದ್ಧರಿಸಲೆಂದು ಚರಿಸು ತ್ತಿರ್ಪ ॥ಪ॥

ಮಾನುಷ ಚರ್ಮಾ ವೃತನಾಗಿ ಸಮಾಧಾನ ವಿಡಿದು ನಿಜಲೀಲೆ ಯೊಳು । ಅನತ ಬೋಧ ರೂಪನಾಗಿ ಪರಮಾನಂದ ಲೀಲೆಯೊಳಿರುತಿ ಹನು ॥೫॥

ಚರಿಪರಾಪರ ಬೋಧಾ ರೂಪಿಂದ ಹೊರೆವನು ಭಕ್ತ ಜನಂಗ ಳನು । ಶರಣರ ಸರ್ವಾಂಗದೊಳು ಬೆಳಗುತಿರ್ಪ ಪರಿಪೂರ್ಣ ಮಹಾ ಘನ ಮಹಿಮ ॥೨॥

ಪರಮ ಪ್ರಸನ್ನ ಮೂರುತಿ ಜಂಗಮಲಿಂಗ ಪರಮಜ್ಞಾನ ಪ್ರಕಾ ಶಿತ । ಕರುಣಾಮೃತಮಯ ಸಚರಾಚರಗಮ್ಯ ನಿರುಪಮ ನಿರಾಳ ನಿಶ್ಚಿಂತನು ॥೩॥

ಶಕ್ತಿರಹಿತ ಶಕ್ತಿಗಾಧಾರರೂಪ ವಿರಕ್ತಿವಿಡಿದು ರಾಗವರ್ಜಿತ। ಭಕ್ತಿ ಪಿಂಡ ನಿರ್ದೇಹ ನಿರ್ಮಲ ನಿಜ ಶಕ್ತಿ ಸ್ವತಂತ್ರ ಮಹಂತನು ॥೪॥

ಪರಿಣಾಮಿಯು ಪರಾಪರ ಬೊಮ್ಮ ನಿರಭೇದ್ಯ ನಿರ್ಲೇಪ ಶರ ಣಾಗತ। ವರರಕ್ಷಾ ಮಣಿಯೆ ಶ್ರೀಅಲ್ಲಮಪ್ರಭುವೆನವೋ ಕೂಡಲ ಸಂಗಯ್ಯ ॥೫॥

॥ಶಾರ್ದೂಲ॥ ನೀನೆ ಬಂದು ನಿರಂಜನಾಹ್ವಯದೆ ಮತ್ತಂ ಲೋಕಮಂ ರಕ್ಷಿಸಲ್ । ಜ್ಞಾನಾನಂದ ಗಣೇಶ ನಾಮದೆ ಬಳಿಕ್ಕಂ ನಿರ್ಮ ಲಾಖ್ಯಾದಿಯಂ ॥ ಜ್ಞಾನಾ ಕೀರ್ಣ ವಿಚಿತ್ರ ಮಾದ ಚರಲಿಂಗಾ ಕಾರಮಂ ತಾಳ್ದುದ । ಕ್ಕೇನೆಂದಾಂ ನುತಿಪೇಂ ತವಾಧಿಕಮಿದಂ ಶ್ರೀಸಿದ್ಧಲಿಂಗೇಶ್ವರಾ.

॥ಗದ್ಯ॥ ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪ ತ್ತೆಂಟನೆಯದಾದ ಜಂಗಮ ಮಹಾತ್ಮ್ಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೧೪ ಭಕ್ತ ಮಹಾತ್ಮೆ ಸ್ಥಲ.

ಸೂತ್ರಃ—ಇಂತು ಜಂಗಮ ಮಹಾತ್ಮೆಯನರಿದು ಆ ಜಂಗಮ ಪ್ರಸಾದವ ಸ್ವೀಕರಿಸಿ ಸುಖಿಯಾಗಿಪ್ಪ ಪ್ರಸಾದಿಯು ಸದಾಚಾರ ಸದ್ವರ್ತನೆಯಲ್ಲಿಡಗಿ ತೋರುತ್ತಿರ್ಪ ಸಾವಧಾನ ಸನ್ನಿಹಿತ ಭಕ್ತ ಮಹಾತ್ಮೆ ಎಂತಿರ್ದುದೆಂದಡೆ, ಮುಂದೆ ಭಕ್ತ ಮಹಾತ್ಮೆ ಸ್ಥಲವಾದುದು.

ವಚನಃ—ತನುವಿಲ್ಲದ ಭಕ್ತ, ಮನವಿಲ್ಲದ ಭಕ್ತ, ಧನವಿಲ್ಲದ ಭಕ್ತ, ಪಂಚೇಂದ್ರಿಯ ಸುಖವಿಲ್ಲದ ಭಕ್ತ, ಕಾಯುವಿಲ್ಲದ ಭಕ್ತ ಕರ್ಮವಿಲ್ಲದ ಭಕ್ತ, ಕಲ್ಪಿತ ವಿಲ್ಲದ ಭಕ್ತ, ಅಶನವನರಿಯನು ಭಕ್ತ, ವ್ಯಸನಕ್ಕೆಳಸನು ಭಕ್ತ ಹುಸಿಯನು ನುಡಿಯನು ಭಕ್ತ ಅರಿಷಡ್ವರ್ಗ ನರಿಯದಿಹನು ಭಕ್ತ ಮದಂಗಳೆಂಟನಂಟನು ಭಕ್ತ. ಅಹಂಕಾರ ರಹಿತನು ಭಕ್ತ, ಗುರು ಲಿಂಗಾಧಾರ ಭಕ್ತ ಲಿಂಗಕ್ಕಾಧಾರ ಭಕ್ತ ಜಂಗಮಕ್ಕಾಧಾರ ಭಕ್ತ ಪ್ರಸಾದಕ್ಕಾಧಾರ ಭಕ್ತ ಪಾದೋದಕಕ್ಕಾಧಾರ ಭಕ್ತ ಕೂಡಲ ಚನ್ನ ಸಂಗಯ್ಯನಲ್ಲಿ ಎನ್ನ ಮಾತಾಪಿತನು ಸದ್ಭಕ್ತನು.

ಪದ ರಾಗ ಗುಂಡಕ್ರಿ

ದಾಸೋಹವ ನೋಡಲೆಂದು ಈಶ। ಬೇಡೆ ತನುನ ಕೊಡುವ। ಆ। ಸದರ್ಥ ಭಕ್ತರನ್ನು ಆಸೆಗೈವುದೇನು ಮನವೇ ॥ಪಲ್ಲವ॥

ಏಸು ಬಾರಿ ಬಂದ ಭವದದೋಷಗಳನುಕೆಡಿಸಿ ಮುಕ್ತಿ । ವಾಸದೊಳಗೆ ಕೂಡುದು ಮಹಾ ಶಿವೈಕ್ಯ ದರುಶನಾ ॥೧॥

ಸುತ್ತಿ ಬಳಲಿ ತೀರ್ಥ ಕ್ಷೇತ್ರದತ್ತ ಶೊಳಲಿ ಬಳಲಬೇಡ। ಭಕ್ತನಂಗಳವೆ ನಿತ್ಯಮುಕ್ತಿ ಲೋಕ। ವಾರಣಾಸಿ ॥೨॥

ಆವಭಾವದಿಂದ ಲಿಂಗದೇವ ಬೇಡೆ ಈವ। ಭಕ್ತ। ರೀವರಲ್ಲದುಳಿದ ವ್ಯರ್ಥಜೀವರೇನ ನೀವರೂ ॥೩॥

ಕೊಟ್ಟುದದಣಿಯ ತನುಮನವ ಕೊಟ್ಟುದದಣಿಯ ಧನವಭಾವ। ಮುಟ್ಟಿ ಲಿಂಗಜಂಗಮಕ್ಕೆ ನಿಷ್ಠೆನಿರುತ ಭಕ್ತನೂ ॥೪॥

ಭಕ್ತನಂಗ ಶಕ್ತಿಗೀವ ಯುಕ್ತಿಲಿಂಗವಾಗಿ ಬಯಕೆ । ಗತ್ತಮುನ್ನ ಕೊಡುವ ಭಕ್ತಿಭಾವ ಕೂಡಲಸಂಗನೂ ॥೫॥

ಮತ್ತೇಭಃ—ತನುವಂ ಬೇಡಿದೊಡೀವನಿಂತು ಧನಮಂ ಬೇಳ್ಪರ್ಗೆ ತಾನೀವನಾ। ವಿನಯಂ ಗೊಂಡಭಿಮಾನ ಮುಂತೆನಿಸುವಿಚ್ಛಾರೂಪಿತದ್ವ

ಸ್ತ್ರೀವಂ ॥ ಅನುಮಾನಂ ಗೊಳದೀವನಂಟಿವ ಮನೋವೈಕಲ್ಯ ಸದ್ವೈ ತಚಿ । ಘನ ಭಕ್ತಂ ನಿಜಮುಕ್ತನಾತನೆ ಶಿವಂ ಶ್ರೀ ಸಿದ್ಧಲಿಂಗೇಶ್ವರಾ ॥೯॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಇಪ್ಪತ್ತೊಂಭತ್ತನೆಯದಾದ ಭಕ್ತಮಹಾತ್ಮೆ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೧೫ ಶರಣಮಹಾತ್ಮೆ ಸ್ಥಲ.

ಸೂತ್ರ:— ಇಂತು ಭಕ್ತಮಹಾತ್ಮೆಯ ನಂಗವಲ್ಲಿ ತದ್ಗತವಾಗಿ ಮಾಡಿಕೊಂಡು ಭಿನ್ನಭಾವ ತೋರದ ಪ್ರಸಾದಿಯು ಬಾಹ್ಯಾಭ್ಯಂತರದಲ್ಲಿ ಪರಿಣಾಮ ಪ್ರಸಾದದ ಪರಮಾನಂದದೊಳಿಪ್ಪ ಶರಣಮಹಾತ್ಮೆಯು ಎಂತಿರ್ದುದೆಂದೊಡೆ ಮುಂದೆ ಶರಣ ಮಹಾತ್ಮೆಸ್ಥಲವಾದುದು.

ವಚನ:— ಪರುಷಕ್ಕೆ ಜಿಲೆ ಇಲ್ಲ. ಪ್ರಾಣಕ್ಕೆ ನಿರ್ಮಾಲ್ಯವಿಲ್ಲ. ರುಚಿಗೆ ಎಂಜಲಿಲ್ಲ. ಸುಖಕ್ಕೆ ರೋಚಿಕೆ ಇಲ್ಲ. ಗುಹೇಶ್ವರಾ ನಿಮ್ಮ ಶರಣಂಗೆ ಭವವಿಲ್ಲ, ಬಂಧನವಿಲ್ಲ

॥ಪದ॥ ರಾಗ ಮಾಳವ ಗೌಳ.

ಕರ್ಮಕಾಯನುಮಲ್ಲ ಬ್ರಹ್ಮಮೂರುತಿಯಲ್ಲ ಪರ ಬ್ರಹ್ಮವನುಡಿವಲ್ಲಿ ತಾನಿಲ್ಲದ ನಿರ್ಮೋಹಿ ।.ಪ॥

ಮಾತೆಪಿತರುಗಳುದರಜಾತ ಜನಿತನುಮಲ್ಲ ಶ್ವೇತಪೀತ ಕಪೋತಷ ಡುವರ್ಣ ರಹಿತ । ನವಮಾಸ ತುಂಬಿದ ಮೂರುತಿ ತಾನಲ್ಲ ಅವಿರಳಲಿಂಗದ ಕಳೆಯ ಬೆಳಗು ತಾ ಶರಣಾ ।೧॥

ನಡೆಕಲುವಲ್ಲಿ ನೋಡಿಳಿಯ ಹಂಗಿಗನಲ್ಲ ನುಡಿಯ ಸಡಗರದ ನಾದ ಬಿಂದುತಾನಲ್ಲ । ಪದುಮಪರಿಮಳಕ್ಕೆರಗುವ ಭ್ರಮರತಾನಲ್ಲ ಭವದಕುಳ ವನು ಗೆಲಿದ ನಿಭ್ರಾಂತ ಶರಣಾ ॥೨॥

ಜಾಗ್ರಸ್ವಪ್ನ ಸುಷುಪ್ತಿಯಾಗುವ ನಿಮಿಷನಲ್ಲ ಆಗಮಕುಳದ ವಾದ ಭೋಗಿ ತಾನಲ್ಲ । ತೇಜನಿರಂಜನೆಯ ಗಣಿತ ಗುಣಿತನುವಲ್ಲ ಸಹಜನಿತ್ಯನು ತಾನಭೇದ್ಯ ಶರಣಾ ॥೩॥

ಬಿಂದುಕಳೆಯ ಸುಖದ ಶಯನ ಸಂಪರ್ಕನಲ್ಲ ಒಂದು ಛಂದವಲಿ ಕಂದಮೂಲವನುಗೆಲಿದ । ಸಂದಳಿದು ಸ್ವಯಸುಖವನೊಂದುಮಾಡಿ ತ್ರಿಬಂಧ ಭೇದವಗೆಲಿದ ನಿಷ್ಕಾಮಿ ಶರಣಾ ॥೪॥

ಚಂದ್ರಧಾರಸುಮಲ್ಲ ಚಂದ್ರಪೂರಿತನಲ್ಲ ಇಂದ್ರಚಾಪದ ಪಣಿಯ ಪ್ರಭಾವತಾನಲ್ಲ। ಭೃಂಗನುಂಗಿದ ರುಚಿಯನೊಂದು ಮಾಡಿ ಗುಹೇಶ್ವರ ನೆಂಬ ಲಿಂಗದ ಹಂಗನಳಿದ ಶರಣಾ ।೫॥

ಮತ್ತೇಭಃ-ಶರಣಂ ಶಾಶ್ವತನಾವಪತ್ತನದೊಳುದ್ಯತ್ಪ್ರೀತಿಯಿಂ ಪೊಕ್ಕು ಸಂ। ಚರಿಸಲ್ಕಾತನ ಪಾದುಕಾನ್ವಿತಪದದ್ವಂದ್ವಂಬಳಿಕ್ಕಂತದಂ ॥ ಆಗಿಗ ಲ್ಗಿಯುವೆ ಗೆಲ್ಲಮುಂ ಶುಭಮುಯುಂಗೆಯ್ದುಂ ನಿರೋಗಾದಿಮುಂ। ಸಿರಿದುತ್ಸಾ ಹವನೆಯ್ದಿ ಕಂ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವತ್ತ ನೆಯದಾದ ಶರಣಮಹಾತ್ಮ್ಯಸ್ಥಲದ ವಿಚಾರವು ಆನುವಿನಿಂ ಮುಗಿಯಲಾ ಯಿತು.

---

೧೬ ಪ್ರಸಾದಮಹಾತ್ಮ್ಯಸ್ಥಲ.

ಸೂತ್ರಃ--- ಇಂತು ಶರಣ ಮಹಾತ್ಮ್ಯಯುಲ್ಲಿ ಸರ್ವಾಂಗವು ಪರಮಾ ನಂದವನ್ನೈದಿದ ಪ್ರಸಾದಿ ತಾನು ಸ್ವೀಕರಿಸುವ ಪರಿಣಾಮ ಪ್ರಸಾದ ಮಹಾತ್ಮೆ ಎಂತಿರ್ದುದೆಂದಡೆ, ಮುಂದೆ ಪ್ರಸಾದ ಮಹಾತ್ಮ್ಯಸ್ಥಲವಾದುದು.

ವಚನಃ--- ಅಗ್ನಿಮುಟ್ಟಲು ತೃಣವಗ್ನಿಯಹುದು ತಪ್ಪದಯ್ಯ. ಗುರು ಪ್ರಸಾದ ಅಂಗಕ್ಕೆ ಸೋಂಕಿದಲ್ಲಿ ಸರ್ವಾಂಗವು ಗುರುವಪ್ಪದು ತಪ್ಪದಯ್ಯ, ಲಿಂಗಪ್ರಸಾದ ಮನಕ್ಕೆ ಸೋಂಕಿದಲ್ಲಿ ಮನವೆಲ್ಲ ಲಿಂಗವಪ್ಪದು ತಪ್ಪದಯ್ಯ ಜಂಗಮಪ್ರಸಾದ ಅರಿವಿಂಗೆ ಸೋಂಕಿದಲ್ಲಿ ಅರಿವೆಲ್ಲ ಅಖಂಡಪ್ರಸನ್ನ ಪ್ರಸಾ ದರೂಪ ಜಂಗಮವಪ್ಪದು ತಪ್ಪದಯ್ಯ. ಶ್ರೀ ಶಿವಶಿವಾ, ಶ್ರೀಮತ್ಪ್ರಸಾ ದದ ಮಹಿಮೆಯ ನೇನೆಂದು ಪಣಿಸುವೆನಯ್ಯಾ, ಪ್ರಸಾದವೇಗುರು, ಪ್ರಸಾ ದವೇ ಲಿಂಗ, ಪ್ರಸಾದವೇ ಜಂಗಮ ಪ್ರಸಾದವೇ ಪರಾತ್ಪರ ಪ್ರಸಾದವೇ ಪರಮಾಮೃತ ಪ್ರಸಾದವೇ ಪರಮಾನಂದಪ್ರಸಾದವೇ ಪರಜ್ಞಾನ ಪ್ರಸಾ ದವೇ ವಾಙ್ಮನಾತೀತ ಪ್ರಸಾದವೇ ನಿತ್ಯಪರಿಪೂರ್ಣ ಇಂತಪ್ಪ ಮಹಾಪರಿ ಣಾಮ ಪ್ರಸನ್ನ ಪ್ರಸಾದವ ಕೊಂಡು ನಾನು ಬದುಕಿದೆನಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

॥ಪದ॥ ರಾಗ ಸಾಟ

ವೇದ ಶಾಸ್ತ್ರಾಗಮ ಪುರಾಣಗಳಲಿ ಶಿವನ ಪ್ರಸಾದವಲ್ಲದೆ ಇಲ್ಲ ವೆಂದು। ಆದಿ ಪುರುಷರು ಪ್ರಸಾದವ ಭೋಗಿಸಲು ವೈದಿಕರಿಂಗೆ ಕೊಡ ಲಾಗದೇನೋ ॥ಪ॥

ಅನರ್ಹಮಮುಸ್ಮೈವೇದ್ಯ ಮೆಂಬ ಶಿವನ ವಾಕ್ಯಾರ್ಥವ ನರಿಯದೆ ನುಡಿವೆ । ನಾನಾರ್ಥಕಶ್ಚ ನೈವೇದ್ಯವೆಂಬ ಶಬ್ದ ಗೌಣ ಮುಖ್ಯಾರ್ಥವ ನರಿಯಬೇಕೆಲವೋ ॥೧॥

ಸಲ್ಲುವುದೆ ಪತ್ರಿಣಾಹುತಿಗೆ ಪಂಚ ಮಹಾಯಜ್ಞಕ್ಕೆ ಸಲುವುದೆ ಹವಿಗೆ ಶಿವನ ಪ್ರಸಾದ । ಸಲ್ಲದ ವೈದಿಕಂಗೆಂತನುಭವಿಸಬಹುದೆಂಬ ನಿರ್ಮ್ಯಾಲ್ಲಕ್ಕೆ ಪ್ರಸಾದವಲ್ಲದೆ ಸಲ್ಲದೆಂದು ತಿಳಿ ॥೨॥

ನೈವೇದ್ಯವೆಂಬುದು ಆರು ವಿಧವಾಗಿರ್ಪುದು ನೈವೇದ್ಯ ಷಡ್ರಸ ಸ್ಥಾಯಿ ಎನಲು ನೋಡಾ । ಯೋ ವನರುಹಂ ಎಂದು ಹೇಳುವದಲ್ಲದೆ ಶಿವಭುಕ್ತ ಶೇಷಮನರ್ಹಂ ಎಂದು ಹೇಳಿತ್ತುಂಟೆ ।೩॥

ಪುರಾಣ ಶ್ರಾದ್ಧ ಕಾಲೇ ಹರಭುಕ್ತ ಶೇಷವು ಪಿತರಿಗೆ ಕೋಟಿ ಪರ್ಯಂತರ ತೃಪ್ತಿ ಎನಲು । ಮರಳಿ ಪಿತರರ ಶೇಷವ ಹರಂಗರ್ಪಿಸುವ ಪಾಷಂಡಿ ನಿರತರೇತೋ ಪಿತೃ ತಸ್ಯ ಏಕಲೆರೆದವಾ ॥೪॥

ತ್ಸ್ವಿಧತ್ತೇಭಿ ರುದ್ರಸಂಚನ್ಮ್ಯೋಭಿ ಎನಲು ವೇದಯೋಕ್ತ ತುರ್ಯೋಕ್ಷ ಮನಜಾಯೋ ಜಾಯತೆ ಎನಲು । ವೇದ ಮುದ್ಧರಾಯ ಪ್ರಥಮ ಸತತಂ ಹವಿ ರುದ್ರ ಎನಲು ವೇದ ವೇತ್ತಿ ಪ್ರಸಾದಯುತೆ ಎನಲಾವುದೇನು ಮರುಳಾ ॥೫॥

ವೇದಾರ್ಥ ಕಾಮಯಾತ ಎಂಬ ಶ್ರುತ್ಯರ್ಥಮಂ ತಿಳಿ ವೇದಿ ಗುಪ್ತ ಮಹಾ ತಸ್ಮಿನ್ನೆನಲು ನೋಡಾ । ವೇದ ರುದ್ರೇಣ ಪೀತಂ ಪಿಬಂತಿ ರುದ್ರೇಣ ಘ್ರಾತಂ ಜಿಘ್ರಂತಿ ವೇದ ಕೇವಲ ಗೋಭವತಿ ಕೇವಲಾಭಿ ಎನಲು ॥೬॥

ವೇದ ವಾಕ್ಯ ಕೇವಲ ಏನುತಿವೆಯುವರ ಭಾಷೆಯನರಿವಡರಿ ಶ್ರೌತ ಸ್ಮಾರ್ತವನೆಚ್ಚರುವಡೇ ವೇದಾಢ್ಯರನು ಕೇಳು । ವೇದ ಪುರುಷರು ಪ್ರಸಾದವ ಕೊಂಡಾಡುವರು ಶಿವನ ಪ್ರಸಾದವಲ್ಲದೆ ಪರವಿಲ್ಲೆಂದು ॥೭॥

ಅದೀಕ್ಷಿತಸ್ಯ ಅನ್ಯ ದೈವ ಸೇವಕಾ ಸದಾ ಶಿವನಿಗೆ ಅನ್ಯ ದೈವಂಗಳ ನರಿ ಎಂಬವಂಗೆ ಆವ ಭಂಗ ಕೇಳು । ವಿದಿತ ವೀರಭದ್ರ ಮೊದಲಾದ ವರ ಶಾಪದಗ್ಧರಾದ ಅಧಮರಿಗೆ ನಿರ್ಮಲ ಪ್ರಸಾದವು ಸಲ್ಲದಲ್ಲದೆ ॥೮॥

ಶಿವನೇ ಅಧಿಕನು ಶಿವಭಕ್ತನೆ ಕುಲಜನು ಶಿವಪ್ರಸಾದಿಂದಾವುದಧಿಕ ವಿಲ್ಲೆಂದುದು ಶೃತಿಯದನರಿದು । ಶ್ರೀ ಸದ್ಗುರು ಸೋಮೇಶ್ವ

ರನ ಭಜಿಸಿ ಪ್ರಸಾದ ಸೇವನೆಯು ಮಾಡದಿರಲು ಅಘೋರ ನರಕ ತಪ್ಪದು ॥೯॥

ಶಾರ್ದೂಲಃ—ವಿಶ್ವಾಸಂ ಕರಿಗೊಂಡು ಭುಂಜಿಸೆ ಮಹೋಸದಾದಿಗಳ್ಪಿಂಗಿನಿ। ತೈಬ್ರಶ್ವರ್ಯಂ ಕರಬಿಲ್ವವತ್ಫಲಿಸಿ ಸಾಕ್ಷಾನ್ಮುಕ್ತಿ ಕೈಸಾರ್ಗವಾ। ವಿಶ್ವಾಸಂ ಸಿಸೆ ಇಲ್ಲದೀ ಘನ ಮಹಾ ಶೇಷಂ ಗೊಳಲ್ಕಂತರ್ದೆ। ಶಶ್ವದ್ವಿಘ್ನ ಕರಂ ಕರಂ ಗರಮಹೋ ಶ್ರೀಸಿದ್ಧಲಿಂಗೇಶ್ವರಾ.

ಗದ್ಯಃ—ಇಂತೀ ಪ್ರಕಾರದಿಂ ನೂರೆಂಟು ಸ್ಥಲವೊಳಗೆ ಮೂವತ್ತೊಂವನೆಯುದಾದ ಪ್ರಸಾದ ಮಹಾತ್ಮ್ಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀ ಮದೇಕೋತ್ತರ ಶತಸ್ಥಲಂಗಳಲ್ಲಿ ಪಿಂಡಾದಿದೇಹಜಾಂತ್ಯ ವಾದ ಹನಿನ್ನೈದು ಸ್ಥಲಂಗಳೊಂವನೆಯುದಾದ ಭಕ್ತಿಸ್ಥಲಕ್ಕೆ ಮಹೇಶಾದಿ ಭಕ್ತದೇಹಿಕ ಲಿಂಗಾಂತ ವಾದ ಒಂಭತ್ತು ಸ್ಥಲಂಗಳೆರಡನೆಯುದಾದ ಮಹೇಶ ಸ್ಥಲಕ್ಕೆ ಪ್ರಸಾದಿ ಯಾದಿ ಪ್ರಸಾದ ಮಹಾತ್ಮ್ಯಯಂತ್ಯವಾದ ಏಳು ಸ್ಥಲಂಗಳ್ಮೂರನೆಯುದಾದ ಪ್ರಸಾದಿಸ್ಥಲಕ್ಕೆ ಮುಗಿದುದು ಮಂಗಳಮಹಾ.

---

೧೭ ಪ್ರಾಣಲಿಂಗಿಸ್ಥಲ.

ಸೂತ್ರಃ—ಇಂತು ಪ್ರಸಾದಿಯಾದಿ ಪ್ರಸಾದ ಮಹಾತ್ಮ್ಯಯಂತ್ಯವಾದ ಪ್ರಸಾದಿಸ್ಥಲದಲ್ಲಿ ಆಚರಿಸಿ ಮಹಾ ಪ್ರಸನ್ನಪ್ರಸಾದನೊಳ್ ಸಮರಸವಾಗಿ ಬೆರಸಿದ ಮಹಂತನು ಮುಂದೆ ಅನುಭವಮುಖದಿಂದ ಆಚರಿಸಿ ಬೆರಿಸುವ ಭೇದವದೆಂತಿರ್ದುದೆಂದಡೆ ಮುಂದೆ ಪ್ರಾಣಲಿಂಗಿಸ್ಥಲವಾದುದು.

ವಚನಃ—ಲಿಂಗಮಧ್ಯದಲ್ಲಿ ಜಗವಿದ್ದಡೇನೋ ಜಗವ ಹೊರಗಿಕ್ಕಿ ಲಿಂಗವನೊಳಗಿಟ್ಟುಕೊಂಡ ಆ ಘನಕ್ಕೆ ಶರಣೆಂಬೆ. ಆ ಮಹಾಘನವು ಅಂತಕ್ಕೊಳಗು, ಪ್ರಳಯಕ್ಕೆ ಹೊರಗು ನೋಡಾ ಕೂಡಲ ಚನ್ನಸಂಗಯ್ಯಾ.

॥ಪದ॥ ರಾಗ ಮಧುಮಾಧವಿ.

ನುಡಿಗಡಣದ ಬೆಳಗು ಮರುತ ಪರಿಮಳದಂತೆ ಭಾವವಿಲ್ಲದ ಬಯಲು ಪರವು ತಾನೆ। ಅರಹು ಕುರುಹಿನ ಮರಹು ತೆರಹಿಲ್ಲದಾಘನವು ನಿಂದ ನಿಜಪದದಿಂದ ಪ್ರಭೆಯಾಯಿತು ॥ಪ॥

ಎಳೆಯ ಮಾಣಿಕದಂತೆ ಹೊಳೆವ ಜ್ಞಾನದ ಜ್ಯೋತಿ ನವನಾಳದಲಿ ಪ್ರಾಣಲಿಂಗ ಭರಿತಾ । ಪಿಂಡ ಬ್ರಹ್ಮಾಂಡವನು ಮೀರಿ ತೋರುವ ವಚನ ಗಗನದುದಯದ ಮೇಲೆ ಘನಕೆಗಮನಾ ॥೧॥

ಆಕಾಶದಿಂದತ್ತಲಾರು ಬಲ್ಲವರಿಲ್ಲ ಪಾತಾಳದ ಪ್ರಮಾಣವ ಕಾಂಬುರಾರು । ಆತುಮನವಿಡಿದು ಪರಮಾತುಮನ ಪರಿಭಾವ ನೊಡ ನೊಡ ನೊಡ ಘನಕೆ ಗಮನಾ ॥೨॥

ಇರುಳು ಮನವನೆ ನುಂಗಿ ಹಗಲು ಘನವನೆ ನುಂಗಿ ಯಾತುಮಧನವ ನುಂಗಿದಾತ ಭರಿತಾ । ನೀತಿನಿಜನಿಂವಲ್ಲಿ ನಿಜನಿರ್ಮಲ ಜ್ಯೋತಿ ಪ್ರಾಣಲಿಂಗದ ಘನಕೆ ಪ್ರಮಾಣಿಲ್ಲವೋ ॥೩॥

ಆರುದರುಶನದೊಡೆಯನಂತರಂಗದೊಳಿಪ್ಪ ಆದಿಗಾದವನು ಗಗನಭುವನ ಒಂದೆ। ಹೃದಯಕಮಲವ ಬೆಳಗು ಪರಬ್ರಹ್ಮದಲಿ ತುಂಬಿಪರಿಣಾಮ ಪರಪದವಿಯ ತೋರಿತು ॥೪॥

ಧರೆಗೆ ನಿದ್ದೆಯು ಇಲ್ಲ ಉದಕಕ್ಕೆ ಕನಸಿಲ್ಲ ಅಗ್ನಿ ಕಳವಳಕೆ ಒಳಗಾಗದೇತೋ । ಸುಳಿವ ಪವನನು ತಾನು ತಾಮಸಕ್ಕೊಳಗಾಗ ಬಯಲಿಂಗೆ ಭ್ರಮೆಯುಂಟೆ ಗುಹೇಶ್ವರಾ ॥೫॥

ಶಾರ್ದೂಲ:— ಜಾಣಂತತ್ಕಲೆಯಾದಿಯಾಗಿ ವಿಲಸತ್ ಕ್ಷಿತ್ಯಂತ ಮಾಗಿರ್ಪ ಸಂ । ತ್ರಾಣಂ ಪ್ರಾಣಶರೀರದೊಳ್ಪರಮ ಶುದ್ಧಜ್ಞಾನ ಸಂಕಾಶವ॥ ಕ್ಷೀಣಬ್ರಹ್ಮವೆನಿಪ್ಪನಾಮಯ ಮಹಾತಲ್ಲಿಂಗಮಂ ಕಂಡಸಿ। ವಾರ್ಣಾನಂದರ ಸಾನುಭಾವಿಯೆ ನಿಜಂ ಶ್ರೀ ಸಿದ್ಧಲಿಂಗೇಶ್ವರಾ ॥೩೨॥

ಗದ್ಯ:—ಇತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವತ್ತೆರಡನೆಯದಾದ ಪ್ರಾಣಲಿಂಗಿಸ್ಥಲದ ವಿಚಾರವು ಅನುಭವಿನಿಂ ಮುಗಿಯಲಾಯಿತು.

---

೧೮ ಪ್ರಾಣಲಿಂಗಾರ್ಚನೆ ಸ್ಥಲ.

ಸೂತ್ರ:— ಇಂತು ಪ್ರಾಣಲಿಂಗ ಸಂಬಂಧದಲಿ ಅವಿರಳವಾದ ಲಿಂಗಪ್ರಾಣಿಯ ಪ್ರಾಣಲಿಂಗದ ಪೂಜೆ ಎಂತಿರ್ದುದೆಂದಡೆ ಮುಂದೆ ಪ್ರಾಣಲಿಂಗಾರ್ಚನೆಯ ಸ್ಥಲವಾದುದು,

ವಚನ:—ಆಯತವಾಯಿತ್ತು ಅನುಭಾವ, ಸ್ವಾಯತವಾಯಿತ್ತು ಶಿವಜ್ಞಾನ, ಸಮಾಧಾನವಾಯಿತ್ತು ಸದಾಚಾರ, ಇಂತು ತ್ರಿವಿಧವನೇಕಾರ್ಥವ

ಮಾಡಿ ಅರಿವಿನ ಹೃದಯಃ ಕಂದೆರದು, ಅನಂತಲೋಕಃಲೋಕದ ಶ್ರೀಮದ ಸಂಖ್ಯಾತ ಮಹಾ ಪ್ರಮಥ ಗಣಂಗಳೆಲ್ಲರೂ ಲಿಂಗಭಾವದಲ್ಲಿ ಭರಿತರಾಗಿ, ಗಗನ ಸಿದ್ಧಾಂತದಲ್ಲಿ ಯುಪದೇಶಕ್ಕೆ ಬಂದು, ಸದ್ಭಕ್ತಿರಾಜ್ಯವನೆ ಪೊಕ್ಕು ಶ್ರೀಮನ್ನಿಜಲಿಂಗ ಸುಕ್ಷೇತ್ರವನೆ ಕಂಡು, ಅಮೃತಸರೋವರದೊಳಗಣ ವಿವೇಕ ವೃಕ್ಷಪಲ್ಲವಿಸಲು ವಿರಕ್ತಿ ಎಂಬ ಪುಷ್ಪ ವಿಕಸಿತವಾಗಲು, ಪರಮಾನಂದ ಮಂಟಪನೊಳಗೆ ಪರಿಣಾಮ ಪಶ್ಚಿಮಜ್ಯೋತಿಯ ಬೆಳಗಿನಲ್ಲಿ ಪದ್ಮಸಿಂಹಾಸನವನಿಕ್ಕಿ ಪ್ರಾಣಲಿಂಗವು ಮೂರ್ತಿಗೊಂಡಿರಲು, ದಕ್ಷಿಣಾಬ್ಧಿಯ ದಾಂಟಿ ಯುತ್ತರಾಬ್ಧಿಯಲ್ಲಿ ನಿಂದು ಶ್ರೀಮದಖಂಡಪೂಜೆಯ ಮಾಡುವವರಿಗೆ ನಮೋ ನಮೋ ಎಂಬೆ ಗುಹೇಶ್ವರಾ.

ಪದ ರಾಗ ಲಲಿತ

ಕಂಗಳ ನೋಟವು ಕಾಯಕರದಲಿ। ಲಿಂಗದ ಕೂಟವು ಶಿವ ಶಿವ ಚಲುವನು। ಮಂಗಳ ಮಯ ಮೂರುತಿ ಮಲಯಳ ದೇವಂಗೆ ತ್ತುವೆನಾರುತಿಯಾ ॥ಪಲ್ಲವ॥

ಜಗವಂದ್ಯಗೆ ಬೇಟವ ಮಾಡಿದೆನಾ। ಹಗೆಯಾದೆನು ಸಂಸಾರಕ್ಕೆಲ್ಲ। ನಗುವಂತ್ಹೆವರೆ ಲಜ್ಜೆ ನಾಚಿಕೆ ತೂರೆದವಳೆಂದೆನ್ನ॥ ಗಗನ ಗಿರಿಯ ಮೇಲಿದ್ದಿಹೆ ನೆಂದಡೆ। ಲಗುನಿಯಾಗಿ ನಾನರಸುತ ಬಂದೆನು। ಅಘಹರ ಕರುಣಿಸು ಆ ನಿಮಗೊಲಿದೆನು ಮಿಗೆ ಒಲಿದಾರತಿಯ ॥೧॥

ಭಕುತಿ ರತಿಯ ಸಂಭಾಷಣೆಯಿಂದದವೆ। ಮುಕುತಿಯ ಮರೆದೆನು ಕಾಯದ ಭೇದವ। ಪ್ರಕೃತಿಯ ತೊರೆದೆನು ಸುತ್ತಿದ ಮಾಯಾ ಪಾಶವ ಹರಿದೆನಲಾ ॥ ಸುಕೃತಿಯಾಯ್ತು ನಿಮ್ಮಯ ನೆನಹಿಂದವೆ। ಮುಕುತಿಯ ಫಲಗಳ ದಾಂಟಿಯೆ, ಬಂದೆನು। ಶಕುತಿಯಾದೆನು ಪ್ರಾಣಲಿಂಗಕ್ಕೆ ಮಿಗೆ ಒಲಿದಾರತಿಯಾ ॥೨॥

ಪೆಚ್ಚಿ ಒಲಿದು ಮನ ವಗಲದ ಭಾವವು। ಬಿಚ್ಚದೆ ಬೇರೊಂದೆನಿಸದೆ ಪ್ರಾಣವು। ಬೆಚ್ಚಂತಿರ್ದುದು ಅಚ್ಚೊತ್ತಿದ ಮಹಾ ಘನ ತಾನೆ ನೆಲೆಗೊಂಡು ॥ ಪಶ್ಚಿಮ ಮುಖದಲಿ ಬೆಳಗು ಪ್ರಕಾಶವು। ನಿಚ್ಚ ನಿರಂಜನ ಚನ್ನಮಲ್ಲಿಕಾರ್ಜುನಂ। ಗೆಚ್ಚರದೆತ್ತುವೆ ನಾರತಿಯಂ ಮನ ಒಲಿದಾರತಿಯಾ ॥೩॥

ಮತ್ತೇಭ—ಶಮೆಯೇ ಮಜ್ಜನ ವಾದಿಯಾ ದಮೆಯೆ ಗಂಧಂ ನಿರ್ಮಮತ್ವಾಕ್ಷತಂ ॥ ಸಮತಾ ತಾಂ ಕುಸುಮಂ ವಲಿಂದಹಿತ ಮರ್ಥಂ ಧೂಪ

ಮಾಡೀಪಮೇ ॥ ವಿಮಲಜ್ಞಾನ ಮಹಾತ್ಮನೇ ನೆರೆ ಮಹಾ ನೈವೇದ್ಯ ಮಕ್ಕುಂ ಗುಣ । ಕ್ರಮಮೇ ವೀಟಿಕೆಯಾವ ಪೂಜೆ ಸಹಜಂ ಶ್ರೀಸಿದ್ಧ ಲಿಂಗೇಶ್ವರಾ.

ಗದ್ಯ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವತ್ತ ಮೂರನೆಯದಾದ ಪ್ರಾಣಲಿಂಗಾರ್ಚನೆಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೧೯ ಶಿವಯೋಗ ಸಮಾಧಿ ಸ್ಥಲ.

ಸೂತ್ರ—ಇಂತು ಪ್ರಾಣಲಿಂಗಕ್ಕೆ ಪ್ರಾಣ ಪೂಜೆಯಂ ಮಾಡಿ, ಸಕಲ ಕರಣಂಗಳನು ಲಿಂಗದಲ್ಲಿ ಲಯವ ಮಾಡಿದ ಪ್ರಾಣಲಿಂಗಿಯ ಲಿಂಗಸಂಯೋಗ ಸಮಾಧಿಯ ಭೇದವೆಂತಿರ್ಪುದೆಂದಡೆ ಮುಂದೆ ಶಿವ ಯೋಗ ಸಮಾಧಿ ಸ್ಥಲವಾದುದು.

ವಚನ। ಸ್ವಸ್ಥಾಸನ ಸುಸ್ಥಿರ ಮಂಟಪದೊಳಗೆ ನಿತ್ಯ ನಿರಂಜನ ಪ್ರಭೆಯ ಬೆಳಗು ಶಿವಯೋಗವನುಭಾವಿ ಏಕಾರ್ಥವಾಗಿ ಗುಹೇಶ್ವರಾ ನಿಮ್ಮ ಶರಣನನುಪಮ ಸುಖಿಯಾಗಿರ್ದನು.

ಪದ ರಾಗ ದೇಶಾಕ್ಷಿ

ಶರಣನು ಸ್ವತಂತ್ರನು ಪರತತ್ವವು ತಾನಾಗಿ । ಅನಂಗ ವಿರಹಿತ ಶಿವಯೋಗಿ ಆನಂದ ಲೀಲೆಯೊಳಾಡಿದನೂ ॥ಪ॥

ಶುಕ್ಲ ಶೋಣಿತ ಮೂತ್ರದಮೇಧ್ಯದ ಶ್ಲೇಷ್ಮದ ತನುವಿಕಾರವ ನತಿಗಳೆದು । ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳೆಂಬ ಷಡುವರ್ಗವ ಮೆಟ್ಟಿ ಯಾಡಿದನು ॥೧॥

ಇಡೆಪಿಂಗಳ ಸುಷುಮ್ನನಾಳದೊಳಗಣ ರೇಚಕ ಪೂರಕ ಕುಂಭಕ ಮುಟ್ಟದೆ । ಪ್ರಾಣೋಪಾನವ್ಯಾನೋದಾನ ಸಮಾನ ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ಮುಟ್ಟದೆ ಮಾಡಿದನು ॥೨॥

ಪಂಚವಿಂಶತಿ ತತ್ವಂಗಳ ಮೀರಿದ ನಿರಂತರದ ಸ್ವತಂತ್ರ ಷೋಡಶದಳದ । ಪೊರ ಬೆಳಗಿನಲ್ಲಿ ತಾನು ತಾನೆ ಕೂಡಿ ಸೋಮ ಸೂರ್ಯಾಗ್ನಿ ಪ್ರಕಾಶದೊಳಾಡಿದನು ॥೩॥

ಕುಂಡಲಿಯ ದಂಡನಾಳದೊಳಗಣ ಹೃದಯ ಕಮಲದಲ್ಲಿ ಸ್ವರ ಮುಟ್ಟಿದೆ। ಭ್ರೂಮಧ್ಯ ಮೇರು ಮಂದಿರದ ಪುರದ ಬೆಳಗಿನಲ್ಲಿ ಸಹಸ್ರ ದಳ ಮೆಟ್ಟಿಯಾಡಿದನು ॥೪॥

ಬಯಲ ಬೆರಿಸಿದ ಮಾರುತನಂತೆ ಉರಿಉಂಡ ಕರ್ಪುರದ ತೆರ ದಂತೆ॥ ಸರ ಉಂಡ ಸಬುದ ಸುಜ್ಞಾನಿ ಕೂಡಲಚನ್ನಸಂಗನಲ್ಲದಿಲ್ಲ ಮಾಣು ॥೫॥

ಶಾರ್ದೂಲಃ—ಕೈಲಾಸಾಕ್ಷಯದಿಂವೆ ರಂಜಿಪ ಮಹಾ ತನ್ಬ್ರಹ್ಮರಂಧ್ರಾಗ್ರಮೇ। ಮೂಲಸ್ಥಾನಮದಾಗಿ ತೋರ್ಪ ಘನ ತೇಜೋಲಿಂಗ ದೋಳ್ಪೊಂದಿಚಿ॥ ತ್ತಾ ಲಂಘ್ಯತ್ವದೆತತ್ತ್ರುತೀಯ ವರ ಚಿತ್ತಾನಂದತತ್ವಾಖ್ಯದಿಂ। ಮೇಲಿಂವೇನವು ತಾನೆ ಶಾಶ್ವತ ಸುಖಂ ಶ್ರೀಸಿದ್ಧಲಿಂಗೇಶ್ವರಾ.

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವತ್ತು ನಾಲ್ಕನೆಯದಾದ ಶಿವಯೋಗ ಸಮಾಧಿಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೩೦ ನಿಜಲಿಂಗ ಸ್ಥಲ.

ಸೂತ್ರಃ—ಇಂತು ಶಿವಯೋಗದಲ್ಲಿ ಸಮಾಧಿಯನೈದಿದ ಪ್ರಾಣ ಲಿಂಗಿಯ ಮನಸ್ಥಲದಲ್ಲಿ ಮನೋ ಮೂರ್ತಿಯಾಗಿ ನಿಂದ ಲಿಂಗದ ಸಹಜ ನಿಲವೆಂತಿರ್ದು ದೆಂದಡೆ ಮುಂದೆ ಲಿಂಗ ನಿಜಸ್ಥಲವಾದುದು.

ವಚನಃ—ಮೂರರಲ್ಲಿ ಮುಟ್ಟಲಿಲ್ಲ. ಆರರಲ್ಲಿ ತೋರಲಿಲ್ಲ. ಎಂಟರಲ್ಲಿ ಕಂಡುದಿಲ್ಲ ಒಂದರಲ್ಲಿ ನಿಂದುದಿಲ್ಲ ಇದು ಏನೆಂದೆಂಬೆ, ಎಂತೆಂದೆಂಬೆ? ಕಾಯದಲ್ಲಿ ಅಳಿದುದಿಲ್ಲ. ಜೀವದಲ್ಲಿ ಉಳಿಮದಿಲ್ಲ. ಗುಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲ.

ಪದ.

ಸಾಧ್ಯಾಸಾಧ್ಯಗಳಿಗತೀತವಾದ ಜ್ಯೋತಿ ನಿರವಯಾ॥ ಪಲ್ಲವ॥

ಏನನೊಂದ ಹವಣಿಸುವರೆ ತಾನೆ ಸಹಜ ಘನತರ। ಭಾನುಕೋಟಿ ಕಳೆಗಳೆಂಬವೇನು ನಿಲುಕದನುಪಮಾ ॥೧॥

ಸಚರವಚರ ಶೂನ್ಯ ನಿಚಯವಿಲ್ಲದಂದಿನ। ಅಚಲವಪ್ಪ ಮಹಾ ಘನದ ರುಚಿರ ದೂರ್ಧ್ವ ನಿರಾಳ ॥೨॥

ಜಪಸಮಾಧಿ ಹೋಮ ನೇಮ ದುಪಮೆಗಳಿಗತೀತನು। ನಿಷ್ಪತಿ ನಿರಂಜನ ಸೂಕ್ಷ್ಮದ ಪರಮೀತನಕಲ್ಪಿತಾ ॥೩॥

ಅಲ್ಲಿಗಲ್ಲಿಗೆ ಕಾಯಜೀವ ಎಲ್ಲರಳಿವಿ ನುಳುವಿನ। ಸೊಲ್ಲಿನೊಳಗು ಹೊರಗಣಾತ್ಮದಂಗ ಸಂಗರಹಿತಾ ॥೪॥

ಅಣಿಮಾದಿ ಗುಣರಹಿತನಸುಸಮಿತನಗೋಚರ। ಘನಕೆ ಘನಾ ನಂದ ಪ್ರಭೆಯ ಚಿನುಮಯಾದಿ ನಿರಾಳ ॥೫॥

ಹಲವು ಶಬ್ದಕೆಂಬುಗೊಡದ ಸುಳುಹು ಸೂಕ್ಷ್ಮದೊಳಗಣ ಬೆಳ ಗಿನಿಂದ ನಿಜದ ನಿಲವ ಸ್ಥಲವ ತೋರ ಬಪ್ಪುದೇ ॥೬॥

ಬೆಳಗಿನೊಳಗೆ ತೊಳಗಿ ಬೆಳಗಿ ಹೊಳೆವ ಜ್ಯೋತಿಕಾಂತಿಯ। ಬೆಳಗು ಗುಹೇಶ್ವರನ ಘನದ ತಿಳಿವುಲಿಂಗ ನಿಜ ಪದ ॥೭॥

ಮತ್ತೇಭಃ—ಪರಮ ಜ್ಞಾನವಿಶಿಷ್ಟ ತೇಜವ ಮಿತಾ ಖಂಡಾ ತ್ರಕಂ ಮತ್ತಮಾ। ಪರಶಕ್ತ್ಯಾ ಸಮುದಂ ಷಡಧ್ವಮಯ ವಿಶ್ವಾಧಾರ ಭೂತಂಪರಾ॥ ತ್ಪರಮಾತ್ಮ ಸ್ಥಮನಾಮಯಂ ಸಕಲಭ್ರಾಂತಂ ಸರ್ವಗಂ ಪಂಚಮೋ। ತ್ಕರ ಸಂಜ್ಞಾಂಕಿತಮಾದ ಲಿಂಗಮದುನೀಂ ಶ್ರೀ ಸಿದ್ಧ ಲಿಂಗೇಶ್ವರಾ ॥೩೫॥

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವ ತ್ತೈದನೆಯದಾದ ಲಿಂಗ ನಿಜಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

---

೩೬ ಅಂಗಲಿಂಗಸ್ಥಲ

ಸೂತ್ರಃ—ಇಂತು ಲಿಂಗನಿಜ ಮನೋಮೂರ್ತಿಯಾದ ಪ್ರಾಣ ಲಿಂಗಿಯ ಸರ್ವಾಂಗವು ಲಿಂಗವಾದ ಭೇದವೆಂತಿರ್ದುದೆಂದಡೆ ಮುಂದೆ ಅಂಗಲಿಂಗ ಸ್ಥಲವಾದುದು.

ವಚನಃ—ಅಂಗದ ಕಳೆಯಲ್ಲಿಯೊಂದು ಲಿಂಗವ ಕಂಡೆ. ಲಿಂಗದ ಕಳೆಯಲ್ಲಿ ಒಂದು ಅಂಗವ ಕಂಡೆ. ಅಂಗ ಲಿಂಗವೆಂಬ ಸಂದಳಿಯದೆ ಅರಸಿಕಂಡಿಹೆ. ನೋಡಿರೆ ಇಲ್ಲಿ ಐದಾನೆ. ನೋಡಿರೇ ಶಿವದೇವನು ಇಲ್ಲಿ ಐದಾನೆ. ನೋಡಿರೇ ಮಹಾದೇವನ. ಬಲ್ಲರೆ ಇರಿಸಿಕೊಳ್ಳಿರಿ. ಕಾಯವಳಿ

ಯದ ಮುನ್ನ ನೋಡಬಲ್ಲಡೆ ಇಲ್ಲಿ ಗುಹೇಶ್ವರನೆಂಬ ಲಿಂಗಕ್ಕೆ ಬೇರೊಂದೆಡೆಯುಂಟೆ ಹೇಳಿರೇ ||೫||

ಪದ—ರಾಗ—ಭೂಪಾಳಿ

ಅಂಗದಲಿ ಲಿಂಗ ಸನ್ನಿಹಿತವಾಗಿಹನುಸ। ರ್ವಾಂಗ ಮುಖವೆಲ್ಲ ಬರಿ ಲಿಂಗಮಯವು ॥ಪ॥

ಮುಟ್ಟನನ್ಯವನಂಗ ಸೋಂಕು ಸಂಬಂಧಗಳ। ಮೆಟ್ಟನಪಶಬ್ದ ಸಂಭ್ರಮಕೆರಗನೂ ॥ ಅಷ್ಟತನು ವ್ಯವಹಾರದಂಗ ಲಿಂಗದೊಳಗಳ। ವಟ್ಟುದಾಗಷ್ಟಾವಧಾನಿ ಶರಣಾ ॥೧॥

ಶ್ರೋತ್ರ ಮುಖ ನೇತ್ರ ಮುಖ ಘ್ರಾಣ ಮುಖ ಜಿಹ್ವೆ ಮುಖ। ಗಾತ್ರ ಮುಖ ಸ್ಪರ್ಶನದ ಮುಖ ಮುಖದಲಿ॥ ಓತುಗ್ರಹಿಸುವವೆಲ್ಲ ಲಿಂಗ ಮುಂತಲ್ಲದ। ನ್ಯತ್ರೀನುವರಿಯ ಸರ್ವಾಂಗ ಲಿಂಗಿ ॥೨॥

ಜಾತಿಸೂತಕ ಪ್ರೇತ ಸೂತಕಾದಿಗಳೆಂಬ। ಭ್ರಾಂತರೊಳು ಬೆರಸದಂಗದಲಿಂಗದಾ । ಆ ತನುವಿನೊಳು ತನುವನಂಗೀಕರಿಸಿ। ಇತರ ವಾರ್ತೆಗಳ ಭಾವಿಸನು ಲಿಂಗ ಸಂಗಿ ||೩||

ಲಿಂಗ ಸಹಿತಖಿಳಸುಖ ಲಿಂಗ ಸಹಿತಖಿಳಕ್ರಿ । ಲಿಂಗ ವಿರಹಿತ ಮಾಡನೇನೊಂದುವಾ॥ ಲಿಂಗದೊಳು ದೇಹವಾಲಿಂಗಿಸಿದ ಬೆಡಂಗದು। ಅಂಗ ಲಿಂಗಾನುಭಾವಲಿಂಗ ಲೀಲೇ ॥೪॥

ಲಿಂಗದೊಳಗಂಗ ಸುಖ ಅಂಗದೊಳು ಲಿಂಗ ಸುಖ। ಲಿಂಗಾಂಗವೆರಡರೊಳು ತೆರಹಿಲ್ಲದೆ॥ ಸಂಗವಾಗಿಹ ನಿಜಬೆಡಂಗು ಕೂಡಲ ಚೆನ್ನ ಸಂಗನ ಬೆರಸಿದೈಕ್ಯ ಬಲ್ಲಾ ॥೫॥

ಶಾರ್ದೂಲಃ—ಆವಂ ನಿನ್ನನಸತ್ತು ಮೆಂದರಿಯಲಾತಂ ತತ್ಸ್ವರೂಪಂ ಬಳಿ ॥ ಕ್ಯಾವಂ ನಿನ್ನನೆ ಸತ್ತೆನುತ್ತರಿಯಲಾತಂ ಸತ್ಸ್ವರೂಪಂ ನಿಜಂ॥ ಭಾವಂ ಭಾವಿಸದಂತಿರಿರ್ಪನದರಿಂದಾತ್ಮಾಂಗ ದೊಳ್ಸಂತತಂ॥ ತೀವಿರ್ದೊಪ್ಪುವ. ಲಿಂಗವೆಂಬುದದುನೀಂ ಶ್ರೀ ಸಿದ್ಧಲಿಂಗೇಶ್ವರಾ ॥೩೬॥

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವತ್ತಾರನೆಯದಾದ ಅಂಗಲಿಂಗ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀಮದೇಕೋತ್ತರ ಶತಸ್ಥಲಂಗಳಲ್ಲಿ ಪಿಂಡಾದಿ ಹದಿನೈದನೆಯ ಭಕ್ತಿ ಸ್ಥಲಕ್ಕೆ ಮಹೇಶಾದಿಯೊಂಬತ್ತು ಮಹೇಶಸ್ಥಲಕ್ಕೆ ಪ್ರಸಾದಿ ಯಾದೇಳು ಪ್ರಸಾದಿ ಸ್ಥಲಕ್ಕೆ ಪ್ರಾಣಲಿಂಗಿಸ್ಥಲಾದಿ ಅಂಗಲಿಂಗ ಸ್ಥಲಾಂತ್ಯ ಮಾದೈದು ಕೂಡಿದ ನಾಲ್ಕನೆಯದಾದ ಪ್ರಾಣಲಿಂಗಿ ಸ್ಥಲಕ್ಕೆ ಮುಗಿದುದು.

---

೨೨ ಶರಣಸ್ಥಲ

ಸೂತ್ರ:— ಇಂತು ಪ್ರಾಣಲಿಂಗಿ ಸ್ಥಲಾದಿಯಾಗಿ ಅಂಗಲಿಂಗ ಸ್ಥಲಾಂತ್ಯವಾದೈದು ಸ್ಥಲಂಗಳಿಂ ಕೂಡಿದ ಪ್ರಾಣಲಿಂಗಿ ಸ್ಥಲದಲ್ಲಿ ಆಚರಿಸಿ ಸರ್ವಾಂಗವು ಲಿಂಗ ಲೀಯ್ಯವಾಗಿ ಬೆರಿಸಿದ ಮಹಂತನು ಮಹಾಜ್ಞಾನ ಮುಖದಿಂದಲರಿದಾಚರಿಸಿ ಬೆರಿಸುವ ಭೇದ ವೆಂತಿರ್ದುದೆಂದಡೆ ಮುಂದೆ ಶರಣ ಸ್ಥಲವಾದುದು.

ವಚನ:—ತ್ರಿವಿಧಕ್ಕೆ ತಲೆಯಾಗಿ, ತ್ರಿವಿಧದ ಜನಿತವಳಿದು, ತ್ರಿವಿಧವ ಕಂಡರಿದು ತ್ರಿವಿಧ ತ್ರಿವಿಧವನುಗ್ರಹಿಸಿ, ತ್ರಿವಿಧ ಪಥವಮೀರಿ, ತ್ರಿವಿಧ ನಿರ್ಣಯದಲ್ಲಿ, ತ್ರಿವಿಧ ನಿಷ್ಪತ್ತಿಯಾಗಿಪ್ಪ ಕೂಡಲ ಚನ್ನಸಂಗಾ ನಿಮ್ಮ ಶರಣ ॥೧॥

ಪದ—ರಾಗ—ದೇಶಾಕ್ಷಿ

ಪರಮಾನಂದ ಲೀಲೆಯಲಿ ಪರಮಗುರು ಪದವನರಿದನು। ಪರಮ ಸುಖವೊಳಗೋಲಾಡುವ ಪರಂಜ್ಯೋತಿ ಪರಾಪರನೂ ॥ಪ॥

ನಿತ್ಯ ನಿರಂಜನ ತಾನೆಂದರಿದನು ಉತ್ತಮ ಸುಜ್ಞಾನದ ಜ್ಯೋತಿಯ ಬೆಳಗಿನ। ಚಿತ್ತದ ಪ್ರಾಣ ಲಿಂಗದ ಘನದಲಿ ಸತ್ಯಸ್ವರೂಪನಾದಾ॥ ಸುತ್ತಿದ ಅಷ್ಟಮದಂಗಳನೆಲ್ಲವ। ತತ್ತರ ತರಿದನು ತನು ಗುಣಂಗಳ। ತ್ರತ್ತ ಸ್ಥಾನಂಗಳಲ್ಲಿ ಸುಸ್ಥಿರನಾದನು ಆತುಮ ಧ್ಯಾನದಿಂದ ಶರಣಾ ॥೧॥

ಒಳಗೆ ಮಾಣಿಕ್ಯದ ಮಣಿ ಮಂಟಪವ ನೋಡಿ। ಬೆಳಗಿನ ಕದಳಿಯ ಬನವೊಳಗಾಡುವ । ದಳಗಳನೆಲ್ಲವ ನಿಲಿಸಿ ಸ್ಥೂಲಕ್ಕೆ ಸ್ಥೂಲ ಪ್ರಳಯವಿರಹಿತನಾದಾ॥ ಮೇಳವಿಸಿದ ತನ್ನ ಸಕಲ ಸದ್ಗುಣ ಗಣಂ। ಗಳ ಎಣಿಕೆಯ ಗುಣಕ್ಕೆ ಗಣಿತ ಸುಳುಹಿನ ಕಮಳದ ಪರಿಮಳ ನಿಳಯನುಸುಯ್ದಾನಿಯಾದ ಶರಣಾ ॥೨॥

LIBRARY
Jangamawadi Math, Varanasi
Acc. No. 335

ಒಪ್ಪುವ ಸಮಸ್ತ ಲೋಕ ವಿಖ್ಯಾತನು । ಅಪ್ರತಿಮ ಮಹಿಮನು ಪ್ರಣವಕ್ಕೆ ರೂಪನು । ಒಪ್ಪುವ ಪಾಪಂಗಳ ವಿವರಿಸಿ ಕಳೆದನು ಬೀಜ ದೊಳಡಗಿದ ವೃಕ್ಷಂಬೊಲ್ ॥ ಅಪಾರ ವ್ಯಾಪಾರ ಪರಮ ನಿರಾಕಾರ। ಉಪಮಾತೀತನು ವಿಪರೀತ ಚರಿತನು । ಗುಪಿತ ಪ್ರಕಾಶನು ರೂಪಂ ನಿರೂಪನು ಕಾರಣ ಕರ್ತನೈ ಶರಣಾ ॥೩॥

ತನುಗಮನಾಗಮನ ದಿಂದನು ಭಾವಭರಿತನು । ಅನಾಥನಾಥನು ಅಕಳಂಕ ಚರಿತನು । ಅನಿರ್ಣಾಮ ನಿಸ್ಸೀಮ ಜ್ಞಾನ ಸುಜ್ಞಾನ ಭುವ ನಾದಿ ವಂದಿತನು । ಉನ್ನತ ಪರಶಿವಯೋಗ ಭೋಗದಿಂದ। ತನ್ನ ತಾನೆ ಕಂಡು ಅಸಮಾಕ್ಷನಾದನು । ಅನುಪಮ ಬೆಳಗಿನ ಆದಿಯನಾದನು ಮನಕ್ಕೆ ಮನೋಹರನಾದ ಶರಣಾ ॥೪॥

ಅವ್ಯೃತ ಗಿರಿಯಮೇಲೆ ಅಮರ ಸಮೂಹ। ಸೋಮನಾಗಮನದ ಸಕಲ ಸನ್ನಿಹಿತನು । ಸಮ್ಯಜ್ಞಾನದಲ್ಲಿ ಸ್ವತಂತ್ರ ಮಹಿಮನು ಸಮಸ್ತ ವಿಸ್ತಾರದಲ್ಲಿ ॥ ನಿರ್ಮಳ ನಿರುಪಮ ಪ್ರಮಥಗಣ ತಿಂಥಿಣಿಯ। ವಿಮಳ ಹೃದಯ ಕಮಳ ವಿಳಾಸ ಪುರನಿಳಯ। ಬೊಮ್ಮಾಂಡ ಕೋಟಿಯ ಮೀರಿನಿಂದನು ಭಾವ ಗುಹೇಶ್ವರನಂತೆ ತಾನಾದ ಶರಣಾ ॥೫॥

ಶಾರ್ದೂಲ:— ಕಲ್ಪಾಂತಾ ನಿಲನೈದೆ ಬೀಸುಗೆ ಮಹನ್ನಾಥಂ ಮಯೂಖಂಗಳಂ, ಬಲ್ಪಿಂ ಸೂಸುಗೆ ಸಪ್ತಸಾಗರವನಿಂತೊಂದಾಗುತಾಘಾ ತ್ರತಿರಾ॥ ದಲ್ಪಾತಾಳದೊಳಾಳಿಯೂ ಮನವಮಂ।ತಲ್ಲಿಂಗ ವೇಯೂದವಂ ಗಲ್ಪಿಂಕಾಣಿಸದಾವ್ಪದೊಂದು ಖತಿಯಂ ಶ್ರೀ ಸಿದ್ಧಲಿಂಗೇಶ್ವರಾ ॥೩೭॥

ಗದ್ಯ:— ಇಂತಿ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವ ತ್ತೇಳನೆಯದಾದ ಶರಣ ಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

ತಾಮಸ ನಿರಸನ ಸ್ಥಲ

ಸೂತ್ರ:— ಇಂತು ಶರಣ ಸ್ಥಲದಲ್ಲಿ ಮಹಾಜ್ಞಾನ ವಿವೇ ಕದಿಂ ತನ್ನ ತಾನರಿದ ಶರಣನು ತನ್ನ ತಾನರಿದೆನೆಂಬ ಅರಿವಿನ

ವುಂದೆ ಇದಿರಿಟ್ಟು ತೋರುವ ತಾಮಸವಂ ನಿರಸನವಂ ಮಾಡಿ ನಿರೂಪಿಸುತ್ತಿರಲು ಮುಂದೆ ತಾಮಸ ನಿರಸನ ಸ್ಥಲವಾದುದು.

ವಚನ:--ಒಡನೆ ಹುಟ್ಟಿದುದಲ್ಲ. ಒಡನೆ ಬೆಳೆದುದಲ್ಲ. ಎಡೆಯಲಾದೊಂದುಡಿಗೆಯನುಟ್ಟು ಸಡಲಿದರೆ ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿದಿಟವಾಯಿತ್ತು ಲೌಕಿಕವಲ್ಲಿ. ಹಡದ ಗುರು ಕರುಣದೊಡನೆ ಹುಟ್ಟಿದನೇಮ ಬಿಡದಿರೆಲವೋ. ಬಿಟ್ಟರೇ ಕರಕಷ್ಟ ಕೂಡಲ ಸಂಗಮ ದೇವನಡಸಿ ಕೆಡಹುವ ನಾಯಕ ನರಕದಲ್ಲಿ ||೨||

ಪದ — ರಾಗ — ಭೂಪಾಳಿ

ಗುರುವಿನಿಂದ ಉದಯಿಸಿ ಗುರುವಿನ ನಿಜವನರಿಯದ। ನರನಿಗೆ ಶಿವ ಪಥವೆಲ್ಲಿಯದೊ ॥ಪ॥

ಕೋಹನೆಂದು ಬಂದೆರಗಿದ ಶಿಷ್ಯಂಗೆ। ಸೋಹ ಮೆಂಬ ನಿಜವನರುಹಿದ ಗುರು । ಸಹಜಾನುಗ್ರಹ ಸಂಬಂಧವ ಮಾಳ್ಪುದೀ ಹದನರಿಯದನು ಗ್ರಹ ಸಲ್ಲಾ ॥೧॥

ಗುರುವಿನಾದಿಯ ಶಿಷ್ಯನರಿಯನಾ। ಗುರು ಶಿಷ್ಯನ ಮೂಲವ ನರಿಯಾ। ಗುರುಶಿಷ್ಯರಿಬ್ಬರು ಕೂಡಿ ಲಿಂಗವ ನರಿಯದಿಬ್ಬರಂ ಶಿವ ನೊಲ್ಲಾ ॥೨॥

ಹಿಂದ ನಳಿದು ಮುಂದನು ತೊರೆಯದ ಗುರುವಿ। ನಿಂಮುಪದೇಶವ ಪಡೆದುದಾದರೇ। ಸಂದು ಸಂಶಯ ವೆಂತಳಿವುದುಭಯ ಅಂಧಕರುಕೈಕೈವಿಡಿದಂತೆ ॥೩॥

ಪರುಷ ಮುಟ್ಟಲು ಲೋಹ ಹೊನ್ನಾಗಿ ಫಲವೇನು। ಪರುಷತಾನಾಗದನ್ನಕ್ಕರ ಗುರು। ಕರುಣವ ಪಡೆದು ಗುರುವಿನಂತಾಗದಿರೆ ಪರಿಭವ ತಪ್ಪದು ನೋಡಾ ॥೪॥

ಗುರುಲಿಂಗ ಜಂಗಮಲಿಂಗವ ಕಂಡೆರ ಡೊಂದೆಂದರಿಯದೆ ಬರುಮುಖನಾಗಿ। ನಿರಭಿನ್ನವ ಮಾಡಲು ಗುರುಪುರದ ಪ್ರಿಯ್ಯ ಮಲ್ಲಯ್ಯ ನೊಲ್ಲ ||೫||

ವೃತ್ತೀ ಭ:-- ತಮಸಾಕಲಂತನೆನಿಪ್ಪ ತಾಮಸನವಂತನ್ನೋಳ್ಸದಾ ನಿಶ್ಚಲ । ತ್ವಮುನೆಯ್ದಿರ್ದ ಶಿವ ಸ್ವರೂಪ ಮನಿತಂ ಕಾಣಂದಲಕ್ಷತ್ವದಿಂ || ಕ್ರಮುಗೆಟ್ಟಿರ್ದ ವನಲ್ಲಿಗೆಯ್ದಿ ಯುಪದೇಶಂಗೊಂಡೊಡಂ

ತಾ ಗುರು। ಭ್ರಮಿತಂ ಜನ್ಮವನೆಂತು ಸಂಹರಿಪನೋ ಶ್ರೀ ಸಿದ್ಧಲಿಂಗೇಶ್ವರಾ ॥ ೩೮ ॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಮೂವತ್ತೆಂಟನೆಯದಾದ ತಾಮಸನಿರಸನ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೩೯ ನಿರ್ದೇಶಸ್ಥಲ

ಸೂತ್ರಃ— ಇಂತು ಶರಣನು ತನಗಿದಿರಿಟ್ಟು ತೋರುವತಾಮಸ ನಿರಸನವಂ ಮಾಡಿ ಸುಜ್ಞಾನ ಭೇದಮಂ ನಿರ್ದೇಶಿಸಿ ನೆಲೆಗೊಳಿಸಿ ನಿರೂಪಿಸುತ್ತಿರಲು ಮುಂದೆ ನಿರ್ದೇಶಸ್ಥಲವಾದುದು.

ವಚನಃ—ತಪವೆಂಬುದು ಬಂಧನ, ನೇಮವೆಂಬುದು ತಗಹು, ಶೀಲವೆಂಬುದು ಸೂತಕ, ಬಾಹ್ಯವೆಂಬುದು ಪ್ರಾಣ ಘಾತಕ, ಇಂತೀ ಚತುರ್ವಿಧದೊಳಗಿಲ್ಲ ಕೂಡಲ ಚನ್ನಸಂಗಯ್ಯನ ಲಿಂಗೈಕ್ಯವು ॥೩॥

ಪದ —ರಾಗ —ಧನ್ಯಾಸಿ

ಆಶೆಯುಟವಮುಟದುದರ ಪೋಷಣಕೆ ಕೆಲ ವಿಕೃತ। ವೇಷಗಳ ಧರಿಸಿ ಬಹಿರಂಗ ಬಳಕೆಯ ಬಯಲ ‖ ಹೊಸಕರನೊಲ್ಲ ವಿಶ್ವಾಸಭಕ್ತಿಯ ಭಾವವೇಷದೊಳುಶಿವನಿರ್ಪನೂ ॥ಪ॥

ಅಶನ ದೊರ ದೊರಕ ದೊಡೆ ಉಪವಾಸಿ ಯಾನೆಂದೆಂದು। ವ್ಯಸನಗೂಡದಡೆನಿಸ್ಸಂಗಿ ತಾನೆಂದೆಂದು। ವಸನಘಟಿಸದೆ ಕೌಪು ಘಟ್ಟಿಯಿಂತೊಂದೊಂದ ಕೊಂದೊಂದ ಘಳಿಸಿ ತನಗೆ॥ ವಶವಲ್ಲ ಪ್ರಾಕೃತದ ಕರ್ಮವೈಶೋಭತೆಯ। ದೆಶಿಯಿಂದ ಲೊಚ್ಚು ಬೋಳಾಗಿ ಜಡೆ ಗಟ್ಟಿದೆಶಿ। ದೆಶಿಗಳಂತಿರುಗಿ ಭಿಕ್ಷಾಂದೇಹಿಯಾದ ಸಂದೇಹಿಗಳ ಶಿವನೊಲ್ಲನೂ ॥೧॥

ಧೃತಿಗೆಟ್ಟು ಕಂಡ ಕಂಡವರ್ಗೆ ವೇಷವದೋರಿ। ಮತಿಗೆಟ್ಟು ಮೂಲಮಂತ್ರವ ನಲ್ಲಿಗಲ್ಲಿಸೇರಿ। ಗತಿಗೆಟ್ಟು ದೊರೆಕಿದಲ್ಲುಂಡು ಲಾಂಛ ನಾಡಂಬರವ ತೋರಿ ಪೆರತಾ॥ ಸ್ತುತಿಗೈದು ದೈನ್ಯದಿಂ ಧಾತುಗೆಟ್ಟೊಡಲಾಸೆ

ಯತಿತೃಷ್ಣೆಯಿಂದ ಕೆಲ ವ್ರತ ನೇಮ ಛಲಗಳಿಂ। ದಿತರಜನ ಮೆಚ್ಚಿಸುವರೊಳಗಿರನು ಶಿವನು ವಿಶ್ವಾಸವೇಷದೊಳಗಿರ್ಪನು ॥೨॥

ಅರಿತವಾಚಾರ ಜ್ಞಾನಾನು ಭಾವ ಪರಿಪೂರ್ಣ। ದೆರಕ ಯೋಗಾಕ್ಷರದ ಮಹಿಮೆ ಸಮತಾ ಭಾವ। ಕರಿಗೊಂಡು ಆಶೆ ಎಂಬ ಜ್ಞಾನವಳಿದು ಮನಬೋಳಾದ ಬೋಳು ಶಿವನಾ॥ ಕುರುಹಿಂತುಟೆಂದು ತೋರಲು ಸುಳಿವಲಾಂಛನದ ॥ ಮರೆಯುಪರತತ್ವ ಬೋಳಲ್ಲದೆ ವೃಥಾಕೇಶ || ದೊರೆದಾಶ ಪಾಶದಿಂ ಹೊತ್ತು ತೊಳಲುವವೇಷಭಾರವೇಭವದ ಭಾರವೂ ॥೩॥

ಮನಸುಚಿತ್ತಿ ನೊಳಡಗಿದರೆ ದಿಗಂಬರ ಭಾವ ॥ ತನುಶೂನ್ಯವಾಗಲದು ಬೋಳು ಆವಂಗದಿಂ ॥ ಧನಬರಲು ಬಿಡಹವೆ ನಿರಾಶ ಕತ್ವ ಜಾಗ್ರಸ್ವಪ್ನಸುಷುಪ್ತಿ ಯೊಳಳುಪಿನಾ ॥ ತನುಸೊಂಕುರುಚಿ ರೂಪಿ ನೆರಕ ವಿಲ್ಲದುದೆತಾಂ ॥ ಘನ ಬ್ರಹ್ಮಚರ್ಯವೀ ಚತುರ್ವಿಧದೊಳುಂ ಲಿಂಗ॥ ದನುವನಂಗೀ ಕರಿಸಿ ಸುಳಿವುದೇ ಶಿವವೇಷ ವಲ್ಲಿದುದೇ ಉದ್ದೇಶವೂ ॥೪॥

ತನು ಪ್ರಾಣ ದವಗುಣಾದಿಗಳಧಿಕ್ಕರಿಸಿತ॥ ನ್ನನುವಿಂಗೆ ತಂದು ವ್ರತ ಬಂಧನಂಗಳಸತ್ಯ ॥ ವನು ತೋರದಖಿಳ ವಿಷಯಂಗಳನು ರೂಹಿಸುವನಲ್ಲಿ ಗಲ್ಲಿದೆ ಹರಿಯದೆ ॥ ಅನುಕರಿಸಿಕೊಂಡು ಪರವೆಂಬಂಗ ಪಾತ್ರಿಯೊಳು। ಮನಲೀಯವಾದ ಅರಿವರತು ಪರಮಜ್ಞಾನ ॥ ದನುರೂಪ ನಾವ ಹುಲಿಗೆರೆಯ ವರದ ಸೋಮೇಶ ನೆಂದೆಂಬೆನು ॥೫॥

ಮತ್ತೇಭ॥:— ಜೆಡೆಯುಂ ಲೋಚು ಬಳಿಕ್ಕೆ ಮುಂಡನಮದುಂ ನಿರ್ವಾಣಮಪ್ಪಂ ಭಸ್ಮದಿಂ || ತೊಡೆದಂಗಂ ತೆರೆದೊರ್ಮೆ ಮುಚ್ಚುವಲಸನ್ನೇತ್ರಂ ವೃಥಾ ಮಂತ್ರ ದಿಂ॥ ಮಿಡುಕುತ್ತಿರ್ಪ ಧರಂಗಳೀ ತೆರದೆ ಲೋಕಂ ಭ್ರಾಂತಿ ಗೊಳ್ವಂತೆವೋಲ್। ನಡೆವರ್ವಾಂಛಿತರಾದ ಯಾಚಕ ನರರ್ ಶ್ರೀ ಸಿದ್ಧಲಿಂಗೇಶ್ವರಾ ॥೩॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದುಸ್ಥಲದೊಳಗೆ ಮೂವತ್ತೊಂಭತ್ತ ನೆಯದಾದ ನಿರ್ದೇಶಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು॥

೨೪ ಶೀಲಸಂಪಾದನಸ್ಥಲ

ಸೂತ್ರಃ— ಇಂತು ಸುಜ್ಞಾನ ಭೇದಮಂ ನಿರ್ದೇಶಿಂ ಮಾಡಿ ನಿಜವನರಿದ ಸರ್ವಾಂಗ ಜ್ಞಾನ ಮೂರ್ತಿ ಯಾದ ಶರಣಂಗೆ ಮಹಾಜ್ಞಾನವೇತಂತ್ರವಲ್ಲದೆ ಉಳಿದ ದುಶ್ಶೀಲವ್ರತಂಗಳು ಇಲ್ಲವೆಂದು ಪ್ರತಿಷ್ಠಿಸಿ ತೋರುತ್ತಿರಲು ಮುಂದೆ ಶೀಲಸಂಪಾದನಸ್ಥಲವಾದುದು.

ವಚನಃ— ಆಶೆ ಎಂಬ ಕೂಸನೆತ್ತಿ ರೋಷವೆಂಬ ತಾಯ ಬಂದು ಮುಂದೆ ನಿಂದಿಪ್ಪಳು ನೋಡಾ. ಇಂತಿವೆರಡಿಲ್ಲದೆ ಕೂಸನೆತ್ತಬಲ್ಲಡೆ ಅವ ಅಚ್ಚ ಶೀಲವಂತನೆಂಬೆ ಕಾಣಾ ಗುಹೇಶ್ವರಾ ॥೪॥

॥ ಪದ ॥ ರಾಗ ದೇಶಿ

ಕಾಮಕ್ರೋಧ ಲೋಭ ಮೋಹ । ತಾಮಸ ಮದವೀಮತ್ಸರಂಗಳ ಸೀಮೆಗೆ ಸಿಲುಕದ ಶೀಲದೊಳಗೆ ಶಿವ ತಾ ಮನೆಗಟ್ಟಿಹನವರತಾ ॥ಪ॥

ಅಂಗಪ್ರಾಣಾಂತರ್ಬಹಿರಂಗವ । ನುಂಗಿ ಪುಗುತ್ತಿಹ ಮಾಯಾ ಸಂಗವ । ಹಿಂಗದೆನಾನಾ ಶೀಲವಹಿಡಿದರೆ ಫಲವೇನದರಿಂದಾ ॥೧॥

ತನುಗುಣಗಳ ನಂಗೀ ಕರಿಸದೆ ಮತ್ತನು ಕರಿಸದೆ ಕರಣಾದಿ ವಿಕಾರದ। ನೆನಹನು ಲಿಂಗದೊಳಗೆ ಮುಟ್ಟಿಸಬಲ್ಲಡೆ ತಾನದು ಶೀಲಾ ॥೨॥

ಸೀಮೆಯ ಸಂಕಲ್ಪದ ಶೀಲದ ಮನತಾಮಸದಲಿ ಮನೆಗಟ್ಟಿಹುದು । ತಾಮಸ ಸೀಮೆಯುನರಿಯದೆ ನಿಜನಿಸ್ಸೀಮೆಯೊಳಿರುತಿರ್ಪುದೆ ಶೀಲಾ ॥೩॥

ಶಿವ ಶರಣರ ನಂಬುದೆಶೀಲವು ಆವ ಗುಣಗಳ ಹೊದ್ದದೊಡದು ಶೀಲಾ । ಶಿವದಾಸೋಹ ದೊಳೆರಡರಿಯದೆ ಇರಬಲ್ಲಡೆ ತಾನದು ಶೀಲಾ ॥೪॥

ಅಂಗದೊಳಗೆ ಗುರು ಲಿಂಗದೊಳಗೆ ಮನ ಜಂಗಮದಲಿ ಧನವರ್ಪಿತ ವಾಗಿಯೇ । ಲಿಂಗಾಂಗಿತವಾಗಿರಬಲ್ಲಡೆ ಸಂಗನೊಳದು ಸ್ವಯ ಶೀಲಾ ॥೫॥

ಶಾರ್ದೂಲಃ— ತತ್ವಾತೀತತವೆನಿಪ್ಪತತ್ಪರ ಶಿವಜ್ಞಾನಂ ನಿಜಕ್ಕೆಲ್ಲಮು। ತ್ತತ್ವಂಪಿಂಗದು ವಿತ್ತ ಪುತ್ರಸತಿ ಯೆಂಬೀ ಮೂರರೊಳ್ಸದ್ವಿರಾ ॥ ಗತ್ವಂ ತೋರದುಲಿಂಗ ಜಂಗಮದೊಳಂ ವಿಶ್ವಾಸಮಿಲ್ಲಜ್ಞ ಭಾ।ವತ್ವಂ

ಪೊರ್ದಿದ ಶೀಲವುಂ ಸುಡು ಬಿಡಾ ಶ್ರೀ ಸಿದ್ಧಲಿಂಗೇಶ್ವರಾ॥೪೦॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತ್ರನೆಯದಾದ ಶೀಲಸಂಪಾದನ ಸ್ಥಲದ ವಿಚಾರವು ಅನುವಿಸಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀಮದೇಕೋತ್ತರ ಶತಸ್ಥಲಂಗಳಲ್ಲಿ ಪಿಂಡಾದಿ ಸಹಜ ಮಾಟಾಂತ್ಯಮಾದ ಹದಿನೈದು ಸ್ಥಲಂಗಳೊಂದನೆಯದಾದ ಭಕ್ತ ಸ್ಥಲಕ್ಕೆ, ಮಹೇಶಾದಿ ಭಕ್ತದೇಹಿಕ ಲಿಂಗಾಂತ್ಯಮಾದೊಂಬತ್ತೆರಡನೆಯದಾದ ಮಹೇಶ ಸ್ಥಲಕ್ಕೆ, ಪ್ರಸಾದಿಯಾದಿ ಪ್ರಸಾದ ಮಹಾತ್ಮ್ಯಯಂತ್ಯ ಮಾದೇಳ್ಮೂರನೆಯದಾದ ಪ್ರಸಾದಿ ಸ್ಥಲಕ್ಕೆ, ಪ್ರಾಣಲಿಂಗಾದಿ ಅಂಗ ಲಿಂಗಾಂತ್ಯ ಮಾದೈದು ನಾಲ್ಕನೆಯದಾದ ಪ್ರಾಣಲಿಂಗಿ ಸ್ಥಲಕ್ಕೆ, ಶರಣಾದಿ ಶೀಲ ಸಂಪಾದನಾಂತ್ಯ ಮಾದನಾಲ್ಕು ಐದನೆಯದಾದ ಶರಣ ಸ್ಥಲಕ್ಕೆ ಮುಗಿದುದು.

---

೬೫ ಐಕ್ಯಸ್ಥಲ

ಸೂತ್ರ:— ಇಂತು ಶರಣಾದಿ ಶೀಲ ಸಂಪಾದನಾಂತ್ಯ ಮಾದ ನಾಲ್ಕು ಸ್ಥಲಂಗಳಲ್ಲಿ ಮಹಾಜ್ಞಾನ ವಿವೇಕದಿಂ ಸರ್ವಸಂಶಯ ನಿವೃತ್ತಿಯಂ ಮಾಡಿ ನಿಜವನರಿದು ಪರಮಾನಂದ ಸುಖಿಯಾದ ಮಹಂತನು ಮುಂದೆ ತನ್ನರಿವರತು ಮರಹು ನಷ್ಟವಾಗಿ. ಮಹಾಲಿಂಗದಲ್ಲೈಕ್ಯವಾದ ಭೇದವೆಂತಿರ್ದುದೆಂದಡೆ ಮುಂದೆ ಐಕ್ಯ ಸ್ಥಲವಾದುದು.

ವಚನ:—ಮನದ ಕಾಲು ಅತ್ತಲು, ತನುವಿನ ಕಾಲು ಇತ್ತಲು, ಅನುಭಾವದ ಅನುವನು ನೆನೆವುತ್ತ ಗಮನಗೆಟ್ಟುದೋ- ಲಿಂಗ ಮುಖದಲಾದ ಸೂಚನೆಯ ಸುಖಕಂಡು ಗಮನಗೆಟ್ಟುದೋ - ಅನುವಾಯಿತ್ತು! ಅನುವಾಯಿತ್ತು!! ಅಲ್ಲಿಯೇ ತಲ್ಲೀಯವಾಯಿತ್ತು ಶ್ರೀ ಗುಹೇಶ್ವರನೆಂಬ ಮಹಲಿಂಗೈಕ್ಯಂಗೆ ॥೧॥

ಪದ

ಅರಿಯಲಿಲ್ಲ ಮರೆಯಲಿಲ್ಲ ನೆರೆತಿಳಿದು ಕುರುಹಳಿದ ಲಿಂಗೈಕ್ಯನು॥ಪ॥

ಯತೋವಾಚೋ ನಿವರ್ತಂತೆ ಅಪ್ರಾಪ್ಯ ಮನಸಾಸಹ .ಎಂಬ

ಸ್ಮೃತಿಯು ಮಂತವನು ಹಿಡಿವನಲ್ಲ । ಅತಿಶಯದ ಘನಲಿಂಗ ಜಟಗ ಟಸಿ ಸ್ವಯುವಾಗಿ ಮೃತ ಗಮನ ರಹಿತ ತಾ ಲಿಂಗೈಕ್ಯನು ।೧॥

ಭರ ಭರಲುದರವಣೆಯು ಹರಿವ ಪ್ರಕೃತಿಯು ಜಲದ ತೆರೆ ತೆರಯು ಲಂಘನೆಯ ಭರಿತನಲ್ಲಿ। ಶರಿರಧಾರನುವಲ್ಲ ಸಬುದ ಮುಗುದನುವಲ್ಲ ಪರಮ ಘನರಹಿತ ತಾ ಲಿಂಗೈಕ್ಯನು ॥೨॥

ಒಪ್ಪುಗೆಟ್ಟಾರು ದರ್ಶನ ಗತಿಯು ಮತಿವಿಡಿಯು ಲಿಪ್ತದಲಿ ಸವೆದ ಬಹುಭಾಷೆಯಲ್ಲಿ ॥ ಇಪ್ಪನು ಅಷ್ಟ ತನುವಿನ ಹಂಗ ಹರಿದು ತಾನಪ್ಪಿ ವ್ಯೆಮರೆದ ಅತಲಿಂಗೈಕ್ಯನು ॥೩॥

ಪ್ರಾಣ ಚೇತನ ವಿಡಿದು ಗಮನ ರೂಪಿಸುವಲ್ಲಿ ನಿಷ್ಪ್ರಾಣಿಯಾಗಿ ಜಡದೇಹಿಯಲ್ಲ। ಕಾಣಲಿಕೆಬಯಲೆಂಬ ಮೂರುತಿ ತಾನಲ್ಲ. ಹೂಣ ಹೊಕ್ಕಿರಡಳಿದ ಲಿಂಗೈಕ್ಯನು ॥೪॥

ಸಂಭ್ರಮದ ನುಡಿಯು ಸಡಗರದವನು ತಾನಲ್ಲ ಎಂಬನಲ್ಲಿ ಎನಿಸಿಕೊಂಬನಲ್ಲ ನೋಡಾ। ಇಂಬಿ ನಂದಾದಿಯಲ್ಲಿ ತಾ ನಿಂದ ನಿಲುವ ಸುಜ್ಞಾನ ಭರಿತ ಶ್ರೀ ಕೂಡಲಚನ್ನ ಸಂಗೈಕ್ಯನು ॥೫॥

ಶಾರ್ದೂಲ :— ಆಸ್ತಾನಾಪ್ತತೆ ಯೋರ್ವರೊಳ್ಸಹಜದಿಂ ತಾನಿಲ್ಲ ಬಾಹ್ಯಾರ್ಥದೊಳ್ । ಕ್ಲಪ್ತತ್ವಂ ನೆರೆ ಬುದ್ಧಿಗಿಲ್ಲ ಸದಸತ್ವಂದ್ವಂ ಬಳಿಕ್ಕಿಲ್ಲ ಮೇಣ್ ॥ ಲಿಪ್ತಾ ವಿದ್ಯೆಯುಗುಪ್ತವಾಸನೆಯುದುಂ ಲುಪ್ತತ್ವಂ ಪೋದಿರ್ಪಸಂ। ಪ್ರಾಪ್ತೈಕತ್ವವನುಳ್ಳ ತತ್ಪರಣನೊಳ್ ಶ್ರೀ ಸಿದ್ಧಲಿಂಗೇಶ್ವರಾ ॥೪೧॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತೊಂದನೆಯದಾದ ಶ್ರೀ ಮದೈಕ್ಯ ಸ್ಥಲದ ವಿಚಾರವು ಆನುವಿನಿಂ ಮುಗಿಯಲಾಯಿತು.

---

೪೨ ಸರ್ವಾಚಾರ ಸಂಪತ್ಸ್ಥಲ

ಸೂತ್ರ:— ಇಂತು ಶ್ರೀಮನ್ಮಹಲಿಂಗ ದಲೈಕ್ಯನಾದಲಿಂಗೈಕ್ಯನಲ್ಲಿ ಷಟ್‌ಸ್ಥಲ ಸಂಪನ್ನ ಮಾದ ಸರ್ವಾಚಾರವು ಅಡಗಿದ್ದ ಭೇದವೆಂತಿರ್ಪುದೆಂದಡೆ ಮುಂದೆ ಸರ್ವಾಚಾರ ಸಂಪತ್‌ಸ್ಥಲವಾದುದು.

ವಚನ:—ಹೊಸ ಮದುವೆಯ ಹಸೆಯುಡುಗದ ಮುನ್ನ, ಹೊಸಿದ ಅರಿಸಿನ ಬಿಸಿಲಿಗೆ ಹರಿಯುದ ಮುನ್ನ, ತನು ಸಂಚಲವಾಗದೆ ಮನ ಗುರುಕಾರುಣ್ಯವ ಹಡೆದು ಹುಸಿ ಇಲ್ಲದಿದ್ದರೆ ಭಕ್ತನೆಂಬೆ. ಹಿಡಿಯಲಿಲ್ಲದಿರ್ದಡೆ ಮಾಹೇಶನೆಂಬೆ ತನುವಿಲ್ಲದಿರ್ದಡೆ ಪ್ರಸಾದಿ ಎಂಬೆ. ಜೀವವಿಲ್ಲದಿರ್ದಡೆ ಅಸುಲಿಂಗಿ ಎಂಬೆ. ಆಶೆ ಇಲ್ಲದಿರ್ದಡೆ ಶರಣನೆಂಬೆ. ಈ ಐದರ ಸಂಪರ್ಕನಿರ್ಭೋಗವಾದಡೆ ಲಿಂಗೈಕ್ಯನೆಂಬೆ. ಆ ಐಕ್ಯನ ಸಂತೋಷ ಹಿಂಗಿದಡೆ ಸ್ವಯಂ ಜ್ಯೋತಿರ್ಮಯನೆಂಬೆ. ಇಹಿಂಗೆ ಆದಡೆ ದೇಹ ಇರಿದಡರಿಯದು, ತರಿದಡರಿಯದು, ಬೈದಡರಿಯದು, ಹೊಯ್ದಡರಿಯದು, ನಿಂದಿಸಿದಡರಿಯದು, ಸ್ತುತಿಸಿದಡರಿಯದು, ಸುಖವನರಿಯದು, ದುಃಖವನರಿಯದು, ಇಂತಿದರ ತಾಗು ನಿರೋಧವನರಿಯದಿರ್ದಡೆ, ಅಂತವರ ಮಹಾಲಿಂಗ ಜಗಜ್ಜೇಶ್ವರನೆಂಗೆ ||೬||

ಪದ—ನುಡಿಗಳು

ಶಿವನೆಬಸವಣ್ಣನರೂಪಾಗಿ ಅವಿರಳ ತತ್ವವಾಗಿರುತಿರ್ಪ ||ಪ||

ಪೃಥ್ವಿಯಂಗವಾಗಿ ಅವಿತತವಿಲ್ಲದೆ ಮಥನದಿ ಭಕ್ತ ಸುಚಿತ್ತಹಸೆದೊಳಾಚಾರ ಲಿಂಗವಾಗಿರ್ದು ಮತ್ತೆ ನಾಸಿಕದಲ್ಲಿ ಭೋಗಿಪ್ಪ ||೧||

ಜಲವೆಯಂಗವಾಗಿ ಕುಲವನಳಿವ ಬಲುಹುಳ್ಳನಾಗಿ ಮಾಹೇಶ್ವರನ ಬುದ್ಧಿಯು ಬಲೆಯೊಳು ಗುರುಲಿಂಗವಾಗಿ ಸಿಲುಕಿ ಜಿಹ್ವೆಯೊಳು ಭೋಗಿಪ್ಪ ||೨||

ಅಗ್ನಿಯಂಗವಾಗಿಪ್ಪ ಪ್ರಸಾದಿಯ ಹಂಗಿಲ್ಲದ ನಿರಹಂಕಾರ ಹಸ್ತದಿ ಭಂಗವಳಿದು ಶಿವಲಿಂಗವಾಗಿರ್ದು ಕಂಗಳಲ್ಲಿ ರೂಪನ್ನು ಭೋಗಿಪ್ಪ ||೩||

ಅನಿಲನಂಗವಾಗಿಪ್ಪ ಪ್ರಾಣಲಿಂಗಿಯ ಸುಮನವೆಂಬ ಹಸ್ತದೊಳಸುಶ್ರುತ ಘನ ಮಹಾಚರಲಿಂಗವಾಗಿ ಸಿಲುಕಿ ಸ್ಪರ್ಶನೇಂದ್ರಿಯದಲ್ಲಿ ಭೋಗಿಪ್ಪ ||೪||

ಆಕಾಶವೇ ಅಂಗವಾಗಿಪ್ಪ ಶರಣನ ವಿಕಸಿತ ಸುಜ್ಞಾನಹಸ್ತದಿ ಏಕೋಪ್ರಣವಲಿಂಗವಾಗಿರ್ದು ಶ್ರೋತ್ರೇಂದ್ರಿಯದಲ್ಲಿ ಭೋಗಿಪ್ಪ ||೫||

ಭಾವಾಂಗಹಸ್ತವಾದ ಶಿವೈಕ್ಯಂಗೆಸ್ವಾನುಭಾವ ಸಮರಸದಲ್ಲಿ ಅನುಭಾವದಿ ಮಹಲಿಂಗವಾಗಿರ್ದು ವಿಪರಿಸಬಾರದ ಬೋಗ ಭೋ. ||೬||

ಸರ್ವಾಂಗವು ಲಿಂಗ ಸಂಗಿಯಾಗಿರ್ದು ಸರ್ವೇಂದ್ರಿಯ ಸನುಮತ ವಾಗಿ ನಿರ್ವಾಹ ಕೂಡಲ ಚನ್ನಸಂಗಯ್ಯನಲ್ಲಿ ಉರ್ವಿಗೆ ಶರಣ ಮಹಂತ ಭೋ ॥೭॥

ಮತ್ತೇಭಃ— ತನುವಾತ್ಮಂ ಹರಣಂ ಹೃಷೀಕಚಯಮರ್ಥಂ ತೃಪ್ತಿ ಎಂಬಿಂತಿವುಂ। ವಿಸು ಸಾಚಾರ ಗುರುಂ ಶಿವಂ ವಿಲಸದುದ್ಯಜ್ಜಂಗಮಂ ಮತ್ತೆಮಾ ॥ ಘನ ಶೇಷಾತ್ಮಕ ಲಿಂಗ ಮುತ್ತಮ ಮಹಾಲಿಂಗಂ ಕನತ ಷಟ್‌ಸ್ಥಲಂ। ವಿನುತಾಕಾರ ಮದಾದ ತಚ್ಛಿವನೆ ನೀಂ ಶ್ರೀ ಸಿದ್ಧಲಿಂಗೇಶ್ವರಾ ॥೪೨॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತೆರಡನೆಯದಾದ ಸರ್ವಾಚಾರ ಸಂಪತ್ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೪೩ ಏಕಭಾಜನಸ್ಥಲ

ಸೂತ್ರಃ— ಇಂತು ಸರ್ವಾಚಾರ ಸಂಪತ್ತು ಸರ್ವಾಂಗದಲ್ಲಿಲೀಯ್ಯವಾದ ಲಿಂಗೈಕ್ಯಂಗೆ ಆ ಮಹಾಲಿಂಗವೇ ಭಾಜನವಾಗಿ ಅಂತಪ್ಪ ಮಹ ಲಿಂಗಕ್ಕೆ ಲಿಂಗೈಕ್ಯನೇ ಭಾಜನವಾಗಿ ಉಭಯನಾಮವಡಗಿ ಏಕ ಭಾಜನವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಏಕ ಭಾಜನಸ್ಥಲವಾದುದು.

ವಚನಃ— ಅಂದಂದಿಂಗೆ ಬಂದ ಪದಾರ್ಥವ ಒಂದೆಂದು ತಾನುಂಬಂತೆಯಯ್ಯಾ. ಅಲ್ಲಲ್ಲಿಯೇತಾ ಲಿಂಗಕ್ಕೆ ಕೊಡುವರೆಂತೋ, ಲಿಂಗಕ್ಕೆ ಸಲುವದೆಂತೋ. ಮಂಚ ಒಂನೆ ಕಂಚು ಬೇರೆಂಬ ಪ್ರಪಂಚಿಯನೊಲ್ಲ ಕೂಡಲ ಚನ್ನ ಸಂಗಮ ದೇವಾ ॥೩॥

ಪದ—

ಲಿಂಗವೊಳೆರಡಿಲ್ಲದೆ ಸರ್ವಾಂಗವ ಲಿಂಗದೊಳೊಡವೇದಿಸಿದ। ಲಿಂಗೈಕ್ಯಂಗೇಕಭಾಜನವಲ್ಲದೆ ಉಳಿದವರಿಗೆ ಸಾಧ್ಯವೇ ಅಯ್ಯಾ ॥ಪ॥

ಅಂಗಗುಣವಳಿಯದೆ ಪ್ರಾಣನ ಧರ್ಮ ಹಿಂಗದೆ ಅಂತರಂಗದ ಕರಣ ಗುಣ ಕೆಡದೆ। ಲಿಂಗದೊಳು ತಮಗೇಕ ಭಾಜನವೆನು ತಿರ್ಪ ರಜ್ಞಾನ ಭಾವ ಭ್ರಮಿತರ ನೇನೆಂಬೆ ॥೧॥

ಒಡಲೆಂಬಭಾಜನದಲ್ಲಿ ಸರ್ವೇಂದ್ರಿಯುವನಡಗಿಸಿ ಸಕಲಸನ್ನಿಹಿತ ಲಿಂಗಕ್ಕೆಪರವು । ಶಿವರತಿಯಿಂದ ಸರ್ವಾಂಗ ಸುಖವ ನೆರಡಿಲ್ಲದೆ ಸಲಿಸ ಬಲ್ಲಾತನೆ ಲಿಂಗವೋಹಿ ॥೨॥

ಮನದೊಳಳವಡಿಸಿರ್ದನೆನಹೆಂಬ ದ್ರವ್ಯವನು ಗುರುಲಿಂಗ ಸಂಬಂಧ ಸದ್ಭಾವದಾ । ಪರಿಯಾಣದಲ್ಲಿ ಗಡಣಿಸಿ ಸಮರ್ಪಿಸ ಬಲ್ಲಡಾತನೆ ಲಿಂಗೈಕ್ಯನೋಡಾ ॥೩॥

ಭಾವದ ಭ್ರಮೆ ಹಿಂಗಿ ಮೋಹಮತ್ಸರಕೆಟ್ಟು ತಾನೆ ಸದಾ ಸುಖಿ ಯಾದ ಲಿಂಗೈಕ್ಯನು । ಜ್ಞಾನ ಪ್ರಸನ್ನದೊಳು ಲಿಂಗನೇಮ ಸುಖವನ್ನು ಭೋಗಿಸುವ ನೆರಡಿಲ್ಲದೆ ॥೪॥

ತೆರನನರಿದರಿವೆಂಬ ದಿವ್ಯ ಭಾಜನದಲ್ಲಿ ಪರಮಾನಂದ ಪದಾರ್ಥವನು ಸಲಿಸಿ। ಕೂಡಲ ಚನ್ನ ಸಂಗನಲ್ಲಿ ಸಮವೇದಿಸಿ ಯರಡರಿಯ ದಿರ್ಪಾತನೇ ಲಿಂಗ ವೋಹಿ ॥೫॥

ಶಾರ್ದೂಲಃ— ಲಿಂಗೈಕ್ಯಂಗೆ ವಿಶುದ್ಧ ಲಿಂಗವದು ತಾನೇಭಾ ಜನಂ ನೆಟ್ಟನಾ। ಲಿಂಗಕ್ಕಾತನೆ ಭಾಜನಂ ಸಹಜದಿಂದಿಂತೊಂದು ಗೂಡಿರ್ದೋಡಾ ॥ ಲಿಂಗಕ್ಕೆಂ ತಮಗೇಕ ಭಾಜನಮದುಂ ಸಲ್ಗುಂ ವೃಥಾ ಭ್ರಾಮಕರ್ । ಲಿಂಗಾರೋಪಿತ ಪಾತ್ರದೊಳ್‌ಗ್ರಹಿಸುವರ್ ಶ್ರೀ ಸಿದ್ಧ ಲಿಂಗೇಶ್ವರಾ ॥೬॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವ ತ್ತ್ತುಮೂರನೆಯದಾದ ಏಕ ಭಾಜನಸ್ಥಲದ ವಿಚಾರವು ಅನುವಿನಿಂ ಮುಗಿ ಯಲಾಯಿತು.

೨೪ ಸಹ ಭೋಜನ ಸ್ಥಲ

ಸೂತ್ರಃ— ಇಂತು ಮಹಾಲಿಂಗದಲ್ಲಿ ಏಕ ಭಾಜನವಳವಟ್ಟ ಲಿಂಗೈಕ್ಯನು ಆ ಮಹಾಲಿಂಗದ ಸಮರಸ ಭಾವದಿಂದ ಪರಮಾನಂದ ಸುಖದಲ್ಲಿ ಸಮಭೋಗಿ ಯಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಸಹ ಭೋಜನಸ್ಥಲವಾದುದು.

ವಚನಃ— ಅಚ್ಚಪ್ರಸಾದವೆಂದು ನಿಚ್ಚ ನಿಚ್ಚ ಹುಸಿದು, ವಾಯು ಬೀಸುವಲ್ಲಿ ಬಯಲಬೆರಸುವಲ್ಲಿ ಭಾಜನ ಸಹಿತ ಭೋಜನವೇ ಅಂಗಕ್ಕೆ

ಒಂದ ಸಂಬಿನ್ನ ಲಿಂಗವಿರಹಿತವಾಡಡೆ ಸ್ವಯಂವಚನಕ್ಕೆ ವಿರೋಧ, ಸಕಳೇ ಶ್ವರದೇವ ನಾಳಿಗೊಂಡು ಕಾಣಾನಾ ॥೪॥

ಪದ

ಹಸಿವುತೃಷೆನಿದ್ರೆ ಜಡ ವಿಷಯ ದೊಡನುಂಬದು। ವ್ಯಸನಿಗಹುದೆ ಲಿಂಗ ಸಹ ಭೋಜನಾ॥ಪ॥

ಅಂಗದಜ್ಞಾನಗುಣ ಸಂಗದೊಳಗಿರ್ದು ಶಿವಲಿಂಗ ದೊಳು ಸಹ ಭೋಜನವ ಮಾಡುವಾ। ಭಂಗಿತರಿಗಿಹ ಪರವು ಹಿಂಗಿ ನರಕದ ಪಥದ ಜಂಗುಳಿ ಕೂಡಿಹರು ಕಲ್ಪಾಂತರಾ ॥೧॥

ಕ್ರೋಧ ಕೂಗುತ ಕಾಮ ಕಾಡುತ್ತ ಮೋಹ ಮದಭೇದಿಸುತ ಲೋಭ ಮತ್ಸರ ತನುವನೂ। ಸಾಧಿಸುತ್ತಿರಲು ಶಿವಭಕ್ತನಾದಡೆ ಪ್ರಸಾದ ವಿಲ್ಲದೊಡಹುದೆ ತನಗೆ ನೇಹ ಭೋಜನಾ ॥೨॥

ಜನನ ಮರಣ ಸ್ಥಿತಿಗಳೊಳು ಸಿಲ್ಕಿಸಂಸಾರವನು ಕೂಡಿಕೊಂಡಿರ್ದು ತಾವು ಲಿಂಗ ಎನುತ। ಜ್ಞಾನದ ಮಾತು ಜುಣಿಗಿ ಲಿಂಗದ ಕೂಡೆ ಉಣಕಲಿತಪಾತಕರ ನೋಡೆ ಬಹುಪಾಪ ॥೩॥

ಆರ್ಪಿತಾನರ್ಪಿತ ದೊಳಿಪ್ಪ ಭೇದವು ದೇಹದಪ್ಪುಗೆ ವಿಡಿದುಗ್ರಹಿ ಸೆವಿಂದ್ರಿಯ ಮುಖ। ದರ್ಪಗಳ ಕೆಡಿಸಿ ಶಿವಗರ್ಪಿ ತಾವ ಧಾನ ವಾಗಿಪ್ಪ ಮುಖವುಳ್ಳಡದು ಸಹ ಭೋಜನಾ ॥೪॥

ಭ್ರಮೆಯಳಿದು ಲೌಕಿಕವ ಸಮನಿಸದೆ ಲಿಂಗನೊಳು ಅಮಳ ಭಾವೈ ಕ್ಯದಿಂ ದೊಂದುಗೂಡಿ। ಕಮಲನಾಳದ ಭೇದಸಮ ಸೂತ್ರ ಸಂಗ ನೊಳು ಸಮನಿಸಲು ಸಹ ಭೋಜನ ಮದಪ್ಪುದು ॥೫॥

ಶಾರ್ದೂಲಃ— ತಾನೇಚಿದ್ಘನ ಲಿಂಗ ವಾಘನ ಮಹಾಲಿಂಗಂ ನಿಜಂ ತಾನೆಯೂ। ದಾವಿಜ್ಞಾತೃಕರಂತೆ ಪೋಲ್ತನುವಮನಪ್ರಾಣಾದಿ ದುರ್ಮಾ ರ್ಗದಿಂ॥ ಶೀವಿರ್ದಜ್ಞತೆಯಿಂ ದುಣುತ್ತುಣುತೆ ಮಹಾತ್ಮತ್ತನಾತೀಶ್ವರಂ। ಗೀವರ್ ಮುಂದಣ ಬಂಧ ಮಂತಿಳಿಯರೇ ಶ್ರೀ ಸಿದ್ಧಲಿಂಗೇಶ್ವರಾ ॥೪೪॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವ ತ್ತನಾಲ್ಕನೆಯದಾದ ಸಹ ಭೋಜನ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀ ಮದೇಕೋತ್ತರ ಶತಸ್ಥಲಂಗಳಲ್ಲಿಪಿಂಡಾದಿ ಸಹಜ ಮಾಟಾಂತ್ಯ ಮೊದ ಹದಿನೈದು ಸ್ಥಲಂಗಳಿಂದ ಒಂದನೇ ಭಕ್ತಿ ಸ್ಥಲಕ್ಕೆ ಮಹೇಶಾದಿ ಭಕ್ತದೇಹಿಕ ಲಿಂಗಾಂತ್ಯ ಮಾದೊಂಭತ್ತು ಸ್ಥಲಂಗಳಿಂದ ಎರಡನೇ ಮಹೇಶಸ್ಥಲಕ್ಕೆ ಪ್ರಸಾದಿಯಾದಿ ಪ್ರಸಾದ ಮಹತ್ಮೆಯಂತ್ಯ ಮೊದೇಳು ಸ್ಥಲಂಗಳಿಂದ ಮೂರನೇ ಪ್ರಸಾದಿ ಸ್ಥಲಕ್ಕೆ ಪ್ರಾಣಲಿಂಗಿ ಯಾದಿ ಅಂಗಲಿಂಗಾಂತ್ಯ ಮೊದೈದು ಸ್ಥಲಂಗಳಿಂದ ನಾಲ್ಕನೇ ಪ್ರಾಣಲಿಂಗಿ ಸ್ಥಲಕ್ಕೆ ಶರಣಾದಿ ಶೀಲ ಸಂಪಾದ ನಾಂತ್ಯ ಮೊದ ನಾಲ್ಕು ಸ್ಥಲಂಗಳಿಂದ ಐದನೇ ಶರಣಸ್ಥಲಕ್ಕೆ ಐಕ್ಯಾದಿ ಸಹ ಭೋಜನಾಂತ್ಯ ಮಾದ ನಾಲ್ಕು ಸ್ಥಲಂಗಳಿಂದ ಆರನೇ ಐಕ್ಯಸ್ಥಲಕ್ಕೆ ಸಂದ ಅಂಗ ಸ್ಥಲಂಗಳು ನಾಲ್ವತ್ತು ನಾಲ್ಕು ಮುಗಿದುದು-

ಶ್ರೀ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಗದ್ಯಃ—ಇಂತೀ ಮಾಳ್ಕೆಯಿಂ ಅನಾದಿ ಪರವಸ್ತುವೇ ಮಹಸ್ಥಲ ವಾಗಿ ಅನಾದಿ ಸದ್ಭಕ್ತನ ಹೃನ್ಮಂದಿರದಲ್ಲಿರ್ದ ಅಂಗಲಿಂಗ ಸ್ಥಲಂಗ ಳಾಗಿ ಆರಾರಕ್ಕೆ ಕೂಡಿದ ಏಕೋತ್ತರ ಶತಸ್ಥಲಂಗಳಲ್ಲಿ ಅಂಗಸ್ಥ ಲಂಗಳು ನಾಲ್ವತ್ತುನಾಲ್ಕಕ್ಕೆ ವಿವರ

ಶ್ರೀಮತ್ಪಿಂಡ ಸ್ಥಲಾದಿ ಸಹಜ ಮಾಟಸ್ಥಲಾಂತ್ಯ ಮೊದ ಹದಿ ನೈದು ಸ್ಥಲಂಗಳ್ಕೂಡಿದ ಒಂದನೇ ಭಕ್ತಸ್ಥಲಕ್ಕೆ ವಚನ ಪದ ಪದ್ಯಂ ಗಳ್ಮೂರಕ್ಕೆ ವ. ೪೫ ಸೂ.೧೫ ಗ. ೧೬. ಮಹೇಶ ಸ್ಥಲಾದಿ ಭಕ್ತದೇಹಿಕ ಲಿಂಗ ಸ್ಥಲಾಂತ್ಯ ಮಾದ ಒಂಬತ್ತು ಸ್ಥಲಂಗಳ್ಕೂಡಿದ ಎರಡನೇ ಮಹೇಶ್ವರ ಸ್ಥಲಕ್ಕೆ ವಚನ ಪದ ಪದ್ಯಂಗಳ್ಮೂರಕ್ಕೆ ವ. ೨೭ ಸೂ. ೯ ಗ. ೧೦. ಪ್ರಸಾದಿ ಸ್ಥಲಾದಿ ಪ್ರಸಾದ ಮಹಾತ್ಮೆ ಸ್ಥಲಾಂತ್ಯ ಮಾದುದಾ ಏಳು ಸ್ಥಲಂಗಳ್ಕೂಡಿದ ಮೂರನೇ ಪ್ರಸಾದಿ ಸ್ಥಲಕ್ಕೆ ವಚನ ಪದ ಪದ್ಯಂಗಳ್ಮೂರಕ್ಕೆ. ವ. ೨೧ ಸೂ. ೭ ಗ. ೮. ಪ್ರಾಣಲಿಂಗಿಸ್ಥಲಾದಿ ಅಂಗ ಲಿಂಗ ಸ್ಥಲಾಂತ್ಯ ಮೊದ ಐದು ಸ್ಥಲಂಗಳ್ಕೂಡಿದ ನಾಲ್ಕನೇ ಪ್ರಾಣ ಲಿಂಗಿ ಸ್ಥಲಕ್ಕೆ ವಚನ ಪದ ಪದ್ಯಂಗಳ್ಮೂರಕ್ಕೆ ವ ೧೫ ಸೂ ೫ ಗ ೬. ಶರಣಸ್ಥಲಾದಿ ಶೀಲ ಸಂಪಾದನೆ ಸ್ಥಲಾಂತ್ಯ ಮಾದ ನಾಲ್ಕು

ಸ್ಥಲಂಗಳ್ಕೂಡಿದ ಐದನೇ ಶರಣಸ್ಥಲಕ್ಕೆ ವಚನ ಪದ ಪದ್ಯಂಗಳ್ಮೂರಕ್ಕೆ ವ ೧೨ ಸೂ ೪ ಗ ೫. ಐಕ್ಯಸ್ಥಲಾದಿ ಸಹ ಭೋಜನ ಸ್ಥಲಾಂತ್ಯ ಮಾದ ೪ ಸ್ಥಲಂಗಳ್ಕೂಡಿದ ಆರನೇ ಶ್ರೀಮಹ ಲಿಂಗೈಕ್ಯ ಸ್ಥಲಕ್ಕೆ ವಚನ ಪದ ಪದ್ಯಂಗಳ್ಮೂರಕ್ಕೆ ವ ೧೨ ಸೂ ೪ ಗ ೬.

ಅಂತು ಭಕ್ತಾಚಾರಸ್ಥಲಾದಿ ಮಹಾಲಿಂಗೈಕ್ಯಸ್ಥಲಾಂತ್ಯ ಮಾದ ಆರಂಗ ಸ್ಥಲಂಗಳಲ್ಲಿ ಕೂಡಿದ ಪಿಂಡಸ್ಥಲಾದಿಯಾಗಿ ಸಹ ಭೋಜನ ಸ್ಥಲಾಂತ್ಯ ಮಾದ ನಾಲ್ವತ್ತು ನಾಲ್ಕು ಅಂಗಸ್ಥಲಂಗಳಿಗೆ ಸೇರಿದ ಸೂತ್ರಂಗಳ್ ನಾಲ್ವತ್ತು ನಾಲ್ಕಕ್ಕಂ ವಚನಂಗಳ್ ನಾಲ್ವತ್ತು ನಾಲ್ಕಕ್ಕಂ ಪದಂಗಳ್ ನಾಲ್ವತ್ತು ನಾಲ್ಕಕ್ಕಂ ಪದ್ಯಂಗಳ್ ನಾಲ್ವತ್ತು ನಾಲ್ಕಕ್ಕಂ ಗದ್ಯಂಗಳ್ ಐವತ್ತೊಂದಕ್ಕಂ ಕೂಡಿ ೨೨೭ ಕ್ಕಂ ಅಂಗಸ್ಥಲಂಗಳ್ ಮುಗಿದವು—

ಶ್ರೀ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಮುಂದಿನ್ನು:— ಶ್ರೀ ಮಹದಾಚಾರ ಲಿಂಗ ಸ್ಥಲಾದಿ ಯಾಗಿ ಮಹಾ ಲಿಂಗಸ್ಥಲಾಂತ್ಯವಾದ ಆರುಲಿಂಗ ಸ್ಥಲಂಗಳಿಪ್ಪ ದೀಕ್ಷಾಗುರು ಸ್ಥಲಾದಿ ಯಾಗಿ ಜ್ಞಾನ ಶೂನ್ಯ ಸ್ಥಲಾಂತ್ಯ ವಾದ ಐವತ್ತೇಳೆಂದೆನಿಸಿದ ಲಿಂಗ ಸ್ಥಲಂಗಳಂ ಪೇಳುತ್ತಿರ್ಪರು. ಅದೆಂತೆಂದೊಡೆ

೨೯ ದೀಕ್ಷಾಗುರುಸ್ಥಲ

ಸೂತ್ರ:— ಇಂತು ಪಿಂಡಸ್ಥಲಾದಿ ಯಾಗಿ ಸಹ ಭೋಜನಸ್ಥಲಾಂತ್ಯವಾದ ನಾಲ್ವತ್ತು ನಾಲ್ಕು ಅಂಗಸ್ಥಲಂಗಳ ಭೇದವು. ಭಕ್ತಾ ದೈಕ್ಯಾಂತ ಷಡಂಗ ಸ್ಥಲಂಗಳಲ್ಲಡಗಿ ಈ ಷಡಂಗ ಸ್ಥಲಂಗಳೇ ಅಂಗವಾಗಿರ್ದ ಮಹಂತನ ಮನಸ್ಥಲದಲ್ಲಿ ಮನೋಲೀಯ್ಯವಾದ ಲಿಂಗಸ್ಥಲದ ವಿವರವು ಎಂತಿರ್ದು ದೆಂದಡೆ, ಮುಂಪೆ ದೀಕ್ಷಾಗುರುಸ್ಥಲವಾದುದು.

ವಚನ:— ಶ್ರೀ ಗುರು ಶಿಷ್ಯನ ಮಸ್ತಕದಲ್ಲಿ ಹಸ್ತಾಬ್ಜಮಥನದಿಂದೊತ್ತಿ ಭಸ್ಮನ ಮಾಡಿ, ಮತ್ತು ಪಂಚಾಕ್ಷರಿಯ ಮರುಜೀವಣಿಯಂ ಶ್ರೋತ್ರದೊಳೂದುತ್ತೆ ಧಾರೆಯನೆರೆಯೆ ಸತ್ಯವಿದು ನಿನ್ನಂತೆಕಾಣಾ ರಾಮನಾಥಾ ||

ಪದ—ರಾಗ—ಆಹರಿ

ಗುರುವೇನಮೋನಮೋ ಶ್ರೀ ಮತ್ ಗುರುವೇ ನಮೋನಮೋ ॥ಪ॥

ಅನಾದಿಮಲ ಸಂಸಾರದ ಜನನ ಮರಣ ಭವ ದುಃಖವ। ನೆನೆಯಲೀಯ್ಯದೆ ಶಿವಲಿಂಗವ ಮನದೊಳಗಿರಿಸಿದಾ ॥೧॥

ವಿಷಮ ಸಂಸಾರದ ಕೊಗ್ಗೆಸರೊಳಂ ಧಕನಂದದಿ। ದೆಶೆಗಾಣದೆ ಬಿದ್ದನ ನೆಬ್ಬಿಸಿ ಶಿವಲಿಂಗವನೊಲಿದಿತ್ತಾ ॥೨॥

ಕೀಟಕನರನಾನಿದ ನೆತ್ತ ಪಿನಾಕಿಯ ಮಹಾಘನವಿದೆತ್ತ ಸೂಕ್ಷ್ಮಶುದ್ಧನ ನೊಲಿದಾ ಲೋಕಿಸಿ ಪರಮಾರ್ಥವನೆನಗಿತ್ತಾ ॥೩॥

ಇಡ ಕಲಿಸಿದ ವಿಭೂತಿಯ ತೊಡಕಲಿಸಿದರುದ್ರಾಕ್ಷಿಯ ಅಡಿಗಡಿಗೆ ಶ್ರೀ ಪಂಚಾಕ್ಷರಿ ಯೊಡೆಯನ ನರ್ಚಿಸ ಕಲಿಸಿದಾ ॥೪॥

ನಾಹ ಮೆಂಬಜ್ಞತೆಯನು ಕೋಹ ಮೆಂಬಮರವೆಯನು ಸೋಹ ಮೆಂದೆನಿಸದೆ ದಾಸೋಹ ಮೆಂದೆನ ಕಲಿಸಿದಾ ॥೫॥

ತ್ವಾಷತ್ತ್ರೇಭಿಯೆಂಬ ಶ್ರುತಿಯು ಸಂಪಾದಿತ ಶಿವಲಿಂಗದಲ್ಲಿ ಪಾದೋದಕ ಪ್ರಸಾದವ ಸ್ವಾದರದಿಂದುಣ ಕಲಿಸಿದಾ ॥೬॥

ಅಜ್ಞಾನತಿಮಿರಾಂಧಕಂಗೆ ಶಿವಜ್ಞಾನಾಂಜನವನೆಚ್ಚಿ ಪ್ರಾಜ್ಞನೆನಿಸಿ ಶಿವಲಿಂಗದ ಸುಜ್ಞಾನವ ನೊಲಿದಿತ್ತಾ ॥೭॥

ಭೂತಗ್ರಾಮದೊಳು ಅನುಕೃತಯೂತೇ ರುದ್ರನೆಂಬ ಶೃತಿಯ ನೀತಿವಿಡಿದು ಲಿಂಗ ಪರಂಜ್ಯೋತಿಯ ಬೆಳಗಿನೊಳಗಿರಿಸಿದಾ ॥೮॥

ಅಯಂ ಮೇಹಸ್ತೋ ಭಗವಾನ್ ಅಯಂಮೇ ಭಗವತ್ತರಃ ಅಯಂಮೇವಿಶ್ವಭೇಷಜ ಎಂಬಸ್ವಯ ಸ್ವರೂಪನ ಮಾಡಿ ತೋರಿದಾ ॥೯॥

ನಾರುದ್ರೋ ಸಂಸ್ಮರೇದ್ರುದ ನಾರುದ್ರೋ ರುದ್ರಮರ್ಚಯೇತ್ ನಾರುದ್ರೋ ರುದ್ರಾತ್ಮನೆಂಬೀ ಭೂರುಪ್ರನ ಮಾಡಿ ತೋರಿದಾ ॥೧೦॥

ರುದ್ರಾತ್ಮನೋರುಗ್ರಪರ ರುದ್ರಾಂಶೋರುದ್ರ ಭಾಸಿತ ಸದ್ರೂಪಾಕಾರಚಿದ್ರೂಪ ವೀರ ಸೊಡ್ಡಳ ಲಿಂಗವೇ ॥೧೧॥

ಮತ್ತೇಭ॥ ವಿಲಸತ ಸೂಕ್ಷ್ಮಮೆನಿಸಿಪ್ಪ ಚಿತ್ಕಳೆ ಯನಿಂತುಂಭಾವದೊಳ್ತಂದುಮ । ತ್ತೊಲವಿಂ ಮಾನಸವಲ್ಲಿ ಗೈದಿಸಿ ಬಳಿಕ್ಕೆ ದುಷ್ಟಿಯೊಳ್ತಂ॥ ತವಂ ನೆಲೆಗೊಳ್ವಂದದೆ ಹಸ್ತ ದೋಳಿರಿಸಿ ಯಂತರ್ಬಾಹ್ಯವೆಂಬೀದ್ವಿಧಾ। ಸ್ಥಲವೋಕ್ಕಂಗೊಳಿಸಂತೆ ಕಂಗೊಳಿಸುವೈ ಶ್ರೀ ಸಿದ್ಧಲಿಂಗೇಶ್ವರಾ ॥೪೨॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲನೊಳಗೆ ನಾಲ್ವತ್ತೈದನೆಯದಾದ ದೀಕ್ಷಾಗುರು ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೪೦ ಶಿಕ್ಷಾಗುರುಸ್ಥಲ

ಸೂತ್ರಃ— ಇಂತು ಶ್ರೀ ಮದುಪದೇಶ ಕಾರಣವಾಗಿ ದೀಕ್ಷಾಗುರು ಸ್ವರೂಪವನೈದಿದ ಮಹಾಲಿಂಗವು ಭಕ್ತನಂಗದಲ್ಲಿ ಶಿಕ್ಷಾಮುಖದಿಂದ ಬೋಧಾ ಸ್ವರೂಪವನೈದಿದ ಭೇದ ವೆಂತಿರ್ದುದೆಂದಡೆ ಮುಂದೆ ಶಿಕ್ಷಾ ಗುರುಸ್ಥಲವಾದುದು.

ವಚನ:— ನಿಮ್ಮ ಸದ್ಭಕ್ತರ ಕಂಡು ಉದಾಸೀನವ ಮಾಡಿದಡೆ ಒಂದನೆಯ ಪಾತಕ. ನಿಮ್ಮ ಭಕ್ತರ ಸಮಯೋಚಿತವನರಿಯದಿರ್ದಡೆ ಎರಡನೆಯ ಪಾತಕ. ನಿಮ್ಮ ಭಕ್ತರ ಸಕಲರತಿಗೆ ಸಲ್ಲ ದಿರ್ದಡೆ ಮೂರ ನೆಯ ಪಾತಕ. ನಿಮ್ಮ ಭಕ್ತರ ಒಡನೆ ಮಾರುತ್ತರವಕೊಟ್ಟಡೆ ನಾಲ್ಕ ನೆಯ ಪಾತಕ. ನಿಮ್ಮ ಭಕ್ತರಿಗೆ ಮಾಡಿದೆನೆಂದು ಮನದಲ್ಲಿ ಹೊಳೆದಡೆ ಐದನೆಯ ಪಾತಕ. ಇಂತೀ ಪಂಚ ಮಹಾ ಪಾತಕವ ಕಳೆದಲ್ಲದೆ ನಮ್ಮ ಕೂಡಲ ಚನ್ನ ಸಂಗಯ್ಯನ ಹೊದ್ದ ಬಾರದು.

ಪದ—ರಾಗ—ಲಹರಿ

ಗುರುವೆ ಶರಣು ಎನ್ನ ಗುರುವೆ ಶರಣು ಎನ್ನ ಪರಿಭವವ ಕಳೆದ ಶಿಕ್ಷಾ ಗುರುಲಿಂಗವೇ ॥ಪಲ್ಲವ॥

ಒರೆದೊರೆದು ಭಕ್ತಿಯನು ಬಗೆದೋರಿ ಮರವೆಯನು ಹರಿದ ಸಂ ಸಾರವನು ಕೆಲಕೊತ್ತಿಸಿ ॥ ಇರುಳು ಪಗಲೆನ್ನದನವರತ ಬೋಧಿಸಿ ಎನ್ನ ಪರಮ ಸುಖದೊಳಿರಿಸಿ ಪೊರೆದ ಗುರುವೆ ॥೧॥

ಶ್ರೀ ಗಂಧವನು ಕಡಿದು ಕೊರೆದು ಸಣ್ಣಿಸುವಂತೆ ಕರುಣದಿಂದೆನ್ನ ಪೂರ್ವಾಪರವನು । ಶಿರವ ಹಿಡಿದೆತ್ತಿ ತೋರಿಸಿ ಭಕ್ತಿಸಂಪದವ ದೊರಕೊ ಳಿಸಿ ಪಾಲಿಸಿದ ಪರಮ ಗುರುವೆ ॥೨॥

ಅಂಗ ಲಿಂಗದ ನೋಟವನು ಪ್ರಾಣಭಾವದೊಳು ಹಿಂಗದಿರಿಸು ವಭೇದವನು ತೋರಿಸಿ ॥ ಅಂಗದಾಚಾರಸ್ಥಲ ದೊಳುನೆಲಸಿರು ತಿರ್ಪಸಂ ಗಿಚಿನ್ಮೂರ್ತಿ ಶ್ರೀ ಗುರುಲಿಂಗವೇ ॥೩॥

ಕಾಯ ಪ್ರಸಾದ ವಿದು ಪ್ರಾಣ ಪ್ರಸಾದ ವಿದು ಭಾವ ಪ್ರಸಾದ ವಿದು ಎಂದು ತೋರಿ ॥ ಆಯಸವ ಬಿಡಿಸಿ ರಾಯಸದೊಳಿರಿಸಿದ ಮಾಯಾ ರಹಿತ ಎನ್ನ ಗುರುಲಿಂಗವೇ ॥೪॥

ಒಳಗೆ ನರುಹಿಸಿ ತಿಳುಹಿ ಹೊರಗೆ ಬೋಧಿಸಿ ನಿಲಿಸಿ ಒಳಹೊರ ಗೆಂದೆಂಬ ವೆರಡ ಕೆಡಿಸಿ ॥ ಕಳೆಯಲಿಂಗ ದೊಳೊಚ್ಚತವ ನೊಪ್ಪ ಗೊಳಿ ಸಿದ ಕರುಣಿ ಗುರು ಪುರದ ಮಲ್ಲನಾಥ ಗುರುವೇ ॥೫॥

ಮತ್ತೇಭ॥ ಕ್ರಿಯೆಯಿಂದರ್ಚಿಸುವಂದಮುಂ ನೆರೆಮನಸ್ಸಿಂ ಧ್ಯಾನಿ ಸುತ್ತಿರ್ಪನಿ । ಶ್ಚಯಮುಮಂ ಚಿತ್ತ ಸಮಾಧಿಯಂ ಪರತರ ಶ್ರೀ ಷಟ್ಸ್ಥಲ ಬ್ರಹ್ಮಮುಂ ॥ ನಿಯತಂ ನಿರ್ಣಯಿಪಂದಮುಂ ನಿಜಸುಖಾಭಿ ವ್ಯಕ್ತಿಯಂ

ಪೇಳುಸ । ಪ್ರಿಯದಿಂ ಪಾಲಿಸುತಿರ್ಪೆಯಾಹ ಕೃಪೆಯಿಂ ಶ್ರೀ ಸಿದ್ಧಲಿಂಗೇಶ್ವರಾ ॥೪೬॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತಾರನೆಯದಾದ ಶಿಕ್ಷಾ ಗುರುಸ್ಥಲದ ವಿಚಾರವು ಆನುವಿನಿಂ ಮುಗಿಯುಲಾಯಿತು.

---

೩೧ ಜ್ಞಾನ ಗುರುಸ್ಥಲ

ಸೂತ್ರ:—ಇಂತು ಶಿಕ್ಷಾ ಗುರು ಸ್ವರೂಪವನೈದಿದ ಲಿಂಗವು ಸದ್ಭಕ್ತನಂಗದಲ್ಲಿ ಸುಜ್ಞಾನ ಕಟಾಕ್ಷೆಯ ಕಣ್ದೆರವೆಯ ನಿಮಿತ್ಯ ಜ್ಞಾನ ಸ್ವರೂಪವನೈದಿದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನ ಗುರುಸ್ಥಲವಾದುದು.

ವಚನ:—ಸಾವ ಜೀವಕ್ಕೆ ಗುರು ಬೇಡ. ಸಾಯದ ಜೀವಕ್ಕೆ ಗುರುಬೇಡ. ಗುರುವಿಲ್ಲದೆ ಕೂಡಲಿಕ್ಕೆ ಬಾರದು. ಇನ್ನಾವತಾವಿಂಗೆ ಗುರು ಬೇಕು. ಸಾವ ಜೀವ ಸಂಬಂಧದ ಠಾವ ತೋರಬಲ್ಲಾತನೇ ಗುರು ಗುಹೇಶ್ವರನು ॥೩॥

ಪದ—ರಾಗ—ಚೌಳಿ

ಶರಣು ಶರಣು ಎನ್ನ ಗುರುವೆ ಶರಣಯ್ಯ। ಶರಣು ಉಪಮಾತೀತ ಜ್ಞಾನ ಗುರುವೆ ॥ ॥ಪ॥

ಲಿಂಗ ಜಂಗಮವೆ ಘನವೆಂದು ಪ್ರಸಾದವನು ಹಿಂಗದಾ ನಿಜಪದವ ತೋರಿದ ಗುರುವೆ॥ ಕ್ರಿಯಾ ಜ್ಞಾನವೇ ಮನವೆಂದು ಪಾದೋದಕವ ಸಂಗಸನುಮತಪಾಗಿತ್ತ ಗುರುವೆ॥ ॥೧॥

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯ ಸ್ಥಲದಲ್ಲಿ ನಡೆದ ಗುರುವೆ॥ ಸೋಹಿದಾಸೋಹಿ ನೀನಾಗಿ ಎನ್ನುವನು ತಪ್ಪಿಸಿ ಪೊರೆದೆನ್ನ ಪರಮ ಗುರುವೆ॥ ॥೨॥

ನಾದ ಬಿಂದುಕಳಾತೀತ ಮಹಾ ಘನದ ಆದಿಲಿಂಗ ಅನಾದಿ ಶರಣ ಗುರುವೆ॥ ಮಿಂಚು ಮಿಂಚನೆ ಕೂಡಿದಂತಿರದ ಸಂಚುವನುಎನೆನ್ನ ಬಹುದು ಗುರವೆ॥ ॥೩॥

ಅರಿವು ಕುರುಹನೆ ಅರಸಿ ಬರಲು ಆ ಕುರುಹು ಅರಿವನೊಳಕೊಂಡುದನು ಅರಿದ ಗುರುವೆ॥ ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧದ ಮಾತುವನುಹಿಂಗಿದ ಜ್ಞಾನ ಗುರುವೆ ॥೪॥

ಭಾವಾ ಭಾವವನೆ ಭಾವಿಸಲು ಅನುಭಾವ ನಿರ್ಭಾವವೇ ಕಾರ್ಥವೆಂದರಿದ ಗುರುವೆ॥ ಕೂಡಲ ಚನ್ನ ಸಂಗ ನಿಮ್ಮವನು ಬಸವಲಿಂಗ ಬಸವಎಂಬ ಗುರುವೆ ॥೫॥

ಮತ್ತೇಭಃ---ಪದೆದಾ ಪಿಂದಣ ಜನ್ಮದೋಳ್ಗಳಿಸಿದಾ ಸತ್ಕರ್ಮದಿಂ ಜಂಗಮಾ। ಭ್ಯುದಯಾಚಾರದ ಬೋಧೆಯಿಂ ಸಕಲ ಸಂದೇಹಂಗಳಂ ನೂಂಕಿಸ।। ನ್ಮುದದಿಂ ತನ್ನ ನಿಜ ಸ್ವರೂಪದ ವಿಚಾರಂಗಾಣಿಸುತ್ತಿರ್ಪಸುದ್ವಿದಿತ ಜ್ಞಾನದೆ ಸುಪ್ರಶಸ್ತ ಗುರುವೇ ಶ್ರೀ ಸಿದ್ಧಲಿಂಗೇಶ್ವರಾ॥೪೭॥

ಗದ್ಯಃ---ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತೇಳನೆಯದಾದ ಜ್ಞಾನ ಗುರುಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೩೨ ಕ್ರಿಯಾ ಲಿಂಗ ಸ್ಥಲ

ಸೂತ್ರಃ--- ಇಂತು ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು ವೆಂಬ ತ್ರಿವಿಧಸ್ಥಲವೇಕವಾದ ಲಿಂಗವು ಭಕ್ತನಂಗದ ಮೇಲೆ ಕರತಳಾಮಳಕದಂತೆ ಇಷ್ಟಲಿಂಗ ಸ್ವರೂಪವ ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಕ್ರಿಯಾಲಿಂಗ ಸ್ಥಲವಾದುದು.

ವಚನಃ---ಪ್ರಣವ ಮಂತ್ರವ ಕರ್ಣದಲ್ಲಿ ಹೇಳಿ ಗುರುವಂಗದ ಮೇಲೆ ಲಿಂಗವ ಪ್ರತಿಷ್ಠೆಯ ಮಾಡಿದ ಬಳಿಕ ಒಳಗೆ ಲಿಂಗ ವಿಪ್ಪ ದೆಂಬ ಪಂಚಮಹಾ ಪಾತಕರ ನುಡಿಯ ಕೇಳಲಾಗದು. ಒಳಗಿಪ್ಪನೇ ಲಿಂಗ ದೇವನು? ಮಲ ಮೂತ್ರ ಮಾಂಸದ ಹೇಸಿಕೆಯ ಪ್ರಾಣವಿಪ್ಪುದಲ್ಲದೆ ಲಿಂಗವು ಇಪ್ಪುದೆ? ಆ ಪ್ರಾಣನ ತಂದು ತನ್ನ ಇಷ್ಟ ಲಿಂಗದಲ್ಲಿ ನೆರೆಯ ಬಲ್ಲಾತನೇ ಪ್ರಾಣಲಿಂಗ ಸಂಬಂಧಿ. ತನ್ನ ಇಷ್ಟ ಲಿಂಗದಲ್ಲಿ ದಾಸೋಹವ ಮಾಡಲರಿಯದೆ ಹಲವು ಬಳಕೆಯ ಬಳಸುವ ಮಟ್ಟಿಯ ಭಂಡರ ನೆನಗೊಮ್ಮೆ ತೋರದಿರಾ ಕೂಡಲ ಚನ್ನ ಸಂಗಮದೇವಾ ॥

ಪದ ರಾಗ ವರಾಳಿ

ಉಪಮಿಸ ಬಾರದ ಲಿಂಗವು ಕರಸ್ಥಲದೊಳಗಳವಡಲು ಅತಿಶಯವನು ಬೇರರಸಲಿಲ್ಲ ಮತ್ತಿಲ್ಲಿ ಕಾಬುದು ನಿಜ ಸುಖವಾ ॥ಪ॥

ನಾದಬಿಂದು ಕಳೆಗಳ ಗತೀತವಾದ ಅನಾದಿ ಲಿಂಗವನ್ನು ಗುರು ಕರಸ್ಥಲಕ್ಕೆ। ತೋರಿಸಿ ಕೊಟ್ಟ ಬಳಿಕ ಬೇರೆ ಮತ್ತರ ಸಿಹನೆಂದು ನೆನೆಯಲಿಲ್ಲ. ॥೧॥

ಉನ್ಮನಿಯ ಲೌಕಿಕದನು ಸಂಧಾನವ ಪರಿಹರಿಸಲಿಕೆ ಚಿನುಮಯ ಮೂರ್ತಿ ಲಿಂಗವು। ಹಸ್ತದೊಳಿರಲಲ್ಲಿಯೆ ಕಾಬುದು ನಿಜ ಸುಖವಾ ॥೨॥

ಅಂಗದೊಳಳವಟ್ಟ ಕ್ರೀಗಳಲ್ಲಿ ಮಂಗಳ ಮಯವಾಗಿ ತೋರುತ್ತಿರೆ ಕಂಗಳನು ತುಂಬಿ। ನೋಡಿ ಸುಖಿಯಹುದಲ್ಲದೆ ಬೇರೆ ಮತ್ತರ ಸಿಹನೆಂದು ನೆನೆಯಲಿಲ್ಲ. ॥೩॥

ಕೈಲಾಸ ಕರತಳ ದೊಳಗೆ ಕರತಳಾ ಮಳಕವಾಗಿರೆ ಬೇರೆ ಕೈಲಾಸಕ್ಕೆ ಹೋಗಿ । ಲಿಂಗವ ಕಂಡಿಹೆ ನೆಂಬಡೆ ತೆರಹುಂಟೆ ॥೪॥

ಆಯತವಾಗಿಹ ಲಿಂಗದೊಳಗೆ ನಿಜಸ್ವಾಯತ ಸಂಬಂಧ ವಿರುತ್ತಿರಲು ಆಯತವನು ಬೇರರಸಲಿಲ್ಲ ಕೂಡಲ ಚನ್ನ ಸಂಗ ನಿಮ್ಮನರಿದಂಗೆ ॥೫॥

ಮತ್ತೇಭ॥ ಸಕಲಂ ನೇತ್ರ ಗೃಹೀತ ಮಿಂತನುದಿನಂ ಸಾಕ್ಷಾತ್ಸಭಕ್ತಾದಿಗಂ। ಪ್ರಕಟೀಸ್ವಾರ್ಥವ ನಿತ್ತ ನಿಷ್ಟ ನಿಕರಂ ಮುಂತಾದವಂತಗ್ಗಿಸು॥ ತ್ರಿಕರಂ ಸಂತತ ಮುತ್ಸವಂಗಳನನಿತ್ತಂ ನರ್ಚಿಸುತ್ತ ನಿಜೋ। ತ್ಸುಕದಿಂ ರಂಜಿ ದಿಷ್ಟ ಲಿಂಗವದು ತಾಂ ಶ್ರೀ ಸಿದ್ಧಲಿಂಗೇಶ್ವರಾ ॥೪೮॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತೆಂಟನೆಯದಾದ ಕ್ರಿಯಾ ಲಿಂಗಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೩೨ ಭಾವಲಿಂಗಸ್ಥಲ

ಸೂತ್ರ:— ಇಂತು ಅಂಗದೊಳಳವಟ್ಟ ಸತ್ಕ್ರಿಯೂ ಲಿಂಗವು ಸದ್ಭಕ್ತನ ಹೃದಯಾಂಗದಲ್ಲಿ ಭಾವ ಭರಿತವಾಗಲು ಮುಂದೆ ಭಾವ ಲಿಂಗ ಸ್ಥಲವಾದುದು.

ವಚನ:— ಅರ್ಚನೆ ಯಾವರಿ ಸಿತ್ತಯ್ಯ ಪೂಜಿಸಿ ಪೂರಿತವಾಯಿತ್ತಯ್ಯ ಅಜಪ ಒಕ್ಕೊಡಿತ್ತು ಸಮತೆ ಪರಿಣಾಮಿಸಿತ್ತು - ನಿರ್ವಿಕಲ್ಪ ಸಂಧಾನವಾಯಿತ್ತು ಮಹಾಲಿಂಗ ಕಲ್ಲೇಶ್ವರಾನೆನೆವ ಭಾವಕ್ಕೆ ॥೫॥

ಪದ—ರಾಗ— ಮದು ಮಾಧವಿ

ಎನ್ನಯ ಕರಸ್ಥಲಕ್ಕನುವಾವ ಧರ್ಮವು ಎನ್ನಯಹೃತ್ಕಮಲವ ಬೆಳಗುವಪರಂಜ್ಯೋತಿ ॥ಪ॥

ಹರಿದು ಹತ್ತವ ಸುಳಿದು ಸೂಸುವ ಪರಿಪರಿಯ ಬಣ್ಣಗಳ ತೋರಿಸಿ॥ ಪರ ಮುಖನಾಗಿ ಪತ್ತಲೆ ಯೊಳಿರಿಸಿ ಎನ್ನ ನರಕ ಶರೀರಿಯ ಮಾಡದಿರಯ್ಯ ॥೧॥

ಸಾಕಾರದ ಸಂಗದ ಸುಖದಲ್ಲಿ ವ್ಯಾಕುಳನಂ ಮಾಡಿ ಎನ್ನನಿರಿಸದೆ ॥ ಸೂಕ್ಷ್ಮಶುದ್ಧಾಂತಃಕರಣದ ಮೇಲೆ ಕಮಲಾನೆನದ ಲಿಂಗದ ಬೆಳಗಿನೊಳಗಿರಿಸು ॥೨॥

ಬೇಕೆನ್ನದೆ ಬೇಡೆನ್ನದೆ ಪರಿಯನ್ನು ಸಾಕೆನ್ನದ ಸವಿಯೆನ್ನದ ರುಚಿಯನ್ನು॥ ಪಾಪ ಪುಣ್ಯಗಳೆಂಬ ಒಯಕೆಗಳ ಸೋಂಕಿಲ್ಲದೆ ನಿರ್ಲೇಪನಾಗಿರಿಸು ॥೩॥

ಅಮಲ ರೂಪಾದಿ ಕಮಲದಲ್ಲಿ ವಿಮಲ ಶುದ್ಧ ಸ್ಪಟಿಕ ಜ್ಯೋತಿಯದರಿ॥ ಷಡುವರ್ಗವ ಕೊಂಡು ಕಮಳ ನಾಳಸದ ಬಿಂದುವಿನೊಳಗಾಗೆನ್ನುವ ನಿರಿಸು ॥೪॥

ಕರಣಾದಿಗಳರತವು ಭೂಮಿಯ ಮೇಲೆ ಸರವರದ ಕಮಲದ ಮೇಲೆ ॥ ಪರಿಣಾಮದಲಮೃತ ಬಿಂದು ಕರಗಿ ಎನ್ನಿರವು ಲಿಂಗದಲ್ಲಿ ಲೀಯ್ಯವಾಗಿ ॥೫॥

ಮರುತಂಗೂಡಿದ ಪರಿಮಳದಂತೆ ಯುರಿಯುಂಡ ಕರ್ಪೂರಕರಿದೋರದಂತೆ ॥ ಸದವು ಬಿಂದು ಸುಸರವಾಗಿ ಎನ್ನಾರವುಲಿಂಗದಲ್ಲಿ ಲಿಂಗೈಕ್ಯವಾಗಿ ॥೬॥

ಐನೀಂದ್ರಿಯ ನೈದೆನಾಳದಲ್ಲಿ ಕಟ್ಟಿ ಭೇದಿಸಿದೆನು ಕರಣಾದಿ ಗುಣಗಳ॥ ವೈದೆಗೆದೆನು ಕಾಮ ಕಣ್ಣಳವಡದೆ ಸಾಧಿಸಿದೆನು ಕೂಡಲ ಚನ್ನ ಸಂಗನ ಬೆಳಗಾ ॥೭॥

ಶಾರ್ದೂಲಃ— ಭಾವಗ್ರಾಹ್ಯನೆನಿಪ್ಪ ನಿಷ್ಕಳ ನಿಜಾಕಾರಂ ಶಿವಬ್ರಹ್ಮಕ । ಲ್ಪಾ ವಿಭ್ರಾವಕರಂ ಪರಾತ್ಪರಮ ವರ್ಣಂ ನಿರ್ಮಲಂಶಾಶ್ವತಂ॥ ಭಾವಾಭಾವಕರಂ ಸದಾ ನಿಬಿಡತೇಜೋ ಲಿಂಗಮಂ ಕೂರ್ಕ್ಕೆಯಿಂ । ದಾವಿಷ್ಟಾಷ್ಟಯತೀ ಶ್ವರರ್ ಬಗೆವರ್ಕೈ ಶ್ರೀ ಸಿದ್ಧಲಿಂಗೇಶ್ವರಾ ॥೪॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನಾಲ್ವತ್ತೊಂಬತ್ತನೆಯದಾದ ಭಾವಲಿಂಗ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೫೦ ಜ್ಞಾನಲಿಂಗಸ್ಥಲ

ಸೂತ್ರಃ— ಇಂತು ಸದ್ಭಾವದಲ್ಲಿ ಭರಿತವಾಗಿ ಚಿದ್ಭಾವ ಸ್ವರೂಪವ ನೈದಿದ ಲಿಂಗವು ಸದ್ಭಕ್ತನಂಗದಲ್ಲಿ ನಿಂದು ಮಹಾಜ್ಞಾನ ಸ್ವರೂಪವಳವಡಲು, ಮುಂದೆ ಜ್ಞಾನ ಲಿಂಗಸ್ಥಲವಾದುದು.

ವಚನಃ— ಅಗ್ನಿ ಮುಟ್ಟಲು ತೃಣ ಭಸ್ಮವಾದುದುನೆಲ್ಲರು ಬಲ್ಲರು. ತೃಣದೊಳಗೆ ಅಗ್ನಿ ಉಂಟೆಂದು ತಿಳಿದು ನೋಡಿನಡೆ, ಅಗ್ನಿಯನೇ ಜಲವು ನುಂಗಿ ಜಲವನೇ ಅಗ್ನಿನುಂಗಿತ್ತು. ರೂಪು ನಿರೂಪು ಗಳೆರಡನು ನುಂಗಿತ್ತು ಪೃಥ್ವಿ ಎಲ್ಲವ ನುಂಗಿತ್ತು. ಆಕಾಶವ ನೈದು ನುಂಗಿತ್ತು. ಇದ ನರಿದೆನೆಂಬ ಜಡರುಗಳು ನೀವು ತಿಳಿದು ನೋಡಿರೇ. ತಿಳಿಯ ಬಲ್ಲಡೆ ಗುಹೇಶ್ವರನ ನಿಲವುತಾನೆ ॥೭॥

ಪದ— ರಾಗ— ಭೂಪಾಳಿ

ಊದ ಜ್ಮುಖನೊಬ್ಬ ಪುರುಷನು ಉಪಯ ಮುಖ ನೊಬ್ಬ ಪುರುಷನು ವಿರಾಟಜನನ ನೊಬ್ಬ ಪುರುಷ ವಿರಾಜ ಪುರಷ ನೊಬ್ಬನು ॥ಪ॥

ಸಹಸ್ರಶಿರಸನಾದಿ ಪುರುಷನು ವೇದ ಪುರುಷ ನೊಬ್ಬನು ॥ ಜ್ಯೋತಿ ಪುರುಷನೊಬ್ಬ ಪುರುಷತ್ರಿ ಪಾದದ ಊರ್ಧ್ವಪುರುಷ ನೊಬ್ಬನು॥೧॥

ಆದಿ ಪುರುಷನೊಬ್ಬ ಪುರುಷನು ನಿಯತ್ಪುರುಷನೊಬ್ಬನು ತದ್ವಿಯತ್ಪುರುಷ ಪುರುಷ ಪುರುಷರಿಲ್ಲದ ಪ್ರಭೆಯು ನೋಡಿರೆ ॥೧॥

ಏಕಾತುರ್ಯ ಪರಬ್ರಹ್ಮಂ ವೇದ ತಸ್ಮೈ ನಮಸ್ತೇ
ವೇದನಾದಾತೀತ ತೂರ್ಯಂ ಪರಮಂ ನಿರವಯಂ ॥೩॥

ಚಿದ ಸಂವೇದ್ಯ ನಿರ್ವಿಕಲ್ಪಂ ನಿರಹಂ ನಿರಾಕಾರ
ಓಂಕಾರ ಗುಣಾತೀತಮವ್ಯಕ್ತಂ ॥೪॥

ಷಟ್ತ್ರಿಂಶತ್ಪ್ರಭಾಪಟಲದ ಪ್ರಭೆಯು ಬೆಳಗಿದೆ ನೋಡಿರೇ
ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಕೂಡಲ ಸಂಗಯ್ಯ ॥೫॥

ಮತ್ತೇಭ:— ಉಪಮಾತೀತಮೆನಿಪ್ಪಖಂಡ ನಿಜತೇಜೋರೂಪಮಾಗಿರ್ಪ ಸ । ದ್ವಿಪುಳಜ್ಞಾನ ವಿಶಿಷ್ಟಮಾದ ಘನಲಿಂಗಂ ಭಾವದಿಂ ವಾಕ್ಯದಿಂ ॥ ತಪದಿಂ ಕರ್ಮದಿ ನಿಂತು ಸಾಧಿಪೊಡಸಾಧ್ಯಂ ಮತ್ತಮಾ ನಿನ್ನಸ। ತ್ಕೃಪೆಯೊಂದುಳ್ಳೊಡೆ ಸಾಧ್ಯಮಪ್ಪುದು ದಿಟಂ ಶ್ರೀಸಿದ್ಧಲಿಂಗೇಶ್ವರಾ ॥೫॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತನೆಯದಾದ ಜ್ಞಾನಲಿಂಗ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೩೫. ಸ್ವಯ ಜಂಗಮ ಸ್ಥಲಂ

ಸೂತ್ರ:— ಇಂತು ಕ್ರಿಯಾಲಿಂಗ ಭಾವಲಿಂಗ ಜ್ಞಾನಲಿಂಗವೆಂಬ ತ್ರಿವಿಧಸ್ಥಲವೇಕವಾದ ಲಿಂಗವು ಭಕ್ತನ ಸ್ವಯಂಭಾವ ಗುಣದಲ್ಲಿ ನಿಶ್ಚಲವಾಗಿರ್ದ ಭೇದವೆಂತಿರ್ದುದು ಎಂದಡೆ ಮುಂದೆ ಸ್ವಯಜಂಗಮ ಸ್ಥಲವಾದುದು.

ವಚನ:— ಅದುಬೇಕು, ಇದುಬೇಕು ಎಂಬ ಎದೆಗುಂಡಿಗೆತನಬೇಡ, ಸದ್ಭಾವನಾಗಿರ್ದಡೆ ಸಾಕು. ಪಡಿ ಪದಾರ್ಥಂಗಳು ತಾನಿದ್ದೆಡೆಗೆ ಬಾಹವಯ್ಯ. ನಿಧಿ ನಿಕ್ಷೇಪಂಗಳು ತಾನಿದ್ದೆಡೆಗೆ ಬಾಹವಯ್ಯ. ಸದುಹೃದಯ ಶುದ್ಧನಾಗಿ ಸಕಳೇಶ್ವರ ದೇವಂಗೆ ಶರಣೆಂದಡೆ ನಿಜಪದವಿಯನೀವನು. ॥೭॥

ಪದ—ರಾಗ—ರೇಗುಪ್ತಿ.

ಗಿರಿಗಳಕಂದರವ ವಿವರಿಸಿ ಶಿವಸಂಸಾರಿಗಳು ॥ಪ॥

ಸಜ್ಜನ ಕೆಂಜಡೆಮುಡಿ ತ್ರಿಪುಂಡ್ರ ದರುಶನ ಪೂರೆ ನೋಟವು ಲಿಂಗಭಾವ ಆಚಾರವೆಂಬ ॥ ಓಲೆಯನಿಟ್ಟು ಜ್ಞಾನವೆಂಬ ವಸ್ತ್ರವನುಟ್ಟು ಶರಣಸತಿಲಿಂಗಪತಿಯಾದನು ॥೧॥

ಎಕ್ಕೈಗ್ರಹವಾಗಿ ಮರನೆ ಮಡಕೆಯಾಗಿ ಹಣ್ಣೆ ಓಗರವಾಗಿ ತಣ್ಣ ನಡಕಿಡಲು । ಸೀತಳವಾಗಿ ಉಣಲಿಕ್ಕೆ ಆಣಿಲೆ ದಂಬುಲಗೊಟ್ಟರೂ ॥೨॥

ಭೇಡನಾರಂಭವ ಮಾಡುವ ಪರಿಬೇರಿಂದ ಕಂದ ಮೂಲಾದಿಗಳ ಶಾಕವಿಲ್ಲದೆ । ಪಾಕವಮಾಡಿ ತಮ್ಮ ಗಂಡರಿಗಿಕ್ಕಿ ತಾವು ಮೆಲುವರಯ್ಯಾ ॥೩॥

ಎರಳೆ ಸಾರಂಗ ಪುಲಿಮೃಗ ಪಶು ವಾನರ ನೆರೆಯಾಗಿರಲು ಕೂಗುವ। ಕೋಗಿಲೆ ಕಳಹಂಸಿ ಕುಣಿಕುಣಿದಾಡುವ ನವಿಲುಗಳೂ ॥೪॥

ಸತ್ತು ಸಂಯೋಗದಿಂ ಭಕ್ತಿಯ ರತಿ ಕೂಡಲು ಸಮತೆಯೆಂಬ ಬಸುರಾಗಲು । ಪರಿಣಾಮವೆಂಬ ಮಗಹುಟ್ಟಲು ರೇಕನಾಥಯ್ಯನೆಂದು ಹೆಸರಿಟ್ಟರು. ॥೫॥

ಮತ್ತೇಭಃ— ಶಿವಚಿನ್ಹಾಂಕಿತನಾಗಿ ಬಾಹ್ಯದ ಬಹು ವ್ಯಾಪಾರಮಂ ತೀರ್ಚಿಯು । ತ್ಸವದಿಂ ಸರ್ವಪದಂಗಳಂಜಯಿಸಿ ಸುಜ್ಞಾನಾಮೃತಸ್ವಾದದಿಂ ॥ ದವೆ ಸಂತೃಪ್ತಿಯನೆಯ್ದಿ ನಿರ್ಜನ ವನ ಪ್ರಾಂತಂಗಳೋಳ್ವಾಜಿನಿಸು । ತ್ತಿವೆ ನಿಮ್ಮಂ ಸುಖಮಿರ್ಪ್ಪದಂಕರುಣಿಸಾ ಶ್ರೀಸಿದ್ಧಲಿಂಗೇಶ್ವರಾ ॥೫.೧॥

ಗದ್ಯಃ— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತೊಂದನೆಯದಾದ ಸ್ವಯಜಂಗಮ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫೨. ಚರ ಜಂಗಮ ಸ್ಥಲ.

ಸೂತ್ರಃ— ಇಂತು ಸ್ವಯಂ ಭಾವ ಗುಣದಲ್ಲಿ ನಿಶ್ಚಲವಾದ ಲಿಂಗವು ಭಕ್ತನಲ್ಲಿ ನಿಂದು ಭಕ್ತಿಕಾರಣವಾಗಿ ಚರಿಸುವ ಭೇದವೆಂತಿರ್ದುದೆಂದಡೆ ಮುಂದೆ ಚರಜಂಗಮಸ್ಥಲವಾದುದು.

ವಚನಃ— ಹಸಿವಿಲ್ಲದೆ ಉಣಬಲ್ಲಡೆ, ಉಪಾಧಿ ಇಲ್ಲದೆ ಬೇಡಬಲ್ಲಡೆ, ಆದುವವರ್ಮ, ಅದು ಸಂಬಂಧ. ಗಮನವಿಲ್ಲದೆ ಸುಳಿವಡೆ, ನಿರ್ಗಮನಿಯಾಗಿ ನಿಲಬಲ್ಲಡೆ, ಅದುವವರ್ಮ ಅದುಸಂಬಂಧ. ಅವರ ನಡೆ ಪಾವನ, ಅವರ ನುಡಿ ತತ್ವ, ಅವರ ಜಗದಾರಾಧ್ಯರೆಂಬೆ ಕಾಣಾ ಗುಹೇಶ್ವರಾ.॥

ಪದ—ರಾಗ—ಲಲಿತ.

ಬೇಡುವ ನವ ಯೋಗಿ, ಭಕುತಿ ಭಿಕ್ಷಾಂದೇಹಿ ಎಂದು, ಬೇಡುವ ನವ ಯೋಗಿ ॥ಪಲ್ಲ॥

ಸತ್ಯ ಶಿವಧಾರದರಿವೆ ಕಚ್ಚಟ ಶಾಂತಿ ತ್ರಿಪುಂಡ್ರವ ಹೂಸಿ।
ಹೃದಯ ಕಮಲದ ಸೆಜ್ಜೆಯ ಪ್ರಾಣಲಿಂಗ ಸಂಬಂಧಿಯಾಗಿಪ್ಪನವ್ವಾ ॥೧॥

ಸಮತೆಕಂಥೆ ಸುಮತಿ ಟೊಪ್ಪರ ನಿಸ್ಸಂದೇಹ ಹಾವುಗೆಯ ಮೆಟ್ಟಿ।
ಕರುಣ ಖರ್ಪರ ಕರಣ ಗೋಲುಮುದ್ರೆ ವಿಡಿದಿಪ್ಪನವ್ವಾ ॥೨॥

ಕಾಮ ಕುಳಿಯು ಕ್ರೋಧ ಕೊರಡು ಮೋಹ ಮುಳ್ಳು ಲೋಭ ಕೊಂಪೆ। ಮದದ ಚೇಳು ಮತ್ಸರದ ಹೊಳಹ ನರಿದು ಸುಳಿದನವ್ವ ॥೩॥

ಸಂಸಾರದಹಂಕಾರದ ಕತ್ತಲೆಯನರಿದು ಸುಳಿವನವ್ವಾ।
ಸಂಚೇಂದ್ರಿಯಿಂಗಳೆಂಬ ನಾಯಿಗಳು ನೋಡುವವು ಗುರ್ರೆನ್ನದೆ ॥೪॥

ಪಂಚಭಿಕ್ಷವ ರೇಕನಾಥನ ಮಗಹುಟ್ಟ ನಲ್ಲಿಕ್ಕೆಲಿಂಗ।
ಪಾಣಿಪಾತ್ರೆಯಿಂದು ಅಂಗೈಯಲಿಯಿಕ್ಕಿದ ಗುರುವೇ ॥೫॥

ಮತ್ತೇಭಃ— ಕುಸುಮಂ ನೋಯದ ಪೋಲ್ಮರಂ ಮಧುಕರಂ ತತ್ಪುಷ್ಪದೊಳ್ತೋರ್ಪತ । ದ್ರಸಮಂ ಸ್ವೀಕರಿಪಂತೆ ಸಾಧುಗಳೆನಿಪ್ಪಾ ಭಕ್ತರಂ ನಾಡೆಪೇ ॥ ಡಿಸದಾ ಶಾಂತಿಯು ನಿಂಬುಗೊಂಡು ವಿಲಸನ್ಮಾತ್ರ ಧೂಕರೀಭಿಕ್ಷಮಂ। ನಿಸದಂ ಕೈಕೊಳು ತಾರ್ದೇವರ್ಚರಿಸುವರ್ ಶ್ರೀ ಸಿದ್ಧಲಿಂಗೇಶ್ವರಾ ।೫೨॥

ಗದ್ಯಃ— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತೆರಡನೆಯದಾದ ಚರ ಜಂಗಮ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೩೭. ಪರಜಂಗಮ ಸ್ಥಲ.

ಸೂತ್ರಃ— ಇಂತು ಭಕ್ತಿಕಾರಣವಾಗಿ ಚರಲಿಂಗವು ಭಕ್ತನ ಚಿದಾತ್ಮನಲ್ಲಿ ಶ್ರೀಮತ್ಸ್ವರೂಪರ ನಿರ್ಗಮನವೆಂತಿರ್ದುದೆಂದಡೆ ಮುಂದೆ ಪರ ಜಂಗಮಸ್ಥಲವಾದುದು.

ವಚನಃ— ಕುಲವಳಿದು, ಛಲವಳಿದು, ಮದವಳಿದು, ಮತ್ಸರವಳಿದು, ಆತ್ಮತೇಜವಳಿದು, ಸರ್ವ ಅಹಂಕಾರವಳಿದು, ಶ್ರೀಮನ್ನಿಜ ಉಳಿದು ಲಿಂಗಜಂಗಮವೆಂಬ ಶಬ್ದವಿಡಿದು ಸಾಧ್ಯವಾಯಿತ್ತು ನೋಡಾ. ತಾನಳಿದು ತಾನುಳಿದು ಸಹಜಪದವಿಯಲ್ಲಿ ಕೂಡಲಸಂಗನಲ್ಲಿ ತಾನು ತಾನಾದಾ ||೧||

ಪದ-ರಾಗ—ಮಾಳವಗೌಳ

ಬರಿದೆ ಭ್ರಾಂತಿಗೊಳಗಾಗಲು ಅರಿಕೆಗೆಡಲು ತಾನೆ ಬೇರೆ ತೋರಲಿಕಿಲ್ಲ ||ಪಲ್ಲ||

ಮಾತಿನ ಸೂತಕವದಂ ನೇತಿಗಳೆದು ನಿಂದನಿಶ್ಚಯ ಆತುಮಜ್ಞಾನದ ಸುಖಸನ್ಮಾತ್ರ ಭರಿತಂಗೆ। ಜಾತನಲ್ಲ ಖ್ಯಾತನಲ್ಲ. ನೀತಿಗೊಳ್ಪದನುಪಮ ಸುಖಿ ಸ್ವತಂತ್ರಸ್ವಯಂಪ್ರಕಾಶನಾತನೆ ಮುಕ್ತ ||೧||

ಹಮ್ಮುಗೆಟ್ಟ ಕರ್ಮವಳಿದು ನಿರ್ಮಳ ನಿಷ್ಪತಿ ನಿಜದಿಂ ಸುಮ್ಮಾನ ದಶಾಂತಿರಸದ ನಿತ್ಯತೃಪ್ತಂಗೆ। ಉಮ್ಮಾಳದುಮ್ಮಾನವಿಲ್ಲದೊಮ್ಮೆ ಯಾನಂದಸಹಜ ಬೊಮ್ಮವಾಗಿ ನಿಂದನಿಲವನುಪಮಿಸಬಹುದೆ ||೨||

ಅರಿವುಗೆಟ್ಟ ಕುರುಹು ಮರದು ನಿರ್ಣಯ ನಿಷ್ಪತಿ ನಿಜವನರಸಿ ತೊಳಲಿ ಬಳಲಲೇಕೆ ಸ್ವಾನುಭಾವಕೆ। ಕರೆಯ ಮರೆಯ ಮಾಯಬಲೆಯ ಹರಿಯಲೊಡನೆ ಒಚ್ಚಬರಿಯಬೆರಗು ನಿರುಗೆಯಾಗಿ ನಿಂದನು. ||೩||

ಆನುವೆನ್ನದನ್ಯವೆನ್ನದೇನುವೆನ್ನದತ್ಯಂತ ಶುದ್ಧಸ್ವಾನುಭಾವ ಸ್ವತಂತ್ರನಾದ ಮುಕ್ತನಾದ ನಿತ್ಯಗೆ। ಧ್ಯಾನ ಮೌನ ಮಂತ್ರ ತಂತ್ರ ಜ್ಞಾತೃ ಜ್ಞಾನ ಜ್ಞೇಯವಿಲ್ಲದೆ ತಾನೆ ತನ್ನನರಸಿಕಂಡ ನಿರುಪಮಮಹಿಮ ||೪||

ಭಾವರಹಿತ ಜೀವನ್ಮುಕ್ತ ಸಾವಯವಾಗಿರ್ದಡೇನು ಕೇವಲ ಜ್ಞಾನಸ್ವರೂಪನಾದ ನಿತ್ಯಗೆ ಆವಭಾವದ। ಬಾಧೆ ಇಲ್ಲ ದೇವಕಲ್ಲೇಶ್ವರನಲ್ಲಿ ಕೈವಲ್ಯಪದವ ನೊಡೆದ ಶ್ರೀಮಹಂತಂಗೆ ||

ಮತ್ತೇಭಃ— ಪಿರಿದುಂ ಧ್ಯಾನಜಪಂ ನಮಸ್ಕೃತಿ ಲಸತ್ಪೂಜಾದಿ ಕರ್ಮಂಗಳಂ। ನಿರುತಂ ತೋರದೆ ದೃಶ್ಯಮಂ ಮರೆದು ಶುದ್ಧಾಶುದ್ಧ ಭೋಗಂಗಳಿಂ॥ ಬೆರಡಂ ಪೊರ್ದದೆ ಕಾರ್ಯಕಾರಣಮವಂ ಮೀರಿರ್ದ ತಲ್ಲಿಂಗವೇ। ಪರನಂತಾತನೆ ನೀನಲಾ ನಿಜಮಿದೇ ಶ್ರೀ ಸಿದ್ಧಲಿಂಗೇಶ್ವರಾ ॥೫೩॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತು ಮೂರನೆಯದಾದ ಪರಜಂಗಮಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫೪. ಕ್ರಿಯಾಗಮಸ್ಥಲ.

ಸೂತ್ರಃ— ಇಂತು ನವಸ್ಥಲಂಗಳೇ ತ್ರಿವಿಧ ತ್ರಿವಿಧ ಸ್ಥಲಂಗಳೇಕವಾದ ಆಚಾರಲಿಂಗವು ವೀರಮಾಹೇಶ್ವರನ ಗುರುಲಿಂಗವು ಸತ್ಕ್ರಿಯೆಯಲ್ಲಿ ಆಗನು ಸ್ವರೂಪವನ್ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಕ್ರಿಯಾಗಮಸ್ಥಲವಾದುದು.

ವಚನಃ— ಶಿವಾಚಾರವೆಂಬುದೊಂದು ಬಾಳಬಾಯಿಧಾರೆ ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು, ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು. ಬೇರಾದರೆ ಮೆಚ್ಚುವನೇ ನಮ್ಮ ಕೂಡಲ ಸಂಗಮದೇವಾ.

ಪದ—ರಾಗ—ಘುರ್ಜರಿ

ಭಕ್ತಿಯರಿದರಿದಾರಿಗು ಆಗದು ಶರಣ ಸಾರಾಯ ಸುಸಂಗ। ಅರಿವ ಗರಗಸದಂತಿರ್ದುದು ಅಹಿ ಪತಿಯಾಭರಣ ॥ಪ॥

ಶಿವಸಾರಾಯದಲ್ಲೊದಗಿದ ಬೀಜದ ಪರಿಯೆಂತೆಂದೆನೆ ಹೇಳುವೆ ಕೇಳಿರಿ। ಶಿವಭಕ್ತರ ಕ್ಷೇತ್ರದೊಳಗೆ ಹುಟ್ಟಿತೊಂದು ನಾರಿವಾಣದ ಸಸಿಯು॥ ದಿವರಾತ್ರಿಗಳೆಂಬ ತಂಗಾಳಿ ಬೀಸಲು ಅವರಿಚ್ಛೆಗೆ ಅದು ಒಲಿಯುದು ನೋಡ ಒಲಿವು ಸಜ್ಜನ ಶರಣರು ಸಾತ್ವಿಕ ಸದುಭಕ್ತರುಗಳಲಿ॥೧॥

ಪರದ್ರವ್ಯಂಗಳ ಪರಸಮಯಂಗಳ ಪರಸ್ತ್ರೀಯರ ಪರದ್ರವ್ಯವ ಮುಟ್ಟರು। ಇರವಿಗೆ ಸೀಮೆಯ ಮಾಡಿಕೊಂಡಿಹಡೊಂದಾಚಾರದ ಕಾಹಾ॥ ಕರ ಸೋಜಿಗ ಜೇನ್ತುಪ್ಪವನಾಹುಳ ಪರವಾದಿ ಯಂಜಲೆಂದರೆ ಮುಟ್ಟದು। ಶಿವಭಕ್ತನಾಗಿ ಇವ ಬಿಡದಿರ್ದಡೆ ಅವ ಕರಪಾತಕನೂ॥೩॥

ಬ್ರಹ್ಮೇತಿಕಾರನು ಸುರೆಸೇವಕರನು ದುವರ್ುಖ ಚೋರನು ಗುರು ತಲ್ಪಕರನು। ಒವ್ಮ್ಮೆಯು ಬೆರಸಿದಡೈದನೆಯ ಪಾತಕವೆಂದುದು ಗುರು ವಚನಾ॥ ವರ್ಮವರಿದು ಮತ್ತವದಿರ ಬೆರಶುವ ಕರ್ಮಿಗಳಿಗೆ ಇನ್ನಾವುದು ಗತಿಯು। ಜನ್ಮಜನ್ಮದಿ ಹುಳುವಿನ ಕೊಂಡವೆ ನರಕವೆ ಪ್ರಾಪ್ತಿಗಳು॥೩॥

ಭವಿಸಂಗಡದಲಿ ಬಟ್ಟೆಯ ಚಾರನು ಭವಿನುಡಿಗಡಣವನೆಂತು ಕೇಳನು। ಭವಿಯಾಸನದಲಿ ಕುಳ್ಳಿರನಾತನ ಸಹ ಪಂಕ್ತಿಯಲುಣ್ಣನು॥ ಭವಿಗುಶ್ರೂಷೆಯನು ಭವಿಹೊಗಳತೆಯನು ಭವಿಶಯನೆಂಗಳ ಭವಿಪಾಕಂ ಗಳ। ಭವಿನೆರೆಮನೆಯೊಳಗಿರನಾ ಶರಣನು ಲಿಂಗದ ಸೃತಿಗೇಳಿ॥೪॥

ಲಿಂಗವಿಲ್ಲದ ನಡೆ ಲಿಂಗವಿಲ್ಲದ ನುಡಿ ಲಿಂಗವಿಲ್ಲದ ಸಂಭಾಷಣೆಯ ಸುಖ। ಲಿಂಗಭಕ್ತನು ಮಾಡಲಾಗಿ ಮತ್ತಲ್ಲಿಯೆ ಬರುತಿಹನ॥ ಲಿಂಗಾ ರ್ಚನೆ ಲಿಂಗಾರ್ಪಣವಿಲ್ಲದೆ ಕೊಂಡರೆಕಿಲ್ಬಿಷ ನಾಯಕ ನರಕವು। ಲಿಂಗದ ಶೃತಿ ಇಂತೆಂದುದಾಗಿ ಇವ ಕೇಳದಿರಲು ಬಹು ಪಾಪಾತ್ಮನು॥೫॥

ಹುತ್ತುದೊಳಯಿಕೆ ಸರ್ಪ ಹೊಗಲು ಮನೆಗಟ್ಟದೊರಲೆ ಬಿಟ್ಟೋಡು ವ ತೆರದಿಂ। ಸತ್ಯರ ಸಾರಾಯರ ಅನುಭಾವದುಪದೇಶಂಬರಲು॥ ಸುತ್ತಿದ ಪ್ರಪಂಚು ಭವಕರ್ಮಂಗಳು ಬಿಟ್ಟೋಡುವ ಶರಣರಾಜ್ಞೆಗೆ। ಭಕ್ತಿಯ ಸಂಗ ವಿಷದ ಸಂಗವರಿದನು ಬಸವಣ್ಣಾ॥೬॥

ಭಾಷೆಯ ಸತ್ಯರ ಅನುಭಾವಂಗಳ ನಿಂಬುಗೊಂಡ ಮಹಂತರ ಪಾದವ ನಂಬಿದ ತೆರನರಿನುದೆ ಉದ್ಧರಿಸುವ ಲಿಂಗವ ತೋರುವರು॥ ಇಂತೆಂದುದು ಕೂಡಲಚನ್ನಸಂಗನಲ್ಲಿ ತಂದೆ ಬಸವಣ್ಣ ತೋರಿದ ಪಥ ವಿದು ನಂಬಿದ ಭಕ್ತರಿಗಹುದಲ್ಲದೆ ಅಭ್ಯಾಸಿಗಳಿಗಳವಡದು॥೭॥

ಮತ್ತೇಭಃ— ಅನುಲಜ್ಞಾನ ವಿಶಿಷ್ಟಲಿಂಗವದು ತಾನೇ ಸತ್ಕ್ರಿಯಾ ಮಾರ್ಗದೋಳ್। ಗಮನಂಗೊಂಡಿರೆ ಭಕ್ತಿಯಿಂ ಸಕಲ ಪೂಜಾದ್ರವ್ಯ ದಿಂದಾವಗಂ॥ ಪ್ರಮುದಂಬೆತ್ತತಿ ಶುದ್ಧನಾಗಿ ನಿಜದಿಂದಂ ಪೂಜಿಸ

ಲ್ಕಂತವಂ। ಕ್ರಮದಿಂ ವೃತ್ತ್ಯವ ನಿಂತು ದಾಂಟುವನಲಾ ಶ್ರೀ ಸಿದ್ಧ ಲಿಂಗೇಶ್ವರಾ ।೫೪॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತು ನಾಲ್ಕನೆಯದಾದ ಕ್ರಿಯಾಗಮಸ್ಥಲದ ವಿಚಾರವು ಅನುವಿನಿಂ ಮುಗಿಯು ಲಾಯಿತು.

---

೫೯. ಭಾವಾಗಮಸ್ಥಲ.

ಸೂತ್ರ:— ಇಂತು ಕ್ರಿಯಾಗಮ ಸ್ವರೂಪವನ್ನೈದಿದ ಲಿಂಗವು ವೀರ ಮಾಹೇಶ್ವರನ ಅಂಗದೊಳಗೆ ನಿಷ್ಠಾಸ್ವರೂಪವನ್ನೈದಿದ ಭೇದವೆಂತಿರ್ದು ದೆಂದಡೆ ಮುಂದೆ ಭಾವಾಗಮಸ್ಥಲವಾದುದು.

ವಚನ:— ಸುತ್ತಿ ಸುತ್ತಿ ಬಂದಡಿಲ್ಲ; ಲಕ್ಷಗಂಗೆಯ ಮಿಂದಡಿಲ್ಲ; ಮೇರುಗಿರಿಯ ಮೆಟ್ಟ ತುಟ್ಟತುದಿಯಲ್ಲಿ ನಿಂದು ಕೂಗಿದಡಿಲ್ಲವಯ್ಯಾ! ನಿಚ್ಚನೇಮದಿಂದ ತನುವ ಮುಟ್ಟಕೊಂಡಡಿಲ್ಲವಯ್ಯಾ. ನಿಚ್ಚನಿಚ್ಚ ನೆನೆವ ಮನವನರಿದಂದಿಂಗೆ ಅತ್ತಿತ್ತ ಹರಿಯಗೊಡದೆ ಚಿತ್ತೈಕಾಗ್ರತೆಯಾಗಿ ನಿಲಿಸ ಬಲ್ಲಡೆ ಬಚ್ಚಬರಿಯ ಬೆಳಗು ಗುಹೇಶ್ವರಾ ನಿಮ್ಮ ಶರಣಾ ॥೨॥

ಪದ—ರಾಗ—ವರಾಳಿ.

ಲಿಂಗವನೋಡಿ ಶಿವಸುಖರತಿಯೊಳಗೋಲಾಡಿ ಯಾಡಿ। ವೈಮರೆ ವೃತ್ತ ಪೂಜೆಯ ಮಾಡುತಿರ್ಪೆನಯ್ಯಾ ॥ಪ॥

ಹೊರಗೆ ಮಾಡುತಿರ್ಪ ಸತ್ಕ್ರಿಯು ಮಂಗಳಮಯವಾಗಿ ಒಳಗೆ ಕಣ್ದೆರದು। ಪರಮಾನಂದ ರಸದೊಳಗೆ ಓಕುಳಿಯನಾಡುತಿರ್ಪೆನಯ್ಯ ॥೧॥

ಮನದ ನೆನಹು ಭಾವದೊಳಗೆ ಅನುಪಮವಾಗಿರಲಳವಟ್ಟ ಘನ ಸುಖ। ಕರತಳಾಮಳಕವಾಗಿ ನಿಮ್ಮೊಳಿರಡರಿಯದೆ ನೋಡತಿರ್ಪೆನಯ್ಯಾ॥೨॥

ನಿಮ್ಮನೋಟ ವೆನಗುಪಮಿಸಬಾರದ ಕೂಟ ನಿಮ್ಮ ನೋಟದ ತತಿ। ಯೊಳಗೆ ಆನೇನೆಂದರಿಯದೆ ನಿಜ ಸುಖಿಯಾಗಿರುತಿರ್ಪೆನಯ್ಯಾ॥೩॥

ರೋಮಾಂಚನ ಗುಡಿಗಟ್ಟಿಯಾಮಿಷ ವಿಷಯಂಗಳ ಮರದು ಕಾಮಿಸಿ। ಬಂದ ಪದಾರ್ಥವ ನಿಮ್ಮ ನಾಮಾಮೃತ ರಸದೊಳಗಿತರವ ನರಿಯೆನಯ್ಯ ||೪||

ಕಂಗಳ ನೋಟವೆ ಕರುವಾಗಿ ಮನದ। ಕೂಟವು ಜ್ಞಾನನಲ್ಲಿ ಹಿಂಗದೆ ನಿಮ್ಮ ಸಂಗ ಸಮ। ನಿಸಿ ಕೂಡಲ ಸಂಗಯ್ಯನ ಲಿಂಗಯ್ಯಾ ಎಂದು ಯೆ:ನುತಿರ್ಪೆನಯ್ಯಾ ||೫||

ಮತ್ತೇಭಃ—ಮುದದಿಂ ದಾವುದು ಭಾವಗೋಚರ ಮದೇ ತದ್ವಸ್ತು ತಾನಪ್ಪುದಂ । ತದರಿಂ ಸೂರ್ಯ ಶಶಿಪ್ರಭಾದಿಗಳನೆಲ್ಲಂ ಮೀರಿ ತಚ್ಚಿತ್ರಮಾ ॥ ವಿದಿತಂ ಪಜ್ಜಳಿಪಾ ಮಹೇಶ್ವರನನಾಮಂ ಭಾವಿಪಂ ಮತ್ತವಂ। ಪದೆದಾ ಶಂಕರನಪ್ಪ ನೆಂಬುದೆ ದಿಟಂ ಶ್ರೀ ಸಿದ್ಧಲಿಂಗೇಶ್ವರಾ ||೫೫||

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತೈದನೆಯುದಾದ ಭಾವಾಗಮಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫೦. ಜ್ಞಾನಾಗಮ ಸ್ಥಲ.

ಸೂತ್ರಃ—ಇಂತು ನಿಷ್ಠೆ ನಿಬ್ಬೆರಗೆನಿಸಿದ ವೀರ ಮಾಹೇಶ್ವರನ ಭಾವ ಸದ್ಭಾವಸನ್ನಿಹಿತವಾದ ಲಿಂಗದ ಮಹಾಜ್ಞಾನ ಚಾರಿತ್ರವೆಂತಿರ್ದುದೆಂದಡೆ ಮುಂದೆ ಜ್ಞಾನಾಗಮ ಸ್ಥಲವಾಮದು.

ವಚನಃ—ಅರಿದೆನು, ಅರಿದೆನು, ಎಂದಡೆ ಅದೇಕೋ ಮುಂದಣ ಮರವೆ? ಅರಿದೆನೆಂಬದು ನಿನ್ನಲ್ಲಿ ಲೇಸಾಗಿ ಉಳ್ಳಡೆ, ನಿನ್ನರಿವೆಲ್ಲವ ಹರಿಹಂಚು ಮಾಡಿ ನೀನರಿ ಮರುಳೇ. ಸ್ವತಂತ್ರ ಘನದೊಳಗಿರ್ದು ಸಿಜವನರಿಡಹೆನೆಂದಡೆ ಮೂರ್ತಿ ಕಿರಿದಲ್ಲ. ನಿಲ್ಲು. ಮಾಣು. ಗುಹೇಶ್ವನೆಂಬ ಲಿಂಗದ ಘನಗಟ್ಟಿಯನರಿವಡೆ ನಿನ್ನರಿವೆಲ್ಲ ಹರಿಹಂಚು ಮಾಡಿ ನೀನರಿ ಮರುಳೇ ||೧||

ಪದ—ರಾಗ—ಗೌಳ.

ಘನದ ಘನತೆ ಇನ್ನಾರಿಗೆ ವೇದ್ಯವಾಗದು। ಬ್ರಹ್ಮವ ಹೇಳುವಡೆ ನಿರ್ಮಾಲ್ಯವಾದುದು ||ಪ||

ಚತುರ್ಮುಖ ನಾಲ್ಕುವೇದ ಲಿಂಗ ತನ್ಮಾತ್ರೆಲಿಲ್ಲೆಂದರಿಯರು । ತಮ್ಮದೊಂದುದ್ರೇಕದಿಂದ ತಮ್ಮ ತಾವು ಲಯವಾದರೂ ॥೧॥

ಅರಿದೆನೆಂಬವನರಿವೆಯ ಹೊದ್ದನು ಕುರುಹಿನ ಸಂಸಾರಿಯಾಗಿ । ಪಂಚೇಂದ್ರಿಯಂಗಳ ಸಂಚುವನರಿಯದೆ ಕಾಲಕರ್ಮ ಲಯಕ್ಕಾದರೂ ॥೨॥

ಅಂಡಜ ಉದ್ಭಿಜ ತಾರಾಮಂಡಲದೊಳಗೊಂದು ನಾದವ ಕಂಡೆನು । ಅಖಂಡಿತ ನಿರ್ಣಯವನರಿಯದ ಮರುಳು ಮಾನವರೆತ್ತ ಬಲ್ಲರೂ ॥೩॥

ಉದಯಾಸ್ತ ಮಾನದ ನಡುವೆ ಒಂದು ತ್ರಿಜಗವೆಂಬ ಹುಳವು ಹುಟ್ಟಿತಲ್ಲ । ಆದಕಡಿದು ಸುಡುವದೊಂದು ಕಾರಣದ ಜಡಜೀವಿಗಳೆತ್ತ ಬಲ್ಲರು ॥೪॥

ಸರ್ವ ಜೀವದಯಾಪರನೊಬ್ಬಗಣೇಶ್ವರನು । ಸರ್ವಜನ ಪ್ರಳಯ ಕರ ನವನೊಬ್ಬನು । ಇವರಿಬ್ಬರ ತಪ್ಪಿಸಿ ಪೂಜಿಸಬಲ್ಲಡೆ ಪೂಜೆಯ ಕೈಕೊಂಬಗುಹೇಶ್ವರಾ ॥೫॥

ಶಾರ್ದೂಲಃ—ನಾನಾಶಾಸ್ತ್ರ ವಿಚಾರ ಮೆಯ್ದುದ ವಿಕಲ್ಪಂ ಪೂರ್ವ ದಿರ್ದದ್ವಿತೀ । ಯಾನಂದಾತ್ಮಕ ಚಿತ್ಪ್ರಸನ್ನ ಶಿವನಂ ಚಿನ್ಮಾರ್ಗಗಮ್ಯ ರ್ವಿಬೋ ॥ ಧ್ಯಾನುಷ್ಠಾನವೆ ಕಾಣ್ಬರಂತವರ ವಿದ್ಯಾಪಾಶವಿಚ್ಛೇದ್ಯರ । ನ್ಯೂನರ್ಥನ್ಯರತೀವಮಾನ್ಯರೆ ಗಡಾ ಶ್ರೀ ಸಿದ್ಧಲಿಂಗೇಶ್ವರಾ ॥೫೬॥

ಗದ್ಯಃ— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತಾರನೆಯದಾದ ಜ್ಞಾನಾಗಮಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

---

೫೧. ಸಕಾಯ ಸ್ಥಲ.

ಸೂತ್ರಃ— ಇಂತು ಕ್ರಿಯಾಗಮ ಭಾವಾಗಮ ಜ್ಞಾನಾಗಮ ವೆಂಬೀ ತ್ರಿವಿಧ ಸ್ಥಲವೇಕವಾದ ಲಿಂಗವು ವೀರ ಮಾಹೇಶ್ವರನ ಸರ್ವಾಂಗ ಮಥ ನದಿಂ ಲಿಂಗಕಾಯ ಸಂಬಂಧ ಸ್ವರೂಪವನ್ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಸಕಾಯ ಸ್ಥಲವಾದುದು.

ವಚನಃ— ಅಯ್ಯಾ, ಸಜ್ಜನ ಸದ್ಭಾವಿಗಳ ಸಂಗದಿಂದ ಮಹಾನು ಭಾವಿಗಳ ಕಾಣಬಹುದು. ಅಯ್ಯಾ ಮಹಾನುಭಾವಿಗಳ ಸಂಗದಿಂದ ಗುರುನಾಥನ ಕಾಣಬಹುದು. ಅಯ್ಯಾ ಗುರುವಿನ ಸಂಗದಿಂದ ಲಿಂಗ ದೇವನ ಕಾಣಬಹುದು. ಅಯ್ಯಾ ಲಿಂಗಯ್ಯನ ಸಂಗದಿಂದ ಜಂಗಮ ಸ್ವಾಮಿಯ ಕಾಣಬಹುದು. ಅಯ್ಯಾ ಜಂಗಮಗಳ ಸಂಗದಿಂದ ಪ್ರಸಾದವ ಕಾಣಬಹುದು. ಇದು ಕಾರಣ ಕೂಡಲ ಚೆನ್ನಸಂಗಮದೇವಯ್ಯಾ, ನಿಮ್ಮ ಸಜ್ಜನ ಶುದ್ಧ ಶಿವಾಚಾರ ಮಹಾನುಭಾವಿಗಳ ಸಂಗವನೇ ಕರುಣಿಸಯ್ಯಾ ॥೪॥

ಪದ–ರಾಗ–ಭೂಕಾಳಿ.

ಅಂಗಸಂಗಿಯು ಸಂಬಂಧಿಯಲ್ಲ । ಲಿಂಗದಲಾಪ್ಯಯನವಾಗಿತ ರಸು । ಖಂಗಳಬಿಟ್ಟು ಕಳದು ಸುಮನ ಸಾರಾಯುವಾದ ಶರಣನೂ ॥ಪ॥

ಗುರು ಕರುಣ ಸಂಯೋಗದಿಂದ ಶಿಷ್ಯನಿಂತು ಕರದಲ್ಲಿ ಹುಟ್ಟಿದನು। ಕರುಣಸನ್ನಿಹಿತವಾ ಗ್ರಾಹಿಯಾಗಿ ಗಾಳಿಯ ಸುಳುಹಡಗಿದ ಶರಣನೂ ॥೧॥

ಆಶೆಯೆಂಬುದ ಸುಳುಹಾಗಿ ಹಿಡಿದ ಛಲವ ಬಿಡೆನೆಂದೆಂಬ ಬೇರೂರಿ। ಸಂಕಲ್ಪ ವಿಕಲ್ಪವೆಂಬೆರಡಿಲ್ಲದೆ ನಿಷ್ಕಳನಾಗಿಪ್ಪ ನಿಜ ಶರಣನೂ ॥೨॥

ಮಾಡುವರ ಕಂಡು ಮಾಡುವನಲ್ಲ ಮಾಡದವರ ಕಂಡು ಮಾಡದವ ನಲ್ಲ। ತಾ ಮಾಡುವ ಮಾಟಕ್ಕೆ ತವಕಿಗನಾಗಿ ಹಿಂದು ಮುಂದರಿಯದ ಶರಣನೂ ॥೩॥

ಎಲ್ಲವು ತಾನೆಂಬ ಕರುಣಾಕರನಲ್ಲ ನಿಷ್ಕರುಣಿಯಾಗಿ ಜಡದೇಹಿ ಯಲ್ಲ । ಭೋಗಿಪ ಭೋಗಂಗಳ ಯಾಶೆಯಾಮಿಷ ತಾಮಸ ವಿಷಯ ವಿರಹಿತ ಶರಣನೂ ॥೪॥

ಘನವನಿಂಬುಗೊಂಡು ಮನದ ಬೆಂಬಳಿವಿಡಿದುಳಿದಲ್ಲಿ ನಿಜವಾಗಿ ನಿಂದನು । ತಾನೆಂಬುದಿಲ್ಲ ನಿರಂತರ ಸುಖಿ ಗುರುಚನ್ನಮಲ್ಲಿಕಾರ್ಜು ನಯ್ಯ ನಿಮ್ಮ ಶರಣನು ॥೫॥

ಮತ್ತೇಭಃ— ಸಕಲದ್ವಂದ್ವವಿಮುಕ್ತನುದ್ಧತ ಜಗತ್ಸಂತ್ಯಕ್ತ ಮಾಹೇ ಶನು। ತ್ವಸಕ ಲಿಂಗಾತ್ಮಕ ಕಾಯವಂತದು ಲಸನ್ನಿರ್ವಾಣ ಚಿಹ್ನಂ ಪವಿ॥ ತ್ರಕವಾದೇಹದ ವರ್ತನಂ ಸಹಜವೆಂತತ್ಯಂತ ಸದ್ಭಕ್ತಿಪೂ। ರ್ವಕದಿಂದ ರ್ಚಿಸುಗುಂ ಸುಖೇಪ್ಸಿತಜನಂ ಶ್ರೀ ಸಿದ್ಧಲಿಂಗೇಶ್ವರಾ ॥೫೭॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತೇಳನೆಯದಾದ ಸಕಾಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫೨. ಅಕಾಯ ಸ್ಥಲ.

ಸೂತ್ರ:—ಇಂತು ಲಿಂಗಕಾಯ ಮಥನದಿಂ ವೀರ ಮಾಹೇಶ್ವರನ ದೇಹ ನಿರ್ದೇಹವಾದ ಭೇದವೆಂತಿರ್ದುದೆಂದಡೆ ಮುಂದೆ ಅಕಾಯ ಸ್ಥಲವಾದುದು.

ವಚನ:—ಕುಲಮದವೆಂಬುದಿಲ್ಲ ಅಯೋನಿ ಸಂಭವನಾಗಿ. ಛಲಮದವೆಂಬುದಿಲ್ಲ ಪ್ರತಿದೋರದಾಗಿ. ಬಲಮದವೆಂಬುದಿಲ್ಲ ಅಸಾಧ್ಯ ಸಾಧಿಸಿದನಾಗಿ. ಮತ್ತಾವ ಮದವಿಲ್ಲ ನೀನವಗ್ರಹಿಸಿದ ಕಾರಣ. ಚನ್ನ ಮಲ್ಲಿಕಾರ್ಜುನಯ್ಯಾ ನಿಮ್ಮ ಶರಣ ಅಕಾಯ ಚರಿತ್ರನಾಗಿ ॥೫॥

ಪದ—ರಾಗ—ದೇಶಿ

ಮಂಗಳ ಮಂಗಳ ಶ್ರೀ ಗುಹೇಶ್ವರನ ಶರಣ ಲಿಂಗೈಕ್ಯಂಗೆ ಮಂಗಳಾ ॥ಪ॥

ಜಗವನೆಲ್ಲನೂರ ಮಾಡಿ ಊರನೆಲ್ಲವ ಮನೆಯ ಮಾಡಿ ಹೊಗದೆಶೆಯಿಲ್ಲದ ಸುಳುಹು ನೋಡಾ । ಸುಳುಹಿನ ಭೇದವನರಿಯದ ಕಾರಣ ದೇವಲೋಕ ಮರ್ತ್ಯ ಲೋಕವೆಲ್ಲ ಭ್ರಮೆಗೊಂಡಿತ್ತಲ್ಲ ॥೧॥

ಎಂಭತ್ತು ನಾಲ್ಕುಲಕ್ಷ ಯೋನಿಮುಖ ಜೀವಿಗಳಿಗೆ ಎಂಭತ್ತು ನಾಲ್ಕು ಲಕ್ಷಾರಾಧನೆಯ । ನೊಂದೊಂದರಿಯದೆ ಗೊಂದಣಗೊಂಡು ನಿಂದಲ್ಲಿ ನಿಲಲೀಯದೆ ಬರಿದೆ ಲಯವಾದುದೆಲ್ಲ ॥೨॥

ಭಕುತಿ ಯುಕುತಿಯನರಿಯ ಷೋಡಶೋಪಚಾರವನರಿಯ ಭಾವ ಸಂಕಲ್ಪ ವಿಕಲ್ಪವ । ನರಿಯ ನಾಮ ಸೀಮೆಗಳೆಲ್ಲವ. ನೇಮಿಸಿ ಕಳದಂಗೆ ಅವಲೋಕ ಕಂಪಿತವಾದುದಾತಂಗೆ ॥೩॥

ಕುಲವಳಿದು ಛಲವಳಿದು ಬಲುಹಳಿದು ನಿಲಲು ಸೂತ್ರದ ಜಂತ್ರದವಳಿಯೊಲು ಫಲಸಿದ್ಧಿ । ಎನಿಸಿ ನಿಷ್ಫಲಸಿದ್ಧಿಯನೆ ಬಿಟ್ಟು ಭಕ್ತಾತ್ಮಂಗನೆಯ ಮರ್ತ್ಯಕ್ಕೆ ತಂದಿತ್ತವಂಗೆ ॥೪॥

ಮಧ್ಯಸ್ಥಾನದ ಲೋಕಕೆ ಹೋಗಿ ಮರುವಾಳವನರಿಯದ ಪರಿಯಂ ನೋಡಿರೇ । ತನುರುಚಿಯನೆ ಮರೆದು ಘನರುಚಿಯ ನರಿದೆನ್ನ ತನ್ನಂತೆ ಮಾಡಿದ ಗುಹೇಶ್ವರ ಲಿಂಗಾ ॥೫॥

ಮತ್ತೇಭಃ—ಘನವಿದ್ಯುತ್ಪವನಾದಿಗಳ್ಸಲೆ ಶರೀರಾಯುಕ್ತಮಾಗಿ ರ್ಪವೋ । ಲನಿಶಂ ವ್ಯೋಮದಿ ನಿಂತು ದಾಂಟೆ ವಿಲಸಜ್ಜ್ಯೋತಿಸ್ಸ್ವರೂಪಾದನಿ ॥ ತ್ಯನ ಮೂರ್ತಿತ್ವವದಿಷ್ಟಲಿಂಗವದರೊಳ್ಲಿಂಗಾಂಗ ಮುಳ್ಳಾತನೇ । ತನು ಸಂಸಕ್ತಿಯದಿಲ್ಲ ದಕ್ಷಯನಲಾ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವತ್ತೆಂಟನೆಯದಾದ ಅಕಾಯಸ್ಥಲದ ವಿಚಾರವು ಆನುವಿನಿಂ ಮುಗಿಯಲಾಯಿತು.

---

೫೯. ಪರಕಾಯ ಸ್ಥಲ.

ಸೂತ್ರಃ—ಇಂತು ಅಕಾಯ ಸ್ವರೂಪವನೈದಿದ ಲಿಂಗವು ವೀರ ಮಾಹೇಶ್ವರನಲ್ಲಿ ಸಕಳ ನಿಷ್ಕಳಾತೀತ ಕಾಯವೆಂತಿರ್ದುದೆಂಡಡೆ ಮುಂದೆ ಪರಕಾಯ ಸ್ಥಲವಾದುದು.

ವಚನಃ—ಪ್ರಾಣ ಪ್ರಾರಂಭ ಪ್ರಾರಬ್ಧವಿಲ್ಲವಾಗಿ ಪರಚಿಂತೆ ಪರಬೋಧೆ ಪರಿಚಿತನಲ್ಲ. ಉಸುರ ಬೀಜದ ಹಸಿಯಬಣ್ಣದ ದಶವಿಧವಾಗಿ ವಶಗತನಲ್ಲ. ನಿರಂತರ ಸ್ವತಂತ್ರ ಶರಣ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಶಬ್ದ ಮುಗ್ಧವಾಗಿ. ॥೬॥

ಪದ—ರಾಗ—ವರಾಳಿ.

ಮುನ್ನವೇ ಕೀರ್ತಿ ಪಡೆದರು ಪ್ರಮಥರು ಅನುಸರಣೆಯನಿನಿತಂ ನೋಡದೆ ಮನ ಶಿವಲಿಂಗದಲ್ಲಿ ॥ಪ॥

ತೊಟ್ಟ ಸರಳಿನಂತೆ ನಿಷ್ಠೆನಿರ್ವಾಣದ ದೃಷ್ಟಿಮುಟ್ಟ ಶರಸಂಧಾನದ ತಿಟ್ಟವಿಟ್ಟಂತೆ । ಶಿವನ ನಂಬುಗೆಯಲ್ಲಿ ತೆರಹು ಗೊಡದೆ ಒಟ್ಟೈಸಿದರು ತನುಮನಧನವ ಹಿಂದಿಕ್ಕಿ ॥೧॥

ಊರಿತೋಯದಲ್ಲಿ ಹುಟ್ಟಿ ಶರೀರಶೈತ್ಯವ ಸೋಂಕಿ ಅರಿಷಡ್ವರ್ಗವಲ್ಲ ವಿದು ನಿಜಪದ ಹಿರಿ। ಯರು ಸಮುಧಾತು ಭಕ್ತಿಯನೆರೆವರು ಬರವಸಕ್ಕೆ ಬಂದಭರಿತ ಘಟಸ್ಥಕವಧರಿಸದಂತೆ ॥೨॥

ಆದಿಯಾಧಾರದಲ್ಲಿ ಪಿಂಡವಾದ ಪರಿಯ ಮರಳಿ ಹೋದ ಪರಿಯ ಮರಳಿ ವಿಚಾರದಿಂದ । ಸ್ವಾಧಿಷ್ಠಾನ ಮಣಿಪೂರಕದಿಂದ ಪರಮಗುಣ ಪ್ರಾಜ್ಞರಾಗಿ ಪ್ರಥಮ ಲಿಂಗಾಶ್ರಮ ಘನವೇದ್ಯರು. ॥೩॥

ನುಡಿದಂತೆ ನಡೆಯ ಪೂರವಿಸಲು ನಡೆದಂತೆ ನುಡಿಯ ಪೂರವಿಸಲು ಮೊದಲಾದಿ ವಿಡಿದುಗಡಣ। ದಲ್ಲಿ ಬಳಸಿ ಬ್ರಹ್ಮಚಾರಿಗಳು ಉಂಡು ಉಪ ವಾಸಿಗಳು ಎಡೆಕಟ್ಟಿ ಕಡೆಕಂಟಿಣಿಸದ ಸಾಧ್ಯರು ॥೪॥

ಭೃಂಗ ಸಂಪಗೆಯಲ್ಲಿ ಸಂಗಕ್ಕೆ ಬಂದು ಸಂಗವನೊಲ್ಲದೆ ಮರಳಿ ಘನರೂಪವೆಂದು ಅಂಗದ। ಶಂಕೆಯೆಂಬ ಭಂಗದೋರದೆ ಮುಚ್ಚಿನಚ್ಚಿ ಲಿಂಗದಲ್ಲಿ ನಿರುತ ಭರಿತರಾದರೂ ॥೫॥

ಪಥಲಿಂಗಾಧೀನದಿಂದ ಮಥಲಿಂಗ ವಶನಾಗಿ ಆಯತ ಲಿಂಗಾಧೀನ ದಿಂದ ಬೆಸನೆನುತ। ಕಥೆಕಾರಣ ರಹಿತಹಂಕಾರ ಗುಣವಳಿದು ನಿರಾ ಭಾರಿಗಳಾಗಿ ಕಲ್ಪಿತ ಸೇರದ ಸುಸಂವೇದ್ಯರು. ॥೬॥

ಸಕಲಗುಣ ನಿಳಯಾನಂದದ ಸುಖಚರಿತ್ರ ವೆಡೆಗೊಂಡು ಮಾಣಿಕ. ಸ್ವಯಂಜ್ಯೋತಿ ತಾನುತಾನಾಗಿ। ಅಕಳಂಕ ಕೂಡಲಚನ್ನ ಸಂಗಯ್ಯನಲ್ಲಿ ಮಹಾನುಭಾವರೇಕಮುಖ ಸಜ್ಜನರನಂತ ಶಿಲೆಯ ಮಂಗಳಾರತಿ ಯನೂ ॥೭॥

ಮತ್ತೇಭಃ— ಪಿರಿದುಂ ಸಂಸ್ಕೃತಿ ಬೀಜದಂಕುರದ ದೇಹಂ ನಾಡೆ ಚಿನ್ಸನ್ನಿಧಿಯುಂ। ನಿರುತಂ ದಹ್ಯಮುದಾಗಿಯಾಶಿವನ ತತ್ಸ್ಯಸೃಷ್ಟ್ಯಾದಿ ಕೃತ್ಯ ಕ್ಕೆ ಸಾ ॥ ದರದಿಂದಾಲಯ ಮಾಗದಿಂತು ನಿಜ ಚಿಲ್ಲಿಂಗಕ್ಕೆ ಯಾವಾ ಸಮಾ। ಗಿರಲಾಕಾಯುವನುಳ್ಳವಂ ಪರಶಿವಂ ಶ್ರೀ ಸಿದ್ಧಲಿಂಗೇಶ್ವರಾ॥೫೫॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಐವ ತ್ತೊಂಭತ್ತನೆಯದಾದ ಪರಕಾಯ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೪೪ ಧರ್ಮಾಚಾರ ಸ್ಥಲ.

ಸೂತ್ರ:— ಇಂತು ಸಕಾಯ ಅಕಾಯ ಪರಕಾಯವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ವೀರಮಾಹೇಶ್ವರನ ಸದ್ಧರ್ಮಚರಿತ್ರ ನಿಮಿತ್ಯವೇಕವಾದಭೇದ ವೆಂತಿರ್ದುದೆಂದಡೆ ಮುಂದೆ ಧರ್ಮಾಚಾರ ಸ್ಥಲವಾದುದು.

ವಚನ:— ಭಕ್ತ ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯವಾಗಿರಬೇಕು. ಭೂತಹಿತವಹ ವಚನವ ನುಡಿಯಬೇಕು. ಲಿಂಗ ಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು. ತನು ಮನ ಧನವ ಗುರುಲಿಂಗ ಜಂಗಮಕ್ಕೆ ಸಮರ್ಪಿಸಬೇಕು. ಅಪಾತ್ರ ದಾನವಂ ಗೈಯ್ಯದಿರಬೇಕು. ಸಕಲ ಇಂದ್ರಿಯಂಗಳು ತನ್ನ ವಶಗತವಾಗಿರಬೇಕು. ಇದೇ ಮೊದಲಲ್ಲಿ ದೇಹಶೌಚ ನೋಡಾ! ಲಿಂಗವ ಪೂಜಿಸಿಪ್ರಸಾದವ ಪಡೆವಡೆ ಎನಗಿದೇ ಸಾಧಕವು ನೋಡಾ ಕೂಡಲ ಸಂಗಮದೇವಾ ॥ ೭ ॥

ಪದ— ರಾಗ— ಮಾಳವಗೌಳ.

ಸತ್ಯ ಸದಾಚಾರದಲ್ಲಿ ನಡೆವುದು ಮಿಥ್ಯ ವಂಚನೆಯನರಿಯದೆ। ಚಿತ್ತದಲ್ಲಿ ನಿರ್ಮಲನಾಗಿರ್ಪಡೆ ಮುಕ್ತಿ ಬೇರುಂಟೆ ಹೇಳಾ ॥ ಪಲ್ಲವ ॥

ಸರ್ವ ಜೀವಂಗಳ ಹಿಂಸೆಯ ಮಾಣ್ಬುದು ಓರ್ವರನು ಕೆಡೆ ನುಡಿಯದೆ ವ್ಯರ್ಥ। ಸಂಸಾರದ ನಿತ್ಯವನರಿದು ತತ್ವ ವಿವೇಕದಿ ನಡೆವುದು ನೋಡಾ ॥ ೧ ॥

ಅನ್ಯರ ಕೆಡೆ ನುಡಿಯದೆ ತನ್ನ ತಾ ನಿರ್ಬಂಧಿಸದೆ ತನು ಮನ ಧನದಲ್ಲಿ। ಕಪಟ ಕುತಂತ್ರ ಕುಹಕಂಗಳಿಲ್ಲದಿರ ಬಲ್ಲಾತನೆ ಹಿರಿಯನು ॥ ೨ ॥

ನಿಂದಿಸಬೇಡ ಸ್ತುತಿಸಬೇಡ ಬಂಧಿಸಬೇಡ ಮನದಲ್ಲಿ। ಒಂದಲ್ಲದೆರಡರಿಯದಿರ್ದಡೆ ಮುಂದಣ ಮುಕ್ತಿ ತನ್ನಲಿ ॥ ೩ ॥

ಸಮತೆ ಶಾಂತಿ ಸದುಗುಣಿಯಾಗಿ ಕ್ರಮವರಿದು ತನಗೆ ತಾನಕ್ಕೆ। ಮನ ಮೆಚ್ಚಿ ನಡೆದರೆ ಶಿವನು ತನ್ನಲ್ಲಿಯೆ ನೆಲೆಸಿರ್ಪನು ॥ ೪ ॥

ತಾನಾರಿಗು ಮುನಿಯದೆ ತನ್ನ ನೊಬ್ಬರು ನಿಂದಿಸಿದರೆನ್ನದೆ। ಸಮಾಧಾನಿಯಾಗಿರ್ಪ ಶರಣನ ವೀರಸೊಡ್ಡಳನಗಲದಿರ್ಪನು ॥ ೫ ॥

ಶಾರ್ದೂಲ:—ಧರ್ಮಂ ಭಾವಿಸಲಿಂತು ಸರ್ವ ಜಗದಾಧಾರಂ ಸದಾ ಲೋಕದೊಳ್। ಧರ್ಮಂ ಗೈಯ್ವವನಂ ಪ್ರಜಾಪ್ರಕರವೇಗಂಬಂದು ಪೊರ್ದಿಕ್ಕುಮಾ॥ ಧರ್ಮಂ ಪಾವನೆಯ್ದಿ ಸಂಹರಿಪುದೆಂದಾ ಧರ್ಮ ಸನ್ಮಾರ್ಗಮಂ। ಧರ್ಮಿಷ್ಠರ್ಮಿಗೆ ಪೇರ್ಮೆಯಿಂ ನಡೆಯರ್ ಶ್ರೀ ಸಿದ್ಧ ಲಿಂಗೇಶ್ವರಾ ॥೬೦॥

ಗದ್ಯ:—ಇಂತೀಪ್ರಕಾರದಿಂ ನೂರೊಂದುಸ್ಥಲದೊಳಗೆ ಅರವತ್ತನೆ ಯದಾದ ಧರ್ಮಾಚಾರಸ್ಥಲದ ವಿಚಾರವು ಅನುವಿನಿಂ ಮುಗಿಯಲಾ ಯಿತು.

---

೬೭ ಭಾವಾಚಾರಸ್ಥಲ.

ಸೂತ್ರ:—ಇಂತು ಧರ್ಮಾಚಾರಸ್ವರೂಪವನ್ನೈದಿದ ಲಿಂಗವು ವೀರ ಮಾಹೇಶ್ವರನ ಮನಸ್ಥಲದಲ್ಲೆಡೆಗೊಂಡ ಸದ್ಭಾವ ಚರಿತ್ರ ವೆಂತಿರ್ದು ದೆಂದಡೆ ಮುಂದೆ ಭಾವಾಚಾರಸ್ಥಲವಾದುದು.

ವಚನ:—ರೂಪವನೆ ಕೂಡರು ನಿರೂಪವನೆಕೂಡರು। ತನುವನೆಕಂ ಡರು ಅನುವಕಾಣರು. ಆಚಾರವನೆಕಂಡರು ವಿಚಾರವ ಕಾಣರು. ಗುಹೇ ಶ್ವರಾ ನಿಮ್ಮ ಕುರುಹನೆ ಕಂಡರು ಕೂಡಲರಿಯದೆ ಕೆಟ್ಟರು. ॥೮॥

ಪದ—ರಾಗ—ದೇಶಿ

ಭಾವಿಸಿ ನಡೆದಿಹೆನೆಂದಡೆ ತಾನಾಭಾವದೊಳಗೆ ತನ್ನೊಳು ಸದ್।
ಭಾವವು ಭಾವಭೇದವಿಲ್ಲದಿಪ್ಪ ಶರಣನ ಸತುಪಥವನೇನೆಂಬೆನೂ ॥ಪ॥

ಮೂರುಗ ಕ್ರೀಗಳೊಳಗೆ ನಿಷ್ಪತಿಯಾಗಿ ದೇವಕ್ರೀ ವಿಡಿದ ಕಾರಣ ಭಿನ್ನಭಾವವಳಿದು। ಶಿವಾಚಾರವೇ ಜೀವವಾಗಿ ಲಿಂಗದೊಳು ಬೆರಸಬ ಲ್ಲಡಾತಯೋಗಿ ।೧॥

ತದುಗತವಾಗಿ ನಿರಂತರ ನಿಜಲಿಂಗದಿ ಪರಮಾನಂದವನ್ನೈದಿ ಸದ ಮಲ। ನಿರುಪಾಧಿಕನಾಗಿಪ್ಪ ಚರಿತದಾಚಾರವನೇನೆಂಬೆನು ॥೨॥

ಧ್ಯಾನವೆ ನಿಶ್ಚಲವಾಗಿಪ್ಪ ಶರಣನ ಕಾಮಿತ ಭಾವಿತ ಕ್ರೀಗಳು ತಾ ಮುನ್ನವೆ ಲಿಂಗದೊಳವಿರಳವಾಗಿ ಸೀಮೆಯ ನೀಕರಿಸಿರ್ಪನು ॥೩॥

ಪ್ರಾಣನ ಹಸ್ತದೊಳಗೆ ಅಂಗಲಿಂಗಭಾವ ಹಸ್ತದೊಳಗಣಪ್ರಾಣ। ಪ್ರಾಣಭಾವವೆನ್ನದಿರ್ಪ ಶರಣನಾಚಾರ ವಿಚಾರವನೇನೆಂಬೆನು ॥೪॥

ಒಡಲಳಿದು ಒಡಲುವಿಡಿದ ಕ್ರೀಗಳ ಗಡಣವಡಗಿ ನಿರ್ದೇಹದೊಳೆಂಬ ಭಾವ। ವೆಡೆಗೊಂಡ ನಿಷ್ಠೆಯಾಚರಣೆಯು ಕೂಡಲ ಚನ್ನಸಂಗನೊಳು ಸತ್ಪಥವು ॥೫॥

ಮತ್ತೇಭಃ—ಅನುವಿಂ ಭೂಮಿಯೊಳಂಬು ಬೀಳ್ವನಿತುಕಾಲಂ ಮೇಣ್ಸಳಿಕ್ಕಂತೆಗೋ। ಸ್ತನದಿಂ ಕ್ಷೀರವಧಾರೆಯುಂ ಕರೆವನಿತ್ತುಂ ಪೊಳ್ತು ಮೇಣ್ಮತ್ತಿಕಂ॥ ಣ್ಣಿನಿತುಂನೋಡೆ ಪಳಂಚುತಿರ್ಪನಿತು ಕಾಲಂ ಅಂಗಮುಂ ಭಾವಿಪಾ। ತನೆ ಜನ್ಮಂಗಳ ನಿಂತು ದಾಂಟುವನಲಾ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ—ಇಂತೀಪ್ರಕಾರದಿಂ ನೂರೊಂದುಸ್ಥಲದೊಳಗೆ ಅರವತ್ತೊಂದನೆಯದಾದ ಭಾವಾಚಾರಸ್ಥಲದ ವಿಚಾರವು ಅನುವಿನಿಂ ಮುಗಿಯಿತು.

---

೬೩. ಜ್ಞಾನಾಚಾರಸ್ಥಲ.

ಸೂತ್ರಃ—ಇಂತು ಮನೋಮಧ್ಯದಲ್ಲಿ ಸದ್ಭಾವ ಚರಿತ್ರ ಸಂಬಂಧವಾದ ಲಿಂಗವು ವೀರಮಾಹೇಶ್ವರನ ಮಹಾಜ್ಞಾನಾಚರಣೆಯ ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನಾಚಾರಸ್ಥಲವಾದುದು.

ವಚನ:—ಉರವಣಿಸುವ ಮನ ಮುಟ್ಟುವನ್ನಕ್ಕ ಕಾಡುವದು. ಘನಾಘನದಲ್ಲಿ ಮನನಂಬುವನ್ನಕ್ಕ ಕಾಡುವದು. ಶ್ರೀಮನ್ ಮಹಾಂತ ಗುಹೇಶ್ವರನೆಂಬ ಶಬ್ದವುಳ್ಳನ್ನಕ್ಕ ಕಾಡುವದು ॥೧॥

ಪದ—ರಾಗ—ಅರಬಿ

ಮೊದಲುಗೊಡದಹರದು ಎನಗಾದುದಯ್ಯ ಮೊದಲುಗಡದಹರದು॥ಪ॥

ಬೆವಹಾರವ ಮುಂದು ಗೊಂಡಿರ್ದೆನಯ್ಯಾ ಬೆವಹಾರದ ಪರಿಯ ನಾನರಿಯೆನಯ್ಯಾ ॥೧॥

ಆತ್ಮಜ್ಞಾತವ್ಯನಚ ಪುನರೇವ ಕಥನಚ ಪುನರಥ ಅತ ಎಂದುದಾಗಿ ||೨||

ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ಕುರತೆ ಎಂದುದಾಗಿ ॥೩॥

ಭವಗೇಡಿ ಲಿಂಗೈಕ್ಯ ರೊಡನಾಡಿ ಅವರ ಪರಿಎನ್ನ ಹತ್ತಿತಲ್ಲಯ್ಯಾ॥೪॥

ಕೂಡಲ ಚನ್ನಸಂಗಯ್ಯನೆಂದರಿದು ಮರುಳ ಮಾಡಿದ ಬಳುತರ ನೇನೆಂಬೆ ॥೫॥

ಶಾರ್ದೂಲಃ— ಜ್ಞಾನಾತೀತಮೆನಿಪ್ಪ ಕೇವಲ ವಿಶುದ್ಧಾಕಾರಮಾಗಿರ್ಪನಿ। ತ್ಯಾನಂದಾತ್ಮಕ ತತ್ವಮಂ ಪರಮಶುದ್ಧ ಜ್ಞಾನದಿಂ ಭಾವಿಪರ್ ॥ ನ್ಯೂನಾಧಿಕ್ಯತೆಯೆಂಬುದಿಲ್ಲದೆ ಬಹಿರ್ವ್ಯಾಪಾರದಿಂ ನಾಡೆಸ। ನ್ಮಾನಂಬೆತ್ತುರೆ ವರ್ತಿಪರ್ ಭುವನದೊಳ್ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ—ಇಂತೀಪ್ರಕಾರದಿಂ ನೂರೊಂದುಸ್ಥಲದೊಳಗೆ ಅರವತ್ತೆರಡನೆಯದಾದ ಜ್ಞಾನಾಚಾರಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಏಕೋತ್ತರ ಶತಸ್ಥಲಂಗಳಲ್ಲಿ ದೀಕ್ಷಾಗುರುವಾದಿಯಾಗಿ ಪರಜಂಗಮಾಂತ್ಯಮಾದ ಒಂಬತ್ತುಸ್ಥಲಂಗಳು ಆಚಾರಲಿಂಗಸ್ಥಲಕ್ಕೆ ಸಲ್ಲಲು ಕ್ರಿಯಾಗಮಸ್ಥಲವಾದಿಯಾಗಿ ಜ್ಞಾನಾಚಾರ ಸ್ಥಲಾಂತ್ಯವಾದ ಒಂಬತ್ತುಸ್ಥಲಂಗಳಿಂ ಗುರುಲಿಂಗಸ್ಥಲ ವೆರಡನೆಯಸ್ಥಲವೆಂದು ಮುಗಿದುದು.

---

೬೩. ಕಾಯಾನುಗ್ರಹಸ್ಥಲ.

ಸೂತ್ರ:—ಇಂತು ನವಸ್ಥಲಂಗಳೇ ತ್ರಿವಿಧ ತ್ರಿವಿಧಂಗಳಾಗೇಕವಾದ ಗುರುಲಿಂಗವು ಅವಿರಳ ಲಿಂಗಸಂಗ ಸುಖಿಯಾದ ಪ್ರಸಾದಿಯ ಶಿವಲಿಂಗವೇ ಕಾಯದಲ್ಲಿ ಅನುಗ್ರಾಹಕವಾದ ಭೇದ ವೆಂತಿರ್ದುದೆಂದಡೆ ಮುಂದೆ ಕಾಯಾನುಗ್ರಹಸ್ಥಲವಾದುದು.

ವಚನಃ—ಎತ್ತಣ ಮಾಮರವು, ಎತ್ತಣ ಕೋಗಿಲೆಯು, ಎತ್ತಣಿಂದೆತ್ತಸಂಬಂಧವಯ್ಯಾ! ಬೆಟ್ಟದ ಮೇಲಣ ನೆಲ್ಲಿಯಕಾಯಿಯು ಸಾಗರದೊಳಗಣ ಲವಣವು ಎತ್ತಣಿಂದೆತ್ತ ಸಂಬಂಧವಯ್ಯಾ. ಗುಹೇಶ್ವರಾ, ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತಸಂಬಂಧವಯ್ಯಾ ॥೧॥

ಪದ—ರಾಗ—ಭೂಪಾಳಿ

ಗುರು ಸಂದರುಶನ ಅಂಗವ ಸೋಂಕೆ ಎರಡರಿಯೆನು ಅಂಗಸಂಖಿ ಯನೂ ॥ಪ॥

ಕಾಯವಳಿದು ಭಕ್ತಿಕಾಯುವಾಗೆ ಆ ಕಾಯವನಾಲಿಂಗವ ಗ್ರಹಿಸಿ ಕಾಯವೆನ್ನದೆಂಬ ಭಾವವನರಿಯದೆ ಮಾಯವಳಿದು ನಿಶ್ಚಿಂತನಾದನಯ್ಯಾ ॥೧॥

ತನುವೆಂಬ ಶಿಷ್ಯನ ಶಿವಲಿಂಗವೆಂದೆಂಬ ಘನಮಹಾ ಗುರುಕರುಣ ಹಸ್ತದಮನ ಮನಬೆರಸಿ ಚಿತ್ತದ ಮಸ್ತಕ ಮುಟ್ಟೆ ಉರಿತೃಣ ಉಂಡಂತಾದುದು ॥೨॥

ಅಂಗದೊಳಗೆ ಲಿಂಗಾಂಗ ವಿವೇಕ ಸುಸಂಗ ಸಮನಿಸಲು ಸರ್ವಾಂಗಲಿಂಗದೊಳಗೆ ಪೆರತರಿಯದೆ ಉಭಯದ ಸಂಗವೆಂಬ ನಾಮ ಹಿಂಗಿದುದು ॥೩॥

ಪರತತ್ವವೆಡೆಗೊಳಲಂಗವೆಂಬ ಮಿಥ್ಯಹರಿಯಲು ನಿಮಿಷಕ್ಕೆ ಮುಗಿಲೋಡಿನಂತೆ ಗುರುಮೂರ್ತಿ ನೆಲೆಗೊಂಡಿಪ್ಪುದರಿಂದ ಶರಿರವ ನಾನು ಪಮಿಸಲವ್ಮೆ ॥೪॥

ಉರಿಕರ್ಪುರವ ಸೋಂಕಿದಡಾ ಕರ್ಪುರವೆಂತುರಿಯಾಗಿರ್ಪುದುಐಸರಿ ಕೂಡಲ ಚನ್ನಸಂಗನ ಸೋಂಕಿನ ಸುಖವನಾನೇಂಬೆನು ॥೫॥

ಮತ್ತೇಭಃ—ತವೆಚೌಲಾದಿ ಸಮಸ್ತ ಸಂಸ್ಕೃತಿಯನಾವಿಪ್ರಂಬಳಿಕ್ಕಂ ದ್ವಿಜ । ತ್ವವನೆಂತೆಯ್ದುವನಂತೆ ಪೋಲ್ವ ಸುಜ್ಞಾನೋಪದೇಶಂ ದಲಂ ॥ ಗವನಾತರ್ರ್ತಿಸಲಾ ಮಹಾಪುರುಷನಂಗಂ ಲಿಂಗದೇಹಂ ಬಳಿ । ಕ್ಕಾತನೇಹೃದ್ಯತಮಂ ತಪೋವಿರಹಿತಂ ಶ್ರೀ ಸಿದ್ಧಲಿಂಗೇಶ್ವರಾ॥೬೩॥

ಗದ್ಯಃ—ಇಂತೀಪ್ರಕಾರದಿಂ ನೂರೊಂದುಸ್ಥಲದೊಳಗೆ ಅರವತ್ತು ಮೂರನೆಯದಾದ ಕಾಯಾನುಗ್ರಹಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೪೮. ಇಂದ್ರಿಯಾನುಗ್ರಹಸ್ಥಲ.

ಸೂತ್ರ:—ಇಂತು ಕಾಯದಲ್ಲಿ ಸಂಬಂಧವಾಗಿ ಅನುಗ್ರಹ ಸ್ವರೂಪವನ್ನೈದಿದ ಲಿಂಗವು ಪ್ರಸಾದಿಯ ಸರ್ವೇಂದ್ರಿಯ ಮುಖದಲ್ಲಿ ಸಂಗವಾದ ಭೇದವೆಂತಿರ್ದುದೆಂದಡೆ ಮುಂದೆ ಇಂದ್ರಿಯಾನುಗ್ರಹಸ್ಥಲವಾದುದು.

ವಚನ:—ಎನ್ನ ಪ್ರಾಣಮನ ಬುದ್ಧಿಚಿತ್ತಂಗಳು ನಿಮ್ಮ ತೊತ್ತಿರುಗಳು ಸತ್ವರಜತಮಂಗಳು ನಿಮ್ಮ ಭೃತ್ಯರುಗಳು ಅತಃಕರಣಂಗಳು ನಿಮ್ಮ ಮಂತ್ರಿಗಳು ಪಂಚೇಂದ್ರಿಯಂಗಳು ನಿಮ್ಮ ಪರಿಹಾರರು ಅರಿಷಡ್ವರ್ಗಂಗಳು ನಿಮ್ಮ ಲೆಂಕರು ಸಪ್ತಧಾತುಗಳು ನಿಮ್ಮ ಬಾಣಸಿಗರು ಅಷ್ಟಮದಂಗಳು ನಿಮ್ಮ ಕುಮಾರರು ನವದ್ವಾರಂಗಳು ನಿಮ್ಮ ಭಂಡಾರುಗಳು ದಶವಾಯುಗಳು ನಿಮ್ಮ ಸೀಗುರಿ ಚಾಮರಂಗಳು ಷೋಡಶ ಕಳೆಗಳು ನಿಮ್ಮ ರಾಣಿವಾಸ ಶಂಭುಸೋಮನಾಥಲಿಂಗ ನಿಮಗೆಎನ್ನಕಾಯಮುಂತಾಗಿಬಾಹತ್ತರನಿಯೋಗದ ಡಿಂಗರಿಗರು ॥೨॥

ಪದ

ಕಾಯದೊಳಗಣ ವಿಕಾರಂಗಳು ಮಾಯದ ಪ್ರಪಂಚನಳಿದು ।
ಸ್ವಾಯತಸಂಬಂಧ ಸರ್ವೇಂದ್ರಿಯದಲ್ಲಿ ಸನುಮತವಾಗಿರ್ದನಯ್ಯಾ ॥ಪ॥

ಪೃಥ್ವಿಎಂಬ ಭೂತದಂಗ ವಿಕಾರದ ಗತಿಯಳಿದು ಭಿನ್ನಗಂಧದ ವಿಪರೀತ ಭಾವವಳಿದು । ನಾಸಿಕೇಂದ್ರಿಯ ವಶವಾಯಿತ್ತು ಲಿಂಗ ನಿಮ್ಮಲ್ಲಿ॥೧॥

ಅಪ್ಪುವೆಂಬ ಭೂತದಂಗ ವಿಕಾರದ ಹಂಗುಹರಿದು ಭಿನ್ನ ರುಚಿಗಳ ಪ್ರಕೃತಿಯಡಗಿ । ಜಿಹ್ವೇಂದ್ರಿಯ ಲಿಂಗದ ವಶದೊಳು ತದುಗತವಾಯಿತ್ತು ॥೨॥

ಅಗ್ನಿಯೆಂಬ ಭೂತದಂಗ ವಿಕಾರದ ಪ್ರಭೆಯಳಿದು ಭಿನ್ನರೂಪುಗಳ ವಿಕೃತಿಯಡಗಿ । ನೇತ್ರೇಂದ್ರಿಯ ಲಿಂಗದೊಳವಿರಳವಾದುದು ॥೩॥

ವಾಯುವೆಂಬ ಭೂತದಂಗ ವಿಕಾರದ ಭಾವವಳಿದು ಭಿನ್ನ ಸೋಂಕಿನ ವಾಯದ ಮಿಥ್ಯ ಹರಿದು । ಸ್ಪರ್ಶನೇಂದ್ರಿಯ ಲಿಂಗದೊಳವಿರಳವಾದುದು ॥೪॥

ಆಕಾಶವೆಂಬ ಭೂತದಂಗ ವಿಕಾರದ ಚಿನ್ಹವಳಿದು ಅನ್ಯಶಬ್ದದ ಸೂತಕವಡಗಿ । ಶ್ರೋತ್ರೇಂದ್ರಿಯವೇಕೀಕರಿಸಿ ಕೂಡಲಸಂಗಸಾಕಾರ ಸಂಬಂಧವು ॥೫॥

ಮತ್ತೇಭ—ಮುದದಿಂ ಸಂಸ್ಕೃತಿಭಂಗಸಂಘವ ಹೃಷೀಕಾಂಬೋಧಿಯಂ ಮೀರಿದ। ಪ್ಪವ ಪೋಲ್ಲಾಸಸ ಸೇತುವಂಸಿರಿಸಿ ಪೂರ್ಣಾನಂದ ಸಂಕೀರ್ಣಸ ॥ ದ್ವಿದಿತಬ್ರಹ್ಮವೆನಿಪ್ಪ ನಾವೆಯಿನದಂ ಸರ್ವಾವಧಾನಂತೊಲಂ। ಗದೆಯುತ್ತೀರ್ಣವನೆಯ್ದುವಂ ಜಿತಭವಂ ಶ್ರೀ ಸಿದ್ಧಲಿಂಗೇಶ್ವರಾ॥೬೪॥

ಗದ್ಯ:—ಇಂತೀಪ್ರಕಾರದಿಂ ನೂರೊಂದುಸ್ಥಲದೊಳಗೆ ಅರವತ್ತನಾಲ್ಕನೆಯದಾದ ಇಂದ್ರಿಯಾನುಗ್ರಹ ಸ್ಥಲದವಿಚಾರವು ಅನುವಿನಿಂ ಮುಗಿಯಲಾಯಿತು.

---

೬೫. ಪ್ರಾಣಾನುಗ್ರಹಸ್ಥಲ

ಸೂತ್ರ:—ಇಂತು ಸರ್ವೇಂದ್ರಿಯ ಮುಖದಲ್ಲಿ ಸಂಗವಾದಲಿಂಗವು ಪ್ರಸಾದಿಯ ಪ್ರಾಣಸ್ಥಲದಲ್ಲಿ ಸಂಗವಾದ ಭೇದವೆಂತಿರ್ದುದೆಂದಡೆ ಮುಂದೆ ಪ್ರಾಣಾನುಗ್ರಹಸ್ಥಲವಾದುದು.

ವಚನ:—ಆಚಾರವನಾಚಾರವಾಯಿತ್ತು. ಸೀಮೆ ನಿಸ್ಸೀಮೆಯಾಯಿತ್ತು. ಪ್ರಾಣ ಸಂಚಲತಪ್ಪಿ ಲಿಂಗಸಂಚಲವಾಯಿತ್ತು. ಎಲ್ಲಿಶಬ್ದವು ಅಲ್ಲಿ ಲಿಂಗ ಸ್ವಾಯತವಾಯಿತ್ತು. ಎಲ್ಲಿಸುಗಂಧವು ಅಲ್ಲಿ ಲಿಂಗಸ್ವಾಯತವಾಯಿತ್ತು. ಕೂಡಲಸಂಗಮದೇವರ ಕರುಣದ ಕಡೆಗೋಡಿವರಿಯಿತ್ತಯ್ಯಾ ಎನ್ನ ಮೇಲೆ ॥೩॥

ಪದ—ರಾಗ—ದೇಶಾಕ್ಷಿ

ನಿಮ್ಮ ಕಾರುಣ್ಯವೆನ್ನಮನದೊಳಗೆ ಸಂಬಂಧಿಸಿ ಭಿನ್ನಭಾವ। ವರಿಯದೆ ನಿಮ್ಮೊಳಡಗಿದುದಾ ನೇನೆಂದರಿಯೆನಯ್ಯಾ॥ಪ॥

ದಶವಾಯುಗಳ ಸಂಚುವನರಿದು ದಶನಾಳಂಗಳ ಪಥವಡಗಿ ದಶೇಂದ್ರಿಯಂಗಳ ಸಂಚಲವಳಿದು। ಪ್ರಾಣರತಿಯೊಳು ನಿಮ್ಮ ಸಂಗವ ಕಂಡೆನಯ್ಯಾ॥೧॥

ಚಿತ್ತದ ಕಳೆ ಬುದ್ಧಿಯೊಳಡಗಿ ಬುದ್ಧಿ ಅಹಂಕಾರದೊಳಳಿದು ಅಹಂಕಾರ ಮನದೊಳು। ಮನ ನಿಮ್ಮ ಕರುಣದ ಸಂಗವಾಗಿ ಕಣ್ದೆರದೆನಯ್ಯಾ ॥೨॥

ಷಡುಚಕ್ರಕಮಲದಲ್ಲಿ ಸುಳಿದಾಡುವ ಪ್ರಾಣಹಂಸನ ತಿಳುಹಿ ಮಹಾನುಭಾವದೊಳು । ನೆಲಸಿ ನಿರ್ಮಳ ಲಿಂಗ ಪ್ರಾಣಿಯಾದೆನಯ್ಯಾ ॥೩॥

ಚೈತನ್ಯವೆ ನೀನೆಂದರಿದು ಸಾತ್ವಿಕ ಭಾವವೆಂದರಿಯದೆ ಸೂಕ್ಷ್ಮತನುವಿನೊಳಗೆ । ನಿಮ್ಮ ಜ್ಞಾನಜ್ಯೋತಿಯ ಬೆಳಗನುಂಡೆನಯ್ಯಾ ॥೪॥

ನೀನೆನ್ನ ಪ್ರಾಣದೊಳಗೆ ಪ್ರಾಣವಾಗಿ ನಾನಿನ್ನ ಪ್ರಾಣದೊಳಗೆ ಪ್ರಾಣವಾಗಿ । ನಾನೀನೆಂಬುಭಯವನರಿಯದೆ ನಿಮ್ಮಕೃಪಾನಂದದೊಳಡಗಿರ್ದೆನು ಕೂಡಲಸಂಗಯ್ಯ ॥೫॥

ಶಾರ್ದೂಲ:—ಅವ ಬ್ರಹ್ಮದೊಳಿಪ್ಪ ದೀಪ್ತಿಯದರಿಂದಂ ಮಾನಸ
ಸ್ಥೈರ್ಯವಂ । ತಾವಾಮಾನಸದಾ ಸ್ಥಿರತ್ವದಲಸತ್ಪ್ರಾಣಕ್ಕೆ ಚಾಂಚಲ್ಯವಂ॥
ತಾತಪ್ರಾಣವ ದಾತ್ಮಲಿಂಗದ ನಿಜ ಧ್ಯಾನಾನು ಸಂಬಂಧಮಾ। ಯ್ತಾವಿಜ್ಞಾ
ನಘನಾತ್ಮಲಿಂಗವದುತಾಂ ಶ್ರೀ ಸಿದ್ಧಲಿಂಗೇಶ್ವರಾ ||೬||

ಗದ್ಯ:—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಅರುವತ್ತೈದನೆಯದಾದ ಪ್ರಾಣಾನುಗ್ರಹಸ್ಥಲದ ವಿಚಾರವು ಆನುವಿನಿಂ ಮುಗಿಯಲಾಯಿತು.

---

೬೬ ಕಾಯಾರ್ಪಿತಸ್ಥಲ.

ಸೂತ್ರ:—ಇಂತು ಕಾಯಾನುಗ್ರಹ ಇಂದ್ರಿಯಾನುಗ್ರಹ ಪ್ರಾಣಾನುಗ್ರಹವೆಂಬ ತ್ರಿವಿಧಸ್ಥಲವೇಕವಾದ ಲಿಂಗವು ಅವಿರಳಲಿಂಗ ಸಂಗಸುಖಿಯಾದ ಲಿಂಗಪ್ರಸಾದಿಯ ಕಾಯದಲ್ಲಿ ಅರ್ಪಿತಲಿಂಗಮುಖವಾದ ಭೇದವೆಂತಿರ್ದುದೆಂದಡೆ ಮುಂದೆ ಕಾಯಾರ್ಪಿತಸ್ಥಲವಾದುದು.

ವಚನ:—ಲಿಂಗ ಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ॥ ಪಾರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ. ಕೂಡಲಸಂಗನ ಶರಣರು ಕಾಯದ ನೆನದಿಂದ ಅರ್ಪಿಸುವ ಬೆಡಗ ನಾನೇನೆಂಬೆನಯ್ಯಾ॥೪॥

ಪದ—ರಾಗ—ನಾಟಿ

ರೋಮಾದಿಗಳೆಲ್ಲ ಕೈಯ್ಯಾಗಿ ಆಮಿಷವಿಷಯಂಗಳ ಮರೆದು । ಕಾಮಿಸಿ ಬಂದ ಪದಾರ್ಥಂಗಳ ನಿಮಗರ್ಪಿಸುವೆನಯ್ಯಾ ॥ಪ॥

ಎನ್ನ ಕಂಗಳು ಭಕ್ತ ಎನ್ನ ಕಿವಿಗಳು ಭಕ್ತಎನ್ನನಾಸಿಕ ಭಕ್ತ ಎನ್ನ ನಾಲಿಗೆ ಭಕ್ತಎನ್ನಕರಚರಣಾದಿಗಳೆಲ್ಲವ ಶ್ರೀ ಗುರುಭಕ್ತನಮಾಡಿದನಾಗಿ ॥ ಎನ್ನ ತನುವುಭಕ್ತ ಎನ್ನಮನವುಭಕ್ತ ಎನ್ನ ನೆನಹು ಭಕ್ತನೆಂಬೀ ಕಾರಣ ವೆಲ್ಲವು । ಸನ್ನುತಲಿಂಗಕರ್ಪಿತವಲ್ಲದೆ ಎನ್ನಂಗಕ್ಕೆ ಸೊಗಸದು ಅಯ್ಯಾ ॥೧॥

ತಟ್ಟೆತ್ತು ಮುಟ್ಟೆತ್ತು ಆಸನ ಶಯನ ಹಲ್ಲುಕಡ್ಡಿ ದರ್ಪಣನಡೆನುಡಿ ಚೈತನ್ಯ । ನೋಡುವಸ್ವರೂಪವು ಕೇಳುವ ಸಂಗೀತಸುಭಾಷೆಗಳೆಲ್ಲವನು ॥ ಸುಗಂಧ ಪುಷ್ಪಪರಿಮಳ ಬೀರಲು ವಾಯುವಾಕಾಶರೂಪು ನಿರೂಪೆಲ್ಲವು । ಸರಸಲಿಂಗಕರ್ಪಿತವಲ್ಲದೆ ಎನ್ನಂಗಕ್ಕೆ ಸೊಗಸದು ಅಯ್ಯಾ ॥೨॥

ಎನ್ನ ಅಧರಕೆ ಬಾಹ ಬಪ್ಪರುಚಿಯನ್ನು ಎನ್ನಉದರಕೆ ಬಾಹಬಪ್ಪ ಸುಖ ವನ್ನು ಎನ್ನಚೈತನ್ಯಕ್ಕೆ ಬಾಹಬಪ್ಪ ಸುಖಾದಿ ಸಃಖಂಗಳನ್ನು ॥ ಎನ್ನಮನದ ತಲೆವಾಗಿಲೊಳಗಿರಲು ಕರುಣಾದಿಗಳೆಲ್ಲವಕ್ಕೆ ನಿಮ್ಮ । ಸನ್ನುತ ಪ್ರಾಣದವ ನಿಕ್ಕೆ ಕರುಣದಿಂ ಸಲಹಯ್ಯ ಲಿಂಗತಂದೆ ॥೩॥

ಬೇಕುಬೇಡೆನ್ನದ ಪ್ರಸಾದಿ ಸಾಕುಸವಿಯನ್ನದ ಪ್ರಾಣಾದಿರುಚಿಯ ರುಚಿ ಯನ್ನದ ಪ್ರಸಾದಿಯು ಕರುಣದಕಂದನಾಗಿ ಭೋಗಿಸಿ ಭೋಗಿಸದಪ್ರಸಾದಿ ॥ ಭಾವಿಸಿದಡೆ ಭಾವಿಸದ ಪ್ರಸಾದಿ ಪ್ರಸಾದದಲ್ಲಿಯು ಆರೂಢದ ನಿಜವುತಾನೆ ತನ್ನಯನೆಲೆಯನು ತನ್ನೊಳು ಕಂಡ ಪ್ರಸಾದಿಯು ಅಯ್ಯಾ ॥೪॥

ದೀಕ್ಷಿತನೆಂದೆನಿಸಿಕೊಳ್ಳದ ಪ್ರಸಾದಿ ದೀಕ್ಷೆಗೆ ತಲೆಗೆಯ್ಯನಿಕ್ಕದಪ್ರಸಾದಿ ಅದೀಕ್ಷೆಯಮಕ್ಕಳಿಗೆ ತನ್ನ ಪ್ರಸಾದವನಿಕ್ಕದ ಪ್ರಸಾದಿ ॥ ಏಕಲಿಂಗಪತಿ। ಗ್ರಾಹಕನಚ್ಚಪ್ರಸಾದಿ ನಿಚ್ಚಪ್ರಸಾದಿಸನುಮತ। ಶ್ರೀ ಕೂಡಲಚನ್ನಸಂಗಯ್ಯ ನಲ್ಲಿ ಆತನೇಪ್ರಸಾದಿಯೋ ಅಯ್ಯಾ ॥೫॥

ಮತ್ತೇಭಃ–ದಿಟದಿಂದಂ ಖಗಸಂಕುಳಂ ವಿಟಪಿಯಂ ಸಾರ್ವಂತೆ ತತ್ಕಾ ಯದಿಂ ।ಸ್ಫುಟಮಾಗುದ್ಭವ ಮಾದನೇಕಸುಖಮೆಲ್ಲಂ ಲಿಂಗದೊಳ್ಪಾಡೆಸಂ॥ ಘಟಸುತ್ತಿರ್ಪವು ಲಿಂಗಸೋಂಕಿನ ಮಹಾಸೌಖ್ಯಾದಿ ಭೋಗಂಗಳಿಂ। ಪಟುವಾಗಿಂತು ವಿರಾಜಿಪಂ ಲಸದಟಂ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ—ಇಂತೀಪ್ರಕಾರದಿಂ ನೂರೊಂದುಃಸ್ಥಲದೊಳಗೆ ಆರುವತ್ತಾ ರನೆಯದಾದ ಕಾಯಾರ್ಪಿತಸ್ಥಲದ ವಿಚಾರವು ಅನುವಿನಿಂ ಮಗಿಯಲಾ ಯಿತು.

೫೧. ಕರಣಾರ್ಪಿತಸ್ಥಲ.

ಸೂತ್ರ:—ಇಂತು ಕಾಯದಲ್ಲಿ ಅರ್ಪಿತಮುಖವ ನೈದಿದ ಲಿಂಗವು ಪ್ರಸಾದಿಯ ಅಂತರ್ಮುಖದಲ್ಲಿ ಸಮರ್ಪಿತ ಮುಖವಾದ ಭೇದವೆಂತಿ ರ್ದುದೆಂದಡೆ ಮುಂದೆ ಕರಣಾರ್ಪಿತ ಸ್ಥಲವಾದುದು.

ವಚನ:—ಶ್ರೀಮದ್ಭಾವದಿಂದಾದ ಶೇಷವ ಕ್ರಿಯಕರ್ಪಿಸುವೆ. ಕ್ರಿಯ ದಿಂದಾದ ಶೇಷವ ನಿಷ್ಕ್ರಿಯಕ್ಕರ್ಪಿಸುವೆ. ನಿಷ್ಕ್ರಿಯದಿಂದಾದ ಶೇಷವ ಭಕ್ತಿಗರ್ಪಿಸುವೆ. ಭಕ್ತಿಯಿಂದಾದ ಶೇಷವ ಜಂಗಮಕ್ಕರ್ಪಿಸುವೆ. ಜಂಗ ಮದಿಂದಾದ ಶೇಷವ ಪ್ರಸಾದಕ್ಕರ್ಪಿಸುವೆ. ಪ್ರಸಾದದಿಂದಾದ ಶೇಷವ ಲಿಂಗಕ್ಕರ್ಪಿಸುವೆ. ಲಿಂಗದಿಂದಾದ ಜ್ಞಾನ ಆ ಜ್ಞಾನದಿಂದ ತೃಪ್ತನಾ ದೆನು ಕಾಣಾ ಕಲಿದೇವರದೇವಯ್ಯಾ ॥೫॥

ಪದ—ರಾಗ—ಧನ್ಯಾಸಿ

ಅರ್ಪಿತಾವಧಾನ ಮುಖದ ಸುಖವನ್ನು ತಪ್ಪದೆ ತಿಳಿದುನೋಡಾ॥ಪ॥

ಧರಣಿ ಎಂಬ ಭಕ್ತನ ಅಂಗಕ್ಕೆ ಕರಸ್ಥಲ ಸುಚಿತ್ತವಾದುದುನೋಡಾ।
ಆಚಾರಲಿಂಗಮಯವು ನಾಸಿಕ ಮುಖಗಂಧಾರ್ಪಿತವು ನೋಡಾ ॥೧॥

ಭಕ್ತಭೂಮ್ಯಾಂಗ ಹಸ್ತಂಚ ಸುಚಿತ್ತಾಚಾರ ಲಿಂಗಯೋಃ।
ತನ್ಮುಖಂ ಘ್ರಾಣಗಂಧಂಚ ಅರ್ಪಿತಂತೃಪ್ತಿ ಭೋಕ್ತವಾನ್ ॥೧॥

ಅಪ್ಪುಮಹೇಶ್ವರನ ಅಂಗಕ್ಕೆ ಒಪ್ಪುವ ಸುಬುದ್ಧಿ ಹಸ್ತವೆನಿಸಿ ॥
ಇಪ್ಪುದು ಗುರುಲಿಂಗವು ಮುಖ ಜಿಹ್ವೆ ಅರ್ಪಿತ ರಸವುನೋಡಾ ॥೨॥

ಜಲಂಮಾಹೇಶ್ವರಾಂಗಂಚ ಸುಬುದ್ಧಿರ್ಹಸ್ತ ಸದ್ಗುರೋಃ॥ ಮುಖಂ
ಜಿಹ್ವಾ ರಸಂ ಭೇದಂ ಅರ್ಪಿತಂ ತೃಪ್ತಿ ಭೋಕ್ತವಾನ್ ॥೨॥

ನಿಹಿತಪ್ರಸಾದಿ ಯಂಗತೇಜಕ್ಕೆ ನಿರಹಂಕಾರ ಹಸ್ತವುನೋಡಾ ॥
ಸಹಜದಲ್ಲಿ ಶಿವಲಿಂಗಮುಖನೇತ್ರ ಬಹಳ ರೂಪಾರ್ಪಿತವು ನೋಡಾ॥೩॥

ಅಗ್ನಿಯಂಗಂ ಪ್ರಸಾದೀನಾಂ ನಿರಹಂಕಾರ ಹಸ್ತಯೋಃ ॥ ಶಿವಲಿಂಗಂ
ನೇತ್ರರೂಪಂಚ ಅರ್ಪಿತಂ ತೃಪ್ತಿ ಭೋಕ್ತವಾನ್ ॥೩॥

ಅನಿಲ ಪ್ರಾಣಲಿಂಗಿಯ ಅಂಗಕ್ಕೆ ಮನವೆ ಸುಹಸ್ತವೆನಿಸಿತುನೋಡಾ॥ ಅನುಪಮದ ಚರಲಿಂಗವು ಮುಖ ತ್ವಕ್ಕುತನು ಸುಖಾರ್ಪಿತವುನೋಡಾ॥೪॥

ಅಂಗಂ ತತ್ಪ್ರಾಣಲಿಂಗೀನಾಂ ವಾಯುಸ್ಸುಮನ ಜಂಗಮಂ॥ ತನ್ಮುಖಂ ತ್ವಚಸ್ಪರ್ಶಂಚ ಅರ್ಪಿತಂ ತೃಪ್ತಿಭೋಕ್ತವಾನ್ ॥೪॥

ವ್ಯೋಮಶರಣನ ಅಂಗಕ್ಕೆ ಹಸ್ತವು ಆ ಮಹಾಸುಜ್ಞಾನವೆನಿಸಿ॥ ಸ್ವಾಮಿ ಪ್ರಸಾದಲಿಂಗ ಶ್ರೋತ್ರಮುಖ ವಾ ಮಹಾಶಬ್ದಾರ್ಪಿತನೋಡಾ॥೫॥

ಶರಣಂ ವ್ಯೋಮಮಂಗಂಚ ಹಸ್ತಂ ಜ್ಞಾನಪ್ರಸಾದಿಕಂ॥ ತನ್ಮುಖಂ ಶ್ರೋತ್ರಶಬ್ದಂಚ ಅರ್ಪಿತಂತೃಪ್ತಿ ಭೋಕ್ತವಾನ್ ॥೫॥

ಭಾವೈಕ್ಯಾತ್ಮಾಂಗ ಹಸ್ತವು ದೇವನೆ ಶ್ರೀಮನ್ಮಹಾಲಿಂಗವೆನಿಸಿತು ನೋಡಾ॥ ಭಾವಿಸೊಡೆ ಹೃದಯ ಮುಖ ತೃಪ್ತ್ಯಾರ್ಪಿತತಾವಿದು ಷಟ್ಸ್ಥಲಕ್ಕೆನೋಡಾ ॥೬॥

ಐಕ್ಯಭಾವಾಂಗ ಹಸ್ತಂಚ ಮಹಾಲಿಂಗಾವಧಾನಿನಾಂ॥ ನಿರ್ಭಾವಂ ತನ್ಮುಖಂ ತೃಪ್ತಿ ಅರ್ಪಿತಂ ತೃಪ್ತಿ ಭೋಕ್ತವಾನ್ ॥೬॥

ಅಂಗಹಸ್ತಲಿಂಗ ಮುಖದ ಅವರಲ್ಲಿ ಹಿಂಗದೆ ಅನುವರ್ಪಿತ ಇದ॥ ರಂದವ ಬಲ್ಲಾತ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯನೋಡಾ ।೬॥

ಮತ್ತೇಭಃ— ಶಕಟಂ ದೇಹಮದಿಂತು ಬುದ್ಧಿಯೆ ನಿಜಂ ತತ್ಸಾರವೆಪ್ರಗ್ರಹಂ। ಪ್ರಕಟಂ ಮಾನಸ ಮಿಂದ್ರಿಯ ಪ್ರಚಯಮೇತಾಂ ತದ್ಧಯಂನಾಡೆ ಸಂ॥ ಗಿಕದಿಂದಾತ್ಮನೆ ಭಾವಿಸಲ್ಪಧಿಕ ನಿತಾರ್ಥಂಗಳಂ ಮಾನಸಾ। ಧಿಕದಿಂ ಲಿಂಗಮುಖಕ್ಕೆ ನೀಡುವನಲಾ ಶ್ರೀ ಸಿದ್ಧಲಿಂಗೇಶ್ವರಾ ||೬೭||

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಆರವತ್ತೇಳನೆಯದಾದ ಕರಣಾರ್ಪಿತ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೫೨ ಭಾವಾರ್ಪಿತಸ್ಥಲ.

ಸೂತ್ರಃ— ಇಂತು ಅಂತಃಕರಣದಲ್ಲಿ ಸಮರ್ಪಿತ ಮುಖವನ್ನೈದಿದ ಲಿಂಗವು ಪ್ರಸಾದಿಯ ಸರ್ವಾಂಗದಲ್ಲಿ ತಾನೆ ಸರ್ವಾರ್ಪಿತವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಭಾವಾರ್ಪಿತಸ್ಥಲವಾದುದು.

ವಚನಃ— ತನುವುತಾಗದಮುನ್ನ ಮನವುತಾಗದಮುನ್ನ ಆಪ್ಯಾಯನ ಬಂದೆಡೆಗೊಳ್ಳದಮುನ್ನ ಅರ್ಪಿತವ ಮಾಡಬೇಕು. ಗುರುವಿನ ಕೈಲಿ ಎಳತಟವಾಗದ ಮುನ್ನ ಅರ್ಪಿತವ ಮಾಡಬೇಕು. ಎಡದ ಕೈಲಿ ಕಿಚ್ಚು ಬಲದ ಕೈಲಿ ಹುಲ್ಲು ಉರಿಹತ್ತಿತ್ತು ಗುಹೇಶ್ವರಾ ನಿಮ್ಮ ಪರಮ ಪ್ರಸಾದಿಯಾ

ಪದ-ರಾಗ-ರಾಮಕ್ರಿ

ಕಾಯಭಾವದ ಕೈಗಳಿಂದ ಪಂಚೇಂದ್ರಿಯೆಂಬಾಯತದ ಕೈಗಳಿಂ ಲಿಂಗಕರ್ಪಿಸುವೆನೆಂ । ಬಾಯುಕ್ತಿ ಖಂಡಿತವು ತನುಲಿಂಗ ಲಿಂಗತನು ವಾದಡರ್ಪಿತವೆಲ್ಲವೂ ॥ಪ॥

ರೂಪಿಸಿ ಪದಾರ್ಥ ಬಂದುದ ಲಿಂಗಕಿತ್ತು ತಾನಾ ಪ್ರಸಾದವನಲ್ಲ ದೊಲ್ಲೆಂಬ ಭಕ್ತನಿಂ। ದೇಪರಿಯನಾರ್ಪಿತವ ನೆನೆಯ ಬಹುದೇನೊಂದು ಸುಖದುಃಖ ತನುವಶಾಗೆ॥ ತಾ ಪತಿಕರಿಸಿಕೊಳ್ಳುವ ಪರಿಯಂತು ಕೊಳ್ಳು ದುದ ಪರಿಹರಿಸಿ ಕೊಂಬ ಪರಿಯಾವುದೆಂಬಾ। ಳಾಪದೊಳಗದೆವ ವರ್ಮ ಲಿಂಗ ಭಾವಾಂಗ ವಾದಂಗರ್ಪಿತವೆಲ್ಲ ಸಹಜವು ॥೧॥

ನೆನನೆನದು ಮರಮರದು ಖಂಡಿತ ಜ್ಞಾನದಿಂದನುವಾದುದನುವಾ ಗದೆಂಬದುರ್ಭಾವದಿ। ತನು ಮುಟ್ಟಿ ಮನಮುಟ್ಟಿ ದೊಂದೊಂದು ಸೂತ ಕವ ಕಲ್ಪಿಸಿ ವಿಕಲ್ಪಿಸುತಲಿ ॥ ಅನುವರಿಯದಾಯತವನರಿಯ ಅರ್ಪಿತ ಮುಖದ ಘನವರಿಯ ರುಚಿಯನರ್ಪಿಸಿ। ತನು ರೂಪವನು ಹೊರದು ಪ್ರಳಯಕೊಳಗಹನೆ ಪ್ರಸಾದಿ ಪರಿಪೂರ್ಣ ಭಾವಿತನಲ್ಲದೆ ॥೨॥

ಅಪ್ಪುಗೆಯ ಸೋಂಕು ಸುಖತನುವ ತಟ್ಟದ ಮುನ್ನ ಆಪ್ಯಾಯ ನಾದಿಗಳು ಮನವಂಟದ ಮುನ್ನ। ಅರ್ಪಿಸಲು ಬೇಕು ಕಾಮಿತ ಕಲ್ಪಿತಾದಿ ಗಳು ಭಾವಮುಟ್ಟದೆ ಮುನ್ನ ಮುನ್ನವೇ ॥ ತಪ್ಪಿಸಲು ಬಾರದೇನುವ

ಕಾಯ ಸೋಂಕಿಲ್ಲದಿಪ್ಪುದಿಲ್ಲಾಗಿ ತತ್ಸ್ಥಾನ ವರ್ವ ಪ್ರಾ। ಣಾರ್ಪಣಂಗೈದು ಒಡವೊಡಲಗುಣವಳಿದು ಲಿಂಗಾಂಗ ದೊಡಲು ಗೊಂಡುದಾಗಿ ॥೩॥

ಅಂಗವೇ ಲಿಂಗ ಲಿಂಗವೇ ಪ್ರಾಣವಾದುಭಯಸಂಗದಿಂ ಪ್ರಾಣ ಮನವಾಗಿ ಮನಭಾವ ನಿಜ। ಲಿಂಗ ಸ್ವಾಯತವು ಮುಂತಾಗಿ ಮನ ಹಿಂತಾಗಿ ಸಕಲ ಪ್ರವರ್ತನೆಗಳ ನೊಂದಾಗಿ ॥ ಅಂಗೀಕರಿಸಾಮನಕೆ ಶ್ರೋತ್ರ ಘ್ರಾಣಾದಿ ನೇತ್ರಂಗಳಿಗೆ ಜಿಹ್ವೆ ನೈರ್ವರ್ಗಳ ಭಾವ ಭಾವವಾ। ದಂಗಕ್ಕೆನಾರ್ಪಿತಗಳಿಲ್ಲ ಸರ್ವಾಂಗ ಪ್ರಸಾದ ತನುಮಯ ಶುದ್ಧವಾದಾತಂಗೆಯು ॥೪॥

ಭಾವರುಚಿತತ್ವವಿಡಿದಂಗ ರೂಪಾದಿಗಳನಾ ವಿಧಾನನಿ ಪಿಡಿದು ಸೋಂಕು ತೃಪ್ತಿಯಸೂತ್ರ। ವಾವುದೇನಾದಡಂ ಕೈವಿಡಿದು ತ್ರಿವಿಧದೊಳು ತೆರಹು ಮರಹುಗಳದೇನುವಿಲ್ಲದೆ॥ ಸಾವಧಾನದೊಳು ಸಲೆನೆಲೆಯಾಗಿ ಲಿಂಗಾನುಭಾವ ನೆಲೆಗೊಂಡು ರೂಪಾದಿರುಚಿತ್ರಪ್ತಿಗಳ। ನೀವಭಾವಜ ಬಸವಣ್ಣನೇ ಪ್ರಸಾದಿ ಶ್ರೀಕೂಡಲ ಚನ್ನಸಂಗಯ್ಯನಲ್ಲಿ ॥೫॥

ಮತ್ತೇಭಃ— ತನುವಂ ಮುಟ್ಟದಮುನ್ನ ಸೋಂಕಿನ ಸುಖಂ ತತ್ತೃಪ್ತಿತಾನೆಯ್ದಿಯಾ। ಮನವಂ ಮುಟ್ಟದಮುನ್ನ ಕಲ್ಪಿತಮದುಂ ಭಾವಕ್ಕೆ ತಾನೆಯ್ದದಂ॥ ದುನಿಜಂ ಅಂಗಿತಲಿಂಗ ಭಾವದೆ ಮಹಾಲಿಂಗಕ್ಕೆ ತತ್ಸೌಖ್ಯಮಂ॥ ಬಿನದಂ ಗೊಂಡುರೆ ಮರ್ಪಿಸಾತನೆ ಶಿವಂ ಶ್ರೀಸಿದ್ಧಲಿಂಗೇಶ್ವರಾ ॥೬೮॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಅರವತ್ತೆಂಟನೆಯದಾದ ಭಾವಾರ್ಪಿತಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫೩ ಶಿಷ್ಯಸ್ಥಲ.

ಸೂತ್ರಃ— ಇಂತು ಕಾಯಾರ್ಪಿತ ಕರಣಾರ್ಪಿತ ಭಾವಾರ್ಪಿತವೆಂಬ ತ್ರಿವಿಧ ಸ್ಥಲವೇಕವಾದ ಲಿಂಗವು ಪ್ರಸಾದಿಯ ಅಂಗದಲ್ಲಿ ಉಪ

ದೇಶಿತ ಸ್ವರೂಪದಿಂದ ಶಿಷ್ಯಭಾವವನೈದಿದ ಭೇದವೆಂತಿರ್ದುದೆಂದಡೆ ಮುಂದೆ ಶಿಷ್ಯಸ್ಥಲವಾದುದು.

ವಚನ:— ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಿಹೆನೆಂದಡೆ ಸಿಕ್ಕದೆಂಬ ಬಳಲಿಕೆಯು ನೋಡಾ! ಕಂಡುದನೆಕಂಡು ಗುರುಪಾದವ ಹಿಡಿದಲ್ಲಿ ಕಾಣದುದ ಕಂಡು ಕಾಣಬಹುದಯ್ಯಾ ಗುಹೇಶ್ವರಾ ॥೭॥

ಪದ—ರಾಗ—ಬೌಳಿ

ಜ್ಯೋತಿಸೋಂಕಿನಿಂದಲಾದ ಜ್ಯೋತಿಯಂತೆ ಗುರು ಕೃಪೆಯೊಳು। ಜಾತನಾದ ಶಿಷ್ಯ ಗುರುಮಹಾತ್ಮೆವಿಡಿದು ಗುರುವಹಾ ॥ಪ॥

ಪರುಷ ಸೋಂಕಿನಿಂದ ಲೋಹ ಪರುಷ ಸೋಂಕಿ ಪರುಷವಹುದು। ಗುರುಪದಾಬ್ಜಸೋಂಕಿ ಗುರುಪದಸ್ಥನಹ ಶಿಷ್ಯನೂ ॥೧॥

ಆವುದಾವ ಬೀಜದಿಂದಲಾದ ಫಲವು ಬೆಳೆದು ಮರಳಿ ತಾವೆ ಬೀಜವಹವು ವೃಕ್ಷಬೀಜನ್ಯಾಯವು। ಆವ ಪರಿಯದಾವ ಪರಿ ಗುರುಭಾವ ದಿಂದಲುದಯವಾದ ಪಾವನೀಯ ಶಿಷ್ಯ ಗುರುವಹ ॥೨॥

ಗುರುವಿನಿಂದಲಾದ ಶಿಷ್ಯ ಗುರುವ ನೆರೆವೆನೆಂಬ ಬರದ ಉರವಣಿಯೊಳು ಕೂಡಿ ನಡೆಯಲಾಗದು। ಚರಿಸಲಾಗದವರ ಚರಿಯುನಿರುತಗೇಳಲಾಗದವರ ಸರಿಯೊಳಾವ ಭಕ್ತ ಭೋಗ ಮಾಡಲಾಗದು ॥೩॥

ದೃಷ್ಟಗುರುವಿನಂಘ್ರಿ ವಿಡಿದು ದೃಷ್ಟಿಭಾವದ ಗೋಚರದ ಷಟ್ತ್ರಿಂಶತ್ಪ್ರಭಾಪಟಲತತ್ವ ಘನತೆಯಾ। ಮುಟ್ಟಿಸಿ ಪರವಸ್ತು ವಿಷಯಕಾಷ್ಮವಾಗಿ ತನ್ನಮನದ ಭೀಷ್ಟಲಿಂಕ ಸೋಂಕಿ ಲಿಂಗವಾಗಿ ಗುರುವಹನೆಂದು ॥೪॥

ತಾನೆಶಿಷ್ಯ ತಾನೆಭಕ್ತ ತಾನೆಗುರುವು ತಾನೆಲಿಂಗ ತಾನೆಜಂಗಮ ತಾನೆಪ್ರಸಾದ ತಾನೆತೃಪ್ತಿಯೂ। ಸ್ಥಾನದಲ್ಲಿ ಸುಖದೊಳಿಹ ಮಹಾನುಭಾವಿಯಾಗಿ ಗುರುವಿನಾಣತಿಯಲ್ಲಿ ಕೂಡಲ ಚನ್ನಸಂಗನಿಮ್ಮಶರಣನಲ್ಲಿ ॥೫॥

ಮತ್ತೇಭ:—ಜರಿಯಲ್ಜಿಂಕಿಸೆಯುಂಪೊರಳ್ಸೆಳೆಯುಂ ಮತ್ತಂತಾಡನಂಗೆಯ್ದೊಡಂ। ಬರಿದೆನಿಷ್ಠುರದಿಂದೆಬಯ್ದೊಡ ಮವರ್ಕಂ ಚಿತ್ತದೊಳ್

ಕ್ಲೇಶವೆಂ॥ ತರಿಸಂದಿಲ್ಲದೊಡಂತವಂ ವಿಮಲಸದ್ಭಕ್ತಿ ಪ್ರಭಾವಂಗಳೋಳ್। ಕರೆತಾನೆಳ್ಳನಿತಿಲ್ಲದುತ್ತಮನಲಾ ಶ್ರೀ ಸಿದ್ಧಲಿಂಗೇಶ್ವರಾ ॥೯॥

ಗದ್ಯಃ— ಇಂತೀಪ್ರಕಾರದಿಂ ನೂರೊಂದುಸ್ಥಲದೊಳಗೆ ಅರವತ್ತೊಂಭತ್ತನೆಯದಾದ ಶಿಷ್ಯಸ್ಥಲದವಿಚಾರವು ಅನುವಿನಿಂ ಮುಗಿಯಲಾಯಿತು.

---

೭೦ ಶಿಶ್ರೂಷಾಸ್ಥಲ.

ಸೂತ್ರಃ—ಇಂತು ಶಿಷ್ಯಭಾವವನ್ನೈದಿದ ಲಿಂಗವು ಪ್ರಸಾದಿಯಅಂಗದಲ್ಲಿ ಶಿಶ್ರೂಷಾಭಾವವನ್ನೈದಿದ ಭೇದ ವೆಂತಿರ್ದುದೆಂದಡೆ, ಮುಂದೆ ಶಿಶ್ರೂಷಾಸ್ಥಲವಾದುದು.

ವಚನಃ—ಸ್ವಾಮಿಭೃತ್ಯ ಸಂಬಂಧಕ್ಕೆ ಆವುದು ಪಥವೆಂದರೆ ದಿಟವ ಪಿಡುವುದು, ಸಟೆಯ ಬಿಡುವದು, ನುಡಿದಂತೆ ನಡೆವುದು, ನಡೆದಂತೆ ನುಡಿವುದು, ನುಡಿದು ಹುಸಿವ ನಡೆದು ತಪ್ಪುವ ಪ್ರಪಂಚಿಯ-ನೊಲ್ಲನು ನಮ್ಮ ಕೂಡಲ ಸಂಗಮದೇವನು. ॥೮॥

ಪದ— ರಾಗ—ರಾಮಕ್ರಿ.

ಗುರುಪಾದ ಸೇವಾತುರ ಭೃತ್ಯನು ಸಂ। ಸಾರ ಭವಬಂಧವಿರಹಿತನು ॥ಪ॥

ಗುರುಪರಿಚರಿಯವೆ ಸಕಲಜಪಂಗಳು ಗುರುಪರಿಚರಿಯವೆ ಸಕಲ ತಪಂಗಳು । ಗುರುಪರಿಚಯವೆ ಸದ್ಯೋನ್ಮುಕ್ತಿಯು ಗುರುಸನ್ನಿಹಿತ ಪರಮ ಸುಖವೂ ॥೧॥

ಅರಸಲೇಕೆ ಚಾತುರ್ವಿಧ ಪದಗಳ ಗುರುಚರಣದೊಳಗೆ ಮನಮಗ್ನನಾಗಿನಿ । ಶ್ಚರಿಯದೊಳಗೆ ಗುರುಭಕ್ತಿಯ ನಳವಡಿಸಿದಡಲ್ಲಿಯೆ ಮುಕ್ತಿ ನೋಡಾ ॥೨॥

ಗುರುವಿನೊಳಿದಿರುತ್ತರವನರಿಯದೆ ತನುಕರಗಿ ಕೊರಗಿ ಭೃತ್ಯಾಚಾರಸ್ಥಲ। ಕರಿಗೊಂಡು ಗುರು ನಿರೂಪವನು ಮಾಡಿದಡಲ್ಲಿಯೆ ಮುಕ್ತಿ ನೋಡಾ ॥೩॥

ಗುರು ಮೂರ್ತಿಯೇ ಪರಬ್ರಹ್ಮೋತ್ತರ ಗುರು ಪೂಜೆಯೆ ಸರ್ವಾಚಾರ ಸ್ಥಲ । ನಿರುತವೆಂದು ಗುರುವನು ನೆರೆನಂಬಿದಡಾತನೆ ಪರಮ ಸುಖಿ ನೋಡಾ ॥೪॥

ಒಂದು ದಿನ ಗುರುಸೇವೆ ಮಾಡಲು ಹಿಂದಣ ಜನ್ಮಾಂತರ ಕೋಟಿಗಳು । ಒಂದೇ ನಿಮಿಷದಲ್ಲಳಿವವು. ನೆಲೆಗೆಟ್ಟ ಕೂಡಲ ಸಂಗಯ್ಯ ನಿಮ್ಮಾಣೆ ।೫॥

ಮತ್ತೇಭ:—ಗುರು ಶುಶ್ರೂಷಣ ಕಾರ್ಯದೊಳ್ನೆರೆ ವಿಚಾರಂ ಮುಂದು ಗೊಂಡಾವಗಂ। ಗುರುವಾಕ್ಯಂಗಳನಿಂತು ಮೀರದೆ ಮನೋವಾಕ್ಕಾಯ ಕರ್ಮಂಗಳೋಳ್ । ನಿರುತಂ ಬೇಸರು ಮಿಲ್ಲದಾ ಗುರುಪದ ದ್ವಂದ್ವಂಗಳೋಳ್ ಭಕ್ತಿತ। ತ್ಪರನಾದಾತನೆ ಧನ್ಯನುದ್ಧತನವಂ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತನೆಯದಾದ ಶಿಶ್ರೂಷಾಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೫೫ ಸೇವ್ಯಸ್ಥಲ.

ಸೂತ್ರ:—ಇಂತು ಶಿಶ್ರೂಷಾಭಾವದಲ್ಲಿ ಭರಿತವಾದ ಲಿಂಗವು, ಪ್ರಸಾದಿಯ ಅಂಗದಲ್ಲಿ ಇತರೇತರ ಭಾವವ ಮರೆದು ಶಿಷ್ಯನೇಗುರು, ಗುರುವೇ ಶಿಷ್ಯನಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಸೇವ್ಯಸ್ಥಲವಾದುದು.

ವಚನ:—ಮೊದಲೋಳ್ ಮನದಲ್ಲಿ ಅಚ್ಚೊತ್ತಿದ ಕಾರಣ ಎಚ್ಚರಿಕೆಯಾಯಿತ್ತು. ಗುರುಲಿಂಗದ ಕಾರುಣ್ಯದಿಂದರಿವಾಯಿತ್ತು. ಜಂಗಮ ಲಿಂಗದಿಂದಾಚಾರವಾಯಿತ್ತು. ಲಿಂಗಜಂಗಮದಿಂದ ತಿಳಿನ ತಿಳಿವಿನಲ್ಲಿ ಪ್ರಸಾದ ಸಾಧ್ಯವಾಯಿತ್ತು. ಕೂಡಲ ಚನ್ನಸಂಗಯ್ಯನಲ್ಲಿ ಏಕಾರ್ಥವಾಯಿತ್ತು ॥೧॥

Acc. No. 335

ಪದ—ರಾಗ—ಭೌಳಿ.

ಗುರುಮಹಾತ್ಮ್ಯೆಯೊಳಗೆ ಶಿಷ್ಯಬೆರಸಿ ಬೇರೆದೋರವೆ, । ಗುರುವೆ ಶಿಷ್ಯ ಶಿಷ್ಯನೇ ಗುರುವಾದ ನಿತ್ಯ ಸತ್ಯನು ॥ಪ॥

ಗುರುವಿನಂತರಂಗದೊಳಗೆ ಉದಯವಾದ ಶಿಷ್ಯನು । ಗುರುವಿನಂತು ಟಲ್ಲದೆ ಬೇರೆ ಭಿನ್ನಭಾವವಿಲ್ಲ ನೋಡಾ ॥೧॥

ಬೇರೆ ಶಿಷ್ಯನೆಂಬ ಭಿನ್ನಭಾವ ದೋರದಿರ್ದಡಾತ ಗುರು । ಬೇರೆ ಗುರುವೆಂಬ ಭಿನ್ನಭಾವ ದೋರದಿರ್ದಡಾತ ಶಿಷ್ಯನು ॥೨॥

ಉಪಮೆ ನಿಲುಕದುಪದೇಶ ಕುರುಹಿನೊಳಗೆ ತನ್ನ ಮರದು। ಅಪರಮಿತ ದೊಳಿಪ್ಪ ನಿಲವನುಪಮಿಸಲ್ಕೆ ಬಪ್ಪದೆ. ॥೩॥

ಗುರುವ ಶಿಷ್ಯನವಗ್ರಹಿಸಿ ಶಿಷ್ಯನೆಂಬ ಭಾವಭೇದ। ಹರಿದು ಉಭಯ ಗೆಟ್ಟನಿಲವ ಕುರುಹು ಪರಿಯ ಬಪ್ಪವೆ ॥೪॥

ಅಪಶಬ್ದಕಿಂಬುಗೊಡದೆ ಸೇವ್ಯ ಗುರು ಮಹತ್ಮೆಯೊಳಗೆ ಕೇವಲ ಸ್ವರೂಪ ಕೂಡಲಸಂಗ ನಿಮ್ಮ ಶರಣನು ॥೫॥

ಶಾರ್ದೂಲ:—ಭೃಂಗಧ್ಯಾನದ ಸಾಹಸಂ ಪುಳುಗೆಯಾ ಭೃಂಗತ್ವಮಂ ಮಾಳ್ಪದಾ । ಪಾಂಗಿಂ ಶ್ರೀ ಗುರುರೂಪನೆಯ್ದಿ ಸೋವುದಾಗಳ್ಪ್ರಕಾ ವಿಸಲ್ತತ್ಕ್ರಸಾ ॥ ಪಾಂಗಿಂ ಶಿಷ್ಯರ ನಿಂತು ತದ್ಗುರುವೊಲಂತೇವಾಸಿ ತಾನ್ಹೇ ಮಹಾ । ಲಿಂಗಂ ಭೇದವದಿಲ್ಲ ಸೇವ್ಯನೆಯಮಂ ಶ್ರೀ ಸಿದ್ಧ ಲಿಂಗೇಶ್ವರಾ ॥೭೧॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತೊಂಬತ್ತನೆಯದಾದ ಸೇವ್ಯಸ್ಥಲದ ವಿಚಾರವು ಅನುವಿಸಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀ ಮದೇಕೋತ್ತರ ಶತಸ್ಥಲಂಗಳಲ್ಲಿ ದೀಕ್ಷಾಗುರು ಸ್ಥಲಾದಿಯಾಗಿ ಪರಜಂಗಮ ಸ್ಥಲಾಂತ್ಯಮಾದೊಂಬತ್ತು ಸ್ಥಲಂಗಳು ೧ನೇಯದಾಚಾರಲಿಂಗ ಸ್ಥಲಕ್ಕೆ ಕ್ರಿಯಾಗಮ ಸ್ಥಲಾದಿಯಾಗಿ ಜ್ಞಾನಾಚಾರ ಸ್ಥಲಾಂತ್ಯಮಾದೊಂಬತ್ತು ಸ್ಥಲಂಗಳು. ೨ನೇಯ ಗುರು ಲಿಂಗಸ್ಥಲಕ್ಕೆ ಕ್ರಿಯಾನುಗ್ರಹ ಸ್ಥಲಾದಿಯಾಗಿ ಸೇವ್ಯಸ್ಥಲಾಂತ್ಯಮಾದೊಂಬತ್ತು

ಸ್ಥಲಗಳು ೩ನೇಯ ಶಿವಲಿಂಗಕ್ಕೆ ಅಂತು ಸ್ಥಲಂಗಳು ಮೂರು ಮುಗಿದವು

೫೬. ಜೀವಾತ್ಮಸ್ಥಲ.

ಸೂತ್ರ:—ಇಂತು ನವಸ್ಥಲಂಗಳೀ ತ್ರಿವಿಧ ತ್ರಿವಿಧಂಗಳಾಗೇಕವಾದ ಶಿವಲಿಂಗವು ಮಹಾನು ಭಾವಿಯಾದ ಪ್ರಾಣಲಿಂಗಿಯ ಜಂಗವು ಲಿಂಗ ಸಂಬಂಧದಲ್ಲಿ ಜೀವಭಾವವಂ ನಿವೃತ್ತಿಯಂ ಮಾಡಿ ಲಿಂಗ ಸಜ್ಜೀವ ಸಮ್ಯಕ್ಯಾದ ಭೇದವೆಂತಿರ್ದುದೆಂದಡೆ ಮುಂದೆ ಜೀವಾತ್ಮ ಸ್ಥಲವಾದುದು.

ವಚನ:—ಸರ್ವ ಸಂಸಾರಿಯೊಡನಾಡಿ ಕಟ್ಟುವಡೆಯಿತ್ತು. ಮನದ ತಮಂಧ ಬಿಡದು. ಮನದ ಕಪಟ ಬಿಡದು. ಸಟೆಯೊಡನೆಂದಿಟವಾಡಿ ಬಯಲು ಒಡಿವಡೆದಿತ್ತು. ಕಾಯದ ಸಂಗ ಜೀವವುಳ್ಳನ್ನಕ್ಕ ಎಂದೂ ಭವ ಹಿಂಗದು. ಗುಹೇಶ್ವರಾ. ॥೧॥

ಪದ—ರಾಗ—ವರಾಳಿ.

ಜೀವ ಪರಮರ ಭೇದವರಿಯ ಬಲ್ಲಡೆ ಪ್ರಣಮ ಧ್ಯಾನಾರೂಢವಾಗಿ ತನುಗುಣಗಳ ಸೂಸಲೀಯ್ಯದೆ ಶಿವಜ್ಞಾನಿಯ ಹೃದಯದೊಳು ತಾನಿಪ್ಪನು ಶಿವನು ಸಂದಿಲ್ಲದೆ ॥ಪ॥

ಅಷ್ಟದಳ ಕಮಲದೊಳಗಿಪ್ಪ ನಾತುಮ ತಾನು ಅಷ್ಟದಳಮಧ್ಯ ಚತುರಾಶ್ರಮದೊಳು ಇಪ್ಪ। ಪರಮಾತುಮನ ಮುಟ್ಟಹೆನೆನುತ ಹಂಸ ಅಷ್ಟದಳ ವಳಯದೊಳು ತೊಳಲುತಿಹನು ॥೧॥

ಒಂದು ದಳದಲಿ ಪುಣ್ಯ ಒಂದು ದಳದಲಿ ಪಾಪ ಒಂದು ದಳದಲಿ ಗಮನ ನಿರ್ಗಮನವು । ಒಂದು ದಳದಲಿ ಅಶನ ವ್ಯಸನ ವಿಷಯಾ ನಿದ್ರೆ ಒಂದು ವಳದಲೊಂದೊಂದು ಛಂದ ॥೨॥

ಷಡುವರ್ಗವೆಂಬಿವನು ಸಮನಿಸದಿರಾ ನೀನು ಷಡುವಳಯದ್ವೈವತಕ್ಷರವ ತಿಳಿಯಾ। ಚವು ಪತ್ರ ಷಡುಪತ್ರ ದಶಪತ್ರ ದ್ವಾದಶಂ ಷೋಡಶಂ ಉರ್ಧ್ವದಲವು ಛಯಕಂಡಾ ॥೩॥

ಇಪ್ಪತ್ತೊಂದು ಸಾವಿರದ ಆರು ನೂರು ಹಂಸಾಹಂಸ ಎಂಬ ಜಪ ತಾನೆ ಹಂಸ ದಿವರಾತ್ರಿ ಎನ್ನದನವರತಜಪಿಸುವದು ಪ್ರಾಣೋಪಾನದೆಡೆಯಲ್ಲಿ ಉದಯ ಕಂಡಾ ॥೪॥

ದಶವಾಯುಗಳ ತಮ್ಮ ವಶಕೆ ಹರಿಯಲೀಯದೆ ಊರ್ಧ್ವವಶಕೆ ಬಪ್ಪ ಪ್ರಣವ ವಃನಾಗಿರು । ವಿಷಯಲೋಚನ ಘನಗುರು ಪ್ರಿಯ ಸೋಮನಾಥ ಎಸಳಿನ ದಳದೊಳಗೆ ಬೆಳಗುತಿಹನು ॥೫॥

ಮತ್ತೇಭಃ—ಕೆಲೆಯಿಂದುದ್ಭಲವಾಗಿ ತೋರ್ಪ ವಿಲಸಚ್ಚೈತನ್ಯವೇ ವಿದ್ಯೆಯಿಂ । ಸಲೆಯಾಬುದ್ಧಿಯನಿಪ್ಪ ತದ್ವಿಷಯಮಂ ಕಂಡಾಗಳಾರಾಗದಾ ॥ ನೆಲೆಯಿಂದಾಶೆಯನುಳ್ಳದಾಗಿ ಭುವನೈಕ ಪ್ರಾಪ್ತಿಯಿಂ ಭೋಗಸಂ ॥ ಕಲಿತತ್ವಂ ನಿಜವಾಗಿ ಜೀವನೆನಿಪಂ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತೆರಡನೆಯದಾದ ಜೀವಾತ್ಮ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೭೩. ಅಂತರಾತ್ಮಸ್ಥಲ.

ಸೂತ್ರಃ—ಇಂತು ಜೀವಭಾವವಮಂ ನಿವೃತ್ತಿಯಂಮಾಡಿದ ಲಿಂಗವು ಪ್ರಾಣಲಿಂಗಿಯೊಳಗೆ ಆತ್ಮವಿವೇಕಿಯಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಅಂತರಾತ್ಮ ಸ್ಥಲವಾದುದು.

ವಚನಃ—ದೇಹಪ್ರಸಾದವೆಂದೆನ್ನೆ. ಅಂತರ್ದೇಹಪ್ರಸಾದ ವೆಂದೆಂಬೆ ಜಾಗ್ರಪ್ರಸಾದ ವೆಂದೆನ್ನೆ. ಸ್ವಪ್ನಪ್ರಸಾದವೆಂದೆಂಬೆ. ಅಂತರ್ದೇಹಕ್ಕೆ ಆಕಾರವಿಲ್ಲ. ಸ್ವಪ್ನಕ್ಕೆ ಬೀಜವಿಲ್ಲ. ಇದು ಕಾರಣ ಕೂಡಲ ಚನ್ನಸಂಗಮಾಸು ದೇಹದಲ್ಲಿ ತೋರಿದನಾಗಿ ಅಕಾಯದಲ್ಲಿ ನಿಮ್ಮುಪಕಂಡೆ ॥೧॥

ಪದ—ರಾಗ—ಮಾಳವಗೌಳ

ದೇಹದೊಳು ಚರಿಸು ವಂತರ್ದೇಹಿ ಯಂತರಿಯಾಮಿ ಸ್ವಪ್ನದ । ಗ್ರಾಹಕತೆಯಂ ತಂಬು ಜದಪರಿಮುಟ್ಟ ಮುಟ್ಟದಿಹ ॥ಪ॥

ಹಂಸ ಪವನದಳ ದಳಂಗಳೊಳಂ ಸಿಕಗಳೊಡಗೂಡಿ ಆತ್ಮನೊಳಂ ಸಮಾಹಿತವಾಗಿ ತೊಳಗುವ ಜ್ಯೋತಿರೂಪಕವು। ಸಂಶಯದ ಸಂಸಾರ ಕಾಯದೊಳು ಸಿಲುಕಿ ಮಹಾಭೂತಗೂಡಿರ್ದು ಸಹಜ ಬೇರಾಗಿ ಸಚರಾಚರವ ಚರಿಸುತ್ತಿಹಾ ॥೧॥

ನೇತ್ರ ಸೂತ್ರಂಗಳಂತೆ ದೃಶ್ಯದ ಭ್ರಾಂತು ತನ್ನೊಳಡಗಿ ಶ್ರೋತ್ರ ಸೂತ್ರದಂತಿರೆ ಶಬ್ದಗ್ರಾಹಿಸಿ ಘ್ರಾಣವಾಸನೆಯ। ಸೂತ್ರದಂತಿರೆ ಜಿಹ್ವೆರುಚಿಗಳ ಸೂತ್ರವಿಡಿದಂತಂಗ ಸೋಂಕಿನ ಸೂತ್ರವೆಂತಂತರಾತ್ಮನು ಬೆರಸಿ ಬೆರಸದಿಹಾ ॥೨॥

ಪಶು ಪಶುವಿನಂತಿಹುದು ತಾನಾಪಶುವಿನೊಳಗಣ ಅನ್ಮೃತದಂತಿಹ ವಿಷಯ ವಿಷಯಗಳೊಳಗಿಹವುತಾನಾ ॥ ವಿಷಯದೊಳಗೆಲ್ಲ ವಚಿಸಿಕೊಂಡಿಹ ಜ್ಞಾನದಂತಿಹ ವಸುಧೆ ಜಾತದಫಲ ಫಲಾಂತರದೆ ಸಕರುಚಿಯಂತಂತರಾತ್ಮನು ಬೆರಸಿ ಬೇರಿಹನು ॥೩॥

ಸ್ವಪ್ನ ಸೂತ್ರವದೆ ಹೇಗೆ ಗಗನದೊಳಿಪ್ಪ ರವಿಶಶಿ ಕಿರಣಸೂತ್ರಗಳಪ್ಪುಗೆಗಳಪ್ಪುಗೆಗಳಂತಂತೆ ವಾರಿಧಿ ಜಠರ ಕುಹರದೊಳಿಪ್ಪ ಸಿಖಿಯಂತಖಿಳವನುಗ್ರಹಿಸಿಪ್ಪ ದೃಷ್ಟಿಯ ಸೂತ್ರವೆಂತಂತಿಪ್ಪ ಜಗದಂತರಿಯಾತ್ಮಕವಪ್ಪ ರೂಪು ರೂಪಾಗಿ ॥೪॥

ತಾನೆ ಜಗ ತಾನೆ ಮಹಾಗಮು ತಾನೆ ವಿಧಿ ತಾನೆ ಮಹಾಕ್ರಿ ತಾನೆಯಾಗಿಯು ತಾನೆಯಲ್ಲದೆ ತಾನೆವರದೆಶೆಯ ॥ ಜನನಸ್ಥಿತಿ ಮರಣದನುಸಂಧಾನಗಳನನುಕರಿಸ ಮನನ ಜ್ಞಾನದಂತ ಜ್ಯೋತಿರಾತ್ಮ ಗುಹೇಶ್ವರನ ಶರಣಾ ॥೫॥

ಶಾರ್ದೂಲಃ---ರಾಗದ್ವೇಷ ವಿಮೋಹ ಲೋಭ ಭಯ ಶೋಕಾದಿ ಪ್ರಚಾರಂಗಳೊ। ಳ್ತಾಗಿರ್ದಂತರ ಸಂಜ್ಞೆಯಾತನೆ ಲಸತ್ಪರ್ಯಷ್ಟಕೋಪೇತದಿಂ॥ ದೀಗಂಕರ್ತ್ರಿ ಸುತಿರ್ದು ವರ್ತಿಪ ಪರಾತ್ಮಂ ಗೊಪ್ಪುವಾನಂದವೈ। ದೇಗೈಯಂ ತಿಳಿವ ಶ್ರುತಿಸ್ಥಿತಿಯುತರ್ ಶ್ರೀ ಸಿದ್ಧಲಿಂಗೇಶ್ವರಾ॥೬॥

ಗದ್ಯ---ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತು ಮೂರನೆಯದಾದ ಅಂತರಾತ್ಮಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೩೮. ಪರಮಾತ್ಮಸ್ಥಲ.

ಸೂತ್ರ:— ಇಂತು ಅಂತರಾತ್ಮ ವಿವೇಕಾನುಭಾವಿಯಾಗಿರ್ದ ಲಿಂಗವು ಪ್ರಾಣಲಿಂಗಿಯು ಆತ್ಮವಿವೇಕದಿಂ ಪರಮಾತ್ಮನ ಪರಾಮರಿಸಿದ ಭೇದ ವೆಂತಿರ್ದುದೆಂದಡೆ ಮುಂದೆ ಪರಮಾತ್ಮಸ್ಥಲವಾಪುದು.

ವಚನ:—ಆತ್ಮೋಽಹಂ ಎಂಬರು. ತಾವಾತ್ಮ ವಿತ್ತುಗಳೆಲ್ಲರು. ಆತ್ಮನಂತವ ನಿಂತವನೆಂದು ಕಂಡವರುಂಟೇ ಆಯ್ಯಾ? "ಆತ್ಮಜ್ಞಾತೋಽಹಂ" ಎಂಬುದಕ್ಕೆ ಶ್ರುತಿಪ್ರಮಾಣ ಉಂಟು. ಆತ್ಮನು ವಾಙ್ಮನಕ್ಕಗೋಚರನಯ್ಯಾ. ಆತ್ಮನು ತತ್ವಮಸಿ ವಾಕ್ಯದಿಂದತ್ತತ್ತಲಯ್ಯಾ. ಆತ್ಮನ ಅರಿವೆ ವೆಂದವರೆಲ್ಲರು ಅರಿಮರುಳುಗಳಲ್ಲವೇ ಅಯ್ಯಾ? ಆತ್ಮನು ತಾನಾದವಸ್ಥೆ ನೀರು ನೀರು ಕೂಡಿದಂತೆ. ಆತ್ಮನ ಕಾಂಬಡೆ ಕಾಯವಿಡಿದು ಕಾಣಬಹುದೇ ಅಯ್ಯಾ. ಆತ್ಮನು ಶ್ರೀ ಪ್ರಾಣೇಶ ಲಿಂಗ ಪ್ರಸಾದ ಕಾಯ ಆತ್ಮನೆಂಬಾತ ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ॥೩॥

ಪದ—ರಾಗ—ಭೂಪಾಳಿ

ಪರಮಮೂರುತಿ ಪರಮಜ್ಞಾನಿ ಲೋಕಪ್ರಪಂಚನಲ್ಲ। ನಿಷ್ಪ್ರಪಂಚನಾಮ ನಿರ್ನಾಮ ನಿಷ್ಕಾಮಿಯಾಗಿ॥ಪ॥

ಕಾಯಗುಣಗಳತಂದು ಜೀವದೊಳಗಿರಿಸಿ ಪ್ರಾಣಲಿಂಗಕ್ಕೆ ಸಮಾಧಾನಮಾಡಿ। ಆಶ್ರಮವ ಸ್ವೀಕರಿಸ ಅನಾಶ್ರಮವ ನೀಕರಿಸ ದ್ವೈತಾದ್ವೈತನಲ್ಲ ಲಿಂಗಸಂಗಿ ॥೧॥

ಕಾಯಶೂನ್ಯಲಿಂಗ ಪ್ರಾಣಶೂನ್ಯಶರಣ ಭಾವಭೇದಂಗಳಿಲ್ಲವಾಗಿ। ಒಳಹೊರಗುವನು ಸರ್ವಾಂಗ ಲಿಂಗವಲ್ಲಿ ಅನುಭವಕೆ ತರಲಿಲ್ಲ ದನುಪಮನು ॥೨॥

ಕಾರಣವಕಾರಣವು ಕಲ್ಪಿತವಕಲ್ಪಿತವು ಸಂಕಲ್ಪ ವಿಕಲ್ಪನಲ್ಲ ಸುಜ್ಞಾನಿಯಾಗಿ। ಸಾವಯವ ನಿರವಯವ ಸಂಗಿ ನಿಸ್ಸಂಗಿ ಪರಮಾತ್ಮ ತಾನಾದ ನಿರ್ಬೋಧ ಬೋಧಿ ॥೩॥

ನಿರ್ಭಾವ ನಿರ್ನಾಮ ನಿರ್ದೇಹ ದೇಹಿನಿರ್ಗುಣಕೆ ಅವಯವಾಕಾರರೂಪ ಪರತತ್ವ। ನಿಂಬಿಟ್ಟ ಉಭಯವಳಿದುಳಿದಾತ ತ್ರಿವಿಧಸಂಪನ್ನನೀತನುಭಯ ಅಂಗಸಂಗಿ ॥೪॥

ಲಿಂಗಭುಕ್ತ ಶೇಷಭುಕ್ತರಚ ಪ್ರಾಣನಿರ್ಗಮನಗಮನಿಗೆ ಗಮನ ವಿಲ್ಲ ಸ್ವತಂತ್ರ। ಕೂಡಲ ಚನ್ನಸಂಗಯ್ಯನಲ್ಲಿ ಅಸಾಧ್ಯ ಸಾಧಕನಾದ ಶ್ರೀ ಲಿಂಗಸಂಗಿ ॥೫॥

ಮತ್ತೇಭಃ—ಬಗೆಯಲ್ ಕಾಮುವದಿಲ್ಲ ರೂಪಮುಮುದುಂ ತಾನಿ ಲ್ಲತತ್ಕರ್ಮವುಂ। ನಿಗೆಯಲ್ಲರ್ಥ ವಿಚಾರವೆಂಬುದು ಬಳಿಕ್ಕೆಲ್ಲಂತಂದಂ ಭುಂಜಿಪ॥ ಜಗಮುಂತಿಲ್ಲ ಸನಾತನಂ ಸಕಲ ಹೃತ್ಸಾಕ್ಷಿಸ್ವಯಂ ಜ್ಯೋತಿ ಸ। ರ್ವಗನತ್ಯಂತ ವಿಶುದ್ಧರೂಪ ನೆನಿಪ್ಪೈ ಶ್ರೀ ಸಿದ್ಧಲಿಂಗೇಶ್ವರಾ ॥೭೪॥

ಗದ್ಯಃ—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತು ನಾಲ್ಕನೆಯದಾದ ಪರಮಾತ್ಮಸ್ಥಲದ ವಿಚಾರವು ಅನುವಿನಿಂ ಮುಗಿ ಯಲಾಯಿತು.

---

೭೫. ನಿರ್ದೇಹಾಗಮಸ್ಥಲ.

ಸೂತ್ರಃ—ಇಂತು ಜೀವಾತ್ಮ ಅಂತರಾತ್ಮ ಪರಮಾತ್ಮವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ಪ್ರಾಣಲಿಂಗಿಯನಿರ್ದೇಹವಲ್ಲಿ ಸ್ವಭಾವ ಚರಿತ್ರವನ್ನೈದಿದ ಭೇದ ವೆಂತಿರ್ದುದೆಂದಡೆ ಮುಂದೆ ನಿರ್ದೇಹಾಗಮಸ್ಥ ಲವಾದುದು.

ವಚನಃ—ಮಲಿನ ದೇಹಿಗೆ ಮಜ್ಜನ ಮಲ್ಲದೆ ನಿರ್ಮಲ ದೇಹಿಗೆ ಮಜ್ಜ ನವೇಕೋ? ವಿಷಯವುಂಟೆ ಲಿಂಗ ನಿಷ್ಪತ್ತಿಯಾದ ಶರಣಂಗೆ? ಅಗಮ್ಯ ಅಗೋಚರ ಅಪ್ರಮಾಣ ಗುಹೇಶ್ವರಾ

ಪದ—ರಾಗ—ಭೌಳಿ

ದೇಹ ಗುಣಗಳಳಿದು ನಿರ್ದೇಹಿಯಾದ ಶರಣನು ಬಹಿರಂಗದ। ಬಳಕೆ ಮಾಯಾಮೋಹವನ್ನು ಜರಿದನು ನೋಡಾ ॥ಪ॥

ಭಾವ ಬ್ರಹ್ಮವಾದ ಯತಿಗೆ ಇನ್ನಾವಪೇಕ್ಷ। ವೇತಕೊ ದೇಹಲಿಂಗ ವಾದಬಳಿಕಿನ್ನಾವ ಪದಗಳೇತಕೋ ॥೧॥

ಮಲವತೊಳೆಯಲರಿಯದಮಳ ಜಲಧಿ । ತೊಳೆವೆನೆಂಬೆಯು ಒಳಗೆ ಹೊರಗೆ ಲಿಂಗವಿರಲು ತೊಳಲಿ ಬಳಲಲೇತಕೋ ॥೨॥

ಮುತ್ತು ರತ್ನ ಸಿರತ ಘೃತಕೆ ಮತ್ತೆ ಪೂರ್ವ । ಕ್ರೀಗಳುಂಟೆ ನಿತ್ಯ ಮೂರ್ತಿ ಶರಣಗುಂಟೆ ಮತ್ತೆ ಪೂರ್ವ ಚರಿತವು ॥೩॥

ಬ್ರಹ್ಮ ವಿಷ್ಣು ರುದ್ರ ಪದದ ಪೇರ್ಮೆಗಳನುವಾಗಿ। ಎಣಿಸದ ನಿರ್ಮ ಲದ ಲಿಂಗದಲ್ಲಿ ಸಂಬಂಧಿಸದ ಶ್ರೀ ಶರಣನು ॥೪॥

ಅಪ್ರತಿಮನ ಗಮ್ಯದಲ್ಲಿ ನಿಪ್ಪತಿಯನೈದಿದ । ಅಪ್ರಮಾಣ ಶ್ರೀ ಗುಹೇಶ್ವರನೊಳಿಪ್ಪ ಗಮ್ಯ ಶ್ರೀ ಶರಣನು ॥೫॥

ಮತ್ತೇಭಃ---ವಸುಧಾ ಚಕ್ರದೊಳಿಂತ ನಂತವಿಧ ಜಂತು ಸ್ತೋಮ ವಂತಾ ವಗಂ । ರಸನೋಪಸ್ಥ ಪರಂಗಳಾಗಿ ಚರಿಸುತ್ತಿರ್ಕುಂ ಹೃಷಿಕಾ ದಿತ ॥ ದ್ವಿಸರಾಶಕ್ತಿಯದಿಲ್ಲ ದುದ್ಧತನವಂ ತಾನಂತವಂ ನಾಡಿ ಲೆ । ಕ್ಕಿಸ ನಾತಂ ಜಿತಕಾಯ ನಕ್ಷಮಶಿವಂ ಶ್ರೀ ಸಿದ್ಧಲಿಂಗೇಶ್ವರಾ ॥೭೫॥

ಗದ್ಯಃ---ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪ ತ್ತೈದನೆಯದಾದ ನಿರ್ದೇಹಾಗಮಸ್ಥಲದ ವಿಚಾರವು ಅನುವಿನಿಂ ಮುಗಿ ಯಲಾಯಿತು.

---

೭೬. ನಿರ್ಭಾವಾಗಮಸ್ಥಲ.

ಸೂತ್ರಃ---ಇಂತು ನಿರ್ದೇಹ ಚರಿತಾತ್ಮಕವಾದ ಲಿಂಗವು ಪ್ರಾಣ ಲಿಂಗಿಯಲ್ಲಿ ನಿರ್ಭಾವವಾದ ಚರಿತ್ರ ವೆಂತಿರ್ದುದೆಂದಡೆ ಮುಂದೆ ನಿರ್ಭಾ ವಸ್ಥಲವಾದುದು.

ವಚನಃ---ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇತಕ್ಕೆ? ಸತ್ಯ ವುಳ್ಳಾತಂಗೆ ತತ್ವವಿಚಾರದ ಹಂಗೇತಕ್ಕೆ? ಮನಶುದ್ಧವುಳ್ಳಾತಂಗೆ ಮಂತ್ರ ದಹಂಗೇತಕ್ಕೆ? ಅರಿವುಳ್ಳಾತಂಗೆ ಅಗ್ಗಣಿಯ ಹಂಗೇತಕ್ಕೆ? ಕೂಡಲ ಚನ್ನಸಂಗಯ್ಯಾ ನಿಮ್ಮನರಿದಾತಂಗೆ ನಿಮ್ಮಹಂಗೇತಕ್ಕೆ ॥೫॥

ಪದ---ರಾಗ---ನಾಟ

ಹುಸ್ವಿಲ್ಲಕಂಪು ಹೊನ್ನಿಲ್ಲದಬಣ್ಣ ಕಳೆಯಿಲ್ಲದಚಂದ್ರನ । ಪರಿ ಯಂತೆ ಪರಶಿವಯೋಗಾ ॥ಪ॥

ಕಾಲಿಲ್ಲದ ನಡೆ ಕಣ್ಣಿಲ್ಲದ ನೋಟ ಹಾಲಿಲ್ಲದ ತುಪ್ಪದ ಪರಿಯ ನೋಡಾ। ನಾಲಗೆಇಲ್ಲದ ರುಚಿ ಕಿವಿಯಲಿ ಕೇಳದ ಹೇಳುವ ಪರಶಿವ ಯೋಗ ॥೧॥

ಆರಳಿಲ್ಲದಗೆಜ್ಜೆ ಹುರುಳಿಲ್ಲದ ಹಯನು ಕಬ್ಬುನವುಂಡ ನೀರಿನ ಪರಿಯಂನೋಡಾ। ಹುರಿದಿಟ್ಟ ಬಿತ್ತನು ಮರಳಿ ನಾಟದ ಪರಿಯಂತೆ ಪರಶಿವಯೋಗಾ ॥೨॥

ತನುಗುಣಗಳ ನರಿಯದ ಸಮಾಧಿಯ ಮನವೊಲಿದು ನೆರೆವಸುಖ ನಿಮ್ಮ ನೆಲೆಯ। ಅರಿದು ನಿಜಗುಣಯೋಗ ಅನುಪಮ ಸುಖಿ ಶ್ರೀ ಸಿದ್ಧರಾಮೇಶತಂದೆ ॥೪॥

ಶಾರ್ದೂಲಃ—ತಾನೇ ಸಂದುವುದಿಂಧನ ಪ್ರಕರದಿಂದಂ ಶೂನ್ಯಮಾದಗ್ನಿ ಮು। ತ್ತೇನಾರೀತಿಯೊಳಾಂ ತರಸ್ಥಿತಮೆನಿಪ್ಪಾ ವೃತ್ತಿಯೊಳಾಪದಿಂ॥ ನಾನಾಮಾರ್ಗವನುಳ್ಳ ಭಾವವದು ನೋಡಲ್ಬ್ರಹ್ಮದೊಳ್ತಗ್ಗಿತಾನೇನುಂ ಕಾಣಿಸದಿರ್ಪುದಾ ಶರಣರೊಳ್ ಶ್ರೀ ಸಿದ್ಧಲಿಂಗೇಶ್ವರಾ ॥೭೬॥

ಗದ್ಯಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತಾರನೆಯದಾದ ನಿರ್ಭಾವಾಗಮಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೬೧. ನಷ್ಟಾಗಮಸ್ಥಲ.

ಸೂತ್ರಃ—ಇಂತು ನಿರ್ಭಾವ ಚರಿತ್ರಾ ಚರಿತ್ರಾತ್ಮಕಮಾದ ಲಿಂಗವು ಪ್ರಾಣಲಿಂಗಿಯಲ್ಲಿ ಆವ ಚರಿತ್ರವು ನಷ್ಟವಾಗಿ ಆಗಮ ವಿರಹಿತವಾದ ಭೇದವೆಂತಿರ್ದುದೆಂದಡೆ ಮುಂದೆ ನಷ್ಟಾಗಮಸ್ಥಲವಾದುದು.

ವಚನಃ—ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾಯಿತ್ತಯ್ಯಾ! ಬಯಲು ಜೀವವೇ ಬಯಲು ಭಾವನೆ ಬಯಲು ಬಯಲಾಗಿ ಬಯಲಾಯಿತ್ತಯ್ಯಾ! ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ಪೂಜಿಸಿ ಬಯಲಾದೆನು ಗುಹೇಶ್ವರಾ ॥೬॥

ಪದ—ರಾಗ—ಭೂಪಾಳಿ

ಕೃತವ ಸಂಪಾದಿತ ಶರಣನು ಕೊಟ್ಟುಕೊಂಡಾಡುವ ದಂದುಗ ಮನವಿಡಿಯ ವೊಂದೆರಡ ರಾಶಿಯಿಲ್ಲದ ಶರಣನು ॥ಪ॥

ಅಚೇತನವ ಚೇತರಿಸಿ ಪೂರ್ವ ಬೀಜವ ಹಿಡಿದು ಆಚರಣೆಯ ನಾಚರಿಸೆ ಶರಣನು । ಆಯಿತಾಗದೆಂಬ ಶಂಕೆವಿಡಹಿತನು ಆಗಮುವನಾಗಮನೆ ಶರಣನು ॥೧॥

ಅಮೂರ್ತಿಯ ಮೂರ್ತಿಸನ ವರದೆಶಿ ವಶನಲ್ಲ ಹುಸಿದೆಶಿಯ ಹಿಡಿವನಲ್ಲ ಶರಣನು । ಮುಸಿಹೂಸಿ ಫಲಗಳನು ಹುಸಿದು ಮಾರುವನಲ್ಲ ತರುನಾಮವಿಡಿದಿಹ ಶರಣನು ॥೨॥

ಆದರಿಂದ ಹೊರಗೆ ಬೇರೆ ತೋರುವನಲ್ಲ ಬೆರಸಿ ಬಿಚ್ಚುವನಲ್ಲ ಶರಣನು। ಆರೂಢಿಯದಲ್ಲಿ ಆಶೆ ದೋರುವನಲ್ಲ ಅಲ್ಲಿಂದತ್ತತ್ತ ಶರಣನು ॥೩॥

ಧಿಗಿಲು ಭುಗಿಲನೆ ಎದ್ದು ಹರಿದು ಹತ್ತುವನಲ್ಲ ನಿರವಯಕೆ ಚಾಪವವಿಲ್ಲ ನಾಲ್ಕು । ನೆಂಟಕ್ಕೆ ತಂದು ಎಂಟ ಹದಿನಾರವಮಾಡಿ ಸೃಷ್ಟಿಸಬಾರದ ಘನ ಶರಣಾ ॥೪॥

ತ್ರಿವಿಧದಲ್ಲಿ ನಿವವನೊಳೊಂದುವಕೊಳ್ಳ ಮಗಿಲಿಯ್ಯನಾ ಘನ ಶರಣನು। ಕಂಪಿಸಲೀಯ ತುಳಕಲೀಯ ನವರೊಳೊಂದುವ ಮುಟ್ಟಿ ಕೂಡಲ ಚನ್ನಸಂಗನಲ್ಲಿ ಲಿಂಗೈಕ್ಯ ನೋಡಾ ॥೫॥

ಮತ್ತೇಭಃ— ಮೊಳೆತಾನೆಲ್ಲಿಯ ಬೆಂದ ಬಿತ್ತುಗೆಯದೆಂತಂ ತಾವಿ ಮುಕ್ತಂಗೆ ತಾಂ। ಬಳಿಕಂ ಸಂಜನನಕ್ಕೆ ತಕ್ಕುದೊಳವೇ ಕಾನಾವ ಕೃತ್ಯಂಗಳೋಳ್॥ ಸುಳಿಯಲ್ತಾನವು ಶಂಕರಾರ್ಚನ ಮೆನಿಕ್ಕುಂ ದೃಷ್ಟಿ ದೃಶ್ಯೋಭಯಂ। ತಿಳಿಯಲ್ನಿಷ್ಟವನೆಯ್ದೆ ನಿರ್ಗುಣನವಂ ಶ್ರೀ ಸಿದ್ಧಲಿಂಗೇಶ್ವರಾ ॥೭೮॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತೇಳನೆಯದಾದ ನಷ್ಟಗಮುಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೬೨. ಆದಿಪ್ರಸಾದಸ್ಥಲ.

ಸೂತ್ರ:— ಇಂತು ನಿರ್ದೇಹಾಗಮ ನಿರ್ಭಾವಾಗಮ ನಷ್ಟಾಗಮವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ಪ್ರಾಣಲಿಂಗಿಯಲ್ಲಿ ಸುಖಪ್ರಸಾದ ಸ್ವರೂಪವನ್ನೈದಿದ ಭೇದ ವೆಂತಿರ್ದುದೆಂದಡೆ, ಮುಂದೆ ಆದಿಪ್ರಸಾದ ಸ್ಥಲವಾದುದು.

ವಚನ:— ಮಾರ್ಗಕ್ರಿಯೆ ಸಂಪಾದಿಸನಾಗಿ ದ್ವೈತಿಯಲ್ಲ. ಮೀರಿದ ಕ್ರಿಯೆ ಸಂಪಾದಿಸನಾಗಿ ಅದ್ವೈತಿಯಲ್ಲ. ಮೀರಿ ಜಾರ ಹಡುಳಿಗನಾಗಿ ಸ್ವರ್ಗಿಯಲ್ಲ, ಅಪವರ್ಗಿಯಲ್ಲ, ಶ್ರೀ ಕೂಡಲ ಚನ್ನಸಂಗಯ್ಯನಲ್ಲಿ ಸ್ವಾಯತವಾದ ನಮ್ಮ ಗುರು ಬಸವಣ್ಣನು ॥೭॥

ಪದ—ರಾಗ—ಲಲಿತ

ಮಂಗಳವ ಪಾಡುವೆ ಲಿಂಗಕ್ಕೆ ಲಿಂಗ ಪ್ರಸಾದಿಗೆ। ಮಂಗಳ ಲಿಂಗ ಪ್ರಸಾದಿಗೆ ॥ಪ॥

ಲಿಂಗದ ಸಂಗದ ಕಾಯಸ್ಥಿತಿ ಭೋಗಂ ಬಹು ಸ್ಥಾನ ಗ್ರಹ ಗುಣ ಸಕಳವ ಲಿಂಗದಲೈಕ್ಯವ ಮಾಡುವನು॥ ಅಂಗ ಗ್ರಹ ಗುಣ ಲಿಂಗವ ತಂದು ಸಂಗವಿ ಸಂಪರ್ಕವ ಮಾಡಿ ಲಿಂಗದಲ್ಲಿ ಸಿದ್ಧಿಸಿದ ಪ್ರಸಾದದನುಭವಿಯಯ್ಯಾ ॥೧॥

ಲಿಂಗ ಸ್ಪರ್ಶನ ಮುಟ್ಟಲು ಯೋಗ್ಯವು ಲಿಂಗಕ್ಕೆ ಮುಟ್ಟಲಿತ್ತು ಪ್ರಸಾದ ಸ್ಪರ್ಶನ ಮುಟ್ಟಲು ಯೋಗ್ಯವು ಪ್ರಸಾದಿ ಮುಟ್ಟಿಸನು। ಲಿಂಗ ಮನದಲ್ಲಿ ನೆನೆಯಲು ಯೋಗ್ಯವು ಲಿಂಗಕ್ಕೆ ನೆನೆಯಲಿತ್ತು ಪ್ರಸಾದ ಮನದಲಿ ನೆನೆಯಲು ಯೋಗ್ಯವು ಪ್ರಸಾದಿ ನೆನೆವನು ॥೨॥

ಲಿಂಗ ಶ್ರೋತ್ರದಿ ಕೇಳಲು ಯೋಗ್ಯವು ಲಿಂಕಕ್ಕೆ ಕೇಳಲಿತ್ತು ಪ್ರಸಾದಶ್ರೋತ್ರದಿ ಕೇಳಲು ಯೋಗ್ಯವು ಪ್ರಸಾದಿ ಕೇಳುವನು ॥ ಲಿಂಗನಯನದಿ ನೋಡಲು ಯೋಗ್ಯವು ಲಿಂಗಕ್ಕೆ ನೋಡಲಿತ್ತು ಪ್ರಸಾದ ನಯನದಿ ನೋಡಲು ಯೋಗ್ಯವು ಪ್ರಸಾದಿ ನೋಡವನು ॥೩॥

ಲಿಂಗ ಘ್ರಾಣದಿ ವಾಸಿಸಲು ಯೋಗ್ಯವು ಲಿಂಗಕ್ಕೆ ವಾಸಿಸಲಿತ್ತು ಪ್ರಸಾದ ಘ್ರಾಣದಿ ವಾಸಿಸಲು ಯೋಗ್ಯವು ಪ್ರಸಾದಿ ವಾಸಿಸುವನು।

ಲಿಂಗಜಿವ್ಹೆಯೊಳು ರುಚಿಸಲು ಯೋಗ್ಯವು ಲಿಂಗಕ್ಕೆ ರುಚಿಸಲಿತ್ತು ಪ್ರಸಾದ ಜಿವ್ಹೆಯೊಳು ರುಚಿಸಲು ಯೋಗ್ಯವು ಪ್ರಸಾದಿರುಚಿಸುವನು ॥೪॥

ಲಿಂಗ ಸಂಸಾರದ ಜ್ಞಾತೃ ಜ್ಞಾನ ಜ್ಞೇಯವೆಂಬ ಸಕಲ ಪೂರ್ವಾಶ್ರಯವ ನತಿಗಳೆದು ಪ್ರಸಾದ ಸಂಸಾರದ ಸಾರವೆ ತಾನಾಗಿಪ್ಪನು ॥ ಕೂಡಲಸಂಗ ನಿಮ್ಮ ಜಂಗಮು ಲಿಂಗದಲ್ಲಿಯೆ ಕಂಡು ಭಕ್ತಿಸಂಗ ವಿಶೇಷದ ಲಿಂಗವೆಂದರಿದೆನು ದೇವಾ ॥೫॥

ವುತ್ತೇಭಃ—ಪ್ರಿಯವಸ್ತು ಪ್ರಕರಂಗಳೋಳ್ಮನವದುಂ ತಾನೆಯ್ದದರ್ಥಂಗಳಾ। ಶ್ರಯವಂ ದಿಂದ್ರಿಯವೋಳ ಸತ್ವದ ಮಹಾಸಾಮರ್ಥ್ಯದಿಂ ಲಿಂಗದೋಳ್ ॥ ನಿಯತಂ ತತ್ಪರ ಮಾದೊಡಾತನೆ ತದಾನಂದತ್ವದಿಂ ದೀಶನೇ। ಸ್ವಯಂವಂತಾತನೆ ಸುಪ್ರಸಾದಿಯೆನಿಪಂ ಶ್ರೀ ಸಿದ್ಧಲಿಂಗೇಶ್ವರಾ ॥೭೮॥

ಗದ್ಯಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಪ್ಪತ್ತೆಂಟನೆಯದಾದ ಆದಿ ಪ್ರಸಾದಿ ಸ್ಥಲದ ವಿಚಾರವು ಅನುಪಿನಿಂ ಮುಗಿಯಲಾಯಿತು.

---

೭೯. ಅಂತ್ಯಪ್ರಸಾದಿಸ್ಥಲ.

ಸೂತ್ರಃ—ಇಂತು ಶುದ್ಧಮುಖದಿಂದ ಆದಿಪ್ರಸಾದವ ನೈದಿದ ಲಿಂಗವು ಪ್ರಾಣಲಿಂಗಿಯಲ್ಲಿ ಸಿದ್ಧಮುಖದಿಂದ ಅಂತ್ಯಪ್ರಸಾದವ ನೈದಿದ ಭೇದ ವೆಂತಿರ್ದುದೆಂದಡೆ ಮುಂದೆ ಅಂತ್ಯಪ್ರಸಾದಿ ಸ್ಥಲವಾದುದು.

ವಚನಃ—ಆತ್ಮ ಲಿಂಗ, ಪರಮಾತ್ಮ ಜಂಗಮು, ತನುಮಧ್ಯಪ್ರಸಾದ ವಾಯಿತ್ತು. ನಿಶ್ಚಿಂತನಿವಾಸವಾಯಿತ್ತು. ಕೂಡಲ ಚನ್ನಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು ॥೧॥

ಪದ—ರಾಗ—ವರಾಳಿ

ಶರಣನು ಸನ್ನಿಹಿತನು ಅಲ್ಲಲ್ಲಿಗೆ ನಡುಕಡೆಯಿಲ್ಲವಯ್ಯ ಅಚ್ಚ ಶರಣನು ॥ಪ॥

ಉಪಮೆವಿಡಿದು ಉಪಾಧಿಕನಲ್ಲ ಉಪಾಯಕನಲ್ಲ ಶರಣನು ಬೆರಸಿ ತೋರಿಸಿ। ಮನ ಹರುಷದಿಂ ಪರುಷವೆ ದೊರಕೊಂಡಂತಾಯಿತ್ತಾಗಿ ॥೧॥

ರಚನೆ ವಿಡಿದು ರಂಜಕನಲ್ಲ. ಬೋಧವಿಡಿದು ಬೋಧಕನಲ್ಲ. ಆದಿ ವಿಡಿದು। ಆಗಮಿಕನಲ್ಲ..ಆಗಮ ವಿರಹಿತ ಪ್ರಸಾದಿಯಯ್ಯಾ ॥೨॥

ಒಡಲು ವಿಡಿದು ನಡೆವವನಲ್ಲ ನುಡಿ ಎರಡರ ಹಂಗಿಗ ನಲ್ಲವಯ್ಯಾ ಹುರುಡು। ವಿಡಿದು ಬರಡಹನಲ್ಲ. ಎರಡಾಗಿನಲಾದ ಪ್ರಸಾದಿಯಯ್ಯಾ॥೩॥

ಭ್ರಾಂತೆಂಬುದ ಸೀ ಕರಿಸಿ ಸ್ವೀಕರಿಸನು ಅನ್ಯವಿಷಯಂಗಳೊಳಗೆ ಅಹಂಕರಿಸನು। ಬೇರೆ ಮದವೆಂಬುದಿಲ್ಲವಾಗಿ ನಿಸ್ಸಾರವಾದ ಶರಣನು॥೪॥

ನಡೆಯು ಪ್ರಸಾದ ನುಡಿಯು ಪ್ರಸಾದ ನೋಟ ಪ್ರಸಾದ ಕೂಟ ಪ್ರಸಾದ। ಪ್ರಸಾದಿಯು ಪ್ರಸಾದದಿಂದ ಕೂಡಲ ಚನ್ನ ಸಂಗ ನಿಮ್ಮ ಲಿಂಗೈಕ್ಯನು ॥೫॥

ಶಾರ್ದೂಲಃ— ಧ್ಯಾನಂತಾಂ ಕಡೆಯಾದೊಡನ್ನೆವರ ಮುಕ್ಕಂ ಶೋಭಿಸುತ್ತಲ್ಲಿಯಾ। ಜ್ಞಾನಂ ತಾನದೆ ತೃಪ್ತಿಯಪ್ಪುದು ಬಳಿಕ್ಕಾ ತೃಪ್ತಿಯುಳ್ಳಾತನೇ॥ ಜ್ಞಾನಾರೂಢನನಾದಿ ಯುಕ್ತ ನಮಲ ಪ್ರಾಣ ಪ್ರಸನ್ನಾತ್ಮಕಂ। ನೀನೇನಿಶ್ಚಯವಂತವಂ ಪೆರನೆ ಪೇಳ್ ಶ್ರೀ ಸಿದ್ಧಲಿಂಗೇಶ್ವರಾ ॥೬॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಳದೊಳಗೆ ಎಪ್ಪತ್ತೊಂಭತ್ತನೆಯದಾದ ಅಂತ್ಯ ಪ್ರಸಾದಿಯ ಸ್ಥಲದ ವಿಚಾರವು ಅನುವಿಸಿಂ ಮುಗಿಯಲಾಯಿತು.

---

೮೦ ಸೇವ್ಯ ಪ್ರಸಾದಿಸ್ಥಲ.

ಸೂತ್ರಃ— ಇಂತು ಸಿದ್ಧ ಮುಖದಿಂದ ಅಂತ್ಯ ಪ್ರಸಾದ ಸ್ವರೂಪವ ನೈದಿದ ಲಿಂಗವು ಪ್ರಾಣಲಿಂಗಿಯಲ್ಲಿ ಪ್ರಸಿದ್ಧಮುಖದಿಂದ ತೃಪ್ತಿಯನೈದಿದ ಭೇದ ವೆಂತಿರ್ದುದೆಂದಡೆ ಮುಂದೆ ಸೇವ್ಯ ಪ್ರಸಾದಿ ಸ್ಥಲವಾದುದು.

ವಚನಃ— ನಿರಾಳಲಿಂಗಕ್ಕೆ ಸಿರೋಧ ಬಂದಿತ್ತಲ್ಲ! ನಿರೂಪಿಂಗೆ ಭಂಗ ಬಂದಿತ್ತಲ್ಲ! ದೇಹಾರವ ಮಾಡುವರಳಿದರು. ದೇಹಾರ ದೇಹದೊಳ

ಗಡಗಿದುದೆಂತು? ದೇಹಾರ ಆಹಾರವಾಗಿ ಅರ್ಪಿಸಲಿಲ್ಲ ಪ್ರಸಾದಿ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲದ ಹುಸಿಯೆಲ್ಲ ॥೯॥

ಪದ—ರಾಗ—ಗುಂಡಕ್ರಿ.

ಸಂಗಯೆಂದಂತೆ ಯೆಂದನಾಗಿ ಸಂಗವಾಯಿತ್ತು ಶ್ರೀ ಸಂಗನ ಬಸವಣ್ಣಂಗೆ ॥ಪ॥

ಸಂಗವಾಯಿತ್ತು ನಯನ ಅಂಗದಲ್ಲಿ ಲೀಯ್ಯವಾಗಿಯು। ಸಂಗವಾಯಿತ್ತು ಶ್ರೋತ್ರ ಅನ್ಯವನಾಲಿಸದೆಯು ॥ ಸಂಗವಾಯಿತ್ತು ಘ್ರಾಣಪರಿಮಳವ ತೀವಿತಂದದ್ದು । ಸಂಗವಾಯಿತ್ತು ಮಹದಲರ್ಪಿಸಿ ಮಹಾಪ್ರಸಾದಿಯಾದ ॥೧॥

ಸಂಗವಾಯಿತ್ತು ಜಿಹ್ವೆ ಲಿಂಗದ ರುಚಿಯನೆ ಅರಿದು । ಸಂಗವಾಯಿತ್ತು ಹಿಂಗದಲ್ಲಿಯೆ ತಲ್ಲಿಯ್ಯವಾಗಿ ॥ ಸಂಗವಾಯಿತ್ತು ಬಲ್ಲೆನರಿಯೆನೆಂಬ ಸಂದಳಿದು । ಸಂಗವಾಯಿತ್ತು ಮಹದಲ್ಲರ್ಪಿಸಿ ಮಹಾಪ್ರಸಾದಿಯಾಗಿ ॥೨॥

ಸಂಗವಾಯಿತ್ತು ಲಿಂಗ ಮನ್ಮನ ಮಸ್ತಕದಲಿ। ಸಂಗವಾಯಿತ್ತು ಸಂದಳಿದು ನಿಜರೂಪಾಗಿ ॥ ಸಂಗವಾಯಿತ್ತು ಭೃಂಗ ಸಂಪಗೆಯ ಗ್ರಹಿಸಿದಂತೆ । ಸಂಗವಾಯಿತ್ತು ಮಹದಲ್ಲಿ ಮಹಾ ಪ್ರಸಾದ ಸಂಯುತವಾಗಿ ॥೩॥

ಸಂಗವಾಯಿತ್ತು ಸ್ಪರುಶನ ಕ್ರಮರಿದು ತೋರಿದ । ಸಂಗವಾಯಿತ್ತು ಸ್ಪರ್ಶದ ಪರಮ ಸಖಿಯಾದೆನು ॥ ಸಂಗವಾಯಿತ್ತು ಭಾವಸ್ಪರ್ಶ ಜೀವಸ್ಪರ್ಶನ ಹಿಂಗಿ । ಸಂಗವಾಯಿತ್ತು ಪ್ರಾಣಸ್ಪರ್ಶನದಿಂ ಪ್ರಸಾದಿಯಾದ ॥೪॥

ಸಂಗವಾಯಿತ್ತು ಜ್ಞಾತೃ ಜ್ಞಾನ ಜ್ಞೇಯುವ ನತಿಗಳಿದು ಸಂಗವಾಯಿತ್ತು ನಿಷ್ಪತಿಪದವೆ ತಾನಾಗಿ ॥ ಸಂಗವಾಯಿತ್ತು ಚಿಧ್ಘನ ಬೆಳಗನೊಳಗೆ । ಸಂಗವಾಯಿತ್ತು ಕೂಡಲ ಚನ್ನ ಸಂಗನಲ್ಲಿ ಬಸವಣ್ಣಂಗೆ ॥೫॥

ಶಾರ್ದೂಲ:—ಅಂತರ್ದೇಹ ವಿಮುಕ್ತನಲ್ತು ಬಹಿರಂಗಾಚಾರ ಸಂಯುಕ್ತನ । ಲ್ತೆಂತುಂ ತತ್ಪರವಸ್ತುಯೋಗದ ಪರಾನಂದ ಪ್ರಸಾದ ಪ್ರಕಾಶ। ಶಂತಾನೇ ಶರಣಂ ಬಳಿಕ್ಕದೆ ಮಹಾ ಕೈವಲ್ಯ ರೂಪಂ ಸದಾ । ದ್ಯಂತಂ ತೋರದ ನಿಸ್ತೃತತ್ಪರ ಶಿವಂ ಶ್ರೀ ಸಿದ್ಧ ಲಿಂಗೇಶ್ವರಾ ॥೮॥

ಗದ್ಯಃ--- ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಬತ್ತನೆಯದಾದ ಸೇವ್ಯ ಪ್ರಸಾದಿ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಶ್ರೀ ಮದೇಕೋತ್ತರ ಶತಸ್ಥಲಂಗಳಲ್ಲಿ ದೀಕ್ಷಾಗುರು ಸ್ಥಲಾದಿಯಾಗಿ ಪರಜಂಗಮ ಸ್ಥಲಾಂತ್ಯವಾದೊಂಬತ್ತು ಸ್ಥಲಂಗಳು ಒಂದನೆಯದಾದ ಶ್ರೀ ಮದಾಚಾರ ಲಿಂಗಸ್ಥಲಕ್ಕೆ ಕ್ರಿಯಾಗಮ ಸ್ಥಲಾದಿಯಾಗಿ ಜ್ಞಾನಾಚಾರ ಸ್ಥಲಾಂತ್ಯವಾದೊಂಭತ್ತು ಸ್ಥಲಂಗಳು ಎರಡನೆಯದಾದ ಶ್ರೀಮದ್ಗುರು ಲಿಂಗಸ್ಥಳಕ್ಕೆ ಕಾಯಾನುಗ್ರಹ ಸ್ಥಲಾದಿಯಾಗಿ ಸೇವ್ಯ ಸ್ಥಲಾಂತ್ಯವಾದೊಂಭತ್ತು ಸ್ಥಲಂಗಳು ಮೂರನೆಯದಾದ ಘನ ಲಿಂಗಸ್ಥಲಕ್ಕೆ ಜೀವಾತ್ಮ'ಸ್ಥಲಾದಿಯಾಗಿ ಸೇವ್ಯ ಪ್ರಸಾದಿ ಸ್ಥಲಾಂತ್ಯವಾದೊಂಭತ್ತು ಸ್ಥಲಂಗಳು ನಾಲ್ಕನೆಯದಾದ ಜಂಗಮಲಿಂಗ ಸ್ಥಲಕ್ಕೆ ಸಂದು ಅಂತು ಸ್ಥಲಂಗಳು ನಾಲ್ಕು ಮುಗಿದವು.

---

೬೫ ದೀಕ್ಷಾಪಾದೋದಕಸ್ಥಲ

ಸೂತ್ರಃ--- ಇಂತು ನವಸ್ಥಲಂಗಳೇ ತ್ರಿವಿಧ ತ್ರಿವಿಧಂಗಳಾಗೇಕವಾದ ಜಂಗಮಃ ಲಿಂಗವು ಪ್ರಾಣಲಿಂಗಿಯಮಲತ್ರಯಃ ನಿರ್ಹರಣಕಾರಣಾರ್ಥವಾಗಿ ಮಹಾ ಶರಣನ ಮಹಾ ಪ್ರಸಾದ ಲಿಂಗವ ಸಂಬಂಧಿಸುವಲ್ಲಿ ಗುರು ಪಾದೋದಕದಿಂದ ಪರವು ಬೇರಿಲ್ಲದ ಭೇದವೆಂತಿರ್ದುದೆಂದಡೆ ಮುಂದೆ ದೀಕ್ಷಾ ಪಾದೋದಕ ಸ್ಥಲವಾದುದು.

ವಚನಃ— ಪಾದೋದಕ ವಿಡಿದು ಪಾದೋದಕವ ಧರಿಸುವ ಕ್ರಮವೆಂತಯ್ಯಾ, ಲಿಂಗೋದಕ ವಿಡಿದು ಲಿಂಗೋದಕವ ಧರಿಸುವ ಕ್ರಮವೆಂತಯ್ಯಾ, ಪ್ರಸಾದೋದಕ ವಿಡಿದು ಪ್ರಸಾದೋದಕವ ಧರಿಸುವ ಕ್ರಮವೆಂತಯ್ಯಾ, ಈ ತ್ರಿವಿಧೋದಕ ಭೇದವ ಭೇಧಿಸಿ ಗ್ರಹಿಸಬಲ್ಲ ಕೂಡಲ ಚನ್ನ ಸಂಗಾ ನಿಮ್ಮ ಶರಣನು ॥೧॥

ಪದ—ರಾಗ---ಮಧುಮಾಧವಿ

ಶ್ರೀಗುರು ಪಾದೋದಕದಿಂದ ಪರವು ಬೇರಿಲ್ಲ ಕಾಣಿರೇ ॥ಪ॥

ಆಣವಮಲ ಮಾಯಾಮಲವಲ್ಲಿ ಕಾರ್ಮಿಕಪ್ರಾಣ ಮಲಕುಲವನು ತೊಳೆದು । ಪ್ರಾಣವ ನಿರ್ಮಲ ಮಾಡಿದುದೆನ್ನಯ ಪ್ರಾಣನಾಥ ಗುರು ಪಾದೋದಕಾ ॥೧॥

ಗುರುಪಾದಾಂಗುಷ್ಠದಲ್ಲಿ ಅಷ್ಟಾಷಷ್ಟಿ ತೀರ್ಥಂಗಳಡಗಿರು ತಿರ್ಪವು। ಅರಿದು ಗುರುವಿನಡಿಯಲಿ ಪಾದೋದಕ ಪರಮ ರಸವ ಧರಿಸಲು ಮುಕ್ತಿ ॥೨॥

ಪಾದವೆ ಗುರುವಿಂ ಘನಗುರುವಿನೊಳು ಪ್ರಮೋದದೊಳಂದಡವಾಗಿರೆ ಕೂಡಿ। ಭೇದವಿಲ್ಲದೆ ಶಿಷ್ಯನುದಯಿಸಿದನು ಪಾದೋದಕ ರೂಪತಾನಾಗಿ ॥೩॥

ಗುರುಶಿಷ್ಯನು ಸಮರಸವಾಗಿ ತಮ್ಮೊಳು ಬೆರಸಿ ಪರಸ್ಪರ ಮರಿಯದೆ । ಗುರು ಕರುಣಾಮೃತ ಪಾದೋದಕದಲ್ಲಿ ಪರವಶವಾದುದ ನೇನೆಂಬೆ ॥೪॥

ನೀರುನೀರಾಗಿ ಬೆರಸಿ ಪಾದೋದಕದ ಧಾರೆಯು ಕಡಲೋಕುಳಿಯಲ್ಲಿ। ಪೂರಾಯ ಸನ್ಮತವಾಗಿ ಮುಳುಗಿ ಕೂಡಲ ಸಂಗನ ಕೃಪೆಯಿಂದುಳಿದೆ॥೫॥

ಮತ್ತೇಭಃ—ನಿರುತಂ ಬ್ರಹ್ಮವ ನಿಂಬುಗೊಂಡಗುರು ತಾನೇ ಪೂರ್ವರೂಪೆಂತದು । ತ್ತರರೂಪಂ ವರ ಶಿಷ್ಯನಿಂತುಭಯಯೋಗಂತಚ್ಛಿವಜ್ಞಾನವಾ ॥ ಗುರುವಾಕ್ಯಂ ನಿಲಲೀಪ್ರಕಾರದ ಲಸೇತಾ ಪಾದೋದಕಂ ನಾಡೆಸಂ। ಶರಣೋತ್ತರಣ ವಚ್ಛ ಸೌಖ್ಯ ಕರಣಂ ಶ್ರೀ ಸಿದ್ಧಲಿಂಗೇಶ್ವರಾ॥೪೧॥

ಗದ್ಯಃ—ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಬತ್ತೊಂದನೆಯದಾದ ದೀಕ್ಷಾ ಪಾದೋದಕ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೭೬. ಶಿಕ್ಷಾಪಾದೋದಕ ಸ್ಥಲ

ಸೂತ್ರಃ— ಇಂತು ದೀಕ್ಷಾಗುರು ತತ್ವದಲ್ಲಿ ಇಷ್ಟಪಾದೋದಕ ಸ್ವರೂಪವನ್ನೈದಿದ ಲಿಂಗವು ಶರಣನಂಗದಲ್ಲಿ ಶಿಕ್ಷಾಗುರು ಮುಖದಿಂದ ದೃಷ್ಟಪಾದೋದಕ ಸ್ವರೂಪವನ್ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಶಿಕ್ಷಾಪಾದೋದಕ ಸ್ಥಲವಾದುದು.

ವಚನಃ— ಕರುಣಜಲ ವಿನಯಜಲ ಸಮತೆಜಲ ಈ ತ್ರಿವಿಧ ಜಲಂಗಳಲ್ಲಿ ಕರುಣಜಲವೇ ಗುರು ಪಾದೋದಕವೆನಿಸಿತ್ತು ನೋಡಾ. ವಿನಯಜಲವೇ ಲಿಂಗಪಾದೋದಕವೆನಿಸಿತ್ತು ನೋಡಾ. ಸಮತೆಜಲವೇ ಚರಪಾದೋದಕವೆನಿಸಿತ್ತು ನೋಡಾ. ಈ ತ್ರಿವಿಧೋದಕದಿಂದ ಸಂಚಿತ ಕರ್ಮನಾಸ್ತಿಯಾದುದು ಗುರು ಪಾದೋದಕದಿಂದ. ಪ್ರಾರಬ್ಧಕರ್ಮನಾಸ್ತಿಯಾದುದು ಲಿಂಗ ಪಾದೋದಕದಿಂದ. ಆಗಾಮಿಕರ್ಮನಾಸ್ತಿಯಾದುದು ಚರಪಾದೋದಕದಿಂದ. ಈ ತ್ರಿವಿಧೋದಕದಿಂದಲ್ಲಿ ಆ ತ್ರಿವಿಧಕರ್ಮನಾಸ್ತಿಯಾದುದು. ಇದು ಕಾರಣ ಈ ತ್ರಿವಿಧೋದಕವನು ಕೂಡಲಚನ್ನಸಂಗ ನಿಮ್ಮ ಶರಣನೇ ಬಲ್ಲನು ॥೨॥

ಪದ—ರಾಗ—ನಾಟಿ.

ಲಿಂಗೋದಕ ಪಾದೋದಕಮಲ್ಲದೆ ಅಂಗವಿಸಲು ಅನ್ಯೋದಕ ಪಾತಕ ॥ಪ॥

ಶರಣುವೊಕ್ಕು ಗುರು ಲಿಂಗ ಜಂಗಮದ ಚರಣವ ತೊಳೆದು ಪಾದೋದಕವಾ। ಧರಿಸಿದಡದು ಪರಮಾಮೃತವಲ್ಲದೆ ಸ್ವೀಕರಿಸಲು ಪ್ರಳಯ ಜಲನೋಡಾ ॥೧॥

ಮನಕರಗಿ ತನುಃಕೊರಗಿ ಪಾದೋದಕವ ಧರಿಸದೆ ಡಂಭಕತನದಿಂದ। ಅನುಕರಿಸಿಕೊಂಡಡೆ ಭವಮಲ ಬದ್ಧಮಲ ನಿರ್ಮಲವೆಂತಪ್ಪದೋ ॥೨॥

ಚಂದ್ರೋದಯವಾಗಲು ಚಂದ್ರಕಾಂತದ ಬಿಂದು ಕರಗಿಹರಿವಂದದಲಿ। ಸಂದಳಿದು ಲಿಂಗದೊಳು ತನುಕರಗಿ ನಿಂದಡಾತನೆ ಪಾದೋದಕ ಸಂಬಂಧೀ ।೩॥

ಆಕಾಶ ಗಂಗೆಯು ನಾಕಾಶದಿಂದ ವಿವೇಕಿಸಿ ಬೇರೆನ್ನಬಪ್ಪುದೆ| ಏಕೀಕರಿಸಿದ ಪಾದೋದಕ ಬೋಧಕರ ರೂಪವಾಗಿಪ್ಪುದು. ||೪||

ಮಾಯಾ ಸಂಗ್ರಹ ಮಲವ ತೊಳೆದು ನಿರ್ಮಾಯ ಸ್ವರೂಪವ ನೈದಿಸಿ ಕಾಯ್ವುದು| ಹುಲಿಗೆರೆಯ ವರದ ಸೋಮೇಶ್ವರನ ಅಕ್ಷಯ ವಾನಂದ ಪಾದೋದಕ ||೫||

ಮತ್ತೇಭಃ— ಕಲುಷಾ ನೀಕವನೈದೆ ಸಂಹರಿಸುಗುಂ ಜನ್ಮಾದಿ ದೋಷಂಗಳಂ| ನೆಲೆಯೊಂದೋಡಿಸುಗುಂ ಬಳಿಕ್ಕುರೆ ಮನೋ ನೈರ್ಮ ಲ್ಯಮಂ ಮಾಡುಗುಂ|| ವಿಲಸದ್ಜ್ಞಾನಮನಿಂತು ತಾಂ ಬೆಳೆಯಿಕುಂ ತಜ್ಜಂಗಮೋತ್ಕೃಷ್ಟ ಪ! ಜ್ಜಲ ವತ್ಯಂತ ಸುಖಾಸ್ಪದಂ ನಿಜವಲಾ ಶ್ರೀ ಸಿದ್ಧಲಿಂಗೇಶ್ವರಾ ||೬||

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಭ ತ್ತೆರಡನೆಯದಾದ ಶಿಕ್ಷಾಪಾದೋದಕ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೮೩. ಜ್ಞಾನಪಾದೋದಕಸ್ಥಲ

ಸೂತ್ರಃ— ಇಂತು ಶಿಕ್ಷಾಗುರು ತತ್ವದಲ್ಲಿ ದೃಷ್ಟಪಾದೋದಕ ಸ್ವರೂಪವನೈದಿದ ಲಿಂಗವು ಶರಣನಂಗದಲ್ಲಿ ತ್ರಿಪುಟಿಯು ನಷ್ಟವಾದ ಮಹಾಜ್ಞಾನ ಗುರುಮುಖದಿಂದ ಪರಮಾನಂದೋದಕವನೈದಿದ ಭೇದ ವೆಂತಿರ್ದುದೆಂದಡೆ ಮುಂದೆ ಜ್ಞಾನಪಾದೋದಕ ಸ್ಥಲವಾದುದು.

ವಚನಃ— ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಬಂದ ಬಟ್ಟೆಯ ನಾಲಿಸದೆ ವಾಯು ಬಂಧನವ ಮಾಡಿ ಪಶ್ಚಿಮ ದ್ವಾರದಲ್ಲಿ ನಿವಾಸಿ ಯಾಗಿರ್ದ ಶರಣನು ಅಧೋನಾಳದಲ್ಲಿ ನಿರುತ ಮಧ್ಯನಾಳದಲ್ಲಿ ನಿರಾಳ ಊರ್ಧ್ವನಾಳದಲ್ಲಿ ಸುರಾಳ ವ್ಯೋಮ ಕುಸುಮ ಕೊನೆಯ ಶಶಿಕಲಾ ಮೃತವ ಧರಿಸಿದ ಘಟಕ್ಕೆ ಕೇಡಿಲ್ಲಾಗಿ ಲಿಂಗಕ್ಕೆ ಪ್ರಾಣಕ್ಕೆ ಒಂದೆಂಬ ಕಾರಣ ಅಚಳವೆನಿಸಿತ್ತು. ಇದು ಕಾರಣ ಕೂಡಲಚನ್ನಸಂಗಯ್ಯ ಎನ್ನ ಪ್ರಾಣಕ್ಕೆ ಭವವಿಲ್ಲ ಬಂಧನವಿಲ್ಲ ||೧||

ಪದ—ರಾಗ—ಶ್ರೀರಾಗ

ಜ್ಞಾನಗುರುವಿನೊಳೈಕ್ಯವಾಗಿ ಸುಜ್ಞಾನಾಮೃತವ ಸೇವಿಸಿದಾತನೇ ಪರಮಸುಖಿ ॥ಪ॥

ಅಮೃತ ಅಮೃತ ಒಂದಾದಂತೆ ಕೇವಲ ಸಮರಸ ರೂಪಾಗಿ ಸಮ ಹಿತ ಜ್ಞಾನಾನಂದ ಜಲದೊಳಗೆ ವಿಮಲನಾದ ನಿರುಪಮ ಶರಣ ॥೧॥

ಕರಗಿ ತಿಳಿದು ತನ್ನೊಳು ತಾನೆ ಘೃತನೆರೆಗಟ್ಟಿಗೊಂಡು ರೂಪಾದಂತೆ ಪಾವನ ತರ ಸುಜ್ಞಾನ ರಸವೇ ತುಂಬಿ ತುಳುಕುತಿಹ ಪರಮಾನಂದ ಶರಣ ॥೨॥

ಉದಕವನುಂಡ ಕಬ್ಬಿನದಲ್ಲಿ ಮತ್ತುದಕವ ಬೇರೆತೆಗೆಯಲುಂಟೆ ಕೋಮಲ। ಜ್ಞಾನಪಾದೋದಕದಲ್ಲಿ ತೃಪ್ತಿವಡೆದ ಶರಣ ನಿಜ ಭರಿತನು॥೩॥

ತಾನೆ ಗುರು ತಾನೆ ಲಿಂಗ ತಾನೆ ಜಂಗಮ ತಾನೆ ಪ್ರಸಾದ ತಾನೆ ಪಾದೋದಕ। ತಾನೆ ಪರಮಾನಂದ ಶರಣ ಸುಖಿ ತಾನೆ ನಿತ್ಯ ನಿರಂಜನನು ॥೪॥

ನಿರಾಳದ ಪರಮ ಸುಖದ ರಸದೊಳಗೆರಡರಿಯದೆ ಮಲುಗಿಪ್ಪ ಅಜಾತ ಕೂಡಲಚನ್ನಸಂಗಯ್ಯನಲ್ಲಿ ಭಕ್ತಿಯ ತವನಿಧಿ ಶ್ರೀಬಸವಣ್ಣ ॥೫॥

ಶಾರ್ದೂಲ:— ನೀನಾನೆಂಬೆರಡಿಲ್ಲದಿರ್ಪ ಘನವಿಶ್ವಾತೀತ ಸುಜ್ಞಾನಿಗಿಂ। ತೇನುಂ ತೋರದೆ ತನ್ನಿರಾವರಣ ರೂಪಾಗಿರ್ಪ ಸಂವಿದ್ರಸಂ॥ ತಾನಾಕೀರ್ಣಮದಾಗಿ ನಾಡೆ ಸ್ರವಿಸುತ್ತಿರ್ಕುಂ ಬಳಿಕ್ಕಾಸುಖ। ಕ್ಕೇನೊಂದಂ ಸಮಗಾಣೆನಾತನಸಮಂ ಶ್ರೀಶಿದ್ಧಲಿಂಗೇಶ್ವರಾ ।೬॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಬತು ಮೂರನೆಯದಾದ ಜ್ಞಾನಪಾದೋದಕ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೮೪. ಕ್ರಿಯಾನಿಷ್ಪತ್ತಿಸ್ಥಲ

ಸೂತ್ರ:— ಇಂತು ದೀಕ್ಷಾ ಪಾದೋದಕ ಶಿಕ್ಷಾಪಾದೋದಕ ಜ್ಞಾನ ಪಾದೋದಕವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ಶರಣನ

ಸತ್ಕ್ರಿಯೆಯಲ್ಲಿ ನಿಷ್ಪತ್ತಿಯ ಸ್ವರೂಪವನ್ನೈದಿದ ಭೇದವೆಂತಿರ್ದುದೆಂದಡೆ ಮುಂದೆ ಕ್ರಿಯಾನಿಷ್ಪತ್ತಿಸ್ಥಲವಾದುದು.

ವಚನ:— ಲಿಂಗವಿಡಿದು ಲಿಂಗಮಹೇಶ್ವರನೆನಿಸಿಕೊಂಬೆ. ಲಿಂಗ ವಿಡಿದು ಲಿಂಗ ಪ್ರಾಣಿ ಎನಿಸಿಕೊಂಬೆ. ಲಿಂಗವಿಡಿದು ಲಿಂಗವೆನಿಸಿಕೊಂಬೆ ಅರಿವರತು ಕ್ರಿಯಾನುಭಾವ ವಿಡಿದು ಮೀರಿ ಕೂಡಲ ಚನ್ನ ಸಂಗ ತಾನಾದ ॥೪॥

ಪದ—ರಾಗ—ವರಾಳಿ

ಬಸವನೇ ಶರಣೆನಗೆ ತನು ಮನ ಧನದಲ್ಲಿ ವಂಚನೆ ಇಲ್ಲದ ಬಸ ವನೇ ಶರಣೆನಗೆ ॥ಪ॥

ಗುಣರಹಿತನಾಗಿರ್ದ ಮಹಂತನು ಲಿಂಗ ಜಂಗಮ ಪ್ರಸಾದ ಸನ್ನಿ ಹಿತನು। ಹಿಂಗದ ತ್ರಿವಿಧ ಸ್ಥಲ ಸಂಪನ್ನಮಯನಾಗಿ ತೋರಿದ ಬಸ ವನೇ ಶರಣೆನಗೆ ॥೧॥

ಪಂಚಭೌತಿಕದ ಸಂಚುವನಳಿದನು ಪಂಚೇಂದ್ರಿಯ ಲಿಂಗ ಸನ್ಮತ ಕ್ರಿಯಳಿದು। ನಿಷ್ಕ್ರಿಯದಲ್ಲಿ ನಿಂದನು ನಿಷ್ಕ್ರಿಯ್ಯ ಮೀರಿ ನಿಷ್ಪತ್ತಿ ಯಾದ ಬಸವನೇ ಶರಣೆನಗೆ ॥೨॥

ಘನಮನವೇಧಿಸಿ ಅನುಪಮ ತಾನಾಗಿ ಘನಲಿಂಗದಲ್ಲಿ ಮನತಲ್ಲೀ ಯ್ಯವಾದನು। ಅಂಗಹಿಂಗಿ ಲಿಂಗಾಂಗವಾಗಿ ಸರ್ವಾಂಗ ಲಿಂಗಮಯ ನಾಗಿ ತೋರಿದ ಬಸವನೇ ಶರಣೆನಗೆ ॥೩॥

ಗುರು ಲಿಂಗ ಜಂಗಮ ಪ್ರಸಾದದ ಇರವನೊಳಕೊಂಡು ನಿಶ್ಚಿಂತ ನಾದನು। ಪರಕೆ ಪರಾನಂದವಾದ ನಿರುಪಮಘನ ಗುರುವಾದ ಬಸವನೇ ಶರಣೆನಗೆ ॥೪॥

ಪ್ರಾಣವೇ ಲಿಂಗವೆಂಬ ಸಂದಳಿದು ಲಿಂಗವೇ ಪ್ರಾಣವೆಂದೆನಿಸಿ ಕೊಂಬ ಕೂಡಲಚನ್ನಸಂಗನೆಂಬ ಶಬ್ದವಡಗಿ ನಿಶ್ಶಬ್ದಾತೀತ ಮಹಂತ ನಾದ ಬಸವನೇ ಶರಣೆನಗೆ ॥೫॥

ಮತ್ತೇಭ:— ಫಲದುತ್ಪತ್ತಿಗೆ ಕಾರಣಂ ಕುಸುಮವಂತಾಪುಷ್ಪವಂ ನೆಟ್ಟನ। ಫಲವೇ ನಾಶವ ನೈದಿಕುಂ ನಿಜವದೆಂತು ತಾ ಮಹಾಜ್ಞಾನದು

ಜ್ವಲನಂ ಕರ್ಮದಿನಾದಿ ಕಾರಣವೆನಿಪ್ಪ ಕರ್ಮವೇ ನಾಶಮಂ। ಸಲೆ ತಾಜ್ಞಾನವಿನೈದಿಗುಂ ಶಿವಶಿವಾ ಶ್ರೀಸಿದ್ಧಲಿಂಗೇಶ್ವರಾ ।೮೪॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಬತ್ತು ನಾಲ್ಕನೆಯದಾದ ಕ್ರಿಯಾನಿಷ್ಪತ್ತಿಯಾದ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೬೯. ಭಾವನಿಷ್ಪತ್ತಿಸ್ಥಲ

ಸೂತ್ರ:— ಇಂತು ಕ್ರಿಯಾನಿಷ್ಪತ್ತಿಯಾದ ಲಿಂಗವು ಶರಣನ ಅಂಗದಲ್ಲರತು ಪ್ರಾಣನ ಕೊನೆಯ ಮೊನೆಯ ಮೇಲೆ ತೋರುವ ಭಾವ ದೊಳಗೆ ಭಾವವಾಗಿ ತೋರಿ ಆ ಭಾವನಿಷ್ಪತ್ತಿ ಸ್ವರೂಪವನೈದಿದ ಭೇದ ವೆಂತಿರ್ದುದೆಂದಡೆ ಮುಂದೆ ಭಾವನಿಷ್ಪತ್ತಿಸ್ಥಲವಾದುದು.

ವಚನ:— ಸುಳಿದು ಸುತ್ತುವ ಮನದ ವ್ಯವಹಾರವುಳ್ಳನ್ನಕ್ಕ ಶಿವ ಪಥವ ನಾನರಿಯೆ, ಅರಿಯೆನು! ಅರಿಯೆನು!! ಅರಿಯೆನು!!! ಗುಹೇಶ್ವ ರನ ನಿಜವನರಿದ ಬಳಿಕ ಲೋಕದ ಗತಿಯನು ನಾನರಿಯೆ, ಅರಿಯೆನು! ಅರಿಯೆನು!! ಅರಿಯೆನು!!! ॥೫॥

ಪದ—ರಾಗ—ರಾಮಕ್ರಿ

ಭಾವಭಾವಿಸುತ ನಿರ್ಭಾವವಾದುದೇ ಲಿಂಗೈಕ್ಯವು. ॥ಪ॥

ಗುರುಕಾರುಣ್ಯವ ಪಡೆದು ಲಿಂಗದಲನು ಗ್ರಾಹಕನಾಗಿ ಅಂಗ ಲಿಂಗವೇಧಿಸಿ ಕೊಳಲದು ಮಾರಗ ಕ್ರೀಯೆಂದೆನಿಸಿತ್ತು ॥೧॥

ಮಾರಗ ಕ್ರಿಯ ಸಂಪಾದಿಸಿ ಲಿಂಗಾಯತ ಸ್ವಾಯತವಾಗಿ ಒಳ ಹೊರಗೆನ್ನದೆ ವೇಧಿಸಿ ಅದು ಮೀರಿಕ್ರೀಯೆಂದೆನಿಸಿತ್ತು. ॥೨॥

ಮೀರಿದ ಕ್ರಿಯ ಸಂಪಾದಿಸಿ ತನು ಮನ ಲಿಂಗವೇಧಿಸಿ ಮನವು ಲಿಂಗವಾಗಿ ನಿರ್ಭಾವಿಸುವಲ್ಲಿ ಪ್ರಾಣಲಿಂಗವೆಂದೆನಿಸಿತ್ತು ॥೩॥

ಪ್ರಾಣಲಿಂಗವನು ಸಂಪಾದಿಸಿ ಲಿಂಗಪ್ರಾಣವನು ವೇಧಿಸಿ ಪ್ರಾಣ ಲಿಂಗವಾಗಿ ಲಿಂಗಪ್ರಾಣವಾಗಿ ಪ್ರಪಂಚುಗೆಟ್ಟುದು ತೆರಹಿಲ್ಲದೆ ॥೪॥

ಅವಿರಳ ಲಿಂಗ ಜಂಗಮ ಯಥಾಲಿಂಗ ತಥಾಶರಣ ಕೂಡಲ ಚನ್ನಸಂಗನಲ್ಲಿ ಭೇದವಿಲ್ಲದುದಚ್ಚ ಲಿಂಗೈಕ್ಯವು ॥೫॥

ಶಾರ್ದೂಲಃ— ವೃತ್ತಿಕ್ಷೀಣವನೈದೆ ಯಂತದರಿ ನಾ ಚಿತ್ತಂ ಕ್ಷಯಂ ಮತ್ತಮಾ। ಚಿತ್ತಂ ಸಂಕ್ಷಯವಾದ ನಿರ್ಮಲ ಮಹಾ ಸುಜ್ಞಾನಿಯಾ ತಚ್ಛಿವ॥ ಮತ್ತಂ ಭಾವಮವೇ ವಿಶಿಷ್ಟ ತರದಿಂದಂ ಶೋಭಿಸುತ್ತಿರ್ಪುದಿಂ। ತೆತ್ತಂ ಚಿತ್ತಿನ ರೂಪದಿಂ ಪಾಕಿಸಲ್ ಶ್ರೀಶಿದ್ಧಲಿಂಗೇಶ್ವರಾ ॥೮೫॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಭತ್ತೈದನೆಯದಾದ ಭಾವನಿಷ್ಪತ್ತಿ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೭೦. ಜ್ಞಾನನಿಷ್ಪತ್ತಿಸ್ಥಲ

ಸೂತ್ರಃ— ಇಂತು ಭಾವದಲ್ಲಿ ನಿಷ್ಪತ್ತಿಯಾದ ಲಿಂಗವು ಶರಣನ ತ್ರಿಪುಟನಷ್ಟವಾಗಿ ಅರಿವಿನೊಳಗೆ ತಾನೇಯಾಗಿ ನಿಂದು ಆ ಅರಿವು ನಿಷ್ಪತ್ತಿಯಾದ ಭೇದವೆಂತಿರ್ಪುದೆಂದಡೆ ಮುಂದೆ ಜ್ಞಾನನಿಷ್ಪತ್ತಿ ಸ್ಥಲವಾದುದು.

ವಚನಃ— ಹಿಡಿದ ಕೈಯ್ಯ ಮೇಲೆ ಕತ್ತಲೆಯಯ್ಯಾ! ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ! ನೆನೆವ ಮನೋಭಾವದ ಮೇಲೆ ಕತ್ತಲೆಯಯ್ಯಾ! ಕತ್ತಲೆ ಎಂಬುದು ಇತ್ತಲೆಯಯ್ಯಾ ಗುಹೇಶ್ವರನೆಂಬುದು ಅತ್ತಲೆಯಯ್ಯಾ ॥೬॥

ಪದ—ರಾಗ—ಧನ್ಯಾಸಿ

ನಯನಂ ಸನಯನಂ ಪರವಿಲ್ಲೆಂದುದಾಗಿ। ಜ್ಞಾನಂ ನಾನಾ ಭವ ನೋಟಂ ತಾನಲ್ಲ ॥ಪ॥

ಅರುವಿನ ಭಾವ ಪರತಂತ್ರವಿಲ್ಲದ ನಿಷ್ಪತ್ತಿ। ಮರಹಿನ ಭಾವ ಪರತಂತ್ರವಿಲ್ಲದ ನಿಷ್ಪತ್ತಿ ॥೧॥

ಅಕ್ಷಯದಿಂದರಿವು ನೆಲಸಿದ ಸುಚರಿತಂಗೆ। ಸಾಕ್ಷಯದಿಂದುರಿಸದ ನಿರ್ಣಯ ಚರಿತಂಗೆ ॥೨॥

ಅಗ್ನಿ ಸಖನ ಭ್ರಮರ ಬ್ರಹ್ಮರಂಧ್ರನಿಹಾರ ಪ್ರಾಣ। ಶ್ರೀ ಗುಹೇಶ್ವರ ಲಿಂಗಾ ಎನಲೆನ್ನ ಮನ ನಾಚಿತ್ತು ॥೩॥

ಮತ್ತೇಭ:— ಮಮತಾ ಲಕ್ಷಣ ವಾದಿಯಾದ ಗುಣವೆಲ್ಲಂ ಶೂನ್ಯವಾಗಿರ್ಪ ಸ। ದ್ವಿಮಳಜ್ಞಾನದ ಸಿದ್ಧ ತಾನದು ವಲಂ ಬೇರೊಂದರಿಂದಕ್ಕುಮೇ॥ ಕ್ರಮದಿಂದಂ ಪರಮಾತ್ಮ ಲಿಂಗದ ಮಹಾ ಸಂಸ್ಪರ್ಶನಜ್ಞಾನದಿಂ। ದಮುಗ್ರ್ರಂ ನಿರ್ಗುಣವಾದ ಯೋಗಿಗೆ ಮಹೋ ಶ್ರೀ ಸಿದ್ಧಲಿಂಗೇಶ್ವರಾ ॥೮೬॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಭತ್ತಾರನೆಯದಾದ ಜ್ಞಾನನಿಷ್ಪತ್ತಿಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೮೧. ಪಿಂಡಾಕಾಶಸ್ಥಲ

ಸೂತ್ರ:— ಇಂತು ಕ್ರಿಯಾನಿಷ್ಪತ್ತಿ ಭಾವನಿಷ್ಪತ್ತಿ ಜ್ಞಾನನಿಷ್ಪತ್ತಿ ಎಂಬ ತ್ರಿವಿಧ ಸ್ಥಲಂಗಳೇಕ ಲಿಂಗವು ಶರಣನ ಚಿತ್ಪಿಂಡದೊಳಗೆ ಮಹಪ್ಪಿಂಡ ಸ್ವರೂಪವನೈದಿ ಆ ಪಿಂಡ ನಿರವಯವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಪಿಂಡಾಕಾಶಸ್ಥಲವಾದುದು.

ವಚನ:— ಮರದೊಳಗಿನ ಮಂದಾಗ್ನಿಯ ಉರಿಯದಂತಿರಿಸಿದೆ. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನ ನಾರು ಕಾಣದಂತಿರಿಸಿದೆ. ನೀ ಬೆರಸುವ ಭೇದಕ್ಕೆ ನಾ ಬೆರಗಾದೆನಯ್ಯಾ ರಾಮನಾಥಾ ॥೭॥

ಪದ—ರಾಗ—ವರಾಳಿ

ಪಿಂಡದೊಳಗೆ ಪರಿಪೂರ್ಣ ಪಿಂಡ ಸ್ವರೂಪವನೈದಿದ ॥ಪ॥

ಘಟದೊಳಗೆ ಘಟವಾಗಿ ಘಟ ತದ್ರೂಪನೆ ತಾಳಿ ದಿಟವಾಗಿ ನಡೆ ನುಡಿಯುಳ್ಳ ಅಘಟಿತ ನಿರ್ಣಯಲ ನಾನೇನೆಂಬೆನು ॥೧॥

ಶಿಲೆಯೊಳಗಣ ಮಂದಾಗ್ನಿ ಆ ಶಿಲೆಯ ಹೊದ್ದಿಯು ಹೊದ್ದ ದಂತೆ ಎನ್ನ ನಿಲವಿನೊಳಡಗಿದ ಬಯಲ ಹೊಲಬ ನಾನೇನೆಂದು ಹೇಳು ವೆನು ॥೨॥

ನುಡಿಯೊಳಗೆ ನುಡಿಯಾಗಿ ಎನ್ನ ನಡೆಯೊಳಗೆ ನಡೆಯಾಗಿ ಅಡ ಗಿದ ಸಾಕಾರದ ಬಯಲ ಅನುನುಡಿದು ತೋರಲಿಕೆ ತೆರಹಿಲ್ಲ ॥೩॥

ಸ್ಫಟಿಕದ ಬಿಂದುವಿನೊಳಗೆ ಪ್ರತಿಘಟದೊಳಹೊರಗೆ ಪ್ರತಿದೋರ ದಂತೆ ದಿಟಪುಟ ಸಂಶಯರಹಿತ ಸಂಘಟಿತ ಘನವ ನಾನೇನೆಂಬೆನು ॥೪॥

ಮಧ್ಯಜಡವ ಪರಿಹರಿಸಿ ತಥ್ಯವಾದ ಪಿಂಡದೊಳಗೆ ನಿತ್ಯನಿರ ವಯ ನಿಜರೂಪವನು ಸತ್ಯವಾಗಿ ನಿಮ್ಮ ಕಂಡೆನು ಕೂಡಲಸಂಗಯ್ಯ ॥೫॥

ಮತ್ತೇಭಃ— ತರದಿಂದುತ್ತರವಾಗಿ ತತ್ಪ್ರಕೃತಿಯಿಂದಂತೋರ್ಪ ಖಂಡಾತ್ಮತ। ತ್ಪರ ಮಾಕಾಶವೆನಿಸಿಪ್ಪ ಶಂಕರನನಂತಾ ದೇಹದೊಳ್ಭಾ ವಿಪಂ॥ ಶರಣಂ ತನ್ಮಯ ಭಾವಮಂ ನಿರುತದಿಂದಂ ಸಂತತಂ ನಾಡೆ ತಾಂ। ಪರಿಶುದ್ಧತ್ವವ ನೈದಿಸಲ್ ಪೃಥತೆಯಿಂ ಶ್ರೀಸಿದ್ಧಲಿಂಗೇಶ್ವರಾ ॥೯೭॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಭ ತ್ತೇಳನೆಯದಾದ ಪಿಂಡಾಕಾಶಸ್ಥಲದ ವಿಚಾರವು ಅನುವಿನಿಂ ಮುಗಿಯ ಲಾಯಿತು.

---

೭೨. ಬಿಂದ್ವಾಕಾಶಸ್ಥಲ

ಸೂತ್ರ:— ಇಂತು ಪಿಂಡದಲ್ಲಿ ನಿರ್ವಯಲಾದ ಲಿಂಗವು ಶರಣನು ಪಿಂಡ ಮಧ್ಯಸ್ತವಾದ ಚಿತ್ತಿನಲ್ಲಿ ಬಿಂದ್ವಾಕಾಶ ಸ್ವರೂಪವನ್ನೈದಿ ಬಿಂದ ನಾಮನಷ್ಟವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಬಿಂದ್ವಾಕಾಶ ಸ್ಥಲವಾದುದು.

ವಚನ:— ಅಡಬಾರದ ಬಯಲು ಸೂಡಬಾರದ ಬಯಲು ಕಡಿ ಯಬಾರದ ಬಯಲು ಹಿಡಿಯ ಬಾರದ ಬಯಲು ಒಡಲಿಲ್ಲದ ಬಯ ಲೊಳಗಡಗಿಪ್ಪ ಭೇದವನು ಲೋಕದ ಜಡರೆತ್ತ ಬಲ್ಲರಯ್ಯ ರಾಮ ನಾಥಾ ॥೮॥

ಪದ— ರಾಗ— ಆರಭ್ಬಿ

ಆದಿ ಬಿಂದುವಿನೊಳಗಭೇದ್ಯವಾದ ನಿರ್ವಯಲ ನಿರಂಜನನೆ ಶ್ರೀಗುರು ಬಸವ ॥ಪ॥

ಚಿತ್ತದೊಳಗೆ ಧಾತು ರೂಪ ನಿಷ್ಪತ್ತಿಮಾಡಿ ನಿಜದೆಚ್ಚರಲ್ಲಿ ಪ್ರತ್ಯಕ್ಷವಾದ ನಿಜರೂಪ ನಿರ್ವಯಲ ಮೂರುತಿ ಬಸವ ತಂದೆ ॥೧॥

ಮನದ ನೆನಹಿನಲ್ಲಿ ಮನರೂಪಾಗಿ ಚಿನುಮಯ ಚಿದ್ರೂಪವನೈದಿ ಮಹಾಘನರೂಪವ ನಡಗಿಸಿದ ನಿಷ್ಕಲ ನಿರವಯ ಬಸವ ತಂದೆ ॥೨॥

ಷಡುಶಕ್ತಿಗಳನು ಶಕ್ತಿ ತ್ರಯ ಮಾಡಿ ಪಿಡಿದಾ ಶಕ್ತಿತ್ರಯ ವನೇಕ ಮಾಡಿ ದಿಟ ಪರಶಕ್ತಿಯ ಬಿಂದುವಿನಲ್ಲಿ ತೇಜಾಕೃತಿ ನಿರ್ವಯಲ ಬಸವ ತಂದೆ ॥೩॥

ನಾದಬಿಂದು ಸ್ವರೂಪ ನಿರೂಪ ಆದಿ ಬಿಂದುವೆ ನಾದ ನಾದ ಬಿಂದು ಕಳಾತೀತ ನಿರ್ವಯಲ ನಿಜವಾದ ನಿರಂಜನ ನನಾದಿ ಬಸವ ತಂದೆ ॥೪॥

ಸಕಳ ನಿಷ್ಕಳ ತತ್ವದ ಸಂಜೀವದ ಮುಕುತಿಯ ಮೂಲಪ್ರಭಾವದ ಸಕುತಿಯವೊಳಗೆ ನಿರ್ವಯಲಾದ ಕೇವಲ ಕೂಡಲಚೆನ್ನಸಂಗನಲ್ಲಿ ಬಸವ ತಂದೆ ॥೫॥

ಮತ್ತೇಭಃ— ಹೃದಯಾವಸ್ಥಿತ ಬಿಂದು ಮಧ್ಯದೊಳೆ ಸೂಕ್ಷ್ಮ ಜ್ಯೋತಿ ರೂಪಾಗಿ ತೋ। ರ್ಪುದ ನಿರ್ವಾಣ ಪದಪ್ರದೀಪಕಮೆನಲ್ ತದ್ಬ್ರಹ್ಮನಾಳಂಬಳಿ॥ ಕ್ಕದರೋಳ್ವ್ಯಾಪಕಮಾದ ತಚ್ಛಿವ ನನುದ್ಯತ್ರೀಮದಿಂ ಕಂಡು ಸಂ। ಮುದವೆತ್ತೊಪ್ಪುವನಾ ಶಿವಾತ್ಮಕನವಂ ಶ್ರೀಸಿದ್ಧಲಿಂಗೇಶ್ವರಾ ॥೫೮॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಬತ್ತೆಂಟನೆಯದಾದ ಬಿಂದ್ವಾಕಾಶಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೭೩ ಮಹದಾಕಾಶಸ್ಥಲ

ಸೂತ್ರ:— ಇಂತು ಬಿಂದು ನಾಮ ನಷ್ಟವಾದ ನಿರ್ವಯಲ ಲಿಂಗವು ಶರಣನ ಅರುಹಿನ ಕುರುಹಿಂದೆ ಆಶ್ರಯವಾಗಿರ್ದ ಮಹಾ ಘನ ಚೈತನ್ಯದಲಿ ಅರುಹಿನ ಕುರುಹಳಿದು ನಿರವಯವಾಗಿರ್ದ ಭೇದ ವೆಂತಿರ್ದುದೆಂದಡೆ ಮುಂದೆ ಮಹದಾಕಾಶಸ್ಥಲವಾದುದು.

ವಚನ:— ಕಾಮರಾಶಿಗೆ ಮಾಯದ ಕೊಳಗ ಅಳುವುದು ನೆಳಲು ಹೋವುದು ಬಯಲು ತುಂಬೆನೆಂದಡೆ ತುಂಬಲು ಬಾರದು ತುಂಬಿದ ರಾಶಿಯ ಕಾಣಲು ಬಾರದು ಅಳತೆಗೆ ಬಾರದು ಹೊಲೆಗೊಳಗಾಗದು ನೋಡಾ ಶ್ರೀಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಮಿಗೆ ಬಯಲು ॥೯॥

ಪದ—ರಾಗ—ಘೂರ್ಜರಿ

ಆಕಾಶವೆಂಬ ಅನಾಮಿಕನು ಶಂಕೆಯಿಲ್ಲದೆ ಜಗವ ನುಂಗಿ ನುಂಗಿದ ನಿನ್ನುಗುಳ ಮತ್ತೆ ಮರಳುವ ಗಂಡರ ಕಾಣೆ ॥ಪ॥

ಸಾಕಾರದಾದಿ ವಿಡಿದು ಬಂದು ಬಂದುಲೋಕವೆಂಬದೆಶೆಯ ನರಿಯದೆ ನಂಬಿ ನಂಬಿ। ಏಕೈಕವೆಂಬ ತತ್ವವ ನೆರೆಯರಿದಾತಂಗೆ। ಬೇಕು ಬೇಡೆನ್ನದ ಬಯಲೆಲ್ಲನುಬಲಾ ॥೧॥

ಇಲ್ಲದಲ್ಲಿಯೊದಗಿತ್ತಾಗಿ ಅಲ್ಲಿಗಲ್ಲಿಗೆ ಹರಿಯಲೆ ಸಲ್ಲದು ನಿನ್ನ ಮಾಟಕೂಟ। ಫಲವನಳಿವುದು ಅಲ್ಲ ಅಹುದೆಂಬೆರಡರಹೊಲ್ಲಹದಸಟೆ ದಿಟವನಳಿಯ ಯಲ್ಲದಂತಾಯಿತ್ತ ಖಂಡಿತ ಬಯಲು ॥೨॥

ಅರಿದಡೇನು ಮರೆದಡೇನು ಅರಿಯದೆಸುಮ್ಮನಿರ್ದಡೇನು ತೊರೆದ ಡೇನು ತೊರೆಯದೆಸಂಸಾರಿಯಾದಡೇನು ಕರೆಮರೆಯ ಕುರುಹು ವಿಡಿದು ಬರಿದೆ ಬರಿದೆ ಬಂದು ಕುರುಹಿನ ಮೂರ್ತಿಗೆ ತಾವಿವೆಲ್ಲ ಅಸಾಧ್ಯ ॥೩॥

ವಾದ ವಶ್ಯ ಮಂತ್ರ ತಂತ್ರ ಯಂತ್ರಕರಣವೆಂಬವು ಭೇದ ಸಮ ಯದರುಶನ ಬಹು ಕುಹಕ ಕಪಟ ಇವನೋದಿಯೋದಿ ತಾವೆ ಘನ ವೆಂದು ಕೆಲಲಕೆರಿದ ಮಾಡಿ ಹೋದರವರು ಹೊಲಬುಗೆಟ್ಟು ಮರಣ ದಾರಿಯೆನಿಪ ಬಟ್ಟೆಗೆ ॥೪॥

ಅಜ ಹರಿ ರುದ್ರರೆಲ್ಲರು ಭಜಿಸಿ ಭಜಿಸಿ ರೀತಿಗೆಟ್ಟರು ತ್ರಿಜಗವ ನುಂಗಿದ ಹಮ್ಮು| ಮತ್ತಿನ್ನಾರ ಬಗೆವುದು ಮಜಡ ಮಣಕವನೋದಿ ಯೋದಿ ಸುಜನರೆಲ್ಲರು ರೀತಿಗೆಟ್ಟರು ಗಜಬಜೆಯಲ್ಲಿ ಸಿಲುಕದೆನಿಂದ ನಿಜಗುಣಯೋಗಿ

ಮತ್ತೇಭ:— ಅರಿವಿಂಗಾಶ್ರಯವಾಗಿ ತೋರ್ಪ ನಿಜದೋಳ್ ಜ್ಞಾನಂಲಸದೆಜ್ಞಯುಮಂ| ನೆರೆತಗ್ಗಲ್ಕದಿದೆಂಬುದೇ ನೊಳವೆ ಸರ್ವಪೂರ್ಣ ರೂಪಾಗಿ ತಾಂ|| ತರಿಸಂದೊಪ್ಪುವ ಸತ್ಸ್ವರೂಪ ಪರಿಪೂರ್ಣಾಕಾಶ ವಂತೆಯ್ದೆ ತಾಂ| ಮೆರೆಗುಂ ಭಾಸ್ವತವಾಗಿಯುದ್ಧತಿಕೆಯಿಂ ಶ್ರೀಸಿದ್ಧ ಲಿಂಗೇಶ್ವರಾ ||೮೯||

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ಎಂಭತ್ತರೊಂಬತ್ತನೆಯದಾದ ಮಹದಾಕಾಶ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

ಇಂತೆಂಬಲ್ಲಿಗೆ ಏಕೋತ್ತರ ಶತಸ್ಥಲಂಗಳಲ್ಲಿ ದೀಕ್ಷಾಗುರು ಸ್ಥಲಾದಿಯಾಗಿ ಪರಜಂಗಮ ಸ್ಥಲಾಂತ್ಯಮಾದೊಂಭತ್ತು ಸ್ಥಲಂಗಳು ಒಂದನೆಯದಾದಆಚಾರ ಲಿಂಗಸ್ಥಲಕ್ಕೆ ಕ್ರಿಯಾಗಮ ಸ್ಥಲವಾದಿಯಾಗಿ ಜ್ಞಾನಾಚಾರ ಸ್ಥಲಾಂತ್ಯಮಾದೊಂಭತ್ತು ಸ್ಥಲಂಗಳು ಎರಡನೆಯದಾದ ಗುರು ಲಿಂಗಸ್ಥಲಕ್ಕೆ ಕ್ರಿಯಾನುಗ್ರಹ ಸ್ಥಲವಾದಿಯಾಗಿ ಸೇವ್ಯಸ್ಥಲಾಂತ್ಯಮಾದೊಂಭತ್ತು ಸ್ಥಲಂಗಳು ಶಿವಲಿಂಗ ಸ್ಥಲವು ಮೂರನೆಯದಾಯ್ತು. ಜೀವಾತ್ಮ ಸ್ಥಲವಾದಿಯಾಗಿ ಸೇವ್ಯಪ್ರಸಾದಿ ಸ್ಥಲಾಂತ್ಯಮಾದೊಂಭತ್ತು ಸ್ಥಲಂಗಳು ಜಂಗಮ ಲಿಂಗಸ್ಥಲವು ನಾಲ್ಕನೆಯದಾಯಿತ್ತು. ಪ್ರಸಾದ ಲಿಂಗಸ್ಥಲಕ್ಕೆ ಸೇರಿದೊಂಭತ್ತು ಸ್ಥಲಂಗಳು ದೀಕ್ಷಾಪಾದೋದಕ ಸ್ಥಲವಾದಿಯಾಗಿ ಮಹದಾಕಾಶ ಸ್ಥಲಾಂತ್ಯಮಾದೈದನೆಯ ಸ್ಥಲವು ಮುಗಿದುದು.

೭೪ ಕ್ರಿಯಾಪ್ರಕಾಶಸ್ಥಲಾತ್ಮನೇ.

ಸೂತ್ರಃ— ಇಂತು ನವಸ್ಥಲಂಗಳೇ ತ್ರಿವಿಧ ಕ್ರಿವಿಧಂಗಳಾಗೇಕಮಾದ ಪ್ರಸಾದಲಿಂಗವು ಮಹಾಕಳೆಯನ್ನು ಹೊಂದಿ ಐಕ್ಯಕ್ರಿಯದಲ್ಲಿ ತಾನೇ ಆಚಾರವಾಂತನಾಮವನುಳ್ಳ ದ್ವಾದಶ ಸ್ಥಲಂಗಳಿಂದೊಪ್ಪಿ ಮಹಾಮಹದೈಕ್ಯನಲ್ಲಿ ಶ್ರೀ ಮಹಾಲಿಂಗವಾಗಿ ಸಂಬಂಧಿಸುವಲ್ಲಿ ಮನೋಹರವಾದ ಪ್ರಕಾಶವು ಥಳಥಳನೆ ಹೊಳೆವುತ್ತಿರಲು ಮೊದಲಲ್ಲಿ ಕ್ರಿಯಾರೂಪದಿಂ ತೋರುತ್ತಿರ್ದ ಭೇದವೆಂತಿರ್ದುದೆಂದಡೆ ಮುಂದೆ ಕ್ರಿಯಾಪ್ರಕಾಶಸ್ಥಲವಾದುದು.

ವಚನಃ— ಕಾಲ ಸಡಗರ ಕೈಯ್ಯಲ್ಲಿ ಆದೆ. ಕೈಯ್ಯ ಸಡಗರ ಕಂಗಳಲ್ಲಿ ಆದೆ. ಆದೇಕೆಂಬಡೆ ಕಂಗಳೇ ಕಾರಣವಾಗಿ. ಒಂದು ಮಾತಿನೊಳಗೆ ವಿಚಾರವು ಆದೆ. ದರ್ಪಣದೊಳಗೆ ಕಾರ್ಯವು ಆದೆ. ಇದು ಏನು ಕಾರಣ ತಿಳಿಯುವಲ್ಲದು ಗುಹೇಶ್ವರಾ ॥ ೧॥

ಪದ—ರಾಗ—ಧನ್ಯಾಸಿ

ಆಚಾರ ದುಂದುಭಿಯು ನಾನೇನೆಂದುಪಮಿಸುವೆ। ಬೇಗಿನೊಳಗೆ ತೊಳ ತೊಳಗುತಲಿರ್ದುದು ಆಚಾರ ॥ ಪ॥

ಅರಿವನಾಚರಣೆಯ ತೆರನಹೇಳುತಿರ್ದುದು ಭೇದದ ಭೇದದ ಮಹಾಘನದಾಚಾರ ॥ ೧॥

ಸ್ಫಟಿಕದ ಗಿರಿಯುತಟದೊಳು ನಿಂದಿರ್ದಡೆ ಘಟ ಹೊಳೆದುದು ಒಳಹೊರಗೆನ್ನದಾಚಾರ ॥ ೨॥

ಪರುಷದ ಗಿರಿಯು ಕಡೆಯುಲೆಂದು ಹೋದರೆ ಹಿಡಿದುಳಿಕೂಡಲಿ ಪರುಷವಾದ ಬಳಿಕ ಮತ್ತಾಚಾರ ॥ ೩॥

ಮಾಣಿಕ ಹಿಡಿದವನ ಕೈಸಿಕೆ ಹತ್ತದೆ ಲಿಂಗ ಜಂಗಮ ಪ್ರಸಾದವೆಂದರಿದ ಆಂಗದಾಚಾರ ॥ ೪॥

ಸಂಪಗೆಯ ಪುಷ್ಪದಲ್ಲಿ ಕಂಪುಂಡ ಭ್ರಮರನಂತೆ ಕೂಡಲಚನ್ನಸಂಗನಲ್ಲಿ ಸಂಗನಬಸವಣ್ಣಂಗಾಚಾರ ॥ ೫॥

ಮತ್ತೇಭಃ— ಮಿಗೆಯುತ್ಯುತ್ತಮ ಲಕ್ಷಣಾನ್ವಿತದ ಚಿತ್ತಪ್ರಾಪ್ತಿತಾನಾಗನೆ। ಟ್ಟಗೆ ಶಾಸ್ತ್ರ ಪ್ರಚಯಂಗಳೊಳ್ಪಿದಿತವಾದುದ್ಯತ್ಕ್ರಿಯಾವರ್ತನಂ॥

ಬಗೆಯಲ್ ಜ್ಞಾನದ ರೂಪದಿಂ ಬೆಳಗುಗುಂ ತದ್ಯೋಗಿಗಂತೆಲ್ಲರೋಳ್ ॥
ನೆಗಳ್ದಿರ್ದ ಶಿವಭಾವ ಸಂಘನದಿಂ ಶ್ರೀ ಸಿದ್ಧಲಿಂಗೇಶ್ವರ ॥೯೦॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಬತ್ತನೆಯದಾದ ಕ್ರಿಯಾಪ್ರಕಾಶಸ್ಥಲದ ವಿಚಾರವು ಆನುವಿನಿಂ ಮಾಗಿಯಲಾಯಿತು.

---

೭೫ ಭಾವಪ್ರಕಾಶಸ್ಥಲ

ಸೂತ್ರಃ— ಇಂತು ಸತ್ಕ್ರಿಯೆಯಲ್ಲಿ ತಾನೇ ಕ್ರಿಯಾಸ್ವರೂಪವಾಗಿ ಪ್ರಕಾಶಿಸುವ ಲಿಂಗವು ಶ್ರೀ ಮಹದೈಕ್ಯನ ಮಹಾನುಭಾವ ಮಧ್ಯದಲ್ಲಿ ಭಾವಸ್ವರೂಪು ತಾನೆಯಾಗಿ ಪ್ರಕಾಶವಾಗಿರ್ದ ಭೇದವೆಂತಿರ್ದುದೆಂದಡೆ ಮುಂದೆ ಭಾವಪ್ರಕಾಶ ಸ್ಥಲವಾದುದು.

ವಚನಃ— ಲಿಂಗಪ್ರಾಣವೆಂಬೆನೇ ಪ್ರಾಣದ ಹಂಗಿನ ಲಿಂಗ. ಪ್ರಾಣಲಿಂಗವೆಂಬೆನೇ ಲಿಂಗದಹಂಗಿನ ಪ್ರಾಣ. ಲಿಂಗ ಪ್ರಾಣವಲ್ಲ ಪ್ರಾಣಲಿಂಗವಲ್ಲ. ಉಭಯಸಂದಳಿದವರ ತೋರಿ ಬದುಕಿಸಯ್ಯಾ ಕೂಡಲ ಚನ್ನಸಂಗಮದೇವಾ ॥೨॥

ಪದ—ರಾಗ—ಭೂಪಾಳಿ.

ಲಿಂಗಶರಣನು ನಿಜಲಿಂಗಶರಣನು. ಆವ ಗ್ರಾಹಕನಲ್ಲವು ಆಯ್ಯ ಲಿಂಗ ಶರಣನು ನಿಜಲಿಂಗ ಶರಣನು ॥ ಪ॥

ಜ್ಞಾನಭಾಷೆಯ ಸನ್ಮಾತ್ರದ ನೆರವಿಂಗ ನೂನಸೋಹಮೆಂದು ಕೂಗಿದವಯ್ಯ। ತನ್ನ ಭಕ್ತ್ಯಂಗನೆಯ ಬಿಟ್ಟು ಲಜ್ಜೆಗೆಟ್ಟು ತನ್ನಂತೆಂದಡೆಯು ಜನಿಸುವನಲ್ಲವಯ್ಯ ॥೧॥

ಕಾಲಾಳಿಗೆ ಸೆರೆಯ ಸಿಕ್ಕುವನಲ್ಲ ಮೇಲಾಳಿಗೆ ಅಂಗ ವಿಸುವನಲ್ಲ। ತನ್ನ ಸರ್ವೇಂದ್ರಿಯಂಗಳೊಳಕಿನಿತಿಲ್ಲವೆ ಹಿಂದಣ ಹೆಜ್ಜೆಯಿಲ್ಲದೆ ಒಂದೆ ಮುಯ್ಯಲ್ಲಿ ಹೂಣ ಹೊಗುವನಯ್ಯ ॥೨॥

ಶರಣರ ಶರಿರ ಅಪಮಾನದಾದಿಯಿಂದ ದೂರತ್ತವ ಸರಿ ಇಸು ದಯ್ಯ ನೋಡಾ। ತನ್ನಪರಿಗೆ ವೇಷ ಸಾರುಶ್ಯದವೆ ತಾವಾಗಿ ಶರೀರ ಕೋವ ಸಮ್ಯಕ್‌ಸ್ಪೃಹೋನಸ್ಪೃಹಕಾಯವು ಎಂದುದಾಗಿ ॥೩॥

ಬಯಲಿಂಗೆ ಅಬ್ಬರಸಿ ಬಳಲುವನಲ್ಲ ಕುಂಬಳದೊಳಗೆ ಸೂಜಿಯ ವೂಳುವಂತೆ। ಲಿಂಗದೊಳಾಳುವನು ಹವಣನರಿಯನಂತುವ ನರಿಯರೂಹುಗೆಟ್ಟ ಕುರುಗೆಟ್ಟು ತನ್ನ ತಾನು ಹೊರೆಯಾಗಿರುವನಯ್ಯ ॥೪॥

ಒಳಿಕ ಆತ್ಮಾ ಇದಂ ಏಕಏವಗ್ರಾಹಿರಿತ್ಯಾದಿ ಶೃತಿ ನಲಿದಾಡಿವವಯ್ಯಾ। ಲಿಂಗಕೂಡಲ ಚನ್ನಸಂಗನೈಕ್ಯಕ್ಕೆ ಒಂದೊಂದು ತಮ್ಮ ತಮ್ಮ ಪರಿಯಾಯ ದೊಳದರುತಿರ್ಪವಯ್ಯಾ ॥೫॥

ಶಾರ್ದೂಲಃ— ಏನುಂ ತೋರದ ನಾಹತಸ್ಥಲದೊಳೆತ್ತಂನಿಂದ ತಧ್ಯಾನದೋಳ್। ಜ್ಞಾನಾತೀತವೆನಿಪ್ಪ ನಿರ್ಮಲ ಪರಬ್ರಹ್ಮಂ ಮಹಾಕಾಂತಿಯಿಂ॥ ತಾನೇ ಶೋಭಿಸುತಿರ್ಪುದಾವ ಗಮವಿದ್ಯಾಕಾಶದಿಂ ಸರ್ವಮುಂ। ತಾನೇ ತಾನೆನಿಸಿರ್ದ ಯೋಗಿಗೆ ನಿಜಂ ಶ್ರಿಸಿದ್ಧಲಿಂಗೇಶ್ವರಾ ॥೯೧॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಬತ್ತುಒಂದನೆಯದಾದ ಭಾವಪ್ರಕಾಶಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೭೬ ಜ್ಞಾನಪ್ರಕಾಶಸ್ಥಲ.

ಸೂತ್ರಃ— ಇಂತು ಭಾವಪ್ರಕಾಶವನೈದಿದ ಅಂಗವು ಮಹದೈಕ್ಯ ಭಾವ ಭಾವಿಕ ಭಾವಿತೃಗಳೆಂಬ ತ್ರಿವಿಧವು ನಷ್ಟವಾಗಿ ತನ್ನಲ್ಲಿ ತಾನು ಪ್ರಕಾಶವಾದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನಪ್ರಕಾಶಸ್ಥಲವಾದುದು.

ವಚನಃ—ಸುಖವ ಬಲ್ಲಾತ ಸುಖಿಯಲ್ಲ ದುಃಖವ ಬಲ್ಲಾತ ದುಃಖಿಯಲ್ಲ. ಸುಖದುಃಖವೆರಡನು ಬಲ್ಲಾತನು ಜ್ಞಾನಿಯಲ್ಲ. ಹುಟ್ಟಿದಮುನ್ನ ಸತ್ತವರ ಕುರುಹಬಲ್ಲರೆ ಆತನೇ ಬಲ್ಲತನದ ಮಹಾ ಜ್ಞಾನಿಯುಕಂಡಾ ಗುಹೇಶ್ವರಾ ||೩||

ಪದ—ರಾಗ—ಫಲಮಂಜರಿ

ದರ್ಪಣದ ಛಾಯೆಯಂತೆ ಪ್ರಕಾಶವ ಮಂಜೊಳಕೊಂಡಂತೆ ಆ ಲಿಂಗದ ಮಾಯಾ ಸಂಭ್ರಮವು। ಮರೀಚಿಕಾಜಲದಂತೆ ತೋರಿಯಡಗಿದ ಭೇದವು ನೋಡಾ ॥ಪಲ್ಲವ॥

ಜಲದಲ್ಲಿ ಅನಿಲವಿಕಾರದಿಂದ ಉಲಿದೇಳುವ ಫೇನತರಂಗ ಚಲ
ನೆಯಿಂದಲಿ ಕಂಡಿಹೆನೆಂದರೆ ಮಲಿನ ಬಂಧದಲಿ ಬಿದ್ದರು ॥೧॥

ರಜ್ಜುಸರ್ಪ ಸ್ಥಾಣುಚೋರಭ್ರಮೆ ತೇಜಿಸಬಾರದ ವಿವರಣೆ ಭಜ
ನೆಯಿಂದಲಿ ಕಂಡಿಹೆನೆಂದಡೆ ಅಜಹರಿ ರುದ್ರರ ಕಾಡಿತ್ತು ॥೨॥

ಅರಸುವ ಅರಿಕೆಯುಳ್ಳನ್ನಕ್ಕರ ಮಾಯೆ ಅರಿಕೆ ಸತ್ತಡೆ ಮಾಯೆ
ಲೋಪ ಅರಿವಿನ ಸೂತಕ ತಲೆಯನರಿಯಲು ಅಲ್ಲೆ ಮಾಯವಾಯ್ತು ॥೩॥

ಎಲ್ಲವ ನೊಳಕೊಂಡಿತ್ತು ಮಾಯೆ ಬಲ್ಲಿದರೆಂಬವರಾರು ಯಿಲ್ಲ
ಮೆಲ್ಲನೆ ಉಲುಹಡಗಲು ತೀವ್ರದಿಂದಲ್ಲಿಯೆ ಮಾಯೆ ಲೋಪವಾಯ್ತು ॥೪॥

ಆನುಳ್ಳನ್ನಕ್ಕ ನೀನುಂಟೆಲೆ ಮಾಯೆ ಆನಿಲ್ಲದಿರ್ದಡೆ ನೀ ನಿಲ್ಲೆಲಿಗೆ
ಆನುನೀನು ಎಂಬುಭಯವನಳಿಯಲು ಆನಂದ ನಿಜಗುಣಯೋಗ ॥೫॥

ಶಾರ್ದೂಲ:—ದ್ವೈತಭ್ರಾಂತಿಯದಿಲ್ಲ ಭಾವಿಸೆ ಶಿವಾದ್ವೈತತತ್ವಮುಂ
ರಾಗ ವಿ। ಖ್ಯಾತಜ್ಞಾನಿಗೆ ಮಾಯೆ ತಾನಳಿದು ಸರ್ವಂಬ್ರಹ್ಮರೂಪಾಗಿತಾ॥
ನೇತ್ರೋರ್ಕರ್ಮಂ ನಿಬಿಡ ಪ್ರಕಾಶದೆ ಯದಂತಿಂತೆಂದು ಪೇಳಲ್ಕೆವಾ। ಚಾತೀತಂ
ಘನ ಚಿತ್ರಭಾವುಯನವಂ ಶ್ರೀ ಸಿದ್ಧಲಿಂಗೇಶ್ವರಾ ॥೯೨॥

ಗದ್ಯ:—ಇಂತೀ ಪ್ರಕಾರದಿಂ ನೂರೊಂದುಸ್ಥಲದೊಳಗೆ ತೊಂಭ
ತ್ತೆರಡನೆಯದಾದ ಜ್ಞಾನಪ್ರಕಾಶಸ್ಥಲದ ವಿಚಾರವು ಅನುವಿನಿಂ ಮುಗಿ
ಯಲಾಯಿತು.

---

೬೭ ಸ್ವೀಕೃತ ಪ್ರಸಾದಿಸ್ಥಲ.

ಸೂತ್ರ:—ಇಂತು ಕ್ರಿಯಾಪ್ರಕಾಶ ಭಾವಪ್ರಕಾಶ ಜ್ಞಾನಪ್ರಕಾಶ
ವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ಮಹದೈಕ್ಯನಲ್ಲಿ ಪರಿಣಾಮ
ಗ್ರಾಹಕವನೈದಿ ಲಿಂಗದಲ್ಲಿ ಭಿನ್ನಭಾವವಳಿದು ಪರಮಾನಂದದಲ್ಲಿ ಪರಿ
ಣಾಮಿಯಾಗಿರ್ದು ಕೊಂಡುದೇ ಪ್ರಸಾದವಾದುದರ ಭೇದವೆಂತಿರ್ದುದೆಂ
ದಡೆ ಮುಂದೆ ಸ್ವೀಕೃತ ಪ್ರಸಾದಿಸ್ಥಲವಾದುದು.

ವಚನ:—ಇಲ್ಲೆಂಬುದನು ಇಲ್ಲೆನಬಲ್ಲಡೆ ಅರ್ಪಿತ. ಉಂಟೆಂಬುದನು
ಉಂಟೆನಬಲ್ಲಡೆ ಪ್ರಸಾದ. ಆ ಪ್ರಸಾದವ ತಾನಿಲ್ಲದೆ ಕೊಳಬಲ್ಲಡೆ ಪ್ರಸಾ
ದಿಯು. ಆ ಪ್ರಸಾದಿಯ ಪರಮಪರಿಣಾಮವೇ ಮಹಾ ಪ್ರಸಾದವಾ

ಗಿಯು ಆ ಮಹಾ ಪ್ರಸಾದವೇ ತಾನಾಗಿ ಬೆಳಗುತ್ತಿಪ್ಪನಯ್ಯಾ ಕೂಡಲ ಚನ್ನಸಂಗಾ ನಿಮ್ಮ ಶರಣನು ॥೪॥

ಪದ—ರಾಗ—ಆರಬಿ

ಶ್ರೀ ಮಹದೊಳಗೆ ಮಹದ್ರೂಪಾಗಿ ಕೊಂಡುದೆ ಪ್ರಸಾದವಾಯ್ತು ಶ್ರೀ ಗುರುಬಸವರಾಜಂಗೆ ||ಪ||

ಮಹಾ ಘನಲಿಂಗದೊಳಗೆ ಮಹಾ ಘನತದ್ರೂಪಾಗಿ ಸಹಜ ಪರಿಣಾಮ ಪ್ರಸಾದವನಾರೋಗಿಸಿ ನಿರ್ವಯಲಾದ ಗುರುಬಸವ ॥೧॥

ನಿಂದಸುಖವ ನಿಂದೆ ನೆಂದೆಂಬ ಸಂಶಯಭಾವ ಮರೆದು ನಿಂದ ನಿಜ ಪರಿಣಾಮ ಪ್ರಸಾದದೊಳೊಂದಿ ನಿಜಗ್ರಾಹಕನಾದ ಗುರುಬಸವ ॥೨॥

ಅರ್ಪಿತವಿಲ್ಲದ ಮುನ್ನವೆ ಅರ್ಪಿತ ನಿಜ ರೂಪಾಗಿ ಅರ್ಪಿತಗ್ರಾಹಕ ಪರಿಣಾಮ ಪ್ರಸಾದಕ್ಕೆ ತವನಿಧಿಯಾದ ಗುರುಬಸವ ॥೩॥

ಮುಟ್ಟದ ಮುನ್ನವೆ ಪ್ರಸಾದ ಗ್ರಾಹಕನಾಗಿ ಮುಟ್ಟದೆನೆಂಬುದ ನರಿಯದೆ ಬಯಲ ಪರಮಾನಂದ ದೃಷ್ಟಿಮುಟ್ಟದ ಗುರುಬಸವ ||೪||

ನಿರ್ಣಯ ನಿರ್ವಯವಾದ ನಿರಂಜನ ಸನ್ನಿಹಿತ ಕೂಡಲ ಚನ್ನಸಂಗನಲ್ಲಿ ನಿತ್ಯತೃಪ್ತನಾದ ಪರಿಣಾಮಿ ಗುರುಬಸವ ॥೫॥

ಶಾರ್ದೂಲ:— ಸಂದೇಹಂಗಳನ್ನೆಲ್ಲಮಂ ಕಳೆದ ಮುಕ್ತಂ ವಾಂಛೆಯಿಂ ಬೇಕೆನು। ತ್ತೊಂದಂ ಬೇಡುವನಲ್ತು ಬಿಟ್ಟುಕಳೆವಾತಂ ಮುನ್ನವೆಯಾಯ್ತು ತಾಂ॥ ನಿಂದದ್ವೈತಪದ ಸ್ವಬಾವ ದಿನವೆಲ್ಲಂ ಭುಂಜನಂಗೆ ಯ್ದುವಿಂ।ನ್ನೊಂದಂ ಕಾಣೆನವಂಗೆ ಬೇರೆನಿಪುದಂ ಶ್ರೀಸಿದ್ಧಲಿಂಗೇಶ್ವರಾ॥೫॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭತ್ತುಮೂರನೆಯದಾದ ಸ್ವೀಕೃತ ಪ್ರಸಾದಿಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

೭೮ ಶಿಷ್ಯೋದನ ಪ್ರಸಾದಿಸ್ಥಲ.

ಸೂತ್ರ:— ಇಂತು ಪರಮಾನಂದ ಪ್ರಸಾದದ ನಿಜಸುಖವನಾಲಿಂಗಿಸಿ ತೃಪ್ತಿಯಾದ ಲಿಂಗವು ಮಹದೈಕ್ಯನಲ್ಲಿ ತಾನು ತಾನಾಗಿ ನಿಂದುದೇ

ಓಗರಸ್ಥಲವಾಗಿ ನಿಂದ ನಿಲವಿನ ಭೇದವೆಂತಿರ್ದುದೆಂದಡೆ ಮುಂದೆ ಶಿಷ್ಯೋದನ ಪ್ರಸಾದಿ ಸ್ಥಲವಾದುದು.

ವಚನ:—ಸರ್ವಾಂಗವು ಲಿಂಗವಾದ ಆರೋಗಣೆಗೆ ಆಪ್ಯಾಯನವೇ ಕರಸ್ಥಲ. ನಿಂದುದೋಗರ ಬಂದ ಪರಿಣಾಮ ಪ್ರಸಾದ. ಹೇಳಲಿಲ್ಲದ ಕೇಳಲಿಲ್ಲದ ನಿರ್ಣಯ ಕೂಡಲಿಲ್ಲ ಕಳೆಯಲಿಲ್ಲ ನೋಡಾ! ಇದು ಕಾರಣ ಕೂಡಲಚನ್ನ ಸಂಗಮದೇವಾ ಗುರುಬಸವಣ್ಣನನುಗ್ರಹಿಸಿ ಕೊಟ್ಟ ನಿಂದ ನಿಲವಿನ ಸಹಜದಲ್ಲಿ ಉದಯಿಸಿದ ಲಿಂಗನಿರತ ನಿಜ ಪರಿ ಇಂತು ನೋಡಾ ||೫||

ಪದ—ರಾಗ—ಭೌಳಿ

ಸುಖಿಯಾದೆನೆಂಬ ಸುಖದ ಸಕುತಿ ಯಡಗಿ ನಿಂದ ನಿಲವು, ಮುಕುತಿಗತೀತವಾದುದು ||ಪ||

ಗುರು ಪ್ರಸಾದವಕೊಂಡು ಗುರುಶೇಷ ವೆಂದರಿಯದೆ ಉಳಿದ ಶೇಷದ ನಿಲವು, ಪರತತ್ವ ಜಾರಿನಿಂದುದು ॥ ೧ ॥

ಲಿಂಗ ಸುಖದಲ್ಲಿ ಮನವು ಸಂಗವನೈದಿ ನಿಂದುದು ನಿಂದ ನಿಜದ ನಿಲವು ತನ್ನ ಸಂಬಂಧವ ನರಿಯದು ॥೨॥

ಅನುಭಾವದಲ್ಲಿ ಪ್ರಾಣಲೀಯ್ಯವಾಗಿ ಘನಸುಖವ ನಾಲಿಂಗಿಸಿ ನೆನಹಳಿದುಳಿದ ಶೇಷದನುವನುಪಮಿಸಲರಿದು ಕಂಡ್ಯಾ।೩॥

ಅರಿವು ವಿಡಿದಾ ಅರಿವು ಸುಖಸವಿಯೊಳು ಮೈಮರದು ಭವಿಯಾಗಿನಿಂದ ಭವವಿರಹಿತ ನಾನೇನೆಂಬೆನು ॥ ೪ ॥

ಹಳವು ಹೋರದ ತಿಳಿವಿನಲ್ಲಿ ಕಳೆಕಣ್ದೆರೆದು ಉಳಿದ ನಿಜಶೇಷ ಶ್ರೀಗುಹೇಶ್ವರ ನಿಮ್ಮ ಬಸವಣ್ಣ ॥ ೫ ॥

ಶಾರ್ದೂಲ:—ಓರಂತೊಪ್ಪುವ ದೃಶ್ಯಮಾದನಿತು ಮುಲ್ತುಲ್ತಿತ್ತೆನುತ್ತೆಲ್ಲಮುಂ। ಮೂರಂಗೆಯ್ದುಳಿದಿರ್ದ ಖಂಡಿತ ಮಹಾಲಿಂಗ ಸ್ವರೂಪಾದಚಿ ॥ ತ್ಸಾರ ಜ್ಞಾನಿಯನಿಂದುದೊಂದಿರವ ನಾಸತ್ಪ್ರತ್ಯಯಾನಂದವಿ।ಸ್ತಾರೋಪೇತ ವಿಶಿಷ್ಟರಿಂತುಸಿರ್ವರೇ ಶ್ರೀ ಸಿದ್ಧಲಿಂಗೇಶ್ವರಾ ॥೯೪॥

ಗದ್ಯ;—ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭತ್ತುನಾಲ್ಕನೆಯುದಾದ ಶಿಷ್ಟೋದನ ಪ್ರಸಾದಿಸ್ಥಲದ ವಿಚಾರವು ಆನುವಿನಿಂ ಮುಗಿಯಲಾಯಿತು.

೯೫ ಚರಾಚರಲಯಸ್ಥಲ.

ಸೂತ್ರ:—ಇಂತು ನಿಜನಿಲವು ನಿಂದು ನಿಸ್ತರಂಗಾಂಬುಧಿಯಂತಿಪ್ಪುದಾಲಿಂಗವು ಐಕ್ಯನಲ್ಲಿ ಚರಾಚರ ವೆಂಬುಭಯವು ಲಯವಾದ ಭೇದ ವೆಂತಿರ್ದುದೆಂದಡೆ ಚರಾಚರನಾಸ್ತಿ ಸ್ಥಲವಾದುದು.

ವಚನ:—ಆಕಾರ ನಿರಾಕಾರ ವೆಂಬೆರಡು ಸ್ವರೂಪಂಗಳು ಒಂದು ಆಹ್ವಾನ ಒಂದು ವಿಸರ್ಜನ ಒಂದು ಸುರಾಳ ಒಂದು ನಿರಾಳ ಈ ಉಭಯ ಕುಲರಹಿತ ಗುಹೇಶ್ವರಾ ನಿಮ್ಮ ಶರಣ ನಿಶ್ಚಿಂತ ॥೬॥

ಪದ—ರಾಗ--ಮಾಳವಗೌಳ

ನೀನು ನಾನು ಎಂಬ ಸಂದೇಹವುಂಟೆ। ಬಂಧ ಪ್ರತಿಬಂಧವಲ್ಲಿ ಬದ್ಧನಲ್ಲ॥ ಪ ॥

ಮಾಡುವ ನಡಿಸುವ ನುಡಿಸುವ ಹಂಗನು ಕೂಡದೆ ಹಸಿಗೆಯರ ಸಕೂಡದೆ। ಮಾಡುವ ನಡಿಸುವ ನುಡಿಸುವ ಕೇಳುವ ವಾಸನೆಮುಟ್ಟದ ಜಂಣ್ಣದ ನಿರ್ಗಮನಿ ॥೧॥

ಪುರುಷನಲ್ಲ ಸತಿಯಲ್ಲ ನಪುಂಸಕನಲ್ಲ ಹಿರಿದು ಕಿರಿದರಲ್ಲಿ ವರ್ತಕನಲ್ಲ ಚರಾಚರವೆಂಬುದು ನಿಸ್ಸಂಗ ಎರಡಿಲ್ಲದ ಬಗೆಯ ನುಂಗಿದ ನಿಲವು। ೨॥

ಆಗಮದ ಬಗೆಯ ಪುಗನ ಗಣಿತ ಸೂಕ್ಷ್ಮನು ಮಿಗೆನೆಮ್ಮುಗೆಯುನ್ನು ನೆಗಳಲಿಲ್ಲ। ತಗುಳ ನಲುಗತಿಳಿಯಲು ಹೇಳಿಯಲಿ ಬಾರದಾರಿಗಗೋಚರನು ಭಯಭ್ರಷ್ಟ ॥ ೩॥

ಅಂಕೆಗೆ ಝುಂಕೆಗೆ ಶಾಗು ತೆರಹಿಲ್ಲದ ಅಹಂಕಾರ ಮಮಕಾರ ಕೆಡಗುಡದೆ । ಭೋಂಕನೆ ಮನ ಕತನ ವಿರಳವಾದ ನಹಂಕಾರ ಮಮಕಾರ ವಳಿದುಳಿದಾ ॥ ೪ ॥

ಆಗದೆ ಹೋಗದೆ ಮಣಿಯದೆ ತಿಳಿಯದೆ ಜಾಗ್ರತ್ ಸ್ವಪ್ನಸುಷುಪ್ತಿ । ಯಲ್ಲಿ ತೂಗದೆ ತೊನೆಯದೆ ನಿಜಗುಣ ಶಿವತತ್ವಯೋಗಿ ಸ್ತುತಿಸಿದನು ನಿಜ ಪದವಾ ॥ ೫ ॥

ಮತ್ತೇಭ ॥ ಕಡಲೊಳ್ ಬುದ್ಬುದ ವೀಚಿಸಂಚಯ ಮವ್ರಂತೊ ರ್ಪಸ್ಪ್ಟ ವ್ಹ್ತಲ್ಲಿತಾ । ವಡಗುತ್ತಿರ್ಪ ವೊಲಿಂತುತದ್ಘನ ಮಹಾಲಿಂಗೈಕ್ಯ ನೋಳ್ ಸತತಂ ॥ ಒಡನಾ ಸರ್ವ ಚರಾಚರಂಗಳು ಮಯಂ ಪ್ರಖ್ಯಾತ ದಿಂ ನಾಶಮಂ । ಬಿಡದೆಯ್ದಿರ್ಪವು ನಿಶ್ಚಯಂ ಬಳಿಕದೇಂ ಶ್ರೀಸಿದ್ಧಲಿಂ ಗೇಶ್ವರಾ ॥ ೯೫ ॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭ ತ್ತೈದನೆಯದಾದ ಚರಾಚರ ನಾಸ್ತಿ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೯೬ ಭಾಂಡಸ್ಥಲ

ಸೂತ್ರಃ— ಇಂತು ಸ್ವೀಕೃತ ಪ್ರಸಾದಿ ಶಿಷ್ಟೋದನ ಪ್ರಸಾದಿ ಚರಾ ಚರ ಲಯ ವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗವು ಮಹದೈಕ್ಯನ ಸರ್ವಾಂಗವೆಂಬ ಭಾಂಡದಲ್ಲಿ ಅಡಗಿ ಸರ್ವಾಚಾರ ಸಂಪತ್ತೆಂಬ ಸಕಲ ಕರಣ ದ್ರವ್ಯಂಗಳಿಗೆ ಆಶ್ರಯ ಸ್ಥಾನವಾಗಿರ್ದ ಭೇದವೆಂತಿರ್ಪುದೆಂದಡೆ ಮುಂದೆ ಭಾಂಡಸ್ಥಲವಾದುದು:

ವಚನಃ—ಆಯತ ವಿಲ್ಲದ ಮಠದಲ್ಲಿ ಅಗ್ನಿಯಿಲ್ಲದ ಬೋನವಮಾಡೀ ಭಾವವಿಲ್ಲದ ಶಿವಕಾರ್ಯಂಗಳೊಳು ಭೋಜನವಿಲ್ಲದ ಅರಸಿ ಕೊಟ್ಟಡೆ ಅಪ್ಯಾ ಯನ ಆರಿಗೂ ಅಡಸದಿದ್ದುದ ಕಂಡು ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದನು ॥ ೭ ॥

ಪದ—ರಾಗ—ಭೂಪಾಳಿ.

ನಾನಾವಿಧ ಬ್ರಹ್ಮಾಂಡದಾಲಯ ಸ್ಥಾನವೆನಿಸ ನಾತಾಶ್ರಯ ರೂಪ ॥ ಪ ॥

ಇನಮಂಡಲ ಕಿರಣಾವಳಿಯು ತನ್ನೊಳಗೆ ಗರ್ಭೀಕರಿಸಿ ಕೊಂಡಿಪ್ಪಂತೆ । ನೆರೆದ ಜಗಂಗಳ ನೆಲ್ಲವ ನಿಮ್ಮಾಯು ಉದರದೊಳಡಗಿಸಿದಾ ಗುರುವೆ ॥ ೧ ॥

ಅಣುಮಾತ್ರ ಬೀಜದೊಳಗೆ ಘನ ವೃಕ್ಷವಡಗಿಪ್ಪಂತೆ ನಿಜ ತನು। ವಿನೊಳಗೆ ತೋರುವ ತೊರಿಕೆ ನಿಮ್ಮಾನುವಿನಳಡಗಿತ್ತದ ನೇನೆಂಬೆ॥ ೨ ॥

ಭಾಂಡದೊಳಡಗಿದ ದ್ರವ್ಯಂಗಳ ತೆರದಿ ಪಿಂಡದೊಳಗೆ ಶಿವತತ್ವದ ಖಂಡಾ। ಖಂಡಿತನಾಲಿಂಗಿಸಿ ನಿಜಪಸಿಜ ನಿರ್ಲೇಪ ನಿರಂಜನರೂಪನು॥ ೩ ॥

ಸಕಲ ಪ್ರಪಂಚನು ಗರ್ಭೀಕರಿಸಿ ಸಕಲ ಪ್ರಪಂಚೆಂದರಿಯದೆ। ಉಪಮಾತೀತ ಮಹಂತ ನಿಮ್ಮ ನಿಜವನಾರು ಬಲ್ಲರು ಹೇಳಾ ॥ ೪ ॥

ಸರ್ವಾಚಾರ ಸಂಪತ್ತಿನ ಸರ್ವಾನುಭಾವ ಸಕ್ರಿಗಳ ಗರ್ಭೀಕರಿಸಿ ಕೊಂಡಿಪ್ಪ। ಕೂಡಲಸಂಗನಲ್ಲಿ ಅಲ್ಲಮಾ ಪ್ರಭುವೇ।೫॥

ಮತ್ತೇಭಃ—ಜಗನಂತೆನ್ನ ಶರೀರವಾಪುದು ಭವದ್ರೂಪಂಸ್ವದೇಹಂ ಬಳಿ। ಕೈಗಲಲ್ಕೆಲ್ಲಿಯು ವೆಂಬುದಿಲ್ಲನಿತು ನೋಡಲಿತ್ತು ತಾನಾದ ಭಾಂ॥ ಡಗತಂ ಚಾರನನಂ ವಿಶೇಷಮುದನಂ ಕಾಣೇಂ ನಿಜಂ ತತ್ವವಿ। ತ್ತುಗಳೇ ನಿನ್ನಾರವಂ ಸದಾಪೊಗಳ್ವಗೈ ಶ್ರೀ ಸಿದ್ಧಲಿಂಗೇಶ್ವರಾ ।।೯।।

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭತ್ತಾರನೆಯದಾದ ಭಾಂಡಸ್ಥಲದ ವಿಚಾರವು ಅನುವಿನಿಂಮುಗಿಯಲಾಯಿತು

---

೪೧ ಭಾಜನ ಸ್ಥಲ.

ಸೂತ್ರಃ- ಇಂತು ಸಕಲ ಕರಣಂಗಳೆಂಬ ಸರ್ವಾಚಾರ ಸಾಧನಂಗಳನಿಂಬುಗೊಂಡು ಭಾಂಡಸ್ವರೂಪವನ್ನೈದಿದ ಲಿಂಗವು ಮಹದೈಕ್ಯಂಗೆತಾನೇ ಭಾಜನವಾದ ಭೇದವೆಂತಿರ್ದುದೆಂದಡೆ ಮುಂದೆ ಭಾಜನ ಸ್ಥಲವಾದುದು.

ವಚನಃ- ಪರಿಯಾಣ ಭಾಜನವೆಂಬದು ಪರಿಯಾಣ ಭಾಜನವಲ್ಲ ನೋಡಾ ! ಮಹಾಲಿಂಗಕ್ಕೆ ತನ್ನ ಶ್ರೀಮನವೇ ಭಾಜನವು. ಬೀಸರಪೋಗ

ದ ಮೀಸಲವಾಗರ್ಪಿಸ ಬಲ್ಲಡೆ ಕೂಡಿ ಕೊಂಡಿಪ್ಪನು ಕೂಡಲ ಸಂಗಮ ದೇವನು ॥ ೮ ॥

ಪದ-ರಾಗ-ಶೋಕಮಾಳಿ.

ಲಿಂಗ ನಿಮಗೆಮಗೆ ಎನ್ನಮನಮೀಸಲ ಭಾಜನವ ಮಾಡಿದನು ಅಯ್ಯಾ ॥ ಪಲ್ಲ ॥

ಶಬ್ದ ಸ್ಪರ್ಶ ರೂಪ ರಸ ಗಂಧಂಗಳ ವಿವರಿಸಿ ಕಳೆದು ಪ್ರಾಣಲಿಂಗ ನಿಮಗೆ ಪರಿಯಾಣವ ಮಾಡಿದೆನೋ ಅಯ್ಯಾ ॥ ೧ ॥

ಸರ್ವಾಂಗವ ಶುದ್ಧವ ಮಾಡಿ ನಿರ್ಮಲ ತತ್ವವೇದಿಯಾಗಿ ಸರ್ವಾಚಾರ ಸಂಪತ್ತೆಂಬ ದ್ರವ್ಯವನ್ನು ನಿಮಗಳವಡಿಸಿದೆನೋ ಅಯ್ಯಾ ॥ ೨ ॥

ಪರಿಪೂರ್ಣ ಜ್ಞಾನವೆಂಬ ಮಹಾಘನ ಭಾಜನದಲ್ಲಿ ಪರಮಾನಂದವೆಂಬ ಪದಾರ್ಥವನ್ನು ನಿಮಗಳವಡಿಸಿದೆನೋ ಅಯ್ಯಾ ॥ ೩ ॥

ಆನೆಂಬರಿವಿನ ಮೂಲ ಸಕುತಿಯೊಳಗೆ ನೀನೆಂಬ ವಿವೇಕವನು ಸಲೆನಾನಿಮಗಳವಡಿಸಿದೆನೋ ಅಯ್ಯಾ ॥ ೪ ॥

ಪರಿಣಾಮ ಪ್ರಸಾದದ ಪರಮ ಮಂಗಳ ತೃಪ್ತಿಗೆ ಪರಮ ಸಾಧನವೆನ್ನಂಗವು ನಿಮಗಳವಡಿಸಿದೆನೋ ಕ್ರಮದಿಂ ಕೂಡಲ ಸಂಗಯ್ಯ ॥ ೫ ॥

ಮತ್ತೇಭ:— ಪರಿಪೂರ್ಣತ್ವವನುಳ್ಳುದಾಗಿ ಘನ ಸಚ್ಚಿತ್ಸೌಖ್ಯವೇ
ಚಿನ್ಮಮಾ । ಗಿರುತಿರ್ಪ ದ್ವಯ ವಸ್ತು ತಾನೆಯರಿವಿಂದಂ ಕಾಣಿಕುಂಮ
ತ್ತಮಾ ॥ ವರಸುಜ್ಞಾನವೇ ತಾನೆಚಿತ್ಸಲಿಲದಿಂದಂ ಧೌತಮಾಗಿರ್ಪಮಾ ।
ಪರಿಯಾಣಾಷ್ಪಯದಿಂದೆ ತತ್ಪುರಣನೋಳ್ ಶ್ರೀಸಿದ್ಧಲಿಂಗೇಶ್ವರಾ ॥ ೯೭ ॥

ಗದ್ಯ:— ಇಂತಿ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭತ್ತೇಳನೆಯದಾದ ಭಾಜನ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೯೮ ಅಂಗ ಲೇಪನ ಸ್ಥಲ.

ಸೂತ್ರ:— ಇಂತು ಐಕ್ಯಂಗೆ ಲಿಂಗವೇ ಭಾಜನವಾಗಿ ಮಹಾಲಿಂಗಕ್ಕೆ ಐಕ್ಯನೇ ಭಾಜನವಾಗಿ ಅವಿರಳವಾಗಿರ್ದ ಲಿಂಗವು ಮಹದೈಕ್ಯನ

ಸರ್ವಾಂಗದಲ್ಲಿ ಲೇಪ ವಾಗಿರ್ಪ ಭೇದವೆಂತಿರ್ದುದೆಂದಡೆ ಮುಂದೆ ಲಿಂಗ ಲೇಪನ ಸ್ಥಲವಾದುದು.

ವಚನಃ— ಅಪ್ಪುವ ನಪ್ಪಿದ ವಾಯುವಿನಂತೆ ವಾಯುವನಪ್ಪಿದ ಪರಿಮಳದಂತೆ, ಬಯಲನೊಳ ಕೊಂಡ ಜ್ಯೋತಿಯಂತೆ ಲಿಂಗವನಪ್ಪಿದ ಶರಣ ದೇಹಿ ಎನಬಹುದೆ ಕೂಡಲ ಚನ್ನ ಸಂಗಾ ನಿಮ್ಮ ಶರಣನಪರಿ ಇಂತು ॥ ೯ ॥

ಪದ—ರಾಗ.

ಗಗನದ ಗವ್ಯ ನಿಲವನು ಒಂದು ಮದಾಳಿ ನುಂಗಿತ್ತ ಕಂಡೆನು ॥ ಕಾಲನೆಂಬ ಜಾಲಜಾಗ ರನ ಘನ ಶರಧಿ ನುಂಗಿತ್ತ ಕಂಡೆನು ॥ ಪ ॥

ಜಂಬು ದ್ವೀಪದ ಹೃದಯವಲೊಂದು ಸದ ಮದಗಜ ಹಯನಾಯಿತು । ಕುಂಭಿನಿ ಯುದರದ ಕಂದರನ ನೊಸಲಲಿ ಚಂದ್ರ ಲಿಖಿತ ಕಂಡೆನು ॥ ೧ ॥

ಹದಿನಾಲ್ಕು ಭುವನ ದಿಗುವಳಯ ಒಂದು ಹರಿಣಿಯ ನಖದೊಳಗಡಗಿತ್ತು । ಅರ್ಕನ ಕೃತಕದ ಭಿತ್ತಿಯ ಮೇಲಣ ಚಿತ್ತಾರ ವಡಗಿತ್ತ ಕಂಡೆನು ॥ ೨ ॥

ತುಂಬಿ ಯಮೃತವಕಡೆವಲ್ಲಿ ಅಂಗಜ ನತ್ತುದ ಬಿತ್ತಿದನು ಕಂಡೆನು । ಮೇರು ಮಂದಿರ ದಂಗನೆಯ ಬಸುರಲ್ಲಿ ನವಖಂಡ ಪಿಂಡವ ಕಂಡೆನು ॥೩॥

ಜಲದೊಳಗಣ ಕಿಚ್ಚು ಜಲವ ಸುಟ್ಟು ಕಂಡೆ ಜಲಬೆಂದು ನೆಲನಿಧಿ ವುಳಿಯಿತ್ತು । ಅಜ ಕಪಾಲವ ಪಿಡಿದಿಹ ರುದ್ರನ ಕರಬೆಂದು ಕಪಾಲ ಉಳಿಯಿತ್ತು ॥ ೪ ॥

ಅಳಿಯ ಬಣ್ಣದ ಮೇಲೊಂದು ಪವನನ ರತ್ನವ ನಂಗಿಯಡಗಿತ್ತು । ಗುಹೇಶ್ವರನೆಂಬ ಲಿಂಗಸಂಗ ನಿರ್ಲೇಪ ವಾಯಿತ್ತು ॥ ೫ ॥

ಮತ್ತೇಭಃ—ತಿಳದೊಳ್ತೈಲ ಮದಿರ್ಪ ವೊಲ್ಕು ಸುಮದೊಳ್ಸೌರಭ ಮಿರ್ಪಂತೆಪಾ। ಲೊಳಗಾಜ್ಯಂ ನೆಲಿಸಿರ್ಪ ವೋಲ್ನಿಜಪರಂ ಜ್ಯೋತಿ ಸ್ವರೂಪಾನಿ ॥ ಮರ್ಗಳಲಿಂಗಂ ಘನ ಚಿತ್ಸ್ವರೂಪ ನೆನಿಪಾ ಲಿಂಗೈಕ್ಯನೋಳ್ಕ್ಯೋ

ಭಿಸು । ತೊತ್ತುಳಗೆಂದುಂ ಪೊರಗೆಂದು ವಿಲ್ಲ ಜೆಸಗುಂ ಶ್ರೀಸಿದ್ಧಲಿಂಗೇಶ್ವರಾ ॥ ೯೮ ॥

ಗದ್ಯಃ— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭತ್ತೆಂಟನೆಯದಾದ ಲಿಂಗಲೇಪನ ಸ್ಥಲದ ವಿಚಾರವು ಅನುವಿನಿಂ ಮುಗಿಯಲಾಯಿತು.

---

೯೩ ಸ್ವಪರಾಜ್ಞಾ ಸ್ಥಲ.

ಸೂತ್ರಃ— ಇಂತು ಭಾಂಡ ಭಾಜನ ಲಿಂಗಲೇಪನವೆಂಬ ತ್ರಿವಿಧ ಸ್ಥಲಂಗಳೇಕವಾದ ಲಿಂಗದ ಮಹದೈಕ್ಯನಲ್ಲಿ ನಾಹಂ ಎಂಬುಭಯುವನರಿಯದೆ ಸ್ವಯ ನಿಜವಾಗಿರ್ದಭೇದ ವೆಂತಿರ್ಪುದೆಂದಡೆ ಮುಂದೆ ಸ್ವಪರಾಜ್ಞಾ ಸ್ಥಲವಾದುದು.

ವಚನಃ— ನಾಮ ಅನಾಮವೆಂದು ನೀನು ನಾಮಕ್ಕೆ ಬಳಲುವೆ ನಾಮವಾವ ಸೀಮೆಯೊಳಗಿಪ್ಪುದು ಹೇಳಲೆ ಮರುಳೆ! ನಾಮವಿಲ್ಲ, ಸೀಮೆಯಿಲ್ಲ, ಒಡಲೂಇಲ್ಲ, ನೆಳಲೂ ಇಲ್ಲ, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ನಾನು ಇಲ್ಲ ನೀನು ಇಲ್ಲ ॥ ೧೦ ॥

ಪದ—ರಾಗ—ಧೇಶಿ.

ಶ್ರೀಲಿಂಗೈಕ್ಯಂಗೆ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳುಂಟೆ । ಶ್ರೀಲಿಂಗೈಕ್ಯನು ಮಾಯಾ ಮೋಹದಿಂದ ಭಂಗಿತನೆ ಅಲ್ಲ ॥ಪ॥

ನುಡಿಯಲ್ಲಿ ಎರಡಿಟ್ಟು ನುಡಿಯನು । ಬೆಡಗಿನ ಗಡಣದ ಕುಲವನು ಕಂಡರಿಯನು ಮತ್ತೆ । ಹಿಡಿಯನು ಕೃತಕವ ತನ್ನನುವನು ತೂರಿಡಂಬಿಕ್ಕುವನಲ್ಲ ॥ ತುಡುಗುಣಿತನದಿಂದೆ ಲೋಕದ ಬಳಕೆಯ । ತುಡುಕುವನಲ್ಲ ತನ್ನ ತೋರನು ಬೀರನು । ಜಡನಲ್ಲಿ ಜಾಣನಲ್ಲ ತನ್ನಲ್ಲಿಯೆ ತಾನೇನೆಂದ ಸಹಜನು ॥ ೧ ॥

ಮಾತಿನ ಸೂತಕ ಸುದ್ದಿಯ ಸಟೆಯುವನಲ್ಲ । ಜಾತಿಯ ನೀತಿಯ ಬಳಸದ ಸಮ್ಮುಖ । ಪ್ರೀತಿಯ ಮಾಡನು ತನ್ನ ಮಹಾತ್ಮೆಯ ತನ್ನಲ್ಲಿ

ಡಿಟವೆಂದು । ಧಾತುಗೆಟ್ಟು ಹೆರರುಟೆಂದಿಲ್ಲಿನ್ನ । ಭೀತಿಯಿಂದ ಪ್ರೀತಿಗಳ ಸಂಪಾದಿಸ । ಮಾತ ಪಿತರನೆ ಕೊಂದು ತನ್ನನೆ ತಾ ಕೊಡಿಸಿ ಕೊಡ ಹೇಸಿಕೆಯಿಲ್ಲದವಾ ॥ ೨ ॥

ತನ್ನಯ ನೆಳಲಿಗೆ ತಾನೇ ಮುನಿವನು । ತನ್ನಯ ಹೆಸರಿಗೆ ತಾನೆ ನಗುವನು । ತನ್ನಯ ಹಮ್ಮನು ತಾನೇ ನಿಂದಿಸಿ ತಾನಿಲ್ಲದ ಮಹಿಮಾ ॥ ಎನ್ನವರು ತನ್ನವರೆಂದು ಮನದೊಳು । ಮನ್ನಣೆಯ ಮಾಡನು ಸಂದಳಿದುಳಿದನು । ತನ್ನಲ್ಲಿ ತಾನಾಗಿ ಏನು ಇಲ್ಲದ ನಿರ್ಣಯ ನಿರುಪಮನು ॥ ೩ ॥

ಅಲ್ಲಿನ್ನ ಅಹುದೆನ್ನ ಬೇಕೆನ್ನ ಬೇಡೆನ್ನ । ಹೊಲ್ಲಹನ್ನ ಒಳ್ಳಿಹರೆನ್ನ ಎರಡರ । ಕೊಲ್ಲಣಗೆಯನು ಲಿಂಗೈಕ್ಯನು ಸಕಲ ಜಗವನು ಕಂಡಲ್ಲಿ ॥ ಇಲ್ಲುಂಟೆಂದೆಂಬ ಜಗಳದಜಾತಿಯ । ತಲ್ಲಣ ಮುಟ್ಟದ ಸಮರಸಭರಿತನು । ಅಲ್ಲಲ್ಲಿ ಯರಿವಡೆಯಲ್ಲಿ ಕಾಮಿಸಿ ಕೊಳ್ಳದ ಮೂರುತಿಯು ॥ ೪ ॥

ಎಣಿಕೆಯ ತನುಗುಣ ವಿಡಿದಾಡುವನಲ್ಲ । ಕ್ಷಣಿಕರ ಕುಚಿತರ ನೆರವಿಗೆ ನಾಚುವ ॥ ಗಣಿತದ ಗುಣಿತದೊಳಲ್ಲದ ನಿರ್ಣಯ ಎಲ್ಲೆಡೆಯೊಳು ತಾನೆ । ಸೆಣಸುವನಲ್ಲ ತನ್ನ ನಷ್ಟಕೆ ತುಷ್ಟಿಗೆ । ಹೊಣೆಯಾಗನು ಗುರುತನದಿಂ ಶಿಷ್ಯಗೆ । ಮಣಿಕಿನೊಳಗೆ ಹೊಗವಚ್ಚ ಲಿಂಗೈಕ್ಯನು ಘನ ನಿಜಗುಣ ಯೋಗಿ ॥ ೫ ॥

ಮತ್ತೇಭಃ—- ಸುರತ ಕ್ರೀಡೆಯೊಳಾತ್ಮ ವಲ್ಲಭೆಯನಿಂತಾ ಲಿಂಗನಗೆಯುದ್ಧತ । ತ್ಪುರುಷಂ ಬಾಹ್ಯವನಂತೆ ಯಂತರವನೇನಂ ಬಲ್ಲನಾ ರೀತಿಯೋ ॥ ಕ್ಯರಣಂ ಲಿಂಗವನಪ್ಪಿ ಕೂಡಿದ ಸುಖಾವೇಶತ್ವದಿಂ ತನ್ನನಾ । ಪರವಂತಾನರಿಯಂ ನಿರಂತರಮವಂ ಶ್ರೀಸಿದ್ಧಲಿಂಗೇಶ್ವರಾ ॥ ೯೯ ॥

ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ತೊಂಭತ್ತೊಂಭತ್ತನೆಯದಾದ ಸ್ವಪರಾಜ್ಞಾ ಸ್ಥಲದ ವಿಚಾರವು ಅನಿವಿನಿಂ ಮುಗಿಯಲಾಯಿತು.

---

೪೪ ಭಾವಾಭಾವ ನಷ್ಟಸ್ಥಲ.

ಇಂತು ಸ್ವಪರಾಜ್ಞಾ ಸ್ಥಲದ ನಿಶ್ಚಿಂತ ಲಿಂಗವು ಮಹದೈಕ್ಯನಲ್ಲಿ ಭಾವಾಭಾವ ವೆಂಬೆರಡು ನಷ್ಟವಾದ ಭೇದವೆಂತಿರ್ದುದೆಂದಡೆ ಮುಂದೆ ಭಾವಾಭಾವ ನಷ್ಟ ಸ್ಥಲವಾದುದು.

ವಚನ:— ಭೂಮಿ ಘನವೆಂಬೆನೆ? ಶ್ರೀಪಾದಕ್ಕೆ ಒಳಗಾಯಿತ್ತು. ಗಗನ ಘನವೆಂಬೆನೇ? ಶ್ರೀನೇತ್ರಕ್ಕೆ ಒಳಗಾಯಿತ್ತು. ಮಹತ್ತು ಘನವೆಂಬೆನೇ? ಶ್ರೀವಾಚ್ಯಕ್ಕೆ ಒಳಗಾಯಿತ್ತು, ಘನಘನವೆಂಬುದು ಇನ್ನೆಲ್ಲಿ ಹುದೋ ಎಲವೋ? ಅರಿವಿಂಗೆ ಆಚಾರವಿಲ್ಲ. ಕುರುಹಿಂಗೆ ನೆಲೆಯಿಲ್ಲ ಚೆನ್ನಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು ॥೧೧॥

ಪದ—ರಾಗ—ಲಲಿತ

ಜಾತನಲ್ಲದ ಜಾತನ ಬರಿಬರಿ ಮಾತನಾಡಿಪಡೇನಪ್ಪುದಯ್ಯಾ ॥ಪ॥

ಆಗುಹೋಗಿಲ್ಲದನ ರಾಗ ಭೋಗಕ್ಕೆ ತಂದು। ತಾಗು ನಿರೋಧಕ್ಕೆ ಗುರಿ ಮಾಡಿ। ಮೇಘ ಡಂಬರದಂತೆ ಸಮುಭೋಗವನಳವಡಿಸಿಕೊಂಡು ಆಗಮದಿಚ್ಛೆಗೆ ತೋರಿಬೀರಲಿಲ್ಲ ಕಂಡಯ್ಯಾ ॥೧॥

ಬಗೆಯುರಳದೆ ಬಗೆಮೊಳೆಯುದೆ। ಬಗೆಹುಟ್ಟದೆ ಬಗೆಗೆಟ್ಟು ನಷ್ಟವಾದ। ಬಗೆಬಳಿಕಿನ್ನೇನಪ್ಪುದೋ ಬಗೆರಚನೆಯ ಮುಂದಿಟ್ಟುಕೊಂಡು॥ ಹೊಗಳುವ ಭಟ್ಟರಂತೆ ಹೊಗಳತೊಡಗ ಲೆಡೆಯಿಲ್ಲ ಕಂಡಯ್ಯ ॥೨॥

ಮತಿಯೆಂದು ಹೊಗಳಲು ಬಾರದು ವೃತಿಯೆಂದು ಹೊಗಳಲು ಬಾರದು। ಶೃತಿಗಳಿಗಳವಡದೆ ಸಹಜನು ಓತು ಪತಿಯಿಲ್ಲವಾಗಿ। ಸ್ಥಿತಿ ಲಯವೆಂಬುದಿಲ್ಲ ಅತಿ ಕವಿಗಳು ಹೊಗಳುವ ಕಳವಳದೊಳಗಿಲ್ಲ ಕಂಡಯ್ಯಾ ॥೩॥

ಮನವಚನ ಕಾಯಕಿಂತನುವಲ್ಲದೆ ಹೊಯಿತ್ತು ತನ್ನನು ಭವಕೆ ತರಬಹುದೆನುಡಿಗಧಿಕನ। ಇನಿತಿಂತು ಪರಿಯಲ್ಲಿ ಘನಘನವೆಂದಡೆ ಅನಿತನಿತು ಧಾವತಿ ಮುಂದೆ ಸುಖವಿಲ್ಲ ನಿರೂಪ ಮನ ಠಾವಿನಲ್ಲಿ ಕಂಡ್ಯ ಅಯ್ಯ ॥೪॥

ಬದ್ಧನು ಮುಕುತನು ಎಂಬ ಸುದ್ದಿಯ ಸಟೆಯುವನಲ್ಲ ಉದ್ದೇಶ ನಿರ್ದೇಶ ನಿರುತನಲ್ಲ ವಿದ್ಯದ ಬಲುಹನೆ ತೋರಿ ಬುದ್ಧಿಯ ಮೆರೆದವನಲ್ಲ ನಿದ್ರೋಳಿಯ ಜನ್ಮ ನಿಜಗುಣಯೋಗಿ ಕಂಡಯ್ಯ ॥೫॥

ಶಾರ್ದೂಲ:— ಆವಾಗಳ್ ನಿಜದಿಂದ ಹಂತೆಯು ಮದಿಲ್ಲಾಗಳ್ಪಿಕ್ಕಂ ಶಿವ। ಭಾವಂ ಸಿದ್ಧಿಯದಾದುದೆಂಬ ನಿರಹಂತಾ ಭಾವವಂತಿಲ್ಲ

ವು॥ ತ್ತಾವಲ್ಲಿಲ್ಲನಹಂತೆ ಯೆಂಬುದು ಬಳಿಕ್ಕಿಲ್ಲಿಲ್ಲ ಹಂತಾಗುಣಂ। ಭಾವಾಭಾವ ವಿರಚರ್ಣಕಂಗಿದು ಭಟಂ ಶ್ರೀಸಿದ್ಧಲಿಂಗೇಶ್ವರಾ॥೧೦೦॥

ಗದ್ಯ:— ಇಂತೀ ಪ್ರಕಾರದಿಂ ನೂರೊಂದು ಸ್ಥಲದೊಳಗೆ ನೂರನೆಯದಾದ ಭಾವಾಭಾವ ನಷ್ಟಸ್ಥಲದ ವಿಚಾರವು ಆನುವಿನಿಂ ಮುಗಿಯಲಾಯಿತು.

ಜ್ಞಾನ ಶೂನ್ಯಸ್ಥಲ.

ಸೂತ್ರ:— ಇಂತು ಭಾವನಿರ್ಭಾವವೆರಡು ನಷ್ಟವಾದ ಲಿಂಗವು ಮಹದೈಕ್ಯನ ಮೂಲಜ್ಞಾನವನಾಲಿಂಗಿಸಿ ಜ್ಞಾನವೇ ತಾನಾಗಿ ಆ ಜ್ಞಾನವು ನಿಜನಿಜದಲ್ಲಿ ನಿಂದು ಶೂನ್ಯವಾದ ಭೇದವೆಂತಿರ್ದುದೆಂದಡೆ ಮುಂದೆ ಜ್ಞಾನಶೂನ್ಯಸ್ಥಲವಾದುದು.

ವಚನ:— ಶ್ರೀ ಮನ್ಮನದ ಕೊನೆಯಿಂದ ನೆನೆದ ನೆನಹು ಜನನ ಮರಣವ ನಿಲಿಸಿತ್ತು ಜ್ಞಾನ ಜ್ಯೋತಿಯು ಉದಯ ಭಾನುಕೋಟಿಯನೆ ಮೀರಿ ಸ್ವಾನುಭಾವದುದಯ ಜ್ಞಾನ ಶೂನ್ಯದೊಳಗಡಗಿದ ಭೇದವನು ಏನೆಂಬೆನೋ ನೋಡಾ ಗುಹೇಶ್ವರಾ ॥ ೧॥

ಪದ—ರಾಗ—ನಾಟ.

ತಾನಿದಿರೆಂಬೆರಡನು ಅರಿಯದೆ ಧ್ಯಾನ ನಷ್ಟವಾಗಿ। ಜ್ಞಾತೃಜ್ಞಾನ ಜ್ಞೇಯವೆಂಬ ತ್ರಿವಿಧ ಪರತಮಹಿಮ ॥ ಪ॥

ಹೊರವಳಗೆಂಬೆರಡರ ಬಗೆಯನರಿಯದೆ ಎರಡರ ತೆರನೆಂಬ ನುಡಿಯಮುನ್ನವೆ ತಾನರಿಯದೆ। ಅರಿವಿನ ಮೂಲವ ಹಂದು ಮರವೆನಷ್ಟವಾದ ಅಂತ ಅರುವಿನ ಮರವೆಯ ಕುರುಹಳಿದ ನಿಶ್ಚಿಂತ ॥೧॥

ಉಲುಹಡಗಿದ ಸಮುದ್ರದ ನಿಲವಿನ ಘಾತದಂತೆ ತಿಳಿವಿನ ಮಹಾಘನ ವಿವೇಕ ಹರಿಹಂಚಾಗಿ। ಮುಳಿದೆನೆಂಬ ಉಳುಮೆಯ ಮೂಲವ ಮರೆದು ಕಳೆಯಬೆಳಗಳಿದು ನಿಜದೊಳುನಿಂದ ಮಹಿಮ ॥೨॥

ಉರಿಕರ್ಪುರ ಒಡಗೂಡಿ ಎರಡುವಳಿದ ಬಳಿಕ ಪುರಳಿ ನೋಡಿಹೆ ನೆಂದಡೆ ಭಸ್ಮವಿಲ್ಲ ನೋಡಾ। ಅರಿವನರಿದಿಹೆನೆಂಬ ಅರಿವಿನ ಮೂಲವ ದಹಿಸಿ ಧರಿಸಿದ ಜ್ಞಾನಭಸ್ಮವೆಂಬುದಿಲ್ಲದ ಮಹಿಮ ॥೩॥

ನಿಜದಲಿ ನಿರ್ಣಯಂವಡಗಿ ಗತಿಮತಿ ನಷ್ಟವಾಗಿ ಕಳೆಯೊಳಗಣ ಬೆಳಗು ತಾನೆಂದು ತೋರುತಲಿರ್ಪ। ತೊಳಗಿ ಬೆಳಗುವ ಚೈತನ್ಯ ತನ್ನಲ್ಲಿ ತಾನೆ ನಿಷ್ಕಳೆಯಾಗಿ ನಿಜದೊಳು ನಿಶ್ಶೂನ್ಯವಾದ ಮಹಿಮ ॥೪॥

ತನ್ನೊಳು ತಾನೆಯಾಗಿ ಎನ್ನಲ್ಲಿ ನಾನರಿದು ಎನ್ನಲ್ಲಿ ನಾನರಿದೆ ನೆಂಬ ಅರಿವಿಂಗೆ ತೆರಹುಗೊಡದೆ। ಬಿಮ್ಮು ಬೀಸರವಾಗಿ ತಾಹಮ್ಮು ಶೂನ್ಯ ವಾಗಿ ನಿರ್ಮಲ ನಿಜಪದವಾದ ಉಪಮಾತೀತ ಮಹಿಮ ॥೫॥

ಜ್ಞಾನಜ್ಯೋತಿಯ ಪ್ರಭೆ ತಾನಾಗಿರ್ದೆ ನಿಂದಿರ್ದು ತಾನಾಗಿರ್ದೆನೆಂಬ ಜ್ಞಾನಶೂನ್ಯವಾಗಿ। ತಾನೆ ತನ್ನಲ್ಲಿ ವ್ಯಾಪುರದೊರಗಿದ ನಿರಾಳ ಜ್ಞಾನಾ ತೀತ ನಿರುಪಮ ನಿಶ್ಚಲ ನಿರ್ಭೇದ್ಯ ॥೬॥

ಶಬ್ದ ನಿಶ್ಶಬ್ದವಾಗಿ ನಿಶ್ಶಬ್ದವ ನಾಹತವಾಗಿ ಶಬ್ದನಿಶ್ಶಬ್ದವೆಂಬ ಬುದ್ಧಿ ನಿರ್ವಯಲಾಗಿ। ಇದ್ದುದ ಹೋದುದೆಂಬುದನರಿಯದೆ ಮೇರೆಗೆಟ್ಟು ನಿಶ್ಶಬ್ದ ಗಂಭೀರ ಗುಹೇಶ್ವರ ನಿಮ್ಮ ಬಸವಣ್ಣ ॥೭॥

ಮತ್ತೇಭಃ— ಜ್ಞಾನಾತೀತನೆನಿಪ್ಪ ನಿರ್ಮಲ ಮಹಾಲಿಂಗೈಕ್ಯನಾ ಜ್ಞಾನಮಂ। ತಾನಾಲಿಂಗಿಸಿ ಯಾತರಂಬಡೆದು ಮತ್ತಾಜ್ಞಾನಮಂ ತನ್ನೊ ಳೇ॥ ಲೀನಂಗೈದ ವಿಲಾಸ ಕಾರಣ ಮುಪಾಸ್ಯೋಪಾಸ ಕತ್ವಂಗಳಿಂ। ತೇನುಂ ತೋರದೆ ಇರ್ದುದಾನಿಜಪದಂ ಶ್ರೀಸಿದ್ಧಲಿಂಗೇಶ್ವರಾ ॥೧೦೧॥

ಗದ್ಯ:— ಇಂತೀಪ್ರಕಾರದಿಂ ನೂರೊಂದು ಸ್ಥಲದೊಳಗೆ ನೂರೊಂದ ನೆಯದಾದ ಜ್ಞಾನಶೂನ್ಯಸ್ಥಲದ ವಿಚಾರವು ಅನುವಿನಿಂ ಮುಗಿಯಲಾ ಯಿತು.

ಇಂತೆಂಬಲ್ಲಿಗೆ ಏಕೋತ್ತರ ಶತಸ್ಥಲಂಗಳಲ್ಲಿ

ದೀಕ್ಷಾಗುರು ಸ್ಥಲವಾದಿಯಾಗಿ ಪರಜಂಗಮ ಸ್ಥಲಾಂತ್ಯವಾದ ಒಂಭತ್ತು ಸ್ಥಲಂಗಳಿಂದ ಒಂದನೇ ಆಚಾರಲಿಂಗಸ್ಥಲವಾಯ್ತು.

ಕ್ರಿಯಾಗಮ ಸ್ಥಲವಾದಿಯಾಗಿ ಜ್ಞಾನಾಚಾರ ಸ್ಥಲವಂತ್ಯವಾದೊಂ ಭತ್ತು ಸ್ಥಲಂಗಳಿಂದ ಎರಡನೇ ಗುರುಲಿಂಗ ಸ್ಥಲವಾಯ್ತು-

ಕಾಯಾನುಗ್ರಹಸ್ಥಲವಾದಿಯಾಗಿ ಸೇವ್ಯಸ್ಥಲವಾದೊಂಭತ್ತು ಸ್ಥಲಂಗಳಿಂದ ಮೂರನೇ ಶಿವಲಿಂಗ ಸ್ಥಲವಾಯ್ತು.

ಜೀವಾತ್ಮಸ್ಥಲವಾದಿಯಾಗಿ ಸೇವ್ಯಪ್ರಸಾದಿಸ್ಥಲವಂತ್ಯವಾದೊಂಭತ್ತು ಸ್ಥಲಂಗಳಿಂದ ನಾಲ್ಕನೇ ಜಂಗಮ ಸ್ಥಲವಾಯ್ತು.

ದೀಕ್ಷಾಪಾದೋದಕ ಸ್ಥಲವಾದಿಯಾಗಿ ಮಹದಾಕಾಶಸ್ಥಲವಂತ್ಯವಾದ ಒಂಭತ್ತು ಸ್ಥಲಂಗಳಿಂ ಐದನೆಯದಾದ ಪ್ರಸಾದಲಿಂಗ ಸ್ಥಲವಾಯ್ತು.

ಕ್ರಿಯಾಪ್ರಕಾಶ ಸ್ಥಲವಾದಿಯಾಗಿ ಜ್ಞಾನಶೂನ್ಯ ಸ್ಥಲಾಂತ್ಯವಾದ ಹನ್ನೆರಡು ಸ್ಥಲಂಗಳಿಂ ಆರನೇ ಮಹಾಲಿಂಗಸ್ಥಲವಾಯ್ತು.

ಅಂತು ಲಿಂಗಸ್ಥಲಂಗಳಾರಕ್ಕೆ ಸ್ಥಲಂಗಳೈವತ್ತೇಳು ಮುಗಿದವು.

ಮಂಗಳಮಹಾ ಶ್ರೀ

ಗದ್ಯ:— ಇಂತೀ ವ್ಯಾಖ್ಯೆಯಿಂ ಅನಾದಿ ಪರವಸ್ತುವೇ ಮಹಾಸ್ಥಲವಾಗಿ ಅನಾದಿ ಸದ್ಭಕ್ತನ ಹೃನ್ಮಂದಿರದಲ್ಲಿರ್ದು ಲಿಂಗ ಅಂಗ ಸ್ಥಲಂಗಳಾಗಿ ಆಱಾರಕ್ಕೆ ಕೂಡಿದ ಏಕೋತ್ತರ ಶತಸ್ಥಲಂಗಳಲ್ಲಿ ಲಿಂಗಸ್ಥಲಂಗಳು ಐವತ್ತೇಳಕ್ಕೆ ವಿವರವು.

ದೀಕ್ಷಾಗುರುಸ್ಥಲಾದಿ ಪರಜಂಗಮ ಸ್ಥಲಾಂತ್ಯವಾದ ಒಂಭತ್ತು ಸ್ಥಲಂಗಳ್ಕೂಡಿದ ಒಂದನೇ ಆಚಾರ ಲಿಂಗಸ್ಥಲಕ್ಕೆ ಸೂತ್ರ ವಚನ ಪದ ಪದ್ಯ ಗದ್ಯ ೯, ೨೭, ೧೦

ಕ್ರಿಯಾಗಮಸ್ಥಲಾದಿ ಜ್ಞಾನಾಚಾರ ಸ್ಥಲಾಂತ್ಯವಾದ ಒಂಭತ್ತು ಸ್ಥಲಂಗಳ್ಕೂಡಿದ ಎರಡನೇ ಗುರುಲಿಂಗ ಸ್ಥಲಕ್ಕೆ ಸೂತ್ರ ವಚನ ಪದ ಪದ್ಯ ಗದ್ಯ ೯, ೨೭, ೧೦

ಕಾಯಾನುಗ್ರಹಸ್ಥಲಾದಿ ಸೇವ್ಯಸ್ಥಲಾಂತ್ಯವಾದ ಒಂಭತ್ತು ಸ್ಥಲಂಗಳ್ಕೂಡಿದ ಮೂರನೇ ಶಿವಲಿಂಗಸ್ಥಲಕ್ಕೆ ಸೂತ್ರ ವಚನ ಪದ ಪದ್ಯ ಗದ್ಯ ೯, ೨೭, ೧೦

ಜೀವಾತ್ಮಸ್ಥಲಾದಿ ಸೇವ್ಯಪ್ರಸಾದಿ ಸ್ಥಲಾಂತ್ಯವಾದ ಒಂಭತ್ತು ಸ್ಥಲಂಗಳ್ಕೂಡಿದ ನಾಲ್ಕನೇ ಜಂಗಮಲಿಂಗಸ್ಥಲಕ್ಕೆ ಸೂತ್ರ ವಚನ ಪದ ಪದ್ಯ ಗದ್ಯ ೯, ೨೭, ೧೦

ದೀಕ್ಷಾಪಾದೋದಕಸ್ಥಲಾದಿ ಮಹದಾಕಾಶಸ್ಥಲಾಂತ್ಯವಾದ ಒಂಭತ್ತು ಸ್ಥಲಂಗಳ್ಕೂಡಿದ ಐದನೇ ಪ್ರಸಾದಲಿಂಗಸ್ಥಲಕ್ಕೆ ಸೂತ್ರ ವಚನ ಪದ ಪದ್ಯ ಗದ್ಯ ೯, ೨೭, ೧೦

ಕ್ರಿಯಾಪ್ರಕಾಶಸ್ಥಲಾದಿ ಜ್ಞಾನಶೂನ್ಯಸ್ಥಲಾಂತ್ಯವಾದ ಹನ್ನೆರಡು ಸ್ಥಲಂಗಳ್ಕೂಡಿದ ಆಱನೇ ಮಹಾಲಿಂಗಸ್ಥಲಕ್ಕೆ ಸೂತ್ರ ವಚನ ಪದ ಪದ್ಯ ಗದ್ಯ ೧೨, ೩೬, ೧೪

ಅಂತು ಆಚಾರಾತ್ಮಕ ಭಕ್ತಸ್ಥಲಾದಿ ಐಕ್ಯಾತ್ಮಕ ಮಹಾಲಿಂಗ ಸ್ಥಲಾಂತ್ಯವಾದ ಲಿಂಗಸ್ಥಲಂಗಳಾಱರಲ್ಲಿ ಕೂಡಿದ ದೀಕ್ಷಾಗುರುಸ್ಥಲಾದಿಯಾಗಿ ಜ್ಞಾನಶೂನ್ಯಸ್ಥಲಾಂತ್ಯವಾದ ಐವತ್ತೇಳು ಲಿಂಗಸ್ಥಲಂಗಳಿಗೆ ಸೂತ್ರಂಗಳ್ ಐವತ್ತೇಳಕ್ಕಂ ವಚನಂಗಳ್ ಐವತ್ತೇಳಕ್ಕಂ ಪದಂಗಳ್ ಐವತ್ತೇಳಕ್ಕಂ ಪದ್ಯಂಗಳ್ ಐವತ್ತೇಳಕ್ಕಂ ಗದ್ಯಂಗಳ್ ಅಱವತ್ತುನಾಲ್ಕಕ್ಕೆ ಗಣನೆಯಿಂ ಕೂಡಿ ೨೯೨ಕ್ಕಂ ಲಿಂಗಸ್ಥಲಂಗಳ್ ಮುಗಿದುವು.

ಮುಂದಿನ್ನು ಅಂಗ ಲಿಂಗ ಸ್ಥಲಂಗಳು ನಾಲ್ವತ್ತನಾಲ್ಕನು ಲಿಂಗ ಅಂಗ ಸ್ಥಲಂಗಳು ಐವತ್ತೇಳನು ಮಿಶ್ರವಟ್ಟಸ್ಥಲಂಗಳಾಗಿ ಕೂಡಿ ಪೇಳು ತ್ತಿಪ್ಪುದು.

ಮಹಾಪಿಂಡಾದಿ ಜ್ಞಾನಶೂನ್ಯಾಂತ್ಯೈಕೋತ್ತರ ಶತಸ್ಥಲಂಗಳು

ಅಂಗ ಲಿಂಗ ಸ್ಥಲಂಗಳ್ ೪೪, ಲಿಂಗ ಅಂಗ ಸ್ಥಲಂಗಳು ೫೭,
ನೂರೊಂದರ ಮೇಲೆ ನಿಂತಿರ್ದುವು ನೋಡಾ.

ಭಕ್ತಸ್ಥಲಕ್ಕೆ ೧೫ ಆಚಾರಲಿಂಗಸ್ಥಲಕ್ಕೆ ೯, ೨೪ ಇಪ್ಪತ್ತುನಾಲ್ಕು ಸ್ಥಲಂಗಳು
ಮಹೇಶಸ್ಥಲಕ್ಕೆ ೯ ಗುರುಲಿಂಗಸ್ಥಲಕ್ಕೆ ೯, ೧೮ ಹದಿನೆಂಟು ಸ್ಥಲಂಗಳು.
ಪ್ರಸಾದಿಸ್ಥಲಕ್ಕೆ ೭ ಶಿವಲಿಂಗಸ್ಥಲಕ್ಕೆ ೯, ೧೬ ಹದಿನಾರು ಸ್ಥಲಂಗಳು.
ಪ್ರಾಣಲಿಂಗಿಸ್ಥಲಕ್ಕೆ ೫ ಜಂಗಮಲಿಂಗಸ್ಥಲಕ್ಕೆ ೯, ೧೪ ಹದಿನಾಲ್ಕುಸ್ಥಲಂಗಳು
ಶರಣಸ್ಥಲಕ್ಕೆ ೪ ಪ್ರಸಾದಲಿಂಗಸ್ಥಲಕ್ಕೆ ೯, ೧೩ ಹದಿಮೂರು ಸ್ಥಲಂಗಳು
ಐಕ್ಯಸ್ಥಲಕ್ಕೆ ೪ ಮಹಲಿಂಗಸ್ಥಲಕ್ಕೆ ೯, ೧೩ ಹದಿಮೂರು ಸ್ಥಲಂಗಳು.

ತ್ಯಾಗಾಂಗದಿಷ್ಟಕ್ಕೊಂದು, ಭೋಗಾಂಗದ ಪ್ರಾಣಕ್ಕೊಂದು ಯೋಗಾಂಗದ ಭಾವಕ್ಕೊಂದು ಕೂಡಿ ನೂರೊಂದು ಸ್ಥಲಂಗಳಾಗಿ ಅನುವಿನಿಂ ಮುಗಿದುವು.

ಭಕ್ತ್ಯೈಕ್ಯಾಂತ ಮೂರಾರಂಗಸ್ಥಲಂಗಳಲ್ಲಿಪ್ಪ ಪಿಂಡಾದಿ ಸಹಭೋಜನಾಂತ್ಯವಾದ ನಾಲ್ವತ್ತುನಾಲ್ಕುಸ್ಥಲಂಗಳಿಗೆ ಗಣನೆಯಿಂ ಕೂಡಿದ ಸೂತ್ರ ವಚನ ಪದ ಪದ್ಯ ಗದ್ಯಂಗಳ್ ೨೨೭ ಕ್ಕಂ ಆಚಾರಾದಿ ಮಹದಂತ್ಯವಾದಾರು ಲಿಂಗಸ್ಥಲಂಗಳಲ್ಲಿಪ್ಪ ದೀಕ್ಷಾಗುರೋಂಾದಿ ಜ್ಞಾನಶೂನ್ಯಾಂತವಾದ ಐವತ್ತೇಳು ಸ್ಥಲಂಗಳಿಗೆ ಗಣನೆಯಿಂ ಕೂಡಿದ ಸೂತ್ರ ವಚನ ಪದ ಪದ್ಯ ಗದ್ಯಂಗಳ್ ೨೯೨ಕ್ಕಂ ಅಂತು ಏಕೋತ್ತರ ಶತಸ್ಥಲಂಗಳಿಗೆ ೫೧೯ಕ್ಕಂ ಶ್ರೀ.

ವಚನ:— ನಿಮ್ಮಗಳಡಿದಾವರೆಗಳಾಂಕೇ ಆರು ಅಂಗಸ್ಥಲಂಗಳು ಆರು ಲಿಂಗಸ್ಥಲಂಗಳು ಕೂಡಿದ ನೂರೊಂದು ಸ್ಥಲಂಗಳ ಮಿಶ್ರಭಾವಮಂ ಪೇಳ್ವೆಂ. ಅದೆಂತೆಂದೊಡೆ, ಪಿಂಡಸ್ಥಲಾದಿ ಸಹಜ ಮಾಟಸ್ಥಲಾಂತ್ಯವಾದ

ಹದಿನೈದಂಗಸ್ಥಲಗಳು, ದೀಕ್ಷಾಗುರುಸ್ಥಲಾದಿ ಪರಜಂಗಮ ಸ್ಥಲಾಂತ್ಯಮಾದ ಒಂಭತ್ತು ಲಿಂಗಸ್ಥಲಂಗಳು, ಮಹೇಶಸ್ಥಲಾದಿ ಭಕ್ತದೇಹಿಕಲಿಂಗಸ್ಥಲಾಂತ್ಯವಾದ ಒಂಭತ್ತು ಅಂಗಸ್ಥಲಂಗಳು, ಕ್ರಿಯಾಗಮಸ್ಥಲಾದಿ ಜ್ಞಾನಾಚಾರಸ್ಥಲಾಂತ್ಯವಾದ ಒಂಭತ್ತು ಲಿಂಗಸ್ಥಲಂಗಳು, ಕೂಡಿ ನಾಲ್ವತ್ತೆರಡು ಸ್ಥಲಂಗಳೆಂದೆನಿಸಿ ಇಷ್ಟ ಪರಬ್ರಹ್ಮದ ವೃತ್ತಸ್ಥಾನದಲ್ಲಿಪ್ಪ ಸ್ವಪರಾಜ್ಞಾಸ್ಥಲ ಮಿಶ್ರವಾಗಿ ಸದ್ಭಕ್ತನ ಕರಸ್ಥಲವೆಂದುದು ಗುರುವಚನ ನೋಡಾ. ಪ್ರಸಾದಿಸ್ಥಲಾದಿ ಪ್ರಸಾದಮಹಾತ್ಮ್ಯ ಸ್ಥಲಾಂತ್ಯವಾದ ಏಳು ಅಂಗಸ್ಥಲಂಗಳು ಕಾಯಾನುಗ್ರಹಸ್ಥಲಾದಿ ಸೇವ್ಯಸ್ಥಲಾಂತ್ಯವಾದ ಒಂಭತ್ತು ಲಿಂಗಸ್ಥಲಂಗಳು ಪ್ರಾಣಲಿಂಗಿಸ್ಥಲಾದಿ ಅಂಗಲಿಂಗಸ್ಥಲಾಂತ್ಯವಾದ ಐದು ಅಂಗಸ್ಥಲಂಗಳು ಜೀವಾತ್ಮಸ್ಥಲಾದಿ ಸೇವ್ಯಪ್ರಸಾದಿಸ್ಥಲಾಂತ್ಯವಾದ ಒಂಭತ್ತು ಲಿಂಗಸ್ಥಲಂಗಳು ಕೂಡಿ ಮೂವ್ವತ್ತು ಸ್ಥಲಂಗಳೆಂದೆನಿಸಿ ಪ್ರಾಣಪರಬ್ರಹ್ಮದ ಗೋಮುಖಸ್ಥಾನದಲ್ಲಿಪ್ಪ ಭಾವಾಭಾವನಷ್ಟಸ್ಥಲ ಮಿಶ್ರವಾಗಿ ಸಮ್ಯಜ್ಞಾನಿಯ ಮನಸ್ಥಲವೆಂದುದು ಲಿಂಗ ವಚನ ನೋಡಾ! ಶರಣಸ್ಥಲಾದಿ ಶೀಲಸಂಪಾದನ ಸ್ಥಲಾಂತ್ಯವಾದ ನಾಲ್ಕು ಅಂಗಸ್ಥಲಂಗಳು ದೀಕ್ಷಾಪಾದೋದಕಸ್ಥಲಾದಿ ಮಹದಾಕಾಶಸ್ಥಲಾಂತ್ಯವಾದ ಒಂಭತ್ತು ಲಿಂಗಸ್ಥಲಂಗಳು ಐಕ್ಯಸ್ಥಲಾದಿ ಸಹಭೋಜನಸ್ಥಲಾಂತ್ಯವಾದ ನಾಲ್ಕು ಅಂಗಸ್ಥಲಂಗಳು ಕ್ರಿಯಾಪ್ರಕಾಶಸ್ಥಲಾದಿ ಅಂಗಲೇಪನಸ್ಥಲಾಂತ್ಯವಾದ ಒಂಭತ್ತು ಲಿಂಗಸ್ಥಅಂಗಳು ಕೂಡಿ ಇಪ್ಪತ್ತಾರು ಸ್ಥಲಂಗಳೆಂದೆನಿಸಿ ಭಾವಪರಬ್ರಹ್ಮದ ಗೋಳಕ ಸ್ಥಾನದಲ್ಲಿಪ್ಪ ಜ್ಞಾನಶೂನ್ಯಸ್ಥಲ ಮಿಶ್ರವಾಗಿ ಸಚ್ಛೀಲವೈರಾಗಿಯ ಭಾವಸ್ಥಲವೆಂದುದು ಜಂಗಮ ವಚನ ನೋಡಾ. ಇಂತೀ ನೂರೊಂದು ಸ್ಥಲಂಗಳನೊಳಕೊಂಡ ಮಹಾಲಿಂಗವು ಶೂನ್ಯಲಿಂಗದಲ್ಲಿ ಕೂಡಿ ಅಂತಪ್ಪ ಶೂನ್ಯಲಿಂಗವು ನಿರಂಜನ ಜಂಗಮ ಸ್ವಾಮಿಯ ಕರಸ್ಥಲದಲ್ಲಡಗಿಪ್ಪುದು. ಅಂತಪ್ಪ ಮಹಾಸ್ವಾಮಿಯನ್ನು ತನ್ನ ಹೃದಯದಲ್ಲಡಗಿಕೊಂಡ ಅನಾದಿ ಸದ್ಭಕ್ತನ ತೋರಿಬದುಕಿಸಾ ಎಲೇ ಸಪ್ತಸಂಗಮೇಶ್ವರ ಮಹಾಲಿಂಗವೇ. ಮಂಗಳ ಮಹಾ ಶ್ರೀ.

ಸಂಪೂರ್ಣ.

JNANA ... LIBRARY, Jangamwadi Math, VARAN...
Acc. No. ...
335